ಶನಿವಾರ, ಫೆಬ್ರುವರಿ 18, 2023 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕುತೂಹಲ ನೋಟ
ಬೆಂಗಳೂರಿನ ಯಲಹಂಕದಲ್ಲಿ ನಡೆದ 'ಏರೋ ಇಂಡಿಯಾ' ವೈಮಾನಿಕ ಪ್ರದರ್ಶನವನ್ನು ಜನರು ಕುತೂಹಲದಿಂದ ವೀಕ್ಷಿಸಿದರು



ಶನಿವಾರ, ಫೆಬ್ರುವರಿ 18, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 49 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಹಾಶಿವರಾತ್ರಿ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,002	17,944	₹57,930 (ಬೆಂಗಳೂರು)	₹67,100 (ಬೆಂಗಳೂರು)	82.82



ಬೊಮ್ಮಾಯಿ ತೇರು: ಭರವಸೆ ಜೋರು



- ಮಠ–ಮಂದಿರಗಳಿಗೆ ₹1,000 ಕೋಟಿ
- ವರ್ಷದಲ್ಲೇ ಒಂದು ಲಕ್ಷ ಹುದ್ದೆ ಭರ್ತಿ
- ಕಲ್ಯಾಣ ಕರ್ನಾಟಕಕ್ಕೆ ₹5,000 ಕೋಟಿ

ಬಜೆಟ್ ಗಾತ್ರ ₹3.09 ಲಕ್ಷ ಕೋಟಿ

₹2.89 ಲಕ್ಷ ಕೋಟಿ 2022–23ರ ಬಜೆಟ್ ಪರಿಷ್ಕೃತ ಅಂದಾಜು

ರೈತರು–88 ಲಕ್ಷ ಕುಟುಂಬ

- ಬಡ್ಡಿರಹಿತ ಸಾಲ ಮಿತಿ ₹3 ಲಕ್ಷದಿಂದ ₹5 ಲಕ್ಷಕ್ಕೆ
- ಕಿಸಾನ್ ಕ್ರೆಡಿಟ್ ಕಾರ್ಡ್ ಹೊಂದಿರುವ ರೈತರಿಗೆ 'ಭೂ ಸಿರಿ' ಯೋಜನೆಯಡಿ ₹ 10 ಸಾವಿರ ಸಹಾಯಧನ
- ಸಣ್ಣ, ಅತಿಸಣ್ಣ ರೈತರ ಕುಟುಂಬಗಳಿಗೆ ಜೀವನ್ ಜ್ಯೋತಿ ವಿಮಾ ಯೋಜನೆ
- ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳ ಸಂಸ್ಕರಣೆ ಉತ್ತೇಜಿಸಲು ₹ 100 ಕೋಟಿ
- ಕನಿಷ್ಠ ಬೆಂಬಲ ಬೆಲೆ ಆವರ್ತನಿಧಿ ಮೊತ್ತ ₹2,000 ಕೋಟಿಯಿಂದ ₹ 3,500 ಕೋಟಿಗೆ ಹೆಚ್ಚಳ

ಸ್ತ್ರೀಯರ ಸಂಖ್ಯೆ –2.5 ಕೋಟಿ

- ಶ್ರಮ ಶಕ್ತಿ ಯೋಜನೆಯಡಿ ಮಹಿಳಾ ಕೃಷಿ ಕಾರ್ಮಿಕರಿಗೆ ತಿಂಗಳಿಗೆ ₹ 500
- ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ವಿತರಣೆಗೆ ₹ 1,000 ಕೋಟಿ
- 'ವಿದ್ಯಾವಾಹಿನಿ' ಯೋಜನೆಯಡಿ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್
- ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಸ್ವಯಂನಿವೃತ್ತಿ ವೇಳೆ ಗ್ರ್ಯಾಚ್ಯುಟಿ

ಯುವಸಮೂಹ

- 'ಮುಖ್ಯಮಂತ್ರಿ ವಿದ್ಯಾಶಕ್ತಿ' ಯೋಜನೆಯಡಿ ಸರ್ಕಾರಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಉಚಿತ ಶಿಕ್ಷಣ
- ಕನ್ನಡ ಮಾಧ್ಯಮದಲ್ಲಿ ಶಾಲಾ ಶಿಕ್ಷಣ ಪಡೆದ 500 ವಿದ್ಯಾರ್ಥಿಗಳಿಗೆ 'ಹಳ್ಳಿ ಮುತ್ತು' ಯೋಜನೆಯಡಿ ಸರ್ಕಾರದಿಂದ ವೃತ್ತಿಶಿಕ್ಷಣ ಶುಲ್ಕ ಪಾವತಿ

ಬಜೆಟ್ ವಿಶೇಷ ಪುಟ | 3D,10, 11, 12, 13, ಸಂಪಾದಕೀಯ ಪುಟ 8

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂದಿನ ಚುನಾವಣೆಯಲ್ಲಿ ಮತ್ತೆ ಕೇಸರಿ ಪತಾಕೆ ಹಾರಿಸಬೇಕೆಂಬ ಟೊಂಕ ಕಟ್ಟಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ 'ನವ ಕರ್ನಾಟಕ' ನಿರ್ಮಾಣದ ಕನಸನ್ನು ತುಸು ಬದಿಗಿಟ್ಟು, ಮತದಾರರಲ್ಲಿ ಹೊಂಗನಸು ಬಿತ್ತಿ 'ಕಮಲ'ದ ಹುಲುಸಾದ ಬೆಳೆ ತೆಗೆಯುವ ಸಾಹಸವನ್ನು ತಮ್ಮ ಬಜೆಟ್‌ನಲ್ಲಿ ಮಾಡಿದ್ದಾರೆ.

ರಾಮನಗರದಲ್ಲಿ ರಾಮಮಂದಿರ ನಿರ್ಮಾಣ, ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಅಭಿವೃದ್ಧಿ ಸೇರಿದಂತೆ ವಿವಿಧೆಡೆ ದೇವಾಲಯಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಘೋಷಿಸುವ ಮೂಲಕ 'ಹಿಂದುತ್ವ'ದ ಕಾರ್ಯ-ಸೂಚಿಯನ್ನೂ ಬಜೆಟ್‌ನಲ್ಲಿ ತಂದಿದ್ದಾರೆ. ಬಿಜೆಪಿಗೆ ಪ್ರತಿಕೂಲ ಪರಿಸ್ಥಿತಿ ಇರುವ ಪ್ರದೇಶಗಳನ್ನು ಕೇಂದ್ರೀಕರಿಸಿರುವ ಯೋಜನೆಗಳೂ ಬಜೆಟ್‌ನಲ್ಲಿವೆ.

ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಬಜೆಟ್ ಮೊತ್ತ ₹3 ಲಕ್ಷ ಕೋಟಿ ದಾಟಿಸಿರುವ ಹಿರಿಮೆಯೂ ಅವರದ್ದಾಗಿದೆ. ಯಾವುದೇ ತೆರಿಗೆ ಭಾರ ಹೊರಿಸದೇ, ಮತಾಕರ್ಷಣೆಯ ಹಾಯಿದೋಣಿಯಲ್ಲಿ ಜನರನ್ನು ಕರೆದೊಯ್ದು, ಬಿಜೆಪಿಯನ್ನು ಮತ್ತೆ ಗೆಲ್ಲಿಸುವ ತಂತ್ರವನ್ನೂ ಹೆಣೆದಿದ್ದಾರೆ. ನಾಡಿನ ಪ್ರಗತಿಗೆ ದಿಕ್ಸೂಚಿ– ಕಾರ್ಯಸೂಚಿ ನೀಲನಕ್ಷೆ ಸ್ಪಷ್ಟವಾಗಿ ಕಾಣಿಸದೇ ಇದ್ದರೂ ಮೂಲಸೌಕರ್ಯ ಕ್ಷೇತ್ರಕ್ಕೆ ಒಂದಿಷ್ಟು ಅನುದಾನವನ್ನು ಹಂಚಿದ್ದಾರೆ. ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ವಿದ್ಯಾರ್ಥಿಗಳ ಶಿಕ್ಷಣಕ್ಕೆ ನೆರವು ನೀಡುವ ರೈತ ವಿದ್ಯಾನಿಧಿ ಘೋಷಿಸಿದ್ದರು. ಅದನ್ನು ಸಕಲ ಸಮುದಾಯಗಳಿಗೂ ವಿಸ್ತರಿಸಿ, ವಿದ್ಯೆ ಕಲಿತರೆ ಉದ್ಯೋಗ–ಸ್ವಾವಲಂಬನೆಯತ್ತ ಸಾಗಬಹುದಾದ ದಾರಿಯನ್ನೂ ಅವರು ಹುಡುಕಿಕೊಟ್ಟಂತಿದೆ.

ರಾಜ್ಯದ ಮತದಾರರಲ್ಲಿ ಸಂಖ್ಯಾಬಾಹುಳ್ಯದಲ್ಲಿ ಪ್ರಬಲವಾಗಿರುವ ರೈತರು, ಮಹಿಳೆಯರು ಮತ್ತು ಯುವಜನರನ್ನು ಕೇಂದ್ರೀಕರಿಸಿ ಭರವಸೆಗಳ ಮಹಾಪೂರವನ್ನೇ ಹರಿಸಿದ್ದಾರೆ.

5ನೇ ಪುಟ ನೋಡಿ



ವಿಧಾನಸಭೆಗೆ ಕಿವಿಗೆ ಹೂವು ಇಟ್ಟುಕೊಂಡು ಬಂದಿದ್ದ ಸಿದ್ದರಾಮಯ್ಯ ಅವರು ಬಳಿಕ ಪತ್ರಿಕಾಗೋಷ್ಠಿಗೂ ಹಾಗೆಯೇ ಬಂದಿದ್ದರು

ಕಿವಿಗೆ ಹೂವು: ವಿಚಲಿತರಾದ ಸಿಎಂ

ಬಿಜೆಪಿ ಸರ್ಕಾರವು ಬಜೆಟ್ ಮೂಲಕ ಜನರನ್ನು ಮೋಸಗೊಳಿಸಲು ಹೊರಟಿದೆ ಎಂಬುದನ್ನು ಹೇಳುವುದಕ್ಕಾಗಿ ಕಾಂಗ್ರೆಸ್ ಸದಸ್ಯರು ಕಿವಿಗೆ ಹೂವು ಇಟ್ಟುಕೊಂಡು ವಿಧಾನಸಭೆಗೆ ಬಂದಿದ್ದರು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಕಾಂಗ್ರೆಸ್ ಸದಸ್ಯರ ಕಿವಿಗಳಲ್ಲಿ ಚೆಂಡು ಹೂವು ಇರುವುದನ್ನು ಕಂಡ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕ್ಷಣಕಾಲ ವಿಚಲಿತರಾದರು.

5ನೇ ಪುಟ ನೋಡಿ

ಅಲ್ಪಸಂಖ್ಯಾತರತ್ತ ಒಲವು

ಬಿಜೆಪಿ ಸರ್ಕಾರದ ಅವಧಿಯ ಹಿಂದಿನ ವರ್ಷಗಳ ಬಜೆಟ್‌ಗಳಿಗೆ ಹೋಲಿಸಿದರೆ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಈ ಬಾರಿ ವಿಶೇಷ ಕಾರ್ಯಕ್ರ-ಮಗಳನ್ನು ಪ್ರಕಟಿಸಲಾಗಿದೆ. ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗ-ಳಿಗೆ ವಿದೇಶಗಳ ಅತ್ಯುತ್ತಮ ಶಿಕ್ಷಣ ಸಂಸ್ಥೆಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಬಡ್ಡಿರಹಿತ ಸಾಲ, ಅಗ್ನಿವೀರರ ನೇಮಕಾತಿಗೆ ತರಬೇತಿ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಮುಖ್ಯಮಂತ್ರಿ ಪ್ರಕಟಿಸಿದ್ದಾರೆ.

ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ನೀಡಿರುವ ಅನುದಾನದದ ಮೊತ್ತ ₹60 ಕೋಟಿ ಇದ್ದದ್ದು ₹110 ಕೋಟಿಗೆ ಜಿಗಿದಿದೆ. 'ಅಲ್ಪಸಂಖ್ಯಾತರನ್ನೂ ಒಳಗೊಳ್ಳಬೇಕು' ಎಂಬ ಪ್ರಧಾನಿ ನರೇಂದ್ರ ಮೋದಿಯವರ ಸೂಚನೆಯೇ ಇದಕ್ಕೆ ಕಾರಣ ಎಂದು ವಿಶ್ಲೇಷಿಸಲಾಗುತ್ತಿದೆ.

ಕುಸಿದ ಬೆಳವಣಿಗೆ: ಕಿಸೆಗೆ ಹೊರೆ

ವಿವಿಧ ವಲಯಗಳಲ್ಲಿನ ಮೌಲ್ಯವರ್ಧನೆ ಕುಸಿದಿರುವುದರಿಂ-ದಾಗಿ ಶ್ರೀಸಾಮಾನ್ಯರ ಜೇಬಿಗೆ ಹೆಚ್ಚಿನ ಹೊರೆ ಬಿದ್ದಿರುವುದ-ನ್ನು ಬಜೆಟ್‌ನ ಪೂರಕ ದಾಖಲೆಗಳು ಹೇಳಿವೆ.

ಡಬಲ್ ಎಂಜಿನ್‌ನಿಂದ ರಾಜ್ಯದ ಪ್ರಗತಿಗೆ ನಾಗಾಲೋಟ ಸಿಕ್ಕಿದೆ ಹಾಗೂ ರಾಜಸ್ವ ಸಂಗ್ರಹ ಭರ್ಜರಿ ದಾಖಲೆ ಸೃಷ್ಟಿಸಿದೆ ಎಂದು ಸರ್ಕಾರ ಹೇಳುತ್ತಿದೆ. ಶುಕ್ರವಾರ ವಿಧಾನಸಭೆಯಲ್ಲಿ ಮಂಡಿಸಿದ ಮಧ್ಯಮಾವಧಿ ವಿತ್ತೀಯ ಯೋಜನೆ– 2023–27ರ ಅಂಕಿ ಅಂಶಗಳನ್ನು ಮುಂದಿಟ್ಟು, ಜನರ ಆರ್ಥಿಕ ಹೊರೆಯನ್ನು ವಿಶ್ಲೇಷಿಸಿದರೆ, ಹೊರೆ ಹೆಚ್ಚಾಗಿರುವ ಲೆಕ್ಕ ಸಿಗುತ್ತದೆ.

ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ(ಜಿಎಸ್‌ಡಿಪಿ) ಪ್ರಮುಖ ಕೊಡುಗೆ ನೀಡುವುದು ಕೃಷಿ, ಕೈಗಾರಿಕೆ, ಸೇವಾ ವಲಯದ ಉತ್ಪಾದನೆ ಮತ್ತು ವ್ಯವಹಾರ. ಈ ಕ್ಷೇತ್ರದಲ್ಲಿ ಬೆಳವಣಿಗೆಯಾದರಷ್ಟೇ ಜನರ ಆದಾಯವೂ ಹೆಚ್ಚುತ್ತದೆ. 2019ರ ಈಚೆಗೆ ಈ ಮೂರು ವಲಯಗಳ ಮೌಲ್ಯವರ್ಧನೆ ಕುಸಿತದ ಕಡೆಗೆ ಸಾಗಿದೆ. 2019ರಲ್ಲಿ ಕೃಷಿ ವಲಯದಲ್ಲಿ ಶೇ 18.1ರಷ್ಟು ಮೌಲ್ಯವರ್ಧನೆಯಾಗಿದ್ದರೆ, ನಂತರದ ವರ್ಷಗಳಲ್ಲಿ ಶೇ 15.2, ಶೇ 8.7 ಇಳಿಕೆಯಾಗಿತ್ತು. 2022ರಲ್ಲಿ ಇದು ಶೇ 5.5ಕ್ಕೆ ಕುಸಿಯಲಿದೆ ಎಂದು ಅಂದಾಜಿಸಲಾಗಿದೆ.

ಋಣಾತ್ಮಕ ಹಾದಿಯಲ್ಲಿದ್ದ ಕೈಗಾರಿಕೆ ಮತ್ತು ಸೇವಾವಲಯಗಳು 2021ರಲ್ಲಿ ಶೇ 10.3ಕ್ಕೆ ಏರಿಕೆಯಾ-ಗಿದ್ದವು. 2022ರಲ್ಲಿ ಕೈಗಾರಿಕೆ ಮೌಲ್ಯವರ್ಧನೆ ಶೇ 5.1ಕ್ಕೆ ಸೇವಾವಲಯ ಶೇ 9.2ಕ್ಕೆ ಕುಸಿದಿದೆ.

ಇದೇ ಹೊತ್ತಿಗೆ ತೆರಿಗೆ ಸಂಗ್ರಹದ ಪ್ರಮಾಣ ಶೇ 17ರಷ್ಟು ಹೆಚ್ಚಳವಾಗಿದೆ ಎಂದು ಸರ್ಕಾರ ಸಂಭ್ರಮದಿಂದ ಹೇಳಿಕೊಂಡಿದೆ. ತೆರಿಗೆ ಸಂಗ್ರಹ ಹೆಚ್ಚಾಗುವುದೆಂದರೆ ಜನರ ಜೇಬಿಗೆ ಹೆಚ್ಚಿನ ಹೊರೆ, ತಿಂಗಳ ವೆಚ್ಚ ಹೆಚ್ಚಾಗುವುದು ಎಂಬುದನ್ನು ಹೇಳಲು ವಿಶೇಷ ಪರಿಣತಿ ಬೇಕಿಲ್ಲ. ಮೌಲ್ಯವರ್ಧನೆಯೂ ಹೆಚ್ಚಾಗಿ, ಅದಕ್ಕೆ ಅಲ್ಪ ಪ್ರಮಾಣದಲ್ಲಿ ತೆರಿಗೆ ಹೆಚ್ಚಾದರೆ ಜನರ ಖರ್ಚಿಗೆ ದುಡ್ಡು ಉಳಿಯುತ್ತದೆ. ಮೌಲ್ಯವರ್ಧನೆ ಕುಸಿದರೆ, ತಿಂಗಳ ವೆಚ್ಚದ ಮೇಲೆ ಹೊರೆಯಾಗುತ್ತದೆ.

ಸಣ್ಣ ಉದಾಹರಣೆ ಮೂಲಕ ಇದನ್ನು ಹೇಳುವುದಾದರೆ, ಒಬ್ಬ ರೈತ ತಿಂಗಳಿಗೆ 2021ರಲ್ಲಿ ₹100 ಸಂಪಾದಿಸುತ್ತಿದ್ದ ಎಂದಿಟ್ಟುಕೊಂಡರೆ ಕೃಷಿ ವಲಯದ ಮೌಲ್ಯವರ್ಧನೆ ಶೇ 5.5ರಷ್ಟು ಹೆಚ್ಚಳವಾದಲ್ಲಿ ಆದಾಯ ₹105.50ಕ್ಕೆ ಏರುತ್ತದೆ. ಹಣದುಬ್ಬರದ ಪ್ರಮಾಣ ಶೇ 6ರಷ್ಟು ಎಂದು ಕೊಂಡರೂ ₹100ರ ಮೌಲ್ಯ ₹98.93ರ-ಷ್ಟಾಗುತ್ತದೆ. ₹100ಕ್ಕೆ ಶೇ 17ರಷ್ಟು ಅಂದರೆ ₹17 ಪರೋಕ್ಷ ತೆರಿಗೆ ರೂಪದಲ್ಲಿ ಕಡಿತವಾದರೆ ಆತನಿಗೆ ಉಳಿಯುವುದು ಕೇವಲ ₹82 ಮಾತ್ರ. ಇದು ಸದ್ಯದ ಪರಿಸ್ಥಿತಿ.

ಏರುತ್ತಲೇ ಇದೆ ಸಾಲ, ಬಡ್ಡಿ ಪಾವತಿ



ಆರ್ಥಿಕ ವರ್ಷ	2020-21 ವಾಸ್ತವಿಕ ಲೆಕ್ಕ	2021-22 ವಾಸ್ತವಿಕ ಲೆಕ್ಕ	2022-23 ಪರಿಷ್ಕೃತ ಅಂದಾಜು	2023-24 ಬಜೆಟ್ ಅಂದಾಜು
ವಾರ್ಷಿಕ ಸಾಲ (ಕೋಟಿಗಳಲ್ಲಿ)	₹84,527	₹80,767	₹67,000	₹77,750
ಬಡ್ಡಿ ಸಂದಾಯ	₹23,620 ಕೋಟಿ	₹24,983 ಕೋಟಿ	₹29,394 ಕೋಟಿ	₹34,023 ಕೋಟಿ



ಇದೊಂದು ಬಿಸಿಲ್ಗುದುರೆ ಬಜೆಟ್, ಕಣ್ಣಿಗೆ ಕಾಣುತ್ತದೆ, ಆದರೆ, ಕೈಗೆ ಸಿಗಲ್ಲ. ಜಾತ್ರೆಯಲ್ಲಿ ಸಿಗುವ ಬಣ್ಣದ ಕನ್ನಡಕದಂತೆ, ಅದರಲ್ಲಿ ನೋಡಿದರೆ ಏನೂ ಕಾಣುವುದಿಲ್ಲ. ಮಹಿಳೆಯರಿಗೆ ₹ 500 ನೀಡುವುದರಿಂದ ಏನು ಪ್ರಯೋಜನ? ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ತಿಂಗಳು ₹ 2 ಸಾವಿರ ನೀಡುತ್ತೇವೆ.

ಡಿ.ಕೆ.ಶಿವಕುಮಾರ್, ಅಧ್ಯಕ್ಷ, ಕೆಪಿಸಿಸಿ



ಜಾತ್ರೆ ಮುಗಿದ ಮೇಲೆ ಅಂಗಡಿಗಳ ಮಾಲೀಕರು ರಿಯಾಯಿತಿ ದರ ಘೋಷಿಸಿ ಉಳಿದ ಸಾಮಗ್ರಿ ಖಾಲಿ ಮಾಡುವ ರೀತಿಯಿದೆ ಈ ಬಜೆಟ್. ಜನರ ಸಂಕಷ್ಟ ಪರಿಹಾರ ಮಾಡಲು ಮೂರು ಕಾಸಿನ ಕಿಮ್ಮತ್ತು ಕೊಟ್ಟಿಲ್ಲ. ರಾಜ್ಯದ ಆರ್ಥಿಕತೆಯನ್ನೇ ಹಾಳು ಮಾಡಲಾಗಿದೆ.

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವೇತನ ಪರಿಷ್ಕರಣೆ: ಭಿನ್ನ ಸ್ವರ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರಿಗೆ 7ನೇ ವೇತನ ಆಯೋಗದ ಸೌಲಭ್ಯ ಕಲ್ಪಿಸಲು ಬಜೆಟ್‌ನಲ್ಲಿ ₹ 6 ಸಾವಿರ ಕೋಟಿ ಮೀಸಲಿಡಲಾಗಿದೆ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

'ಆಯೋಗ ವರದಿ ನೀಡಿದ ಬಳಿಕ ಹೆಚ್ಚುವರಿ ಹಣವನ್ನು ಪೂರಕ ಬಜೆಟ್‌ನಲ್ಲಿ ಒದಗಿಸಲಾ-ಗುವುದು. ಇದೇ ವರ್ಷ ಪರಿಷ್ಕೃತ ವೇತನ ಸಿಗಲಿದೆ' ಎಂದರು. ಆದರೆ, ಬಜೆಟ್‌ನ ಯಾವ ಪುಟದಲ್ಲೂ ನೌಕರರಿಗೆ ₹ 6 ಸಾವಿರ ಕೋಟಿ ಮೀಸಲಿಟ್ಟಿರುವ ಅಂಶ ಇಲ್ಲ.

'ಫಿಟ್‌ಮೆಂಟ್ ಆಧರಿಸಿ 7ನೇ ವೇತನ ಶ್ರೇಣಿ ಅನುಷ್ಠಾನ ಮಾಡಿದಲ್ಲಿ ಮೊದಲ ವರ್ಷ ₹12 ಸಾವಿರ ಕೋಟಿಯಿಂದ ₹18 ಸಾವಿರ ಕೋಟಿ ಹೆಚ್ಚುವರಿ ಹೊರೆ ಬೀಳಬಹುದು' ಎಂದು ಮಧ್ಯಮಾವಧಿ ವಿತ್ತೀಯ ಯೋಜನೆ' ಹೇಳಿದೆ.

'ಬಜೆಟ್‌ನಲ್ಲಿ ಹಣ ನೀಡದಿರುವುದು ಅನ್ಯಾಯ. ಮುಖ್ಯಮಂತ್ರಿ ಜತೆ ಚರ್ಚಿಸಿದ ನಂತರ ಸಂಘ ಮುಂದಿನ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.



'ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆ ತೆರಿಗೆ ಪಾವತಿಸದ್ದಕ್ಕೆ ಸಾಕ್ಷ್ಯ ಲಭ್ಯ'

ನವದೆಹಲಿ (ರಾಯಿಟರ್ಸ್): 'ಪ್ರಮುಖ ಅಂತರರಾಷ್ಟ್ರೀಯ ಮಾಧ್ಯಮ ಸಂಸ್ಥೆಯೊಂದರ ದಾಖಲೆಗಳ 'ಪರಿಶೀಲನೆ' ಸಂದರ್ಭದಲ್ಲಿ, ಸಂಸ್ಥೆಯು ತೆರಿಗೆ ಪಾವತಿಸದಿರುವುದು ಹಾಗೂ ಬಹಿರಂಗಪಡಿಸದ ಆದಾಯ ಹೊಂದಿರುವ ಬಗ್ಗೆ ಸಾಕ್ಷ್ಯಗಳು ಲಭ್ಯವಾಗಿವೆ' ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಶುಕ್ರವಾರ ಹೇಳಿದೆ.

ದೆಹಲಿ ಹಾಗೂ ಮುಂಬೈನಲ್ಲಿರುವ ಬಿಬಿಸಿ ಕಚೇರಿಗಳಲ್ಲಿ ಆದಾಯ ತೆರಿಗೆ ಅಧಿಕಾರಿಗಳು ಸತತ 60 ಗಂಟೆಗಳಷ್ಟು 'ಪರಿಶೀಲನೆ' ನಡೆಸಿದ್ದರು. ಈ 'ಪರಿಶೀಲನೆ' ಬಳಿಕ ಮಂಡಳಿಯು ಮೊದಲ ಅಧಿಕೃತ ಪ್ರಕಟಣೆ ಬಿಡುಗಡೆ ಮಾಡಿದೆ. ಆದರೆ, ಈ ಹೇಳಿಕೆಯಲ್ಲಿ ಬಿಬಿಸಿ ಹೆಸರನ್ನು ಉಲ್ಲೇಖಿಸಿಲ್ಲ.

'ಇಂಗ್ಲಿಷ್ ಅಲ್ಲದೇ, ಭಾರತದ ಅನೇಕ ಭಾಷೆಗಳಲ್ಲಿ ಗಮನಾರ್ಹವೆನಿಸುವಷ್ಟು ವಿಷಯವಸ್ತುವನ್ನು ಮಾಧ್ಯಮ ಸಂಸ್ಥೆ ಬಳಕೆ ಮಾಡಿದೆ. ಕಂಪನಿಯು ತನ್ನ ಅಂಗಸಂಸ್ಥೆಗಳ ಮೂಲಕ ಭಾರತದಲ್ಲಿ ಹೊಂದಿರುವ ಕಾರ್ಯಾಚರಣೆಗಳ ಪ್ರಮಾಣಕ್ಕೂ, ಅವುಗಳು ಗಳಿಸಿದ ಆದಾಯ ಹಾಗೂ ಲಾಭಕ್ಕೂ ಹೊಂದಿಕೆ-ಯಾಗದಿರುವ ಅಂಶ ಪರಿಶೀಲನೆ ವೇಳೆ ಕಂಡುಬಂದಿದೆ' ಎಂದು ಮಂಡಳಿ ಹೇಳಿದೆ.

'ಸಂಸ್ಥೆಯಿಂದಾದ ಕೆಲ ಪಾವತಿಗಳಿಗೆ ಸಂಬಂಧಿಸಿ ತೆರಿಗೆ ಸಂದಾಯ ಮಾಡಿಲ್ಲ. ಈ ರೀತಿ ಪಾವತಿಸಲಾದ ಹಣವು, ಮಾಧ್ಯಮಸಂಸ್ಥೆಯು ಭಾರತದಲ್ಲಿ ಗಳಿಸಿರುವ ಆದಾಯವೇ ಆಗಿದೆ ಎಂಬ ಮಾಹಿತಿಯನ್ನು ಮುಚ್ಚಿಟ್ಟಿರು-ವುದು ಕೂಡ ಪರಿಶೀಲನೆ ಸಂದರ್ಭದಲ್ಲಿ ಗೊತ್ತಾಗಿದೆ. ಇದಕ್ಕೆ ಸಂಬಂಧಪಟ್ಟ ಸಾಕ್ಷ್ಯಗಳನ್ನು ಸಂಗ್ರಹಿಸಲಾಗಿದೆ' ಎಂದೂ ಮಂಡಳಿ ಹೇಳಿದೆ.

ಅದಾನಿ: ಮುಚ್ಚಿದ ಲಕೋಟೆಯಲ್ಲಿ ಸಲಹೆ ಸ್ವೀಕರಿಸಲ್ಲ – 'ಸುಪ್ರೀಂ'

ನವದೆಹಲಿ (ಪಿಟಿಐ): ಷೇರು ಮಾರುಕಟ್ಟೆ ನಿಯಂತ್ರಣ ವ್ಯವಸ್ಥೆಯನ್ನು ಬಲಪಡಿಸುವ ಸಲುವಾಗಿ ತಜ್ಞರ ಸಮಿತಿ ರಚಿಸುವ ಸಲಹೆಗೆ ಸಂಬಂಧಿಸಿದ ಮಾಹಿತಿಯನ್ನು ಮುಚ್ಚಿದ ಲಕೋಟೆಯಲ್ಲಿ ಸ್ವೀಕರಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು, ತಜ್ಞರ ಸಮಿತಿ ರಚಿಸುವ ಕುರಿತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮಂಡಿಸಿದ ವಾದ ಆಲಿಸಿದ ಬಳಿಕ ಈ ನಿಲುವನ್ನು ಪ್ರಕಟಿಸಿತು. ನ್ಯಾಯಮೂರ್ತಿಗಳಾದ ಪಿ.ಎಸ್.ನರಸಿಂಹ ಹಾಗೂ ಜೆ.ಬಿ.ಪಾರ್ದೀವಾಲಾ ಈ ಪೀಠದಲ್ಲಿದ್ದಾರೆ.

'ಷೇರು ಮಾರುಕಟ್ಟೆಯಲ್ಲಿ ಹೂಡಿಕೆದಾರರ ಹಿತರಕ್ಷಣೆ ಮುಖ್ಯ. ಹೀಗಾಗಿ ಈ ವಿಷಯದಲ್ಲಿ ಸಂಪೂರ್ಣ ಪಾರದರ್ಶಕತೆ ಅಗತ್ಯ' ಎಂದು ನ್ಯಾಯಪೀಠ ಹೇಳಿತು. ಅಲ್ಲದೇ, ಹಾಲಿ ನ್ಯಾಯಮೂರ್ತಿಯೊಬ್ಬರಿಂದ ಉದ್ದೇಶಿತ ತಜ್ಞರ ಸಮಿತಿಯ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಡೆಸುವ ಸಾಧ್ಯತೆಯನ್ನು ತಳ್ಳಿ ಹಾಕಿತು.

'ತಜ್ಞರಸಮಿತಿಯೊಂದನ್ನುರಚಿಸಲಾಗುವುದು. ಆಗ, ನ್ಯಾಯಾಲಯದ ಬಗ್ಗೆ ಎಲ್ಲರಲ್ಲೂ ವಿಶ್ವಾಸ ಮೂಡುತ್ತದೆ. ಈ ವಿಷಯ ಕುರಿತ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಹಾಲಿ ನ್ಯಾಯಮೂರ್ತಿ ನಡೆಸುವರು, ಆದರೆ ಅವರು ಸಮಿತಿಯ ಭಾಗವಾಗಿರುವುದಿಲ್ಲ' ಎಂದು ಮುಖ್ಯನ್ಯಾಯಮೂರ್ತಿ ಚಂದ್ರಚೂಡ್ ಹೇಳಿದರು.

ಹಿಂಡನ್‌ಬರ್ಗ್ ರಿಸರ್ಚ್‌ನ ವರದಿಯ ನಂತರ ಅದಾನಿ ಸಮೂಹದ ಷೇರುಗಳ ಮೌಲ್ಯದಲ್ಲಿ ಸುಮಾರು ₹10 ಲಕ್ಷ ಕೋಟಿಯಷ್ಟು ನಷ್ಟವಾಗಿದೆ. ಇದರಿಂದ ದೇಶದ ಹೂಡಿಕೆದಾರರಿಗೆ ನಷ್ಟವಾಗಿದೆ. ಇಂತಹ ನಷ್ಟವನ್ನು ತಪ್ಪಿಸಲು ಅಗತ್ಯ ವ್ಯವಸ್ಥೆ ಬೇಕು ಎಂದು ಕೋರಿ ಸಲ್ಲಿಸಲಾಗಿದ್ದ ಹಲವು ಅರ್ಜಿಗಳನ್ನು ಸುಪ್ರೀಂ ಕೋರ್ಟ್ ಕಳೆದ ವಾರ ವಿಚಾರಣೆಗೆ ಎತ್ತಿಕೊಂಡಿತ್ತು.



ಒಳ ಪುಟಗಳು



ಚಿನಕುರಳಿ

ಪ್ರಕಾಶ್ ಶೆಟ್ಟಿ



ದೊಡ್ಡಬೆಳವಂಗಲ: ಕ್ರಿಕೆಟ್ ಟೂರ್ನಿ ವೇಳೆ ಗಲಾಟೆ

ಇರಿತಕ್ಕೆ ಇಬ್ಬರು ಯುವಕರು ಬಲಿ

ಪ್ರಜಾವಾಣಿ ವಾರ್ತೆ



ಪ್ರತೀಕ್



ಭರತ್‌ಕುಮಾರ್

ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾ. ಜಿಲ್ಲೆ): ತಾಲ್ಲೂಕಿನ ದೊಡ್ಡಬೆಳವಂಗಲ ಗ್ರಾಮದಲ್ಲಿ ಶುಕ್ರವಾರ ನಡೆದ ಕ್ರಿಕೆಟ್ ಪಂದ್ಯಾವಳಿ ವೇಳೆ ಎರಡು ಗುಂಪುಗಳ ನಡುವೆ ನಡೆದ ಗಲಾಟೆಯಲ್ಲಿ ಪಿಯುಸಿ ವಿದ್ಯಾರ್ಥಿ ಸೇರಿದಂತೆ ಇಬ್ಬರು ಚಾಕು ಇರಿತಕ್ಕೆ ಬಲಿಯಾಗಿದ್ದಾರೆ.

ಪಿಯುಸಿ ಪ್ರಥಮ ವರ್ಷದ ವಿದ್ಯಾರ್ಥಿ ಪ್ರತೀಕ್ (17) ಮತ್ತು ಬಿ.ಇ ಪದವೀಧರ ಡಿ.ಎಸ್. ಭರತ್‌ಕುಮಾರ್ (23) ಚಾಕು ಇರಿತದಿಂದ ಮೃತಪಟ್ಟಿ-ದ್ದಾರೆ. ಈ ಇಬ್ಬರೂ ದೊಡ್ಡಬೆಳವಂಗಲ ಗ್ರಾಮದ ನಿವಾಸಿಗಳು.

ದೊಡ್ಡಬಳ್ಳಾಪುರ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಧೀರಜ್ ಮುನಿರಾಜು ಅವರು ಕ್ರೀಡಾ ಮತ್ತು ಸಾಂಸ್ಕೃತಿಕ ವೇದಿಕೆ ಮೂಲಕ ಶಿವರಾತ್ರಿ ಅಂಗವಾಗಿ ಆಯೋಜಿಸಿದ್ದ ಟೆನಿಸ್ ಬಾಲ್ ಕ್ರಿಕೆಟ್ ಪಂದ್ಯಾವಳಿ ವೇಳೆ ಈ ದುರ್ಘಟನೆ ನಡೆದಿದೆ. ಹುಲಿಕುಂಟೆ ಗ್ರಾಮದ ವಿನಯ್ ಹಾಗೂ ಸ್ನೇಹಿತರು ಈ ಕೃತ್ಯ ಎಸಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ವಿನಯ್ ತಂದೆ ಹುಲಿಕುಂಟೆ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷ-ರಾಗಿದ್ದು, ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿ-ಕೊಂಡಿದ್ದಾರೆ.

ಕ್ರಿಕೆಟ್ ಪಂದ್ಯಾವಳಿ ನಡೆಯುತ್ತಿದ್ದ ದೊಡ್ಡಬೆಳವಂಗಲ ಗ್ರಾಮದ ಕರ್ನಾಟಕ ಪಬ್ಲಿಕ್ ಸ್ಕೂಲ್ ಆಟದ ಮೈದಾನದಲ್ಲಿ ಹುಲಿಕುಂಟೆ ತಂಡದ ಬೆಂಬಲಿಗರು ಕಾರುಗಳನ್ನು ನಿಲ್ಲಿಸಿದ್ದರು. ಮೈದಾನದಲ್ಲಿ ಕಾರು ನಿಲ್ಲಿಸದಂತೆ ಆಟಗಾರರು ಮತ್ತು ಆಯೋಜಕರು ಆಕ್ಷೇಪ ಎತ್ತಿದಾಗ ಗಲಾಟೆ ಆರಂಭವಾಗಿದೆ. ಆಗ ಕೆಲವರು ಕಾರಿನ ಗಾಜುಗಳನ್ನು ಪುಡಿಗಟ್ಟಿದರು. ಘರ್ಷಣೆಯಲ್ಲಿ ತೊಡಗಿದ್ದ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು.

ಗ್ರಾಮದ ಬಸ್ ನಿಲ್ದಾಣದ ಬಳಿಯ ಬೇಕರಿ ಹತ್ತಿರ ಪಂದ್ಯಾವಳಿಯ ಟೀ– ಶರ್ಟ್ ಧರಿಸಿ ನಿಂತಿದ್ದ ಇಬ್ಬರು ಯುವಕರ ಮೇಲೆ, ಕಾರಿನಲ್ಲಿದ್ದ ಗುಂಪಿನ ಯುವಕರು ಡ್ರ್ಯಾಗರ್ ಮತ್ತು ಚಾಕುಗಳಿಂದ ದಾಳಿ ನಡೆಸಿದ್ದಾರೆ. ಈ ಇಬ್ಬರ ಗುಪ್ತಾಂಗ ಹಾಗೂ ಹೊಟ್ಟೆಗೆ ಹಲವು ಬಾರಿ ಚಾಕುವಿನಿಂದ ಇರಿದು ಗುಂಪು ಕಾರಿನಲ್ಲಿ ಪರಾರಿಯಾಗಿದೆ. ಮೃತ ಯುವಕರಿಗೂ ಗಲಾಟೆಗೂ ಯಾವುದೇ ಸಂಬಂಧ ಇರಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ರಕ್ತದ ಮಡುವಿನಲ್ಲಿ ಬಿದ್ದಿದ್ದ ಇಬ್ಬರನ್ನೂ ಆಸ್ಪತ್ರೆಗೆ ಕರೆದೊಯ್ಯುವಾಗ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಯುವಕರು ಮೃತಪಟ್ಟ ವಿಚಾರ ತಿಳಿ-ಯುತ್ತಿದ್ದಂತೆಯೇ ದೊಡ್ಡಬೆಳವಂಗಲ ಗ್ರಾಮದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಗಿತ್ತು. ಸ್ಥಳಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಭೇಟಿ ನೀಡಿದ್ದರು.

ಕೃತ್ಯ ಎಸಗಿದ ಆರೋಪಿಗಳ ಪತ್ತೆಗಾಗಿ ಸಮೀಪದ ಅಂಗಡಿಗಳ ಸಿಸಿಟಿವಿ ಕ್ಯಾಮೆರಾಗಳ ದೃಶ್ಯಾವಳಿಗಳನ್ನು ಪೊಲೀಸರು ಪರಿಶೀಲಿಸುತ್ತಿದ್ದಾರೆ.

ರಸ್ತೆ ಮೇಲೆ ರಾತ್ರೋರಾತ್ರಿ ಮನೆ ನಿರ್ಮಾಣ

ಪ್ರಜಾವಾಣಿ ವಾರ್ತೆ



ಡಾಂಬರು ರಸ್ತೆಯ ಮೇಲೆ ಮನೆ ನಿರ್ಮಾಣ ಕಾರ್ಯ ನಡೆಸುತ್ತಿರುವುದು

ಬೊಮ್ಮನಹಳ್ಳಿ: ಬೇಗೂರು ರಸ್ತೆಯ ಮೈಕೋ ಬಡಾವಣೆಯ ಡಾಂಬರೀಕರಣಗೊಂಡ 15ನೇ ಮುಖ್ಯರಸ್ತೆಯಲ್ಲಿ ರಾತ್ರೋರಾತ್ರಿ ಮನೆ ನಿರ್ಮಿಸುವ ಯತ್ನ ನಡೆದಿದೆ.

ನಕಲಿ ದಾಖಲೆಗಳನ್ನು ಸೃಷ್ಟಿಸಿ ರಸ್ತೆಯ ಮೇಲೆ ಮನೆ ನಿರ್ಮಾಣಕ್ಕೆ ಯತ್ನಿಸಿರುವ ಟಿ.ಎನ್.ಶ್ರೀನಿವಾಸ್ ಎನ್ನುವವರ ವಿರುದ್ಧ ಬೇಗೂರು – ಹೊಂಗಸಂದ್ರ ಮೈಕೋ ಲೇಔಟ್ ನಿವಾಸಿಗಳ ಅಸೋಸಿಯೇಷನ್ ವತಿಯಿಂದ ಬೇಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ.

‘ಸರ್ವೆ ನಂ.79ರಲ್ಲಿ ನಿವೇಶನ ಸಂಖ್ಯೆ 5ಎ ಎಂಬ ನಕಲಿ ದಾಖಲೆ ಸೃಷ್ಟಿಸಿ ಈ ಕೃತ್ಯಕ್ಕೆ ಮುಂದಾಗಿದ್ದಾರೆ ಎಂದು ದೂರಲಾಗಿದೆ. ಆದರೆ, ಬಡಾವಣೆಯಲ್ಲಿ ಈ ಸಂಖ್ಯೆಯ ಯಾವ ನಿವೇಶನವೂ ಇಲ್ಲ. ಬಡಾವಣೆಯ ನಕ್ಷೆ ಪ್ರಕಾರ ಇದು 15ನೇ ಮುಖ್ಯರಸ್ತೆಯಾಗಿದೆ. ರಸ್ತೆಯ ಉತ್ತರ ಮತ್ತು ದಕ್ಷಿಣ ದಿಕ್ಕಿನಲ್ಲಿ ನಿವೇಶನಗಳಿದ್ದು, ಪೂರ್ವ ಮತ್ತು ಪಶ್ಚಿಮಕ್ಕೆ ರಸ್ತೆ ಇದೆ’ ಎಂದು ನಿವಾಸಿಗಳ ಸಂಘದ ಸದಸ್ಯರು ವಿವರಿಸಿದ್ದಾರೆ.


ಮೈಕೋ ಬಡಾವಣೆಯಲ್ಲಿ 30 ವರ್ಷಕ್ಕೂ ಮೊದಲು ಬಿಡಿಎ ಯಿಂದ ಅನುಮೋದನೆಗೊಂಡಿದೆ. ಮೈಕೋ ಗೃಹ ನಿರ್ಮಾಣ ಸಹಕಾರ ಸಂಘದಿಂದ ನಿವೇಶನಗಳನ್ನು ಷೇರುದಾರರಿಗೆ ವಿತರಿಸಲಾಗಿದೆ. ಇದರಲ್ಲಿ 5ಎ ಎಂಬ ನಿವೇಶನವೇ ಇಲ್ಲ. ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೊಟ್ಟಿರುವ ಅಧಿಕಾರಿಗಳ ವಿರುದ್ಧವೂ ಕ್ರಮಕೈಗೊಳ್ಳಬೇಕೆಂದು ನಿವಾಸಿಗಳು ಆಗ್ರಹಿಸಿದರು.

ಮನೆ ಕಟ್ಟಲು ಮೂರನೇ ಬಾರಿ ಯತ್ನ: ಬಡಾವಣೆಯ 15ನೇ ಮುಖ್ಯ ರಸ್ತೆಯಲ್ಲಿ ಮನೆ ಕಟ್ಟಲು ಕೆ.ಟಿ. ಶ್ರೀನಿವಾಸ್ ಎಂಬ ವ್ಯಕ್ತಿ ಮೂರನೇ ಬಾರಿ ಪ್ರಯತ್ನಿಸಿದ್ದಾರೆ. 2018 ಜುಲೈನಲ್ಲಿ ಮತ್ತು 2019 ಜೂನ್ ತಿಂಗಳಲ್ಲಿ ರಾತ್ರೋರಾತ್ರಿ ಮನೆ ನಿರ್ಮಾಣ ಮಾಡಿದ್ದರು. ಈ ಬಗ್ಗೆ ದೂರು ಸ್ವೀಕರಿಸಿದ್ದ ಆಗಿನ ಜಂಟಿ ಆಯುಕ್ತರು, ದಾಖಲಾತಿಗಳನ್ನು ಪರಿಶೀಲಿಸಿ, ಸುಳ್ಳು ದಾಖಲಾತಿ ಸೃಷ್ಟಿಸಿ ಅಕ್ರಮವಾಗಿ ಮನೆ ನಿರ್ಮಿಸಿದ್ದು, ಸಾಬೀತಾಗಿದ್ದರಿಂದ ಕಟ್ಟಡ ನೆಲಸಮಕ್ಕೆ ಆದೇಶ ನೀಡಿದ್ದರು. ಇದೀಗ ಮತ್ತೊಮ್ಮೆ ಮ್ಮೆ ಈ ಪ್ರಯತ್ನ ನಡೆಸಿದ್ದಾರೆ ಎನ್ನಲಾಗಿದೆ.

‘ಭೂ ದಂಧೆಕೋರರಿಗೆ ಪಾಲಿಕೆ ಅಧಿಕಾರಿಗಳು ಸಹಕರಿಸುತ್ತಿದ್ದು, ಖೊಟ್ಟಿ ದಾಖಲೆಗಳನ್ನು ಸೃಷ್ಟಿಸುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಭೂ ಮಾಫಿಯಾಗೆ ಕಡಿವಾಣ ಹಾಕಲು ಸಾಧ್ಯವಿಲ್ಲ’ ಎಂದು ಮೈಕೋ ಗೃಹ ನಿರ್ಮಾಣ ಸಹಕಾರ ಸಂಘದ ಕಾರ್ಯದರ್ಶಿ ಶಿವಕುಮಾರಯ್ಯ ದೂರಿದರು.

’ಈ ವಿಚಾರ ನನ್ನ ಗಮನಕ್ಕೆ ಬಂದಿದೆ. ಸ್ಥಳ ಮತ್ತು ದಾಖಲಾತಿಗಳನ್ನು ಪರಿಶೀಲಿಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಬೊಮ್ಮನಹಳ್ಳಿ ಜಂಟಿ ಆಯುಕ್ತ ಕೃಷ್ಣಮೂರ್ತಿ ಹೇಳಿದರು.

20ರಿಂದ ಎಲ್‌ಎಸ್‌ಎಸ್ ಸ್ಮರಣಾರ್ಥ ಉಪನ್ಯಾಸ ಮಾಲೆ



ಎಲ್‌.ಎಸ್‌. ಶೇಷಗಿರಿ ರಾವ್

ಬೆಂಗಳೂರು: ಪ್ರೊ.ಎಲ್.ಎಸ್. ಶೇಷಗಿರಿ ರಾವ್ ಅವರ ಸ್ಮರಣಾರ್ಥ ಬಸವನಗುಡಿಯ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಇದೇ 20ರಿಂದ 24ರವರೆಗೆ ವಿಮರ್ಶಕ ಎಸ್.ಆರ್. ವಿಜಯಶಂಕರ ಅವರಿಂದ ಉಪನ್ಯಾಸ ಸರಣಿ ಹಮ್ಮಿಕೊಳ್ಳಲಾಗಿದೆ.

ಗ್ರೀಕ್ ಹಾಗೂ ಯುರೋಪಿಯನ್ ಸಾಹಿತ್ಯ ವಿಮರ್ಶೆಗಳ ಬಗ್ಗೆ ಪ್ರತಿದಿನ ಸಂಜೆ 6ರಿಂದ 7.30ರವರೆಗೆ ಉಪನ್ಯಾಸ ನಡೆಯಲಿದೆ. ಸೋಮವಾರ ‘ಗ್ರೀಕ್ ಸಾಹಿತ್ಯ–ರಂಗಭೂಮಿ ಕೊಡುಗೆಗಳು’, ಮಂಗಳವಾರ ‘ಶೇಕ್ಸ್‌ಪಿಯರ್ ಸಾಹಿತ್ಯ–ನಾಟಕಗಳ ಕೊಡುಗೆಗಳು’, ಬುಧವಾರ ‘ಇಂಗ್ಲಿಷ್ ಭಾಷೆಯಲ್ಲಿ ಆಧುನಿಕ ಸಾಹಿತ್ಯ ವಿಮರ್ಶೆ’ ಹಾಗೂ ಗುರುವಾರ ‘ಯುರೋಪಿಯನ್ ಸಾಹಿತ್ಯ ವಿಮರ್ಶೆಗಳು’ ವಿಷಯದ ಮೇಲೆ ಉಪನ್ಯಾಸ ನಡೆಯಲಿದೆ.

ಶೇಷಗಿರಿ ರಾವ್ ಅವರು ಕನ್ನಡಕ್ಕೆ ನೀಡಿದ ಕೊಡುಗೆ ಆಧಾರದಲ್ಲಿ ನಾಲ್ಕೂ ಉಪನ್ಯಾಸಗಳನ್ನು ನಿರೂಪಿಸಲಾಗಿದೆ. ಅವರು ಇಂಗ್ಲಿಷ್ ಸಾಹಿತ್ಯ ವಿಮರ್ಶೆಯ ಮೂಲಕ ಕನ್ನಡಕ್ಕೆ ನೀಡಿದ ಕೊಡುಗೆಯನ್ನು ಚರ್ಚಿಸಲಾಗುವುದು. ಸಾರ್ವಜನಿಕರಿಗೆ ಮುಕ್ತ ಅವಕಾಶ ಇರಲಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಮಮಂದಿರ: ಕಾರ್ಯಕ್ರಮಕ್ಕೆ ಯೋಗಿ

ಬೆಂಗಳೂರು: ರಾಮದೇವರ ಬೆಟ್ಟದಲ್ಲಿ ರಾಮಮಂದಿರ ನಿರ್ಮಾಣ ಆರಂಭದ ಕಾರ್ಯಕ್ರಮಕ್ಕೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಕರೆಸಲಾಗುವುದು ಎಂದು ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ ಡಾ.ಸಿ. ಎನ್.ಅಶ್ವತ್ಥನಾರಾಯಣ ತಿಳಿಸಿದರು. ಬಜೆಟ್‌ನಲ್ಲಿ ರಾಮಮಂದಿರ ನಿರ್ಮಾಣದ ವಿಚಾರ ಪ್ರಸ್ತಾಪ ಮಾಡಿರುವುದು ಸಂತಸ ತಂದಿದೆ ಎಂದರು.

ನಿಧನ ವಾರ್ತೆ

ಅಶ್ವತ್ಥ ನಾರಾಯಣ ರೆಡ್ಡಿ



ಬೆಂಗಳೂರು: ರಂಗಭೂಮಿ ಕಲಾವಿದ ಆರ್.ಅಶ್ವತ್ಥ ನಾರಾಯಣ ರೆಡ್ಡಿ (96) ಅವರು ಶುಕ್ರವಾರ ನಿಧನರಾಗಿದ್ದಾರೆ.

ಪತ್ನಿ, ಆರು ಪುತ್ರರು ಹಾಗೂ ಆರು ಪುತ್ರಿಯರು ಇದ್ದಾರೆ. ಅವರ ಅಂತ್ಯಸಂಸ್ಕಾರ ಕಾಚರಕನಹಳ್ಳಿ ರುದ್ರ ಭೂಮಿಯಲ್ಲಿ ಶನಿವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ.

ಅಶ್ವತ್ಥ ನಾರಾಯಣ ರೆಡ್ಡಿ ಅವರು ಆಂಜನೇಯನ ಪಾತ್ರಕ್ಕೆ ಹೆಸರುವಾಸಿಯಾಗಿದ್ದರು.

ಈಶ ಯೋಗ ಕೇಂದ್ರಕ್ಕೆ ನಟ ರಜನಿಕಾಂತ್ ಭೇಟಿ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಆವಲಗುರ್ಕಿ ಬಳಿಯ ಈಶ ಯೋಗ ಕೇಂದ್ರಕ್ಕೆ ಬಹುಭಾಷಾ ನಟ ರಜನಿಕಾಂತ್ ಶುಕ್ರವಾರ ಭೇಟಿ ನೀಡಿದರು. ರಜನಿಕಾಂತ್ ಅವರ ಜತೆ ಅವರ ಸಹೋದರ ಸತ್ಯನಾರಾಯಣ ಸಹ ಇದ್ದರು. ಸ್ವಯಂಸೇವಕರು ನಟನನ್ನು ಬರಮಾಡಿಕೊಂಡು ಕೇಂದ್ರದ ಬಗ್ಗೆ ಮಾಹಿತಿ ನೀಡಿದರು.

ನಿಧನ



ಶ್ರೀಮತಿ ವಿ. ಮೀನಾಕ್ಷಮ್ಮ

ದಿ. ಕೆ. ಸಿ. ಪುಟ್ಟ ನರಸಯ್ಯ (ಅಸಿಸ್ಟೆಂಟ್ ಕಮಿಷನರ್) ರವರ ಧರ್ಮಪತ್ನಿ
ಜನನ: 01-01-1935 ಮರಣ: 17-02-2023
ಇವರು ದಿನಾಂಕ 17-02-2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಇಂತಿ ದುಃಖತಪ್ತರು:
ಕುಟುಂಬವರ್ಗದವರು ಹಾಗೂ ಬಂಧು-ಮಿತ್ರರು

IN THE COURT OF THE X ADDL. DISTRICT AND SESSION JUDGE, BANGALORE RURAL, BANGALORE.
Com Mis. No.5/2023
[Com. O.S. 415/2021 (old No. O.S. No. 486/2019)]

BETWEEN:
PLAINTIFF: CANARA BANK, Kunigal Cross Branch, Nelamangala Town, Nelamangala Taluk, Bangalore Rural District-526123, Represents by its Manager Sri. Chandrakant S/o Late Govindappa, Aged about 36 years
. **- AND - DEFENDANT:** A.R. Enterprises

SUMMONS TO THE DEFENDANTS UNDER ORDER V RULE 20(1A) AND (1-A) OF THE CODE OF CIVIL PROCEDURE

To, Defendant: M/s A.R. Enterprises by its Proprietor **Sri. Chand Khan** S/o Abdul Rahim Aged about 47 years R/at Kanesumar No. 4765/28, 1st Floor, Kempegowda Circle, Kunigal Bypass Road, Gaviyappa Layout, Nelamangala Town, Bangalore Rural District, Bangalore-562123. **Also at** No.739/4, Maruthi Saw Mill, Aswath Nagar, Thanisandra Main Road, Dr. Shivaram Karanth Nagara Post, Bangalore-560077.

WHEREAS the above named petitioner bank has instituted suit against you for Recovery of sum of **Rs. 11,48,412.00 (Rupees Eleven Lakhs Forty Eight thousand and Four Hundred and Twelve only)** together with the court costs, current and future interest, Before the Nelamangala Court in O.S.486/2019 and the same is transferred to Commercial Court, Bangalore Rural District and the same is numbered as Com.O.S. 415/2021 and the same is dismissed for Default on 16.12.2021, as such the Petitioner has filed a Misc.Petition agaisnt the Respondent seeking this Hon'ble Court to restore the Commercial O.S.415/2021 by setting aside the order passed by this Hon'ble Court on 16.12.2021. You are hereby called upon to appear before this Hon'ble court in person or by advocate on the 08.03.2023 at 11.00 AM, in the forenoon to defend yourself, in Default of your apperance on the day mentioned above, the suit will be heard and Determined in your absence. Given under my hand seal of the court this 15th day of February 2023.

By Order of the Court,
sign/- Sheristedar
X Addl. District & Sessions Court,
Bangalore Rural, Bangalore.

Advocate for Petitioner:
Mohamed Afroze Ahamed Advocate & Legal adviser, Opp. SBI Bank, M.G. Road, Tumakuru.

ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಳಾಂತರಕ್ಕೆ ಒತ್ತಾಯ

ಧರಣಿ ಮುಂದುವರಿಕೆ

ಪ್ರಜಾವಾಣಿ ವಾರ್ತೆ



ತ್ಯಾಜ್ಯ ಘಟಕ ಸ್ಥಗಿತಗೊಳಿಸುವಂತೆ ಆಗ್ರಹಿಸಿ ನಾಗರಿಕರು ಧರಣಿ ನಡೆಸಿದರು

ಕೆಂಗೇರಿ: ಲಿಂಗಧೀರನಹಳ್ಳಿ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಳಾಂತರಕ್ಕೆ ಒತ್ತಾಯಿಸಿ ನಡೆಯುತ್ತಿರುವ ಧರಣಿ ಶುಕ್ರವಾರವೂ ಮುಂದುವರಿದಿದೆ.

ಘಟಕ ಸ್ಥಳಾಂತರ ಸಂಬಂಧಿಸಿ ಸರ್ಕಾರದ ಅಧಿಕೃತ ಆದೇಶ ಬರುವವರೆಗೆ ಹೋರಾಟ ಕೈಬಿಡುವುದಿಲ್ಲ ಎಂದು ತಿಳಿಸಿದ ಬನಶಂಕರಿ 6ನೇ ಹಂತ ನಿವಾಸಿಗಳ ಸಂಘದ ನೂರಾರು ಸದಸ್ಯರು ಹಾಗೂ ಸ್ಥಳೀಯ ನಾಗರಿಕರು, ಧರಣಿ ಸ್ಥಳದಲ್ಲೇ ಮೊಕ್ಕಾಂ ಹೂಡಿ ಬಿಬಿಎಂಪಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಫೆ.20ರವರೆಗೆ ಕಾಲಾವಕಾಶ ನೀಡುವಂತೆ ಸ್ಥಳೀಯ ಶಾಸಕ ಹಾಗೂ ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಮಾಡಿದ ಮನವಿಗೂ ಕಿವಿಗೊಡದೆ ಧರಣಿ ಮುಂದುವರಿಸಿದರು.

‘ಘಟಕದಿಂದ ಹೊರ ಹೊಮ್ಮುವ ದುರ್ವಾಸನೆಯಿಂದ ವಾಸಿಸಲು ಸಾಧ್ಯವಾಗುತ್ತಿಲ್ಲ. ರೋಗ ರುಜಿನಗಳು ಬಾಧಿಸುತ್ತಿವೆ. ಅಂತರ್ಜಲ ಕಲುಷಿತಗೊಳ್ಳುತ್ತಿದೆ. ಈ ಬಗ್ಗೆ ಬಿಬಿಎಂಪಿಗೆ ದೂರು ಸಲ್ಲಿಸಿ ವರ್ಷಗಳೇ ಕಳೆದಿವೆ. ನ್ಯಾಯಾಲಯ ಮೊರೆ ಕೂಡ ಹೋಗಲಾಗಿದೆ. ಬಿಬಿಎಂಪಿ ಅಧಿಕಾರಿಗಳು, ಸ್ಥಳೀಯರ ಜೀವನದೊಂದಿಗೆ ಚೆಲ್ಲಾಟವಾಡುತ್ತಿದ್ದಾರೆ’ ಎಂದು ದೂರಿದರು.

ಧರಣಿನಿರತರ ಜೊತೆ ಮಾತನಾಡಿದ ಸಚಿವ ಸೋಮಶೇಖರ್, ‘ಸಮಸ್ಯೆಯನ್ನು ಈಗಾಗಲೇ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಫೆ.20ರ ಒಳಗೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಘಟಕ ಸ್ಥಳಾಂತರಕ್ಕೆ ಕ್ರಮ ವಹಿಸಲಾಗುವುದು. ಅಲ್ಲಿಯವರೆಗೆ ತ್ಯಾಜ್ಯ ಸಂಸ್ಕರಣಾ ಘಟಕ ಕಾರ್ಯ ನಿರ್ವಹಿಸದಂತೆ ಸೂಚಿಸಲಾಗುವುದು’ ಎಂದರು.

ಘಟಕ ಸ್ಥಳಾಂತರದ ಆದೇಶ ಬರುವವರೆಗೂ ಧರಣಿ ಕೈಬಿಡುವುದಿಲ್ಲ, ಶಿವರಾತ್ರಿಯ ಜಾಗರಣೆಯನ್ನು ಧರಣಿ ಸ್ಥಳದಲ್ಲೇ ಮಾಡುವುದಾಗಿ ಹೇಳಿದರು.

‘ಹಲವಾರು ವರ್ಷ ಕಳೆದರೂ ಭರವಸೆ ಈಡೇರಿಲ್ಲ. ಘಟಕ ಸ್ಥಳಾಂತರ ಆಗುವವರೆಗೂ ಅನಿರ್ದಿಷ್ಟಾವಧಿ ಧರಣಿ ನಡೆಸಲಾಗುವುದು’ ಎಂದು ಬಿಎಸ್‌ಕೆ 6ನೇ ಹಂತ ನಿವಾಸಿಗಳ ಸಂಘದ ಅಧ್ಯಕ್ಷ ಮಹೇಶ್ ಹೇಳಿದರು.

‘ಸಮಸ್ಯೆಯ ಆಳ ಅರಿಯಲು ಸಹಕಾರ ಸಚಿವರು, ಘಟಕದ ಸಮೀಪ ವಾಸಕ್ಕೆ ಬರಲಿ’ ಎಂದು ಸ್ಥಳೀಯ ನಿವಾಸಿ ಧನಂಜಯ ಒತ್ತಾಯಪಡಿಸಿದರು.

ಈಜಿಪುರ ಮೇಲ್ಸೇತುವೆ ವಿಳಂಬ: ಇಂದು ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿಯ ವಿಳಂಬ ಧೋರಣೆಯನ್ನು ಖಂಡಿಸಿ ಕೋರಮಂಗಲ ಮತ್ತು ಈಜಿಪುರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಶನಿವಾರ ಪ್ರತಿಭಟನೆ ನಡೆಸಲಿದ್ದಾರೆ.

ಕೋರಮಂಗಲ 110 ಅಡಿ ರಸ್ತೆಯ ಸೋನಿವರ್ಲ್ಡ್ ಸಿಗ್ನಲ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ನಡೆಸಲಾಗುತ್ತದೆ. ಶಾಸಕ ರಾಮಲಿಂಗಾರೆಡ್ಡಿ ಅವರೂ ಭಾಗವಹಿಸಲಿದ್ದಾರೆ ಎಂದು ಕೋರಮಂಗಲ ಎಸ್‌ಟಿ ಬೆಡ್ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಾಜೇಂದ್ರ ಬಾಬು ಹೇಳಿದರು.

2017ರಲ್ಲಿ ಈಜಿಪುರ ಮೇಲ್ಸೇತುವೆ ನಿರ್ಮಿಸುವ ಯೋಜನೆಗೆ ಚಾಲನೆ ದೊರೆಯಿತು. 2018ರವರೆಗೆ ಸುಮಾರು ಶೇ 42 ರಷ್ಟು ಕಾಮಗಾರಿ ಮುಗಿದಿತ್ತು. ವಿಳಂಬ ಕಾಮಗಾರಿಯಿಂದ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿ, ಅಲ್ಲಿನ ಆದೇಶದ ನಂತರ 3 ಬಾರಿ ಟೆಂಡರ್ ಕರೆಯಲಾಗಿತ್ತು. ಜ.25ರಂದು ಟೆಂಡರ್ ತೆರೆಯಬೇಕಾಗಿತ್ತು. ತಾಂತ್ರಿಕ ಬಿಡ್ ಮುಗಿದು, ಹಣಕಾಸು ಬಿಡ್ ಹಂತದಲ್ಲೇ ಟೆಂಡರ್ ಕೊನೆಗೊಂಡಿದೆ. ಇನ್ನಷ್ಟು ವಿಳಂಬದ ಜೊತೆಗೆ ಆರ್ಥಿಕ ಹೊರೆಯೂ ಬಿಬಿಎಂಪಿಗೆ ಮುಂದಿನ ದಿನಗಳಲ್ಲಿ ಆಗಲಿದೆ ಎಂದರು.

‘ಹೈಕೋರ್ಟ್ ಆದೇಶವನ್ನು ಒಂದು ವರ್ಷದಿಂದ ಉಲ್ಲಂಘಿಸುತ್ತಾ ಬಂದಿರುವ ಬಿಬಿಎಂಪಿ ಅಧಿಕಾರಿಗಳು, ಮೂರನೇ ಬಾರಿಗೆ ಕರೆದಿದ್ದ ಟೆಂಡರ್ ಅನ್ನೂ ರದ್ದುಪಡಿಸಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಶೇ 10ರಷ್ಟು ಕಾಮಗಾರಿಯನ್ನು ಮಾತ್ರ ಮಾಡಿರುವ ಬಿಜೆಪಿ ಸರ್ಕಾರ, ಸ್ಥಗಿತವಾಗಿರುವ ಮೇಲ್ಸೇತುವೆಯನ್ನು ಪೂರ್ಣಗೊಳಿಸದೆ ರಾಜಕೀಯ ಮಾಡುತ್ತಿದೆ’ ಎಂದು ಕೋರಮಂಗಲ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋವರ್ಧನ ರೆಡ್ಡಿ ದೂರಿದರು.

‘ಬಿಜೆಪಿ ಸರ್ಕಾರ ತನಗೆ ಬೇಕಾದವರಿಗೆ ಹೆಚ್ಚಿನ ಮೊತ್ತಕ್ಕೆ ಟೆಂಡರ್‌ಗಳನ್ನು ನೀಡುತ್ತದೆ. ಪದ್ಮನಾಭನಗರ ಕಿತ್ತೂರು ರಾಣಿ ಚನ್ನಮ್ಮ ವೃತ್ತದ ಮೇಲ್ಸೇತುವೆಗೆ ನಿಗದಿತ ಮೊತ್ತಕ್ಕೆ ಶೇ 35.85ರಷ್ಟು ಹೆಚ್ಚು ಹಣಕ್ಕೆ ಟೆಂಡರ್ ನೀಡಲಾಗಿತ್ತು. ಅದೇ ರೀತಿ ಓಕಳಿಪುರಂ ಅಂಡರ್‌ಪಾಸ್ ಕಾಮಗಾರಿಗೂ ಶೇ 35ರಷ್ಟು ಹೆಚ್ಚಿನ ಮೊತ್ತ ನೀಡಲಾಗಿದೆ’ ಎಂದು ಬಿಟಿಎಂ ಲೇಔಟ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಆನಂದ್ ಆರೋಪಿಸಿದರು.

ಮರುಟೆಂಡರ್‌ಗೆ ನಿರ್ಧಾರ

‘ಈಜಿಪುರ ಮೇಲ್ಸೇತುವೆಗೆ ಸಂಬಂಧಿಸಿದಂತೆ ಇತ್ತೀಚೆಗೆ ಆಹ್ವಾನಿಸಿದ್ದ ಟೆಂಡರ್ ಅನ್ನು ರದ್ದುಪಡಿಸಲಾಗಿದೆ. ಏಕ ಗುತ್ತಿಗೆದಾರರಿದ್ದು ಅವರು ಹೆಚ್ಚಿನ ಮೊತ್ತಕ್ಕೆ ಬಿಡ್ ಸಲ್ಲಿಸಿದ್ದರು. ಅವರೊಂದಿಗೆ ಸಮಾಲೋಚನೆ ನಡೆಸಿದ ನಂತರವೂ ಅವರು ಮೊತ್ತವನ್ನು ಹೆಚ್ಚು ಕಡಿಮೆ ಮಾಡಲಿಲ್ಲ. ಹೀಗಾಗಿ, ಮರು ಟೆಂಡರ್ ಮಾಡಿದರೆ ಮತ್ತಷ್ಟು ಗುತ್ತಿಗೆದಾರರು ಬಿಡ್ ಸಲ್ಲಿಸುವ ಸಾಧ್ಯತೆ ಇದ್ದು, ಬಿಬಿಎಂಪಿ ನಿರ್ಧರಿಸಿರುವ ಮೊತ್ತದ ಆಸುಪಾಸಿಗೆ ನಿರ್ಧಾರವಾಗಬಹುದು ಎಂದು ನಿರೀಕ್ಷಿಸಲಾಗಿದೆ. ಆದಷ್ಟು ಬೇಗ ಟೆಂಡರ್ ಆಹ್ವಾನಿಸಿ, ಶೀಘ್ರ ಕಾಮಗಾರಿ ಕೈಗೊಳ್ಳಲಾಗುವುದು’ ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಸೂಗೂರು ಹೇಳಿದರು.

‘ಕೇಂದ್ರ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ’

ಬೆಂಗಳೂರು: ‘ಅದಾನಿ ಸಮೂಹದ ವಿರುದ್ಧ ತನಿಖೆಗೆ ಕೇಂದ್ರ ಸರ್ಕಾರ ಜಂಟಿ ಸದನ ಸಮಿತಿ ರಚಿಸಬೇಕು’ ಎಂದು ರಾಜಸ್ಥಾನದ ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಆಗ್ರಹಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಶಾಸಕ ಪ್ರಿಯಾಂಕ್ ಖರ್ಗೆ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನೂರಾರು ಕೋಟಿ ಮೊತ್ತದ ಹಗರಣಗಳು ನಡೆಯುತ್ತಿದ್ದರೂ ಕೇಂದ್ರ ಸರ್ಕಾರ ಕಣ್ಣುಮುಚ್ಚಿ ಕುಳಿತಿದೆ. ಸರ್ಕಾರ ಉದ್ದೇಶಪೂರ್ವಕವಾಗಿ ಏನೋ ಮುಚ್ಚಿಡುವ ಪ್ರಯತ್ನ ಮಾಡುತ್ತಿದೆ’ ಎಂದು ದೂರಿದರು.

‘ನಾವು ಕೇಳಿದ ಪ್ರಶ್ನೆಗಳಲ್ಲಿ ಒಂದಕ್ಕೂ ಪ್ರಧಾನಿ ನರೇಂದ್ರ ಮೋದಿ ಉತ್ತರಿಸಿಲ್ಲ. ಖಾಸಗಿ ಮಾಲೀಕತ್ವ ಹಾಗೂ ಸಣ್ಣ ಉದ್ದಿಮೆಗಳ ಕಾರ್ಯನಿರ್ವಹಣೆಯ ಬಗ್ಗೆ ನಾವು ಕೇಳಿದ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಜಂಟಿ ಸದನ ಸಮಿತಿ ರಚಿಸುವ ಬೇಡಿಕೆಗೂ ಬೆಲೆ ಇಲ್ಲ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ಕೇಂದ್ರ ಸರ್ಕಾರದ ಅಧೀನದಲ್ಲಿಯೇ ಎಲ್ಲಾ ತನಿಖಾ ಸಂಸ್ಥೆಗಳಿದ್ದು, ನಮ್ಮ ಯಾವ ಮನವಿಗೂ ಪುರಸ್ಕಾರ ಸಿಗುತ್ತಿಲ್ಲ. ಅವರು ಅನಗತ್ಯವಾಗಿ ಜನರ ಮೇಲೆ ಆರ್ಥಿಕ ಹೊರೆ ಹೇರುತ್ತಿದ್ದಾರೆ’ ಎಂದರು.

‘ಕಾಂಗ್ರೆಸ್ ಪಕ್ಷದ ಸಾಧನೆಯನ್ನು ತನ್ನ ಸಾಧನೆ ಎಂದು ಬಿಜೆಪಿ ಸರ್ಕಾರ ಹೇಳಿಕೊಳ್ಳುತ್ತಿದೆ. ಆದರೆ, ಮೋದಿ ಸರ್ಕಾರ ಜಾರಿಗೆ ತಂದ ಯಾವ ಕಾರ್ಯಕ್ರಮವೂ ಯಶಸ್ವಿಯಾಗಿಲ್ಲ. ಅನಗತ್ಯವಾಗಿ ರಾತ್ರೋರಾತ್ರಿ ಕಾಯ್ದೆಗಳನ್ನು ಜಾರಿಗೆ ತಂದು ಆರ್ಥಿಕ ಹೊರೆಯನ್ನು ಜನರ ಮೇಲೆ ಹೊರಿಸುತ್ತಿದ್ದಾರೆ. ಕರ್ನಾಟಕ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಚುನಾವಣೆ ನಡೆಯಲಿದ್ದು, ಜನ ಬಿಜೆಪಿ ಸರ್ಕಾರವನ್ನು ಕಿತ್ತೆಸೆಯಲಿದ್ದಾರೆ’ ಎಂದರು.

‘ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಕಾಂಗ್ರೆಸ್ ಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ಬರಲಿದೆ. ಇದರಲ್ಲಿ ಯಾವುದೇ ಅನುಮಾನ ಬೇಡ’ ಎಂದರು.

ಸ್ಪರ್ಧಾತ್ಮಕ ಪರೀಕ್ಷೆ: ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ನಗರದ ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಐಎಎಸ್, ಕೆಎಎಸ್ ಹಾಗೂ ಬ್ಯಾಂಕಿಂಗ್ ಪರೀಕ್ಷೆಗಳ (ಆನ್‌ಲೈನ್ ಹಾಗೂ ಆಫ್‌ಲೈನ್) ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು, ಫೆ.28ರ ಒಳಗೆ ವೆಬ್‌ಸೈಟ್: www.ksfkarnataka.comನಲ್ಲಿ ಡೌನ್‌ಲೋಡ್ ಮಾಡಿಕೊಂಡು ಭರ್ತಿ ಮಾಡಿದ ಅರ್ಜಿಗಳನ್ನು ಕೃಷಿಕ್ ಸರ್ವೋದಯ ಫೌಂಡೇಶನ್, ನ.:15, 2ನೇ ಮಹಡಿ, ಹಳೇ ವಿಮಾನ ನಿಲ್ದಾಣ ರಸ್ತೆ, ಕೋಡಿಹಳ್ಳಿ, ಬೆಂಗಳೂರು –08 ಇಲ್ಲಿಗೆ ಕಳುಹಿಸಬಹುದು. ಹೆಚ್ಚಿನ ವಿವರಗಳಿಗೆ ದೂರವಾಣಿ– 080 25202299 ಹಾಗೂ ಮೊಬೈಲ್: 76250 00990 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮದ್ಯ ಪೂರೈಕೆ ತಡ: ಸಪ್ಲೈಯರ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಬಸವರಾಜು (39) ಎಂಬುವವರನ್ನು ಕೊಲೆ ಮಾಡಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿಗಳಾದ ಸುರೇಶ್ (29) ಮತ್ತು ವಿನೋದ್ ಕುಮಾರ್ (28) ಬಂಧಿತರು. ಇವರಿಬ್ಬರು ನೀರು ಶುದ್ಧೀಕರಣ ಹಾಗೂ ಹವಾನಿಯಂತ್ರಿತ (ಎ.ಸಿ) ದುರಸ್ತಿ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಮಂಡ್ಯದ ಬಸವರಾಜು ಎಸ್.ಆರ್. ಆರ್ ಬಾರ್‌ನಲ್ಲಿ ಸಪ್ಲೈಯರ್ ಆಗಿದ್ದರು. ಜ. 23ರಂದು ಸಂಜೆ ಬಾರ್‌ನಲ್ಲಿ ಹೆಚ್ಚು ಗ್ರಾಹಕರು ಇದ್ದಿದ್ದರಿಂದ ಸುರೇಶ್ ಹಾಗೂ ವಿನೋದ್‌ಕುಮಾರ್ ಅವರಿಗೆ ಮದ್ಯ ಪೂರೈಕೆ ಮಾಡುವುದು ತಡವಾಗಿತ್ತು. ಅಷ್ಟಕ್ಕೇ ಗಲಾಟೆ ಮಾಡಿದ್ದ ಆರೋಪಿಗಳು, ಬಸವರಾಜು ಅವರನ್ನು ನಿಂದಿಸಿ ತೆರಳಿದ್ದರು. ಬೇರೆಡೆ ಮದ್ಯ ಕುಡಿದಿದ್ದ ಆರೋಪಿಗಳು, ಪುನಃ ಬಾರ್‌ಗೆ ಹೋಗಿ ಬಸವರಾಜು ಅವರನ್ನು ಹಿಡಿದುಕೊಂಡು ತಲೆಯನ್ನು ಗೋಡೆಗೆ ಗುದ್ದಿಸಿ ಹಲ್ಲೆ ಮಾಡಿ ಪರಾರಿಯಾಗಿದ್ದರು’.

‘ಬಸವರಾಜು, ಮನೆಗೆ ಹೋಗಿ ಮಲಗಿದ್ದರು. ಮರುದಿನ ತಲೆ ಸುತ್ತು ಬಂದಿತ್ತು. ಆಸ್ಪತ್ರೆಗೆ ಹೋದಾಗ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿದ್ದು ಗೊತ್ತಾಗಿ, ಆಸ್ಪತ್ರೆಗೆ ದಾಖಲಾಗಿದ್ದರು. ಫೆ. 15ರಂದು ಮೃತಪಟ್ಟಿದ್ದರು’ ಎಂದು ಪೊಲೀಸರು ಹೇಳಿದರು.

ವಿದ್ಯಾರ್ಥಿನಿ ಮೇಲೆ ಆ್ಯಸಿಡ್ ದಾಳಿ

ರಾಮನಗರ: ಕನಕಪುರ ನಗರದ ಬೈಪಾಸ್ ರಸ್ತೆ ಬಳಿ ಶುಕ್ರವಾರ ಯುವಕನೊಬ್ಬ 17 ವರ್ಷದ ವಿದ್ಯಾರ್ಥಿನಿ ಮುಖದ ಮೇಲೆ ಆ್ಯಸಿಡ್ ಎರಚಿದ್ದಾನೆ.

ದಾಳಿಯಲ್ಲಿ ಬಾಲಕಿಯ ಎಡಗಣ್ಣಿಗೆ ಗಾಯಗಳಾಗಿದ್ದು, ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿಗೆ ರವಾನಿಸಲಾಗಿದೆ.

22 ವಯಸ್ಸಿನ ಆರೋಪಿ ಯುವಕ ಕುರುಪೇಟೆಯಲ್ಲಿ ಮೆಕ್ಯಾನಿಕ್ ಕೆಲಸ ಮಾಡುತ್ತಿದ್ದ. ಈತ ಮತ್ತು ವಿದ್ಯಾರ್ಥಿನಿ ನಡುವೆ ಕಳೆದ ಒಂದು ವರ್ಷದಿಂದಲೂ ಸಲುಗೆ ಇತ್ತು. ಈಚೆಗೆ ಇಬ್ಬರ ನಡುವೆ ಗಲಾಟೆ ನಡೆದಿದ್ದು, ವಿದ್ಯಾರ್ಥಿನಿ ಯುವಕನ ಪ್ರೀತಿಯನ್ನು ನಿರಾಕರಿಸಿದ್ದಳು ಎನ್ನಲಾಗಿದೆ.

ಬೈಪಾಸ್ ರಸ್ತೆಯಲ್ಲಿ ಯುವಕ ವಿದ್ಯಾರ್ಥಿನಿಯ ಮನವೊಲಿಸಲು ಯತ್ನಿಸಿದ್ದಾನೆ. ಆಕೆ ಒಪ್ಪದಿದ್ದಾಗ ಕಾರ್ ಎಂಜಿನ್ ಶುಚಿಗೊಳಿಸಲು ಬಳಸುತ್ತಿದ್ದ ಆ್ಯಸಿಡ್ ಅನ್ನು ಎರಚಿದ್ದಾನೆ ಎನ್ನಲಾಗಿದೆ. ಕನಕಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.



ರಾಜ್ಯ ಬಜೆಟ್ 2023-24

₹3,000 ಕೋಟಿ ಹವಾಮಾನ ಬದಲಾವಣೆ ಪರಿಣಾಮ ಕಡಿಮೆ ಮಾಡಲು, ಪ್ರವಾಹ ನಿಯಂತ್ರಿಸಲು ವಿಶ್ವಬ್ಯಾಂಕ್ ನೆರವಿನೊಂದಿಗೆ ಯೋಜನೆ

₹1,450 ಕೋಟಿ ನಗರದಲ್ಲಿ 120 ಕಿ.ಮೀ ಮುಖ್ಯ ರಸ್ತೆಗೆ ವೈಟ್ ಟಾಪಿಂಗ್‌ಗೆ, ₹1,000 ಕೋಟಿ 300 ಕಿ.ಮೀ ಮುಖ್ಯರಸ್ತೆಗೆ, ₹450 ಕೋಟಿ ಉಪಮುಖ್ಯ ರಸ್ತೆಗಳ ಅಭಿವೃದ್ಧಿಗೆ

₹350 ಕೋಟಿ ಟಿನ್ ಫ್ಯಾಕ್ಟರಿಯಿಂದ ಮೇಡಹಳ್ಳಿವರೆಗೆ ಎಲಿವೇಟೆಡ್, ಯಶವಂತಪುರ ರೈಲು ನಿಲ್ದಾಣದಿಂದ ಬಿಇಎಲ್ ರಸ್ತೆವರೆಗೆ ಇಂಟಗ್ರೇಟೆಡ್ ಮೇಲ್ಸೇತುವೆ

₹300 ಕೋಟಿ 110 ಗ್ರಾಮಗಳಲ್ಲಿ ರಸ್ತೆಗಳ ಪುನರ್ ನಿರ್ಮಾಣ

ಬೀದಿ ಪ್ರಾಣಿಗಳಿಗೆ ಸಂಚಾರಿ ಚಿಕಿತ್ಸಾಲಯ



ಪ್ರಾಣಿಗಳ ಮೇಲಿನ ಹಿಂಸೆ ತಡೆ ಮತ್ತು ಪ್ರಾಣಿ ಕಲ್ಯಾಣಕ್ಕಾಗಿ ಪ್ರಾಣಿ ಕಲ್ಯಾಣ ಮಂಡಳಿಗೆ ₹5 ಕೋಟಿ ಅನುದಾನ ನೀಡಲಾಗುತ್ತಿದೆ. ಈ ಮಂಡಳಿಯ ವತಿಯಿಂದ ಬೆಂಗಳೂರಿನಲ್ಲಿರುವ ನಿರ್ಲಕ್ಷಿತ ಪ್ರಾಣಿಗಳ ಚಿಕಿತ್ಸೆ ನೀಡಲು 'ಸಂಚಾರಿ ಚಿಕಿತ್ಸಾಲಯ'ಗಳನ್ನು ಸ್ಥಾಪಿಸಲಾಗುತ್ತದೆ. ನಾಯಿಗಳು ಸೇರಿದಂತೆ ಬೀದಿಗೆ ಬಿಡಲಾಗಿರುವ ಪ್ರಾಣಿಗಳು ಸಾಕಷ್ಟು ಸಂಕಷ್ಟಕ್ಕೆ ಒಳಗಾಗಿವೆ. ಕ್ಯೂಪ ಸೇರಿದಂತೆ ಕೆಲವು ಸಂಸ್ಥೆಗಳು ಮಾತ್ರ ಚಿಕಿತ್ಸೆ, ಸಾಕಣೆ ಮಾಡುತ್ತಿದ್ದವು. ಈಗ ಸರ್ಕಾರ ಅಂತಹ ಕೆಲಸಕ್ಕೆ ಮುಂದಾಗಿದೆ.

₹200 ಕೋಟಿ 110 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರು ಒದಗಿಸಲು ಅನುದಾನ

50 ಲಕ್ಷ ಜನರಿಗೆ 775 ಎಂಎಲ್‌ಡಿ ಶುದ್ಧ ಕುಡಿಯುವ ನೀರು ಒದಗಿಸಲಾಗುತ್ತದೆ. ₹5,500 ಕೋಟಿ ಜೈಕಾ ಆರ್ಥಿಕ ನೆರವಿನ ಕಾವೇರಿ 5ನೇ ಹಂತದ ಕಾಮಗಾರಿ ಈ ವರ್ಷ ಪೂರ್ಣ

44.65 ಕಿ.ಮೀ 31 ನಿಲ್ದಾಣ, 2 ಮಾರ್ಗಗಳ ವಿಸ್ತೃತ ವರದಿ ಕೇಂದ್ರಕ್ಕೆ

₹300 ಕೋಟಿ ಬೈಯಪ್ಪನಹಳ್ಳಿ ಮೆಟ್ರೊ ಟರ್ಮಿನಲ್ ಸುತ್ತಮುತ್ತ ರಸ್ತೆ ಅಭಿವೃದ್ಧಿ



₹1,000 ಕೋಟಿ ಉಪನಗರ ರೈಲ್ವೆ ಯೋಜನೆಗೆ ಅನುದಾನ

₹150 ಕೋಟಿ ಸುಗಮ ಸಂಚಾರಕ್ಕೆ 75 ಜಂಕ್ಷನ್‌ಗಳಲ್ಲಿ ಕೃತಕ ಬುದ್ಧಿಮತ್ತೆಯ ಟ್ರಾಫಿಕ್ ಸಿಗ್ನಲ್

30% 288 ಕಿ.ಮೀ ಸ್ಯಾಟಲೈಟ್ ಟೌನ್ ರಿಂಗ್ ರಸ್ತೆಗೆ ಭೂಸ್ವಾಧೀನಕ್ಕೆ ರಾಜ್ಯಸರ್ಕಾರದಿಂದ ಅನುದಾನ

₹9,698 ಕೋಟಿ ಬೆಂಗಳೂರು ನಗರದ ಅಭಿವೃದ್ಧಿ ವಲಯಕ್ಕೆ 2023–24ನೇ ಸಾಲಿಗೆ ಒದಗಿಸಲಾಗಿರುವ ಅನುದಾನ

₹8,409 ಕೋಟಿ 2022–23ನೇ ಸಾಲಿನಲ್ಲಿ ನಗರಕ್ಕೆ ಪ್ರಕಟಿಸಿದ್ದ ಅನುದಾನ

ನಗರದ ಜನರನ್ನು ಆಕರ್ಷಿಸಲು ಮುಖ್ಯಮಂತ್ರಿ ಹೊಸ ಯೋಜನೆಗಳ ಮಹಾಪೂರ ಹರಿಸದಿದ್ದರೂ ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ.

ಹಳೆಯ ಯೋಜನೆ ಹೊಸತನದ 'ಭಜನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ಚುನಾವಣೆಯ ಹೊಸ್ತಿಲಲ್ಲಿ ರಾಜ್ಯ ರಾಜಧಾನಿ ಬೆಂಗಳೂರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡಿರುವ ಹೊಸ ಕೊಡುಗೆಗಳು ಕಡಿಮೆಯಾಗಿದ್ದರೂ, ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ಆಯವ್ಯಯದಲ್ಲಿ ಅವಕಾಶ ಮಾಡಿಕೊಟ್ಟಿದ್ದಾರೆ. ವಾಹನ ದಟ್ಟಣೆ ನಿಯಂತ್ರಣಕ್ಕೆ ರಸ್ತೆ ಅಭಿವೃದ್ಧಿ, ಮೇಲ್ಸೇತುವೆ, ಜಂಕ್ಷನ್‌ಗಳ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ.

ಅಮೃತ ನಗರೋತ್ಥಾನ ಯೋಜನೆ ಹಾಗೂ ನಗರದ ಸಮಗ್ರ ಅಭಿವೃದ್ಧಿಗಾಗಿ ಯೋಜನೆ ಎಂದು 2–3 ತಿಂಗಳಿಂದ ಹೇಳಿಕೊಂಡು ಬರುತ್ತಿದ್ದ ವಿಷಯಗಳನ್ನೇ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ. ಈ ವರ್ಷ ಮಾಡಿರುವ ಕಾರ್ಯ ಹಾಗೂ ಮುಂದಿನ ವರ್ಷ ವಿನಿಯೋಗಿಸುವ ಹಣದ ಬಾಬ್ತನ್ನು ಹೇಳಲಾಗಿದೆ. ಒಟ್ಟಾರೆ ₹9 ಸಾವಿರ ಕೋಟಿಗೂ ಹೆಚ್ಚು ಅನುದಾನ ನೀಡಲಾಗಿದೆ ಎಂದು ತೋರಿಸಲಾಗಿದ್ದರೂ, ವಾಸ್ತವದಲ್ಲಿ ಹಳೆಯ ಯೋಜನೆಗಳನ್ನೇ ಪ್ರಸ್ತಾಪಿಸಲಾಗಿದೆ.

ಮಳೆಗಾಲದಲ್ಲಿ ಅತಿಹೆಚ್ಚು ಸಮಸ್ಯೆಗೆ ಒಳಗಾದ ನಗರದಲ್ಲಿ ಪ್ರವಾಹ ನಿಯಂತ್ರಿಸುವ ಯೋಜನೆಗೆ ಆದ್ಯತೆ ನೀಡಲಾಗಿದ್ದು, ವಿಶ್ವಬ್ಯಾಂಕ್ ನೆರವನ್ನು ಇದಕ್ಕೆ ಪಡೆಯಲಾಗಿದೆ. ನಗರದಲ್ಲಿರುವ ಎಲ್ಲ ಕೆರೆಗಳಿಗೂ ತೂಬು ಅಳವಡಿಸುವ ಮೂಲಕ, ನೀರಿನ ಹರಿವಿನ ವೇಗಕ್ಕೆ ತಡೆ ಹಾಕಲು ಉದ್ದೇಶಿಸಲಾಗಿದೆ.

ಅತಿಯಾಗಿ ಕಾಡುತ್ತಿರುವ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು ಹೆಚ್ಚಿನ ಒತ್ತು ನೀಡಲಾಗಿದೆ. ಕೃತಕ ಬುದ್ಧಿಮತ್ತೆ ಬಳಕೆಯೊಂದಿಗೆ ಸಿಗ್ನಲ್ ವ್ಯವಸ್ಥೆಯನ್ನು ಆಧುನೀಕರಿಸಿ, 'ಸೀಮ್‌ಲೆಸ್ ಸಿಗ್ನಲಿಂಗ್' ಮೂಲಕ ದಟ್ಟಣೆ ಕಡಿಮೆ ಮಾಡುವ ಆಲೋಚನೆ ಇದೆ. ಇನ್ನು, ಯಶವಂತಪುರಕ್ಕೆ ಹೊಂದಿಕೊಂಡ ತುಮಕೂರು ರಸ್ತೆಯಲ್ಲಿ ಉಂಟಾಗುವ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಪರ್ಯಾಯ ಮೇಲ್ಸೇತುವೆಯನ್ನು ಯಶವಂತಪುರ ರೈಲು ನಿಲ್ದಾಣದಿಂದ ಮತ್ತಿಕೆರೆ ಮಾರ್ಗವಾಗಿ ಬಿಇಎಲ್ ರಸ್ತೆವರೆಗೆ ನಿರ್ಮಿಸಲು ಪ್ರಸ್ತಾಪಿಸಲಾಗಿದೆ. ಟಿನ್ ಫ್ಯಾಕ್ಟರಿಯಿಂದ ಮೇಡಹಳ್ಳಿವರೆಗೆ ಎಲಿವೇಟೆಡ್ ರಸ್ತೆಗೆ ಅನುದಾನ ನಿಗದಿ ಮಾಡಲಾಗಿದೆ. 120 ಕಿ.ಮೀ ಉದ್ದದ ರಸ್ತೆ ವೈಟ್ ಟಾಪಿಂಗ್‌ಗೆ ಮತ್ತೆ ಆದ್ಯತೆ ನೀಡಲಾಗಿದ್ದು, ಮುಖ್ಯರಸ್ತೆಗಳ ಅಭಿವೃದ್ಧಿಗೆ ಅನುದಾನ ಒದಗಿಸಲಾಗಿದೆ. ಜೊತೆಗೆ, ಗ್ರಾಮೀಣ ರಸ್ತೆಗಳ ಪುನರ್‌ನಿರ್ಮಾಣಕ್ಕೆ ಅವಕಾಶ ಮಾಡಿಕೊಡಲಾಗಿದೆ.

'ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ'ಯನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿರ್ಮಿಸುವುದಾಗಿ ಈಗಾಗಲೇ ಪ್ರಕಟಿಸಲಾಗಿದೆ. ₹13,139 ಕೋಟಿ ವೆಚ್ಚದ ಈ ರಸ್ತೆ ನಿರ್ಮಾಣಕ್ಕಾಗಿ ಭೂಸ್ವಾಧೀನಕ್ಕೆ ಆಗುವ ವೆಚ್ಚದಲ್ಲಿ ಶೇ 30ರಷ್ಟನ್ನು ಭರಿಸಲು ಒಪ್ಪಲಾಗಿದೆ. ಉಪನಗರ ರೈಲ್ವೆ ಯೋಜನೆಗೂ ಅನುದಾನ ಒದಗಿಸುವುದನ್ನೂ ಪ್ರಸ್ತಾಪಿಸಲಾಗಿದೆ.

ಬೆಂಗಳೂರು ಹೆಲ್ತ್ ಸಿಸ್ಟಮ್ಸ್: ನಮ್ಮ ಕ್ಲಿನಿಕ್, ಸ್ಮಾರ್ಟ್ ವರ್ಚ್ಯುಯಲ್ ಕ್ಲಿನಿಕ್ ಅನುಮೋದನೆಯನ್ನು ಪ್ರಸ್ತಾಪಿಸಲಾಗಿದೆ. 50 ಹಾಸಿಗೆಗಳ ಡಯಾಲಿಸಿಸ್, 300 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಉಲ್ಲೇಖಿಸಿ ಎಲ್ಲವನ್ನೂ ಒಂದೇ ಆರೋಗ್ಯ ಆಡಳಿತ ವ್ಯವಸ್ಥೆಯಡಿ ತಂದು 'ಬೆಂಗಳೂರು ಆರೋಗ್ಯ ವ್ಯವಸ್ಥೆ' ಎಂದು ಪುನರ್ ರಚಿಸಲು ಉದ್ದೇಶಿಸಲಾಗಿದೆ.

ಅಮೃತ ನಗರೋತ್ಥಾನ ಯೋಜನೆಯಡಿ ಅನುಮತಿಸಲಾಗಿರುವ ₹ 6 ಸಾವಿರ ಕೋಟಿ ವೆಚ್ಚದ ಕಾಮಗಾರಿಗಳನ್ನೇ ಮತ್ತೆ ಬಜೆಟ್‌ನಲ್ಲಿ ಉಲ್ಲೇಖಿಸಿ, ಹೊಸ ಯೋಜನೆಗಳೆಂಬಂತೆ ಬಿಂಬಿಸಲಾಗಿದೆ.



ಬಿಡಿಎ ಪ್ರಸ್ತಾಪವೇ ಇಲ್ಲ!


'ಬೆಂಗಳೂರು ಸಮಗ್ರ ಅಭಿವೃದ್ಧಿ' ಶೀರ್ಷಿಕೆಯಡಿ ಯೋಜನೆಗಳು, ಅನುದಾನವನ್ನು 27 ಅಂಶಗಳಲ್ಲಿ ವಿವರಿಸಲಾಗಿದ್ದು, ಇದರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಪ್ರಸ್ತಾಪವೇ ಇಲ್ಲ. ಕಳೆದ ಬಾರಿ ನಾಡಪ್ರಭು ಕೆಂಪೇಗೌಡ ಬಡಾವಣೆಯನ್ನು ಆಧುನಿಕ ಸ್ಮಾರ್ಟ್ ಸಿಟಿಯನ್ನಾಗಿ ಅಭಿವೃದ್ಧಿಪಡಿಸಲಾಗುತ್ತದೆ ಎಂದು ಘೋಷಿಸಲಾಗಿತ್ತು. ವಿಶ್ವೇಶ್ವರಯ್ಯ, ಅಂಜನಾಪುರ, ಬನಶಂಕರಿ 6ನೇ ಹಂತ ಬಡಾವಣೆಗಳನ್ನು ಬಿಬಿಎಂಪಿಗೆ ಹಸ್ತಾಂತರಿಸುವ ವಿಷಯವಿತ್ತು. ಈ ಬಾರಿ ಯಾವುದೂ ಇಲ್ಲ.

ನಗರಕ್ಕೆ ನೀಡಲಾಗಿರುವ ಒಟ್ಟಾರೆ ಅನುದಾನದಲ್ಲಿ ಸುಮಾರು ₹1,200 ಕೋಟಿ ಈ ವರ್ಷ ಹೆಚ್ಚಾಗಿದೆ.

'ನಮ್ಮ ಮೆಟ್ರೊ'ಗೆ ಸಂಬಂಧಿಸಿದಂತೆ ಕಳೆದ ಬಾರಿ 45 ಕಿ.ಮೀ ಹೊಸ ಮಾರ್ಗವನ್ನು ಪ್ರಕಟಿಸಲಾಗಿತ್ತು. ಈ ಬಾರಿ 40 ಕಿ.ಮೀ ಕಾರ್ಯಗತವಾಗುತ್ತದೆ ಎಂದಷ್ಟೇ ಪ್ರಸ್ತಾಪಿಸಲಾಗಿದೆ. ತ್ಯಾಜ್ಯನೀರು ಸಂಸ್ಕರಣೆ, ಬೆಂಗಳೂರು ಪಬ್ಲಿಕ್ ಶಾಲೆ, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ಉಪನಗರ ರೈಲು, ರಾಜಕಾಲುವೆ ಅಭಿವೃದ್ಧಿ ವಿಷಯಗಳು ಹಿಂದಿನ ಬಜೆಟ್‌ನಲ್ಲಿ ಪ್ರಸ್ತಾಪವಾಗಿದ್ದವು. ಅವನ್ನೇ ಈ ಬಾರಿಯೂ ಪುನರುಚ್ಚರಿಸಲಾಗಿದೆ.


2022–23ರಲ್ಲಿ ಪ್ರತಿವರ್ಷ ಸುಮಾರು 10 ಲಕ್ಷ ಸಸಿಗಳನ್ನು ನೆಡಲಾಗುವ ಪ್ರಸ್ತಾಪವನ್ನು ಈ ಬಾರಿ ಹೆಚ್ಚಿಸಿ 15 ಲಕ್ಷ ಸಸಿಗಳನ್ನು ನೆಡಲು ಉದ್ದೇಶಿಸಲಾಗಿದೆ. ಅಲ್ಲದೆ, ಅರಣ್ಯ ಇಲಾಖೆಯ ಸಹಕಾರದೊಂದಿಗೆ ಮೂರು ಹೊಸ ಹೈಟೆಕ್ ನರ್ಸರಿ ಸ್ಥಾಪಿಸಲು ಪ್ರಸ್ತಾಪಿಸಲಾಗಿದೆ.

ಬಜೆಟ್: ನಾವು ಕಂಡಂತೆ




ಬಿಜೆಪಿಯವರದ್ದು ಡಬಲ್ ಅಲ್ಲ ತ್ರಿಬಲ್ ಎಂಜಿನ್ ಸರ್ಕಾರ. ಬಿಬಿಎಂಪಿಯಲ್ಲೂ ಅವರೇ ಇದ್ದಾರೆ. ಆದರೆ ಬಜೆಟ್ ಮಂಡನೆ ಮುಖ್ಯವಲ್ಲ. ಅದರ ಅನುಷ್ಠಾನದಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಮಹಿಳೆಯರು, ಮಧ್ಯಮವರ್ಗಕ್ಕೆ ಏನೂ ಉಪಯೋಗವಿಲ್ಲ.

ಸೌಮ್ಯಾ ರೆಡ್ಡಿ, ಜಯನಗರ ವಿಧಾನಸಭೆ ಕ್ಷೇತ್ರದ ಶಾಸಕಿ



ಪದವಿ ಮುಗಿಸಿದವರಿಗೆ ₹ 2000 ಕೊಡುವುದಾಗಿ ಹೇಳಲಾಗಿದೆ. ಆದರೆ, ಉದ್ಯೋಗಾವಕಾಶ ಇಲ್ಲ. ಹಿಂದೆ 'ವನಿತಾ ಸಹಾಯ' ಯೋಜನೆಯಲ್ಲೂ ಹೆಣ್ಣುಮಕ್ಕಳಿಗೆ ಉಚಿತ ಬಸ್ ಪಾಸ್ ಕೊಡುವ ಅಂಶವಿತ್ತು. ಅದೇ ಈ ಸಲವೂ ಇದೆ. ಇವೆಲ್ಲ ಈಡೇರದ ಚುನಾವಣೆ ದೃಷ್ಟಿಯ ಅಂಶಗಳಷ್ಟೆ.

ಎಲ್. ಗಂಗಾಧರಮೂರ್ತಿ, ಜೆಡಿಎಸ್ ವಕ್ತಾರ



ಬಜೆಟ್ ಮೊತ್ತ ಹೆಚ್ಚುತ್ತಲೇ ಇದ್ದರೂ ಬಡತನ ನಿವಾರಣೆಯಾಗಿಲ್ಲ. ಕಮಿಷನ್ ಹೊಡೆಯಲು ಅನುವಾಗುವ ಯೋಜನೆಗಳಿಗೆ ಹೆಚ್ಚು ಹಣ ಮಂಜೂರಾಗಿದೆ. ಆರೋಗ್ಯ, ಶಿಕ್ಷಣ ಅಮುಖ್ಯವಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕಕ್ಕೆ ಒತ್ತುನೀಡಿಲ್ಲ.

ರವಿಕೃಷ್ಣಾ ರೆಡ್ಡಿ, ಕೆಆರ್‌ಎಸ್ ಪಕ್ಷದ ಅಧ್ಯಕ್ಷ



ಕಳೆದ ಬಜೆಟ್‌ನಲ್ಲಿ ಬೆಂಗಳೂರು ಸಬರ್ಬನ್ ರೈಲು ಯೋಜನೆಗೆ ಮಾಡಿದ್ದ ಘೋಷಣೆಯೇ ಈಡೇರಿಲ್ಲ. ಬೆಂಗಳೂರಿನ ಮೂಲಸೌಕರ್ಯ ಸಮಸ್ಯೆಗಳೆಲ್ಲ ಹಾಗೇ ಇವೆ. 20–30 ವರ್ಷಗಳ ದೂರದೃಷ್ಟಿ ಇಲ್ಲದ ಇಂತಹ ಬಜೆಟ್ ಚುನಾವಣೆಯ ಘೋಷಣೆ ಪತ್ರವಷ್ಟೆ, ಯೋಚಿಸಿ ಮಾಡಿರುವ ಬಜೆಟ್ ಅಲ್ಲ.

ಮೋಹನ್ ದಾಸರಿ, ಎಎಪಿ ಬೆಂಗಳೂರು ಘಟಕದ ಅಧ್ಯಕ್ಷ



ಬೆಂಗಳೂರಿಗೆ ₹10 ಸಾವಿರ ಕೋಟಿ ಮೊತ್ತದ ಅನುದಾನ ಸಿಕ್ಕಿರುವುದು ಇದೇ ಮೊದಲು. ಮಹಿಳೆಯರಿಗೆ ವಿಶೇಷ 'ಶಿ' ಶೌಚಾಲಯ ಹಾಗೂ ದಟ್ಟಣೆ ನಿವಾರಣೆಗೆ ರಸ್ತೆ, ಮೇಲ್ಸೇತುವೆಗಳ ನಿರ್ಮಾಣ ಯೋಜನೆ ಶ್ಲಾಘನಾರ್ಹ.

ಎನ್.ಆರ್. ರಮೇಶ್, ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಘಟಕದ ಅಧ್ಯಕ್ಷ

ಮಹಿಳೆಯರ ರಕ್ಷಣೆಗೆ ₹261 ಕೋಟಿ

1,850 ಎಂಎಲ್‌ಡಿ ನಗರದಲ್ಲಿ ಉತ್ಪತ್ತಿಯಾಗುತ್ತಿರುವ ಒಟ್ಟು ತ್ಯಾಜ್ಯ ನೀರು

1,500 ಎಂಎಲ್‌ಡಿ ಈಗಿರುವ ತ್ಯಾಜ್ಯ ನೀರಿನ ಸಂಸ್ಕರಣೆ ಸಾಮರ್ಥ್ಯ

350 ಎಂಎಲ್‌ಡಿ ಹೊಸದಾಗಿ ಸಂಸ್ಕರಣೆ ಸಾಮರ್ಥ್ಯ ಸೃಷ್ಟಿ



ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಬೆಂಗಳೂರು: ಸಮಾಜದ ದುರ್ಬಲ ವರ್ಗದವರಲ್ಲಿ, ಅದರಲ್ಲೂ ಮಹಿಳೆಯರಲ್ಲಿ ವಿಶ್ವಾಸ ಮೂಡಿಸುವ 'ನಿರ್ಭಯ' ಯೋಜನೆಯಡಿ ನಗರದಲ್ಲಿ 'ಸುರಕ್ಷಿತ ನಗರ' ಯೋಜನೆಯನ್ನು ₹261 ಕೋಟಿ ವೆಚ್ಚದಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. 1,640 ಸ್ಥಳಗಳಲ್ಲಿ 4,100 ಕ್ಯಾಮೆರಾ ಅಳವಡಿಸಲಾಗಿದ್ದು, ಇವುಗಳನ್ನು ಇಂಟಗ್ರೇಟೆಡ್ ಕಂಟ್ರೋಲ್ ಸೆಂಟರ್‌ಗೆ ಸಂಪರ್ಕಿಸಲಾಗುತ್ತದೆ. ಈ ಮೂಲಕ ಭದ್ರತಾ ಕ್ರಮಗಳ ಮೇಲೆ ನಿಗಾವಹಿಸಲಾಗುತ್ತದೆ.

250 'ಶಿ' ಶೌಚಾಲಯ: ನಗರದ ಮಾರುಕಟ್ಟೆ, ವಾಣಿಜ್ಯ ಮಳಿಗೆಗಳು ಹಾಗೂ ಜನನಿಬಿಡ ಪ್ರದೇಶಗಳಲ್ಲಿ ಮಹಿಳೆಯರ ಅನುಕೂಲಕ್ಕೆ 'ಶಿ' ಶೌಚಾಲಯವನ್ನು ನಿರ್ಮಿಸಲಾಗುತ್ತದೆ. ಶೌಚಾಲಯ, ಹಾಲುಣಿಸುವ ಕೊಠಡಿ, ಮೊಬೈಲ್ ಚಾರ್ಜಿಂಗ್, ತುರ್ತು ಎಸ್‌ಒಎಸ್ ಸೌಲಭ್ಯಗಳಿಗೆ ₹50 ಕೋಟಿ ಮೀಸಲಿಡಲಾಗಿದೆ.

ಆರು ಮಹಿಳಾ ಪೊಲೀಸ್ ಠಾಣೆ: ಬೆಂಗಳೂರಿನಲ್ಲಿ ಒಂಬತ್ತು ಕಾನೂನು ಮತ್ತು ಸುವ್ಯವಸ್ಥೆ, ಐದು ಸಂಚಾರ, ಆರು ಮಹಿಳಾ ಪೊಲೀಸ್ ಠಾಣೆಗಳನ್ನು ಹೊಸದಾಗಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ನಗರದ ಪೊಲೀಸ್ ವ್ಯವಸ್ಥೆಯನ್ನು ಬಲಪಡಿಸಲು ಹೆಚ್ಚುವರಿಯಾಗಿ 2,000 ಹುದ್ದೆಗಳನ್ನು ಸೃಷ್ಟಿಸಲು ಪ್ರಸ್ತಾಪಿಸಲಾಗಿದೆ.

ಬೆಂಗಳೂರು ಬಯೋ-ಇನೋವೇಷನ್ ಸೆಂಟರ್ ಮತ್ತು ಸಾಂಕ್ರಾಮಿಕ ರೋಗಗಳ ಸಂಶೋಧನಾ ಪ್ರತಿಷ್ಠಾನದ ಸಹಯೋಗದೊಂದಿಗೆ ಸಾಂಕ್ರಾಮಿಕ ಸನ್ನದ್ಧತೆ ಕೇಂದ್ರ ಸ್ಥಾಪನೆಯ ಮೊದಲ ಹಂತಕ್ಕೆ ₹10 ಕೋಟಿ ನೀಡಲು ಉದ್ದೇಶಿಸಲಾಗಿದೆ.

ಆಸ್ತಿ ಒತ್ತುವರಿ ತಡೆಗೆ ಜಿಪಿಎಸ್: ಬಿಬಿಎಂಪಿ ಆಸ್ತಿಗಳ ಒತ್ತುವರಿ ತಡೆ ಹಾಗೂ ಸುರಕ್ಷತೆಗಾಗಿ ಜಿಪಿಎಸ್ ತಂತ್ರಜ್ಞಾನದ ಮೂಲಕ ಕಣ್ಗಾವಲು ವ್ಯವಸ್ಥೆ ಒದಗಿಸಲಾಗುತ್ತದೆ. ಇದಕ್ಕಾಗಿ ₹35 ಕೋಟಿ ವೆಚ್ಚ ಮಾಡಲಾಗುತ್ತಿದ್ದು, ಬೇಲಿ ನಿರ್ಮಾಣ, ಫಲಕಗಳನ್ನು ಅಳವಡಿಸಲಾಗುತ್ತದೆ.

ಶಾಲೆಗಳ ಅಭಿವೃದ್ಧಿ ಪೂರ್ಣ: ಬಿಬಿಎಂಪಿ ವ್ಯಾಪ್ತಿಯಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ 'ಬೆಂಗಳೂರು ಪಬ್ಲಿಕ್ ಶಾಲೆಗಳ' ಯೋಜನೆ ಈ ಸಾಲಿನಲ್ಲಿ ಪೂರ್ಣಗೊಳಿಸಲಾಗುತ್ತಿದ್ದು, ಇದಕ್ಕಾಗಿ ₹180 ಕೋಟಿ ವಿನಿಯೋಗಿಸಲಾಗಿದೆ ಎಂದು ವಿವರಿಸಲಾಗಿದೆ.

ಮೆಗಾಸಿಟಿ ರಿವಾಲ್ವಿಂಗ್ ನಿಧಿಯಡಿ 440 ಎಂಎಲ್‌ಡಿ ತ್ಯಾಜ್ಯ ನೀರಿನ ಸಂಸ್ಕರಣೆಗೆ ₹1,200 ಕೋಟಿ ವೆಚ್ಚದಲ್ಲಿ ನಾಲ್ಕು ಘಟಕ ಸ್ಥಾಪನೆ.

ಕೆ.ಸಿ. ವ್ಯಾಲಿ: ತೃತೀಯ ಹಂತದ ಸಂಸ್ಕರಣೆ

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕೆ.ಸಿ. ವ್ಯಾಲಿ ಯೋಜನೆಯಲ್ಲಿ ಸಂಸ್ಕರಿಸಿದ ತ್ಯಾಜ್ಯ ನೀರನ್ನು ನಗರದ ಸುತ್ತಮುತ್ತಲಿನ ಅಂತರ್ಜಲ ಕ್ಷೀಣಿಸಿರುವ ಪ್ರದೇಶಗಳಲ್ಲಿ ಹರಿಸಲಾಗುತ್ತಿದೆ. ಈ ಸಂಸ್ಕರಿಸಿದ ನೀರಿನ ಗುಣಮಟ್ಟವನ್ನು ಇನ್ನಷ್ಟು ಸುಧಾರಿಸಿ ಕೃಷಿಗೆ ಯೋಗ್ಯವನ್ನಾಗಿ ಮಾಡಲು ತೃತೀಯ ಹಂತದ ಸಂಸ್ಕರಣಾ ಕ್ರಮಗಳನ್ನು ಅಳವಡಿಸಲು ಉದ್ದೇಶಿಸಲಾಗಿದೆ.

ಪಾರಂಪರಿಕ, ಶೈಕ್ಷಣಿಕ ಜಿಲ್ಲೆ

ಬೆಂಗಳೂರು ನಗರದ ಕೇಂದ್ರ ಭಾಗದ 5 ಕಿ.ಮೀ. ವ್ಯಾಪ್ತಿಯೊಳಗಿನ ಪಾರಂಪರಿಕ ಮತ್ತು ಶೈಕ್ಷಣಿಕ ಸಂಸ್ಥೆಗಳ ಪ್ರದೇಶವನ್ನು 'ಪಾರಂಪರಿಕ ಮತ್ತು ಶೈಕ್ಷಣಿಕ ಜಿಲ್ಲೆ' ಎಂದು ಘೋಷಿಸಲು ನಿರ್ಧರಿಸಿದ್ದು, ಈ ಬಗ್ಗೆ ಕಾರ್ಯಸಾಧ್ಯತೆ ಅಧ್ಯಯನ ನಡೆಸಲಾಗುತ್ತದೆ. ಬೆಂಗಳೂರು ನಗರ ನಿರ್ಮಾತೃ ನಾಡಪ್ರಭು ಕೆಂಪೇಗೌಡರ ಐತಿಹಾಸಿಕ ಕುರುಹುಗಳಿರುವ ತಾಣಗಳ 'ಪ್ರವಾಸಿ ಸರ್ಕಿಟ್' ಪ್ರಾರಂಭಿಸಲಾಗುವುದು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪ ₹30 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸ್ಟಾರ್ಟ್–ಅಪ್ ಪಾರ್ಕ್ ಸ್ಥಾಪಿಸಲಾಗುವುದು.

ವಾಸನೆರಹಿತ ತ್ಯಾಜ್ಯ ಸಂಸ್ಕರಣಾ ಕೇಂದ್ರ

ಬಿಬಿಎಂಪಿ ವ್ಯಾಪ್ತಿಯಲ್ಲಿ ಆಯಾ ವಾರ್ಡ್‌ಗಳಲ್ಲಿಯೇ ತ್ಯಾಜ್ಯ ಸಂಸ್ಕರಣೆ ಮಾಡಲು ಪ್ರತಿ ವಾರ್ಡ್‌ಗೆ ಒಂದರಂತೆ ಆಧುನಿಕ ತಂತ್ರಜ್ಞಾನದ ವಾಸನೆರಹಿತ ತ್ಯಾಜ್ಯ ಸಂಸ್ಕರಣಾ ಕೇಂದ್ರ ಸ್ಥಾಪಿಸಲಾಗುವುದು. ಒಂದೇ ವಾಹನದಲ್ಲಿ ಹಸಿ ಕಸ ಹಾಗೂ ಒಣ ಕಸ ಸಂಗ್ರಹಿಸುವ ವಿನ್ಯಾಸದ ಆಟೋ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳು ಕಾರ್ಯಾಚರಣೆ ಮಾಡಲಿವೆ. ವಾಣಿಜ್ಯ ಮಳಿಗೆಗಳು, ಆಸ್ಪತ್ರೆಗಳು, ಹೋಟೆಲ್‌ಗಳು ಸೇರಿದಂತೆ ಬೃಹತ್ ತ್ಯಾಜ್ಯ ಉತ್ಪಾದಕರು ತ್ಯಾಜ್ಯವನ್ನು ಸಂಸ್ಕರಿಸುವುದನ್ನು ಕಡ್ಡಾಯಗೊಳಿಸಲು ಉದ್ದೇಶಿಸಲಾಗಿದೆ.

ಪುನರುಚ್ಚಾರ ಚಾಳಿ | ಪ್ರವಾಹ ನಿಯಂತ್ರಣದ ಅವಾಸ್ತವ ಪ್ರಸ್ತಾವ

ಮರೆತುಹೋದ ಸಮಗ್ರ ಬೆಳವಣಿಗೆ ನೀತಿ



ವಿಶ್ಲೇಷಣೆ

ಕೃಷ್ಣಕುಮಾರ್ ಗೌಡ
ಕಾರ್ಯದರ್ಶಿ, ವಸತಿ ಕ್ಷೇಮಾಭಿವೃದ್ಧಿ ಸಂಘ, ಕಗ್ಗಲಿಪುರ

ರಾಜ್ಯದ ರಾಜಧಾನಿ ಬೆಂಗಳೂರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ನೀಡಿರುವ ಯೋಜನೆಗಳು ಹಾಗೂ ಅನುದಾನಗಳು ಹಿಂದೆ ಕೇಳಿದ್ದವೇ ಆಗಿವೆ. ಎರಡು ವರ್ಷಗಳಿಂದ ಇವೇ ಯೋಜನೆಗಳನ್ನು ಬಜೆಟ್‌ನಲ್ಲಿ ಪ್ರಕಟಿಸಲಾಗುತ್ತಿದೆ. ಆದರೆ, ಅವುಗಳ ಅನುಷ್ಠಾನವಾಗದೆ ಮುಂದಿನ ಬಜೆಟ್‌ನಲ್ಲಿ ಒಂದುಚೂರು ಆಗಿರುವ ಕಾಮಗಾರಿಗಳನ್ನು ತೋರಿಸಿ, ಅದನ್ನೇ ಈ ಬಾರಿಯೂ ಪುನರುಚ್ಚರಿಸಲಾಗಿದೆ.

ಅಮೃತ ನಗರೋತ್ಥಾನ ಯೋಜನೆ ಎಂದು ಮೂರು ವರ್ಷಗಳಿಂದಲೂ ಸರ್ಕಾರ ಹೇಳುತ್ತಲೇ ಬಂದಿದೆ. ಅದನ್ನು ಮೂರು ವರ್ಷದ ಅವಧಿಯಲ್ಲಿ ಅನುಷ್ಠಾನ ಮಾಡುವುದಾಗಿ ಹೇಳಿ, ಪ್ರತಿ ಬಜೆಟ್‌ನಲ್ಲೂ ಅದನ್ನೇ ಮತ್ತೆ ತಂದರೆ ಪ್ರಯೋಜನವಾದರೂ ಏನು? ಬೆಂಗಳೂರು ಸಿಲಿಕಾನ್ ಸಿಟಿ, ಐಟಿ ಹಬ್ ಆಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದೆ. ಕಳೆದ ಬಾರಿ ಸುರಿದ ಅತಿಯಾದ ಮಳೆ 'ಮುಳುಗಡೆ ನಗರಿ' ಎಂಬ ಅಪಖ್ಯಾತಿಯನ್ನು ತಂದುಕೊಟ್ಟಿತು. ಇದನ್ನು ತಡೆಯಲು ವಿಶ್ವಬ್ಯಾಂಕಿನಿಂದ ಮೂರು ಸಾವಿರ ಕೋಟಿ ರೂಪಾಯಿಗಳ ನೆರವಿನೊಂದಿಗೆ ಹವಾಮಾನ ಬದಲಾವಣೆ ಪರಿಣಾಮವನ್ನು ಕಡಿಮೆ ಮಾಡಲು ಮತ್ತು ಪ್ರವಾಹವನ್ನು ನಿಯಂತ್ರಿಸಲು ಯೋಜನೆ ಅನುಷ್ಠಾನ ಮಾಡುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ. ಆದರೆ, ಅವರೇ ಹೇಳುವ ಪ್ರಕಾರ, ಇದಕ್ಕಾಗಿ ನಗರದಲ್ಲಿ ಇರುವ ಎಲ್ಲ ಕೆರೆಗಳಿಗೆ ಸ್ಲ್ಯೂಸ್ ಗೇಟ್ (ತೂಬು) ಹಾಕಿ ನಿಯಂತ್ರಿಸಲಾಗುತ್ತದೆ. ಒಂದು ಗೇಟ್ ಅಳವಡಿಸಿದರೆ ಪ್ರವಾಹ ನಿಯಂತ್ರಣ ಸಾಧ್ಯವೇ ಎಂಬುದನ್ನು ಯಾರಾದರೂ ಅರ್ಥೈಸಿಕೊಳ್ಳಬಹುದು. ಪ್ರವಾಹದ ನಿಯಂತ್ರಣವೆಂದರೆ ಅದಕ್ಕೆ ಕಾಲುವೆಗಳ ನಿರ್ಮಾಣ ಅತ್ಯಂತ ಅಗತ್ಯ. ಅದನ್ನೂ ಹೇಳಿದ್ದಾರೆ. ಅದಕ್ಕೂ ₹1,500 ಕೋಟಿ ವ್ಯಯಮಾಡುತ್ತಿದ್ದಾರೆ.


ಹವಾಮಾನ ಬದಲಾವಣೆ ಪರಿಣಾಮವನ್ನು ಕಡಿಮೆ ಮಾಡಲು ಕೇವಲ ಪ್ರವಾಹ ನಿಯಂತ್ರಣ, ಕೆರೆಗಳಿಗೆ ಗೇಟ್ ಅಳವಡಿಸು ವುದು ಎಂದು ಯೋಜಿಸಲಾಗಿದೆ. ನಗರದಲ್ಲಿ ತಾಪಮಾನ ಹೆಚ್ಚಾಗುತ್ತಿರುವು ದಕ್ಕೆ ಹಲವಾರು ಕಾರಣಗಳಿವೆ: ಹಸಿರು ಹೊದಿಕೆ ಕಡಿಮೆ, ಉದ್ಯಾನ ಗಳಲ್ಲಿ ಸ್ವಚ್ಛತೆ, ವಾಯುಮಾಲಿನ್ಯ, ಇಂಗುಗುಂಡಿಗಳ ನಿರ್ಮಾಣ ಕಡಿಮೆ ಇರುವುದು ಹೀಗೆ. ವರ್ಷಕ್ಕೆ 15 ಲಕ್ಷ ಸಸಿಗಳನ್ನು ನೆಟ್ಟರೆ ಹವಾಮಾನ ಬದಲಾವಣೆಯನ್ನು ತಡೆಯಲು ಸಾಧ್ಯವಾಗುವುದಿಲ್ಲ.

ಇನ್ನು ಒಂದೆರಡು ಮೇಲ್ಸೇತುವೆ ಅಥವಾ ಎಲಿವೇಟೆಡ್ ರಸ್ತೆಯಿಂದ ಸಂಚಾರ ದಟ್ಟಣೆ ಕಡಿಮೆಯಾಗುವುದಿಲ್ಲ. ರಸ್ತೆ ನಿರ್ಮಾಣದ ಸಂದರ್ಭದಲ್ಲಿ ಮೂಲತಃ ಬೇಕಿರುವ ಸೌಲಭ್ಯಗಳನ್ನು ಒದಗಿಸದೆ, ಗುಂಡಿಮುಕ್ತ ರಸ್ತೆಯನ್ನು ನಿರ್ಮಿಸದೆ ಯಾವ ದಟ್ಟಣೆಯನ್ನೂ ನಿಯಂತ್ರಿಸಲು ಸಾಧ್ಯವಿಲ್ಲ. ಜಂಕ್ಷನ್‌ಗಳಲ್ಲಿ ರಸ್ತೆಯನ್ನು ಸೂಕ್ತವಾಗಿ ನಿರ್ವಹಣೆ ಮಾಡಿದ್ದೇ ಆದಲ್ಲಿ, ಅಂದರೆ ರಸ್ತೆ ಗುಂಡಿಗಳಿಲ್ಲದೆ, ಅಡೆತಡೆಗಳಿಲ್ಲದೆ ರಸ್ತೆ ಇದ್ದರೆ ಸಾಕಷ್ಟು ದಟ್ಟಣೆ ಕಡಿಮೆಯಾಗುತ್ತದೆ. ಒಂದು ಮೇಲ್ಸೇತುವೆಯಿಂದ ಇಳಿಯುವ ವಾಹನ ಮುಂದೆ ಸರಾಗವಾಗಿ ಸಂಚರಿಸುವಂತೆ ಮಾಡುವ ಯೋಜನೆಗಳೂ ಅತ್ಯಗತ್ಯ.

ಬಜೆಟ್‌ನಲ್ಲಿ ಹಳೆಯವೂ ಸೇರಿದಂತೆ ಹೊಸದಾಗಿಯೂ ಅನೇಕ ಘೋಷಣೆಗಳನ್ನು ಮಾಡಲಾಗಿದೆ. ಇವೆಲ್ಲವೂ ಹೇಳಿದ ಗಡುವಿಗೆ ಅನುಗುಣವಾಗಿ ಅನುಷ್ಠಾನವಾದರೆ ನಮ್ಮ ಬೆಂಗಳೂರಿಗೆ ಸ್ವಲ್ಪವಾದರೂ ಪರಿಹಾರ ಸಿಗುತ್ತದೆ. ಮುಂದಿನ ದಿನಗಳಲ್ಲಿ ನಮ್ಮ ಮೆಟ್ರೊ, ಸಬರ್ಬನ್ ರೈಲು, ಪಿಆರ್‌ಆರ್, ಎಸ್‌ಟಿಆರ್‌ಆರ್ ಕಾಮಗಾರಿ ವೇಗ ಪಡೆಯಬೇಕಿದೆ. ಕೆಂಗೇರಿ ಹಾಗೂ ಹುಸ್ಕೂರು ಹೊಸ ರೈಲು ಮಾರ್ಗ, ಕನಕಪುರ ರಸ್ತೆ ವಿಸ್ತರಣೆ, ತಲಘಟ್ಟಪುರ ಬಳಿ ಹೊಸ ಬಸ್ ನಿಲ್ದಾಣಗಳ ಕಾಮಗಾರಿಗಳೂ ಕನಿಷ್ಠ ಅವಧಿಯಲ್ಲಿ ಪೂರ್ಣಗೊಳ್ಳಬೇಕು. ನಗರದ ಹೊರವಲಯ ಅತ್ಯಂತ ವೇಗವಾಗಿ ಬೆಳೆಯುತ್ತಿದ್ದರೂ ಅದಕ್ಕೆ ಪೂರಕವಾಗಿರುವ ಯೋಜನೆಗಳನ್ನು ಪ್ರಕಟಿಸಿಲ್ಲ. ಇಷ್ಟಾದರೂ, ಈ ಬಜೆಟ್‌ನಲ್ಲಿರುವ ಯೋಜನೆಗಳನ್ನು ಮುಂದಿನ ಬಜೆಟ್‌ನಲ್ಲಿ ಮತ್ತೆ ಪ್ರಸ್ತಾಪಿಸಬಾರದು. ಅಂದರೆ ಅಷ್ಟರೊಳಗೆ ಎಲ್ಲ ಕಾಮಗಾರಿಗಳನ್ನೂ ಮುಗಿಸಬೇಕು. ಇದರ ಜೊತೆಗೆ ನಗರದ ಸಮಗ್ರ ಬೆಳವಣಿಗೆಗೆ ಒಂದು ನೀತಿ ರಚನೆಯಾಗಬೇಕು. ಅದನ್ನು ಈ ಬಜೆಟ್‌ನಲ್ಲಿ ನಿರೀಕ್ಷಿಸಲಾಗಿತ್ತು. ಆದರೆ ಅದು ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಇಂತಹ ನೀತಿ ರೂಪುಗೊಳ್ಳಲೇಬೇಕು.



ಬಜೆಟ್: ಸಾರ್ವಜನಿಕರು ಕಂಡಂತೆ



ಅಂಗವಿಕಲರಿಗೆ ಸರ್ಕಾರದ ಕೊಡುಗೆ ಶೂನ್ಯ. ಬಜೆಟ್‌ನಲ್ಲಿ ಅಂಗವಿಕಲರಿಗೆ ಮಾಸಾಶನ ಹೆಚ್ಚಳ, ಉಚಿತ ಬಸ್ ಪಾಸ್, ಸೇರಿ ಮೂಲಭೂತ ಬೇಡಿಕೆಗಳನ್ನು ಕಡೆಗಣಿಸಲಾಗಿದೆ.

ಚಂದ್ರಶೇಖರ ಪುಟ್ಟಪ್ಪ, ಕಾರ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ವಿಕಲಚೇತನರ ರಕ್ಷಣಾ ಸಮಿತಿ



ಎನ್‌ಪಿಎಸ್‌ಗೆ ಒಳಪಟ್ಟಿರುವ ಸರ್ಕಾರಿ ನೌಕರರ ನಿವೃತ್ತಿ ಜೀವನ ಕಷ್ಟಕರವಾಗಿದೆ. ಬಜೆಟ್‌ನಲ್ಲಿ ಒಪಿಎಸ್ ಜಾರಿ ಮಾಡುತ್ತಾರೆಂಬ ಸರ್ಕಾರಿ ನೌಕರರ ನಂಬಿಕೆ ಹುಸಿಯಾಗಿದೆ.

ಶಾಂತಲಕ್ಷ್ಮಿ, ಜಿ., ಬೆಂಗಳೂರು



ರಾಜ್ಯದ ಆದಾಯದ ಜೊತೆಗೆ ಸಾಲ ಮಾಡಿ ಮನಸೋಇಚ್ಛೆ ವೆಚ್ಚ ಮಾಡುವ ರೀತಿಯಲ್ಲಿ ಈ ಬಜೆಟ್. ಉದ್ಯೋಗ ಸೃಷ್ಟಿಗೆ ಹೆಚ್ಚಿನ ಒತ್ತು ಇಲ್ಲ. ಆರ್ಥಿಕ ಶಿಸ್ತು ಇಲ್ಲದ ಬಜೆಟ್. ಚುನಾವಣೆ ಹೊತ್ತಿನಲ್ಲಿ ಎಲ್ಲರಿಗೂ ಸಿಹಿ ಸವರುವ ನಾಜೂಕಿನ ಬಜೆಟ್ ಇದಾಗಿದೆ.

ಟಿ.ಇ. ಶ್ರೀನಿವಾಸ್, ರಾಜರಾಜೇಶ್ವರಿನಗರ



ವಿದ್ಯಾರ್ಥಿಗಳು ನಡೆಸಿದ ಸತತ ಹೋರಾಟದಿಂದ ಬಜೆಟ್‌ನಲ್ಲಿ ಹಲವು ಬೇಡಿಕೆಗಳನ್ನು ಘೋಷಿಸಲಾಗಿದೆ. ಮುಂದಿನ ಶೈಕ್ಷಣಿಕ ವರ್ಷದಿಂದಲೇ ಎಲ್ಲಾ ಘೋಷಣೆಗಳನ್ನು ಅನುಷ್ಠಾನಗೊಳಿಸಬೇಕು.

ಅಜಯ್ ಕಾಮತ್, ಎಐಡಿಎಸ್‌ಒ, ರಾಜ್ಯ ಪ್ರಧಾನ ಕಾರ್ಯದರ್ಶಿ



ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳಿಸಲಾಗುವುದು ಎಂಬ ಶಿಕ್ಷಣ ಸಚಿವರ ಭರವಸೆ ಸತತ ಎರಡು ವರ್ಷಗಳಿಂದಲೂ ಸುಳ್ಳಾಗುತ್ತಿದೆ. ಸರ್ಕಾರಿ ಶಾಲೆಗಳ ಮೂಲ ಸೌಕರ್ಯಗಳನ್ನು ಅಭಿವೃದ್ಧಿಯ ಬಗ್ಗೆ ಪ್ರಸ್ತಾಪವೇ ಆಗಿಲ್ಲ.

ಲೋಕೇಶ್ ತಾಳಿಕಟ್ಟೆ, ರುಪ್ಸ, ಅಧ್ಯಕ್ಷರು



ಬಜೆಟ್‌ನಲ್ಲಿ 2013ರ ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಉಪ ಯೋಜನೆ ಕಾಯ್ದೆಯ ಸೆಕ್ಷನ್ 7(ಡಿ) ತೆಗೆಯಲು ಕ್ರಮಕೈಗೊಳ್ಳಬೇಕಿತ್ತು. ಪಿಟಿಸಿಎಲ್ ಕಾಯ್ದೆಯನ್ನು ಕಾಲಮಿತಿಯೊಳಗೆ ತಿದ್ದುಪಡಿ ಮಾಡಬೇಕಿತ್ತು.

ಸಿ.ಜಿ. ಶ್ರೀನಿವಾಸನ್, ಕರ್ನಾಟಕ ದಲಿತ ಉದ್ದಿಮೆದಾರರ ಸಂಘ, ಕಾರ್ಯಾಧ್ಯಕ್ಷ



ಮೇಲ್ನೋಟಕ್ಕೆ ಮಹಿಳಾಪರ ಹಾಗೂ ಉತ್ತಮ ಯೋಜನೆಗಳನ್ನು ಒಳಗೊಂಡ ಬಜೆಟ್ ನಂತೆ ಕಂಡರೂ, ಇದರಲ್ಲಿ ದೂರದರ್ಶಿತ್ವವಿಲ್ಲ. ಬಜೆಟ್‌ನಲ್ಲಿ ಸಾಲದ ಹೊರೆ ಮತ್ತು ಬಡ್ಡಿ ಪಾವತಿ ಇರುವುದರಿಂದ ವಿತ್ತೀಯ ಸುಸ್ಥಿರತೆ ಇಲ್ಲ.

ರೂಪಾ ಪಟವರ್ಧನ್, ಅರ್ಥಶಾಸ್ತ್ರ ಪ್ರಾಧ್ಯಾಪಕಿ, ಕ್ರೈಸ್ಟ್ ವಿಶ್ವವಿದ್ಯಾಲಯ



ಈ ಬಜೆಟ್‌ನಿಂದ ಮಹಿಳಾ ಉದ್ಯಮಿಗಳಿಗೆ ಯಾವುದೇ ರೀತಿಯ ಉಪಯೋಗವಾಗಿಲ್ಲ. ಎಂಎಸ್‌ಎಂಇಗಳಿಗೆ ಸಹ ನೆರವು ನೀಡದ ಸರ್ಕಾರ, ಉದ್ಯೋಗವನ್ನು ಹೇಗೆ ಸೃಷ್ಟಿಸುತ್ತದೆ. ಚುನಾವಣಾ ದೃಷ್ಟಿಯಿಂದ ಹಲವು ಜನಪ್ರಿಯ ಕಾರ್ಯಕ್ರಮಗಳನ್ನು ಘೋಷಿಸಿದ್ದಾರೆ.

ರೂಪಾ ರಾಣಿ, ಮಹಿಳಾ ಉದ್ಯಮಿಗಳ ವೇದಿಕೆಯ ಅಧ್ಯಕ್ಷೆ



ರಾಜ್ಯ ಸರ್ಕಾರ ಚುನಾವಣೆ ಹೊಸ್ತಿಲಿನಲ್ಲಿ ಒಂದು ಬಜೆಟ್ ಮಂಡಿಸುವ ಕಸರತ್ತು ಮಾಡಿದೆ. ಆಡಳಿತಾರೂಢ ಬಿಜೆಪಿಯು ಇದನ್ನೊಂದು ಚುನಾವಣೆ ಗಿಮಿಕ್ ಆಗಿ ಬಳಸಿಕೊಂಡಿದೆ. ಓಟ್ ಆನ್ ಅಕೌಂಟ್ ಬದಲು ಬಜೆಟ್ ಮಂಡಿಸಿ ಮತದಾರರಿಗೆ ಮೋಸ ಮಾಡಿದೆ.

ಮೀನಾಕ್ಷಿ ಬಾಳಿ, ಅಧ್ಯಕ್ಷರು, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ

ಏರೋ ಇಂಡಿಯಾ: ಕೊನೆ ದಿನ ಜನವೋ ಜನ • ಆಸಕ್ತರಿಗೆ ಹಿರಿಯ ಅಧಿಕಾರಿಗಳಿಂದ ವಿಶೇಷ ತರಗತಿ

ಲೋಹದ ಹಕ್ಕಿಗಳ ಪ್ರದರ್ಶನಕ್ಕೆ ತೆರೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ಆಯೋಜಿಸಿದ್ದ ಐದು ದಿನಗಳ 'ಏರೋ ಇಂಡಿಯಾ-2023' ವೈಮಾನಿಕ ಪ್ರದರ್ಶನಕ್ಕೆ ಶುಕ್ರವಾರ ತೆರೆಬಿದ್ದಿತು.

ಏಷ್ಯಾದ ಅತಿ ದೊಡ್ಡ ವೈಮಾನಿಕ ಪ್ರದರ್ಶನದ 14ನೇ ಆವೃತ್ತಿಗೆ ಸೋಮವಾರ (ಫೆ. 13) ಚಾಲನೆ ನೀಡಲಾಗಿತ್ತು. ಅಂದಿನಿಂದ ದಿನಕ್ಕೆ ಎರಡು ಬಾರಿ ಲೋಹದ ಹಕ್ಕಿಗಳ ಹಾರಾಟ ಜನರನ್ನು ಬೆರಗುಗೊಳಿಸಿತು. ಯುದ್ಧ ವಿಮಾನಗಳು ಹಾಗೂ ಹೆಲಿಕಾಪ್ಟರ್‌ಗಳು ಸ್ಪರ್ಧೆಗೆ ಇಳಿದ ರೀತಿಯಲ್ಲಿ ಕಸರತ್ತು ಮಾಡಿದವು.

ಪ್ರದರ್ಶನದ ಕೊನೆ ದಿನವಾದ ಶುಕ್ರವಾರ ವಿಮಾನಗಳ ಹಾರಾಟ ವೀಕ್ಷಿಸಲು ಜನಸಾಗರವೇ ಹರಿದು ಬಂದಿತ್ತು. ನೋಂದಣಿ ಮಾಡಿಕೊಂಡ ಜನರಿಗೆ ವಾಯುನೆಲೆಗೆ ಮುಕ್ತ ಪ್ರವೇಶ ಕಲ್ಪಿಸಲಾಗಿತ್ತು. ಕುಟುಂಬ ಸಮೇತ ವಾಯುನೆಲೆಗೆ ಲಗ್ಗೆ ಇಟ್ಟಿದ್ದ ಜನ, ಆಕಾಶದತ್ತ ಮುಖ ಮಾಡಿ ವಿಮಾನ ಹಾಗೂ ಹೆಲಿಕಾಪ್ಟರ್‌ಗಳ ತರಹೇವಾರಿ ಪ್ರದರ್ಶನಗಳನ್ನು ಕಣ್ತುಂಬಿಕೊಂಡರು. ವಿಮಾನಗಳ ಜೊತೆಯಲ್ಲಿ ಫೋಟೊ ಕ್ಲಿಕ್ಕಿಸಿಕೊಂಡರು.

ಸುಖೋಯ್, ತೇಜಸ್, ಪ್ರಚಂಡ, ಸೂರ್ಯಕಿರಣ್ ತಂಡಗಳು ಎಂದಿನಂತೆ ಬಾನಿನಲ್ಲಿ ಚಿತ್ತಾರ ಮೂಡಿಸಿದವು. ಶುಕ್ರವಾರ ಸಂಜೆ ಕೊನೆಯದಾಗಿ ಆಕಾಶಕ್ಕೆ ಹಾರಿದ 'ಸೂರ್ಯ ಕಿರಣ್' ಲಘು ವಿಮಾನಗಳ ತಂಡದ ಪ್ರದರ್ಶನ ಜನಪ್ರಿಯವಾಗಿತ್ತು. ಈ ತಂಡದ ಪ್ರದರ್ಶನ ಮುಕ್ತಾಯಗೊಳ್ಳುತ್ತಿದ್ದಂತೆ ಏರೋ ಇಂಡಿಯಾಗೆ ತೆರೆಬಿದ್ದಿತು.

ಖರೀದಿಯೂ ಜೋರು: ವಾಯುನೆಲೆಯ ಗೇಟ್ ನಂ. 8 ಹಾಗೂ 9ರಲ್ಲಿ ಚಿಕ್ಕ ಮಾರುಕಟ್ಟೆ ಸೃಷ್ಟಿಸಲಾಗಿತ್ತು. ವಿಮಾನಗಳ ಕಂಪನಿ, ಸೇನೆಗಳಿಗೆ ಸಂಬಂಧಪಟ್ಟ ಬಟ್ಟೆ ಹಾಗೂ ಇತರೆ ವಸ್ತುಗಳನ್ನು ಮಾರಾಟಕ್ಕೆ ಇರಿಸಲಾಗಿತ್ತು. ಮಳಿಗೆಗಳಲ್ಲಿ ಸುತ್ತಾಡಿದ ಜನ, ಹಲವು ವಸ್ತುಗಳನ್ನು ಖರೀದಿಸಿದರು.

ಆಟಿಕೆ ವಿಮಾನಗಳು, ಸೈನಿಕರ ಜಾಕೆಟ್, ಟೀ-ಶರ್ಟ್, ವಿಮಾನಗಳ ಕಲಾಕೃತಿಗಳು, ಆಲಂಕಾರಿಕ ವಸ್ತುಗಳು ಮಳಿಗೆಯಲ್ಲಿದ್ದವು.

ವಾಯುಪಡೆ ಸೇರಲು ಉತ್ತೇಜನ: ಯುವಕರನ್ನು ಸೇನೆಯತ್ತ ಸೆಳೆಯುವ ಉದ್ದೇಶದಿಂದ ಭಾರತೀಯ ವಾಯುಪಡೆಯು ವಿಶೇಷ ಮಳಿಗೆ ತೆರೆದಿತ್ತು.

ವಾಯುಪಡೆ ಸ್ಥಾಪನೆ, ಬೆಳವಣಿಗೆ, ವಿಮಾನಗಳ ಚಿತ್ರಾವಳಿ, ಸೈನಿಕರಿಗೆ ಸಿಗುವ ಸೌಲಭ್ಯಗಳನ್ನು ಮಳಿಗೆಯಲ್ಲಿ ತಿಳಿಸಲಾಯಿತು. ಮಳಿಗೆಗೆ ಭೇಟಿ ನೀಡಿದ್ದ ಆಸಕ್ತ ಯುವಕರಿಗೆ ವಿಶೇಷ ತರಗತಿಗಳನ್ನು ನಡೆಸಿದ ಹಿರಿಯ ಅಧಿಕಾರಿಗಳು, ವಾಯುಪಡೆ ಪರಿಚಯ ಮಾಡಿಕೊಟ್ಟರು. ವಾಯುಪಡೆಗೆ ಸೇರಲು ತಯಾರಿ ಹೇಗಿರಬೇಕೆಂದು ಮಾಹಿತಿ ನೀಡಿದರು.

'ಪಿಯುಸಿ ಕಲಿಯುತ್ತಿದ್ದೇನೆ. ವಾಯುಪಡೆಯಲ್ಲಿ ಪೈಲಟ್ ಆಗಬೇಕೆಂಬ ಆಸೆ ಇತ್ತು. ಆದರೆ, ಹೇಗೆ ಎಂಬುದು ಗೊತ್ತಿರಲಿಲ್ಲ. ವಾಯುಪಡೆಯ ಅಧಿಕಾರಿಗಳೇ ಹಲವು ಗೊಂದಲಗಳನ್ನು ಬಗೆಹರಿಸಿದರು' ಎಂದು ವಿದ್ಯಾರ್ಥಿ ಆಶಿಕ್ ಅವರು ಹೇಳಿದರು.

ವಿಪರೀತ ದಟ್ಟಣೆ: ಬಳ್ಳಾರಿ ರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ ಶುಕ್ರವಾರ ಬೆಳಿಗ್ಗೆ ಹಾಗೂ ಸಂಜೆ ವಿಪರೀತ ದಟ್ಟಣೆ ಉಂಟಾಗಿ, ವಾಹನಗಳು ಗಂಟೆಗಟ್ಟಲೆ ನಿಂತಲ್ಲೇ ನಿಲ್ಲಬೇಕಾಯಿತು.

ವಾಯುನೆಲೆ ಎದುರಿನ ರಸ್ತೆಯ ಎರಡೂ ಬದಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದವು. ದೇವನಹಳ್ಳಿಯಿಂದ ನಗರಕ್ಕೆ ಬರುತ್ತಿದ್ದ ಹಾಗೂ ನಗರದಿಂದ ದೇವನಹಳ್ಳಿಯತ್ತ ಹೊರಟಿದ್ದ ಪ್ರಯಾಣಿಕರು, ದಟ್ಟಣೆಯಲ್ಲಿ ಸಿಲುಕಿ ಪರದಾಡಿದರು.

ಕೊನೆ ದಿನವಾದ ಶುಕ್ರವಾರ ಬೆಳಿಗ್ಗೆಯಿಂದಲೇ ಜನರು ಕಾರು, ಬೈಕ್ ಹಾಗೂ ಬಸ್‌ಗಳಲ್ಲಿ ವಾಯುನೆಲೆಯತ್ತ ಆಗಮಿಸಿದರು. ಸಂಜೆ ಪ್ರದರ್ಶನ ಮುಗಿಯುತ್ತಿದ್ದಂತೆ ಜನರು ಒಟ್ಟಿಗೆ ವಾಯುನೆಲೆಯಿಂದ ವಾಪಸು ಹೊರಟರು. ವಾಯುನೆಲೆಯಿಂದ ಬಳ್ಳಾರಿ ರಸ್ತೆಗೆ ಸಂಪರ್ಕ ಕಲ್ಪಿಸುವ ಒಳರಸ್ತೆಗಳು ಕಿರಿದಾಗಿದ್ದರಿಂದ, ವಾಹನಗಳ ಸಂಚಾರ ನಿಧಾನಗತಿಯಲ್ಲಿತ್ತು. ಈ ವಾಹನಗಳನ್ನು ಮುಂದಕ್ಕೆ ಕಳುಹಿಸುವುದಕ್ಕಾಗಿ, ಬಳ್ಳಾರಿ ರಸ್ತೆಯಲ್ಲಿ ಇತರೆ ವಾಹನಗಳ ಸಂಚಾರ ತಡೆಯಲಾಗಿತ್ತು. ಕೆಲ ವಾಹನಗಳು ಅಡ್ಡಾದಿಡ್ಡಿ ಸಂಚರಿಸಿ, ಎಲ್ಲೆಂದರಲ್ಲಿ ನಿಂತಿದ್ದರಿಂದ ವಿಪರೀತ ದಟ್ಟಣೆ ಕಂಡುಬಂತು. ದಟ್ಟಣೆ ನಿಯಂತ್ರಿಸಲು ಪೊಲೀಸರು ಹೈರಾಣಾದರು.



ಯಲಹಂಕ ವಾಯುನೆಲೆ ರನ್‌ವೇಯಲ್ಲಿ ನಿಲ್ಲಿಸಿದ್ದ ವಿಮಾನಗಳನ್ನು ಜನರು ಕುತೂಹಲದಿಂದ ವೀಕ್ಷಿಸಿದರು





ವೈಮಾನಿಕ ಪ್ರದರ್ಶನ ನೀಡಿದ ವಿಮಾನಗಳ ಜೋರು ಸದ್ದು ಕೇಳಿ ಮಕ್ಕಳಿಬ್ಬರು ಕಿವಿ ಮುಚ್ಚಿಕೊಂಡರು (ಎಡಚಿತ್ರ) ಯಲಹಂಕ ವಾಯುನೆಲೆ ಎದುರಿನ ಬಳ್ಳಾರಿ ರಸ್ತೆಯಲ್ಲಿ ವಿಪರೀತ ದಟ್ಟಣೆ ಉಂಟಾಗಿ ವಾಹನಗಳು ಸಾಲುಗಟ್ಟಿ ನಿಂತಿದ್ದವು

– ಪ್ರಜಾವಾಣಿ ಚಿತ್ರಗಳು/ಎಂ.ಎಸ್. ಮಂಜುನಾಥ್

ವೈದ್ಯಕೀಯ ಮಾದರಿ ಸಾಗಣೆಗೆ 'ಸಂಜೀವಿನಿ' ಡ್ರೋನ್

ರಕ್ತ, ಮೂತ್ರ ಸೇರಿ ವಿವಿಧ ವೈದ್ಯಕೀಯ ಮಾದರಿಗಳ ತ್ವರಿತ ಸಾಗಣೆಗಾಗಿ 'ಸಂಜೀವಿನಿ' ಡ್ರೋನ್ ಉಪಯೋಗಿಸಲು ನಾರಾಯಣ ಹೆಲ್ತ್ ಮುಂದಾಗಿದ್ದು, ಈ ಸಂಬಂಧ 'ಗರುಡ ಏರೋಸ್ಪೇಸ್' ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

ವೈದ್ಯಕೀಯ ಮಾದರಿಗಳ ಸಾಗಣೆಗೆ ಹೆಚ್ಚಿನ ಸಮಯ ವ್ಯಯವಾಗುತ್ತಿದ್ದು, ಪರೀಕ್ಷೆ ವರದಿ ಸಿದ್ಧಪಡಿಸುವುದು ತಡವಾಗುತ್ತಿದೆ. ಇದಕ್ಕೆ ಪರಿಹಾರವಾಗಿ ಡ್ರೋನ್ ಬಳಸಲು ನಾರಾಯಣ ಹೆಲ್ತ್ ಆಸಕ್ತಿ ತೋರಿಸಿದೆ.

ಡ್ರೋನ್ ಪೂರೈಕೆ, ನಿರ್ವಹಣೆಗೆ ಸಂಬಂಧಪಟ್ಟ ಒಪ್ಪಂದಕ್ಕೆ ನಾರಾಯಣ್ ಹೆಲ್ತ್ ಅಧ್ಯಕ್ಷ ಡಾ. ದೇವಿ ಶೆಟ್ಟಿ ಹಾಗೂ ಗರುಡ ಏರೋಸ್ಪೇಸ್ ಸಂಸ್ಥಾಪಕ ಅಗ್ನೀಶ್ವರ್ ಜಯಪ್ರಕಾಶ್ ಸಹಿ ಹಾಕಿದರು. ಒಪ್ಪಂದಪತ್ರಗಳನ್ನು ಪರಸ್ಪರ ವಿನಿಮಯ ಮಾಡಿಕೊಂಡರು.

'ಮೊದಲಿಗೆ ಬೆಂಗಳೂರಿನಲ್ಲಿ ಸಂಜೀವಿನಿ ಡ್ರೋನ್ ಬಳಸಲಾಗುವುದು. ನಂತರದ ದಿನಗಳಲ್ಲಿ 21 ಆಸ್ಪತ್ರೆಗಳಿಗೆ ವಿಸ್ತರಿಸಲಾಗುವುದು' ಎಂದು ಡಾ. ದೇವಿ ಶೆಟ್ಟಿ ಹೇಳಿದರು.

ಸುದ್ದಿ 2 ನಿಮಿಷ

ವ್ಯಕ್ತಿಯ ಮೃತದೇಹ ಪತ್ತೆ: ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಆರೋಪ

ಸೇಲಂ/ಈರೋಡ್: ಕರ್ನಾಟಕ-ತಮಿಳುನಾಡು ಗಡಿ ಭಾಗದಲ್ಲಿ ನಾಪತ್ತೆಯಾಗಿದ್ದ 40 ವರ್ಷದ ವ್ಯಕ್ತಿಯೊಬ್ಬರ ಮೃತದೇಹವು ಈರೋಡ್ ಜಿಲ್ಲೆಯ ಪಾಲಾರ್ ನದಿಯಲ್ಲಿ ತೇಲುವ ಸ್ಥಿತಿಯಲ್ಲಿ ಪತ್ತೆಯಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಮೃತ ವ್ಯಕ್ತಿಯನ್ನು ಸೇಲಂ ಜಿಲ್ಲೆಯ ಗೋವಿಂದಪಾಡಿ ಗ್ರಾಮದ ಎಂ. ಕರವಡಿಯಾನ್ ಅಲಿಯಾಸ್ ರಾಜ ಎಂದು ಗುರುತಿಸಲಾಗಿದೆ.

ಕರ್ನಾಟಕದ ಅರಣ್ಯ ಇಲಾಖೆಯ ಸಿಬ್ಬಂದಿ ಗುಂಡು ಹಾರಿಸಿರುವುದರಿಂದ ರಾಜ ಅವರು ಮೃತಪಟ್ಟಿದ್ದಾರೆ ಎಂದು ಅವರ ಸಂಬಂಧಿಕರು ಆರೋಪಿಸಿದ್ದಾರೆ.

ರಾಜ ಅವರ ಮೃತದೇಹ ಪತ್ತೆಯಾದ ಬಳಿಕ ಕೊಳತ್ತೂರು ಸೇರಿದಂತೆ ಗಡಿ ಪ್ರದೇಶದಲ್ಲಿ ಉದ್ವಿಗ್ನ ಸ್ಥಿತಿ ನಿರ್ಮಾಣವಾಗಿದ್ದು, ಸ್ಥಳದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸರನ್ನು ನಿಯೋಜಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ರಾಜ ಅವರ ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ತಮಿಳುನಾಡಿನ ವಿವಿಧ ರಾಜಕೀಯ ಪಕ್ಷಗಳು ಆಗ್ರಹಿಸಿವೆ. ಗುಂಡು ಹಾರಾಟ ನಡೆಸಿರುವುದನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಖಂಡಿಸಿದ್ದಾರೆ.

ರಾಜ ಸೇರಿದಂತೆ ನಾಲ್ವರು ಈಚೆಗೆ ತಮಿಳುನಾಡು-ಕರ್ನಾಟಕ ಗಡಿ ಸಮೀಪದ ಅರಣ್ಯ ಪ್ರದೇಶಕ್ಕೆ ಮೀನು ಹಿಡಿಯಲು ತೆರಳಿದ್ದರು ಎಂದು ಸಂಬಂಧಿಕರು ತಿಳಿಸಿದ್ದಾರೆ. ಇವರು ಬೇಟೆಯಾಡಲು ಕಾಡಿಗೆ ತೆರಳಿದ್ದರು ಎಂದು ಅರಣ್ಯ ಇಲಾಖೆ ಸಿಬ್ಬಂದಿ ಆರೋಪಿಸಿರುವುದಾಗಿ ಮೂಲಗಳು ತಿಳಿಸಿವೆ.

ಅಶ್ವತ್ಥನಾರಾಯಣ ವಜಾಕ್ಕೆ ಆಗ್ರಹ



ಬೆಂಗಳೂರು: 'ಟಿಪ್ಪುವಿನಂತೆ ಸಿದ್ದರಾಮಯ್ಯ ಅವರನ್ನು ಹೊಡೆದುಹಾಕಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ನೀಡಿರುವ ಹೇಳಿಕೆ ಖಂಡಿಸಿ ನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರು ಶುಕ್ರವಾರ ಪ್ರತಿಭಟನೆ ನಡೆಸಿದರು.

ಅಶ್ವತ್ಥನಾರಾಯಣ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು. ನಗರದ ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಕಚೇರಿ ಎದುರು ಬೆಂಗಳೂರು ದಕ್ಷಿಣ, ಉತ್ತರ ಹಾಗೂ ಕೇಂದ್ರ ಜಿಲ್ಲಾ ಸಮಿತಿ ನೇತೃತ್ವದಲ್ಲಿ ಈ ಪ್ರತಿಭಟನೆ ನಡೆಯಿತು.

ವಿವಾದಾತ್ಮಕ ಹೇಳಿಕೆ ಮೂಲಕ ಪ್ರಚೋದನೆ ನೀಡಿರುವ ಸಚಿವರ ವಿರುದ್ಧ ಪೊಲೀಸರು ಸ್ವಯಂ ಪ್ರೇರಣೆಯಿಂದ ಪ್ರಕರಣ ದಾಖಲಿಸಿಕೊಂಡು ಅವರನ್ನು ಬಂಧಿಸಬೇಕು ಎಂದು ಆಗ್ರಹಿಸಿದರು. ವಿಧಾನಸಭೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಹೆಚ್ಚಿನ ಭದ್ರತೆ ಕಲ್ಪಿಸಬೇಕು ಎಂದೂ ಮುಖಂಡರು ಆಗ್ರಹಿಸಿದರು.

ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಬಿ.ಕೆ.ಹರಿಪ್ರಸಾದ್, ಕೆ.ಪಿ.ಸಿ.ಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ, ಕಾಂಗ್ರೆಸ್ ಮುಖಂಡ ವಿ.ಎಸ್.ಉಗ್ರಪ್ಪ, ಬಿಬಿಎಂಪಿ ಮಾಜಿ ಮೇಯರ್ ಗಂಗಾಂಬಿಕೆ, ಕೆ.ಪಿ.ಸಿ.ಸಿ ಪ್ರಧಾನ ಕಾರ್ಯದರ್ಶಿ ಎಂ.ಉದಯ್ ಶಂಕರ್ ಅವರು ಪ್ರತಿಭಟನೆಯಲ್ಲಿ ಹಾಜರಿದ್ದರು.

ಪೊಲೀಸ್ ಕಚೇರಿ ಮೇಲೆ ಉಗ್ರರ ದಾಳಿ–4 ಸಾವು

ಕರಾಚಿ (ಪಿಟಿಐ): ಪಾಕಿಸ್ತಾನದಲ್ಲಿನ ತಾಲಿಬಾನ್ ಉಗ್ರ ಸಂಘಟನೆಗೆ ಸೇರಿದ ಎಂಟು ಮಂದಿ ಶಸ್ತ್ರಸಜ್ಜಿತ ಉಗ್ರರು ಕರಾಚಿ ಪೊಲೀಸ್ ಮುಖ್ಯಸ್ಥರ ಕಚೇರಿ ಮೇಲೆ ಶುಕ್ರವಾರ ಗುಂಡಿನ ದಾಳಿ ನಡೆಸಿದ್ದಾರೆ. ಘಟನೆಯಲ್ಲಿ ಇಬ್ಬರು ಬಂಡುಕೋರರು ಸೇರಿ ನಾಲ್ಕು ಮಂದಿ ಮೃತಪಟ್ಟಿದ್ದಾರೆ.

'ಸ್ಥಳೀಯ ಕಾಲಮಾನ ಸಂಜೆ 7.10ರ ಸುಮಾರಿಗೆ ಉಗ್ರರು ಗುಂಡಿನ ದಾಳಿ ನಡೆಸಿದ್ದರು. ಭದ್ರತಾ ಸಿಬ್ಬಂದಿಯೂ ಪ್ರತಿದಾಳಿ ನಡೆಸಿದ್ದಾರೆ' ಎಂದು ಕರಾಚಿ ಪೊಲೀಸ್ ಮುಖ್ಯಸ್ಥ ಜಾವೇದ್ ಒಡೊ ಟ್ವೀಟ್ ಮಾಡಿದ್ದಾರೆ.

'ದಾಳಿಯಲ್ಲಿ ಇಬ್ಬರು ಬಂಡುಕೋರರು, ಪೊಲೀಸ್ ಸಿಬ್ಬಂದಿ ಹಾಗೂ ನಾಗರಿಕರೊಬ್ಬರು ಅಸುನೀಗಿದ್ದಾರೆ. ನಾಲ್ವರು ಪೊಲೀಸರು ಸೇರಿ ಆರು ಮಂದಿ ಗಾಯಗೊಂಡಿದ್ದಾರೆ' ಎಂದು ದಕ್ಷಿಣ ವಿಭಾಗದ ಡಿಐಜಿ ಇರ್ಫಾನ್ ಬಲೋಚಾ ಮಾಹಿತಿ ನೀಡಿದ್ದಾರೆ.

ಫೆ.23ರಿಂದ ಸ್ವರ ಕಾವೇರಿ ಸಂಗೀತೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ಸಾಮಗಾನ ಸಭಾ ಆಯೋಜಿಸಿರುವ 14ನೇ ಭಾರತೀಯ ಶಾಸ್ತ್ರೀಯ ಸಂಗೀತೋತ್ಸವ 'ಸ್ವರ ಕಾವೇರಿ' ನಗರದ ಚೌಡಯ್ಯ ಸ್ಮಾರಕ ಭವನದಲ್ಲಿ ಫೆ.23ರಿಂದ 26ರವರೆಗೆ ನಡೆಯಲಿದೆ.

ಸ್ವರ ಕಾವೇರಿ ಸಂಗೀತ ಉತ್ಸವವು ಕರ್ನಾಟಕ ಶಾಸ್ತ್ರೀಯ ಸಂಗೀತದ ಸಾಂಸ್ಕೃತಿಕ ಮೌಲ್ಯಗಳು, ದೇವಾಲಯ ಗೀತೆಗಳು, ಹಬ್ಬ ಉತ್ಸವದ ಗೀತೆಗಳು, ಆಧ್ಯಾತ್ಮಿಕ ಗೀತೆಗಳು, ಜನಪ್ರಿಯ ಸಾಂಪ್ರದಾಯಿಕ ಗೀತೆಗಳು, ಚಿಕಿತ್ಸಾ ಸಂಗೀತ, ಲಲಿತ ಕಲೆಯನ್ನು ಬಿಂಬಿಸುವ ಸಂಗೀತವನ್ನು ಒಳಗೊಂಡಿದೆ.

ರಂಜನಿ ಗಾಯತ್ರಿ, ರಾಜೇಶ್ ವೈದ್ಯ, ಸಂದೀಪ್ ನಾರಾಯಣ್, ತ್ರಿಚೂರು ಸಹೋದರರು, ಅಮೃತ ವೆಂಕಟೇಶ್, ಶ್ರೀರಂಜನಿ ಸಂತಾನ ಗೋಪಾಲನ್, ಐಶ್ವರ್ಯ ವಿದ್ಯಾ ರಘುನಾಥ್, ಅನಾಹಿತ ಅಪೂರ್ವ, ಮಾಧುರಿ ಕೌಶಿಕ್ ಮತ್ತು ಚಿಲ್ಕುಂದ ಸಹೋದರಿಯರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ ಎಂದು ಭಾರತೀಯ ಸಾಮಗಾನ ಸಭಾ ತಿಳಿಸಿದೆ.

11ನೇ ಸಾಮಗಾನ ಮಾತಂಗ ರಾಷ್ಟ್ರೀಯ ಪ್ರಶಸ್ತಿಯನ್ನು ಈ ಬಾರಿ ವಿದುಷಿ ರಂಜನಿ ಗಾಯತ್ರಿ ಅವರಿಗೆ ನೀಡಲಾಗುತ್ತಿದ್ದು, ಪ್ರಶಸ್ತಿ ಪ್ರದಾನ ಸಮಾರಂಭ ಫೆ.26ರಂದು ಸಂಜೆ 5 ಗಂಟೆಗೆ ನಡೆಯಲಿದೆ. ವ್ಯಾಸ ಯೋಗ ವಿದ್ಯಾಲಯದ ಕುಲಪತಿ ನಾಗೇಂದ್ರ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮೂರ್ತಿ ಪ್ರತಿಷ್ಠಾನದ ಅಧ್ಯಕ್ಷೆ ಸುಧಾಮೂರ್ತಿ, ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಎಂ.ಪಿ.ಶ್ಯಾಮ್ ಅವರಿಗೂ ಗೌರವ ಸನ್ಮಾನ ನಡೆಯಲಿದ್ದು, ಸಂಗೀತ ತಜ್ಞ ಪ್ರೊ.ಮುರಳೀಧರ ಹೆಗಡೆ ಅವರು ಸನ್ಮಾನ ನಡೆಸಿಕೊಡುವರು ಎಂದು ವಿವರಿಸಿದೆ.



ತ್ರಿಚೂರು ಸಹೋದರರು

ಸರ್ಕಾರಿ ಕೆಲಸದ ಆಮಿಷ: ವಂಚನೆ

ಬೆಂಗಳೂರು: ಸರ್ಕಾರಿ ಕೆಲಸ ಹಾಗೂ ಸೌಲಭ್ಯಗಳನ್ನು ಕೊಡಿಸುವುದಾಗಿ ನಂಬಿಸಿ ವಂಚಿಸಿದ್ದ ಆರೋಪಿ ಪ್ರವೀಣ್ ಶೆಟ್ಟಿ (39) ಎಂಬಾತನನ್ನು ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿಯ ಕನ್ನಮಂಗಲದ ಪ್ರವೀಣ್ ಶೆಟ್ಟಿ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಗುರುತಿನ ಚೀಟಿಗಳನ್ನು ನಕಲಿಯಾಗಿ ಸೃಷ್ಟಿಸಿಕೊಂಡು ವಂಚಿಸುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

'ವಂಚನೆಗೆ ಒಳಗಾದ ಕೆ.ಶ್ರುತಿ ಅವರು ದೂರು ನೀಡಿದ್ದರು. ಆರೋಪಿ ಬಳಿಯಿದ್ದ ಸಿಬಿಐ ಹಾಗೂ ಭ್ರಷ್ಟಾಚಾರ ನಿಗ್ರಹ ದಳದ ನಕಲಿ ಗುರುತಿನ ಚೀಟಿಗಳನ್ನು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿವೆ.

ಬಾಲಬ್ರೂಯಿಯಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್: ಸರ್ಕಾರಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಹೃದಯ ಭಾಗದಲ್ಲಿನ ಪಾರಂಪರಿಕ ಕಟ್ಟಡವೆನಿಸಿದ ಬಾಲಬ್ರೂಯಿ ಅತಿಥಿ ಗೃಹದಲ್ಲಿ 'ಕಾನ್‌ಸ್ಟಿಟ್ಯೂಷನ್ ಕ್ಲಬ್' ಆರಂಭಿಸುವ ಪ್ರಸ್ತಾವಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ಇತರ ಪ್ರತಿವಾದಿಗಳಿಗೆ ನೋಟಿಸ್ ನೀಡುವಂತೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಚೆನ್ನೈ ಪೀಠ ನಿರ್ದೇಶನ ನೀಡಿದೆ.

ವಕೀಲ ಬ್ರಿಜೇಶ್ ಕಾಳಪ್ಪ ನೀಡಿರುವ ದೂರಿನ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪುಷ್ಪಾ ಸತ್ಯನಾರಾಯಣ ಅವರನ್ನು ಒಳಗೊಂಡ ಪೀಠ, ನೋಟಿಸ್ ನೀಡಲು ಸೂಚಿಸಿ ವಿಚಾರಣೆಯನ್ನು ಮಾರ್ಚ್ 23ಕ್ಕೆ ಮುಂದೂಡಿತು. ಈ ಪ್ರಕರಣದಲ್ಲಿ ಕರ್ನಾಟಕ ಹೈಕೋರ್ಟ್ ನೀಡಿರುವ ಆದೇಶದ ಪ್ರತಿಯನ್ನು ಸಲ್ಲಿಸುವಂತೆಯೂ ಸೂಚಿಸಿತು.

ಅತಿಥಿ ಗೃಹದಲ್ಲಿ ಕಾನ್‌ಸ್ಟಿಟ್ಯೂಷನ್ ಕ್ಲಬ್ ನಿರ್ಮಾಣ ಮಾಡಿದರೆ ಮರಗಳನ್ನು ಕಡಿಯಬೇಕಾಗುತ್ತದೆ ಎಂಬುದು ಅರ್ಜಿದಾರರ ಆತಂಕ.

ಪ್ರಕರಣದ ವಿಚಾರಣೆ ನಡೆಸಿದ್ದ ಕರ್ನಾಟಕ ಹೈಕೋರ್ಟ್, ಕ್ಲಬ್ ನಿರ್ಮಾಣಕ್ಕೆ ಈ ವರ್ಷದ ಜನವರಿ 17ರಂದು ಹಸಿರು ನಿಶಾನೆ ತೋರಿತ್ತು. 'ಬಾಲಬ್ರೂಯಿಯ ಪಾರಂಪರಿಕ ಕಟ್ಟಡದ ಸ್ವರೂಪಕ್ಕೆ ಯಾವುದೇ ಧಕ್ಕೆ ಆಗದಂತೆ ನೋಡಿಕೊಳ್ಳಲಾಗುವುದು. ಕಟ್ಟಡಕ್ಕೆ ಧಕ್ಕೆಯಾಗುವ ಯಾವುದೇ ಕಾಮಗಾರಿ ನಡೆಸುವುದಿಲ್ಲ ಮತ್ತು ಅತಿಥಿ ಗೃಹದ ಆವರಣದಲ್ಲಿರುವ 159 ಮರಗಳನ್ನು ಕಡಿಯುವುದಿಲ್ಲ' ಎಂದು ಕರ್ನಾಟಕ ಸರ್ಕಾರವು ಹೈಕೋರ್ಟ್‌ಗೆ ತಿಳಿಸಿತ್ತು.

ಚಿತ್ರಾವಳಿ




ಅಕ್ಷರ ಯೋಗ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರ ಶನಿವಾರ ಆಯೋಜಿಸಿದ್ದ ಮಂಡಲ ಉತ್ಸವ ಕಾರ್ಯಕ್ರಮದಲ್ಲಿ ಹಿಮಾಲಯ ಸಿದ್ಧ ಅಕ್ಷರ ಅವರ ನೇತೃತ್ವದಲ್ಲಿ ವಶಿಷ್ಠಾಸನ, ಉಷ್ಟ್ರಾಸನ ಮತ್ತು ಹಲಾಸನಗಳನ್ನು ಪ್ರದರ್ಶಿಸಲಾಯಿತು. 500ಕ್ಕೂ ಹೆಚ್ಚು ಜನ ಏಕಕಾಲದಲ್ಲಿ ಈ ಮೂರು ಆಸನಗಳನ್ನು ಪ್ರದರ್ಶಿಸಿದ್ದರಿಂದ ಟ್ರಿಪಲ್ ಗಿನ್ನಿಸ್ ವಿಶ್ವದಾಖಲೆ ಸೃಷ್ಟಿಯಾಗಿದೆ.



ನಗರದ ಶೇಷಾದ್ರಿಪುರ ಪ್ರಥಮ ದರ್ಜೆ ಕಾಲೇಜಿನಲ್ಲಿ 'ಯುಯುಸಿಎಂಎಸ್' ಕುರಿತು ಪ್ರಾಂಶುಪಾಲರಿಗೆ ಮತ್ತು ತಾಂತ್ರಿಕ ವರ್ಗಕ್ಕೆ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಮಾತನಾಡಿದರು. ಕುಲಸಚಿವ ಸಿ.ಎನ್. ಶ್ರೀಧರ್, ಕುಲಸಚಿವ (ಮೌಲ್ಯಮಾಪನ) ವಿ. ಲೋಕೇಶ್, ಶೇಷಾದ್ರಿಪುರಂ ಶಿಕ್ಷಣ ದತ್ತಿ ಜಂಟಿ ಕಾರ್ಯದರ್ಶಿ ಶೇಷನಾರಾಯಣ, ಪ್ರಾಂಶುಪಾಲ ಡಾ. ಬಿ.ಜಿ. ಭಾಸ್ಕರ್ ಇದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರಾಜ್ಯ ಅರಣ್ಯ ಇಲಾಖೆ ದಿನಗೂಲಿ ನೌಕರರ ಸಂಘದ ನೇತೃತ್ವದಲ್ಲಿ ನಡೆಯುತ್ತಿರುವ ಪ್ರತಿಭಟನೆ ವೇಳೆ ಪರಿಸರ ಜಾಗೃತಿ ಹಾಗೂ ಹುತಾತ್ಮರಾದ ನೌಕರರ ಶ್ರದ್ಧಾಂಜಲಿ ಕಾರ್ಯಕ್ರಮ ನಡೆಸಲಾಯಿತು. ನೌಕರರ ಕುಂದುಕೊರತೆಗಳನ್ನು ವಿಧಾನ ಪರಿಷತ್ ಸದಸ್ಯ ಆಯನೂರು ಮಂಜುನಾಥ್ ವಿಚಾರಿಸಿದರು. ಸಂಘದ ರಾಜ್ಯ ಘಟಕದ ಅಧ್ಯಕ್ಷ ಎ.ಎಂ.ನಾಗರಾಜು ಇದ್ದರು.



ಕೆಎಸ್‌ಆರ್‌ಟಿಸಿ 'ಅಂಬಾರಿ ಉತ್ಸವ' ಹೆಸರಿನಲ್ಲಿ ಹೊಸದಾಗಿ 20 ವೋಲ್ವೋ ಮಲ್ಟಿ ಆಕ್ಸಲ್ ಸ್ಲೀಪರ್ ಬಸ್‌ಗಳನ್ನು ಪರಿಚಯಿಸುತ್ತಿದೆ. ಫೆ.21ರಂದು ಈ ಬಸ್‌ಗಳಿಗೆ ಚಾಲನೆ ಸಿಗಲಿದೆ.

ನಗರದಲ್ಲಿ ಇಂದು

ಮಹಾ ಶಿವರಾತ್ರಿ ಹಬ್ಬದ ವಿಶೇಷ ಕಾರ್ಯಕ್ರಮಗಳು:
ಜಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಮಹಾ ಶಿವರಾತ್ರಿ: ಬೆಳಿಗ್ಗೆ 6.30ರಿಂದ ಸುಪ್ರಭಾತ ಸೇವೆ, ಪ್ರಾತಃಕಾಲ ಪೂಜೆ, ಮಹಾನ್ಯಾಸ ಪೂರ್ವಕ ರುದ್ರಾಭಿಷೇಕ, ಪಂಚಾಮೃತ ಅಭಿಷೇಕ, ಪುಷ್ಪಾಲಂಕಾರ, ಮಹಾಮಂಗಳಾರತಿ, ಸ್ಥಳ: ಶಿವಸಾನ್ನಿಧ್ಯ ಕ್ಷೇತ್ರ ಕೋಟೆ ಜಲಂಕಠೇಶ್ವರ ಸ್ವಾಮಿ ದೇವಸ್ಥಾನ, ಕಲಾಸಿಪಾಳ್ಯ

ಸಾಮೂಹಿಕ ಕುಲದೇವರ ಪೂಜೆ: ನಾಲ್ಕು ಯಾಮಗಳಲ್ಲಿ ವಿವಿಧ ಅಭಿಷೇಕಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಆಯೋಜನೆ: ಕರ್ನಾಟಕ ಪದ್ಮಶಾಲಿ ಸಂಘ, ಸ್ಥಳ: ಮಾರ್ಕಂಡೇಶ್ವರಸ್ವಾಮಿ ದೇವಸ್ಥಾನದ ಪ್ರಾರ್ಥನಾ ಮಂದಿರ, ಮಾರ್ಕಂಡೇಶ್ವರ ನಗರ, ಬಿನ್ನಿಮಿಲ್ ರಸ್ತೆ, ಬೆಳಿಗ್ಗೆ 6ರಿಂದ

ಲಿಂಗಸ್ವರೂಪ ಶಿವನ ದರ್ಶನ: ಗಂಗಾಜಲಾಭಿಷೇಕ, ರುದ್ರಾಭಿಷೇಕ, ಬಿಲ್ವಪತ್ರೆ ಅರ್ಚನೆ, ಆಯೋಜನೆ: ಶನಿದೇವ ದೇವಾಲಯ, ರಾಮಕೃಷ್ಣ ಭಜನಾ ಮಂದಿರ, ಸ್ಥಳ: ಮುನೇಶ್ವರ ಬ್ಲಾಕ್, ಪ್ಯಾಲೆಸ್ ಗುಟ್ಟಹಳ್ಳಿ, ಬೆಳಿಗ್ಗೆ 7.30ರಿಂದ

'ಮೃತ್ತಿಕಾ ಶಿವಲಿಂಗ ದರ್ಶನ': ಆಯೋಜನೆ: ನಂಜನಗೂಡು ಶ್ರೀಕಂಠೇಶ್ವರ ಸೇವಾ ಸಂಘ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ, ಬೆಳಿಗ್ಗೆ 9ರಿಂದ

75 ಕಾರ್ಯಕ್ರಮಗಳ ಉದ್ಘಾಟನೆ: ಉಪಸ್ಥಿತಿ: ಎಂ.ಆರ್.ವಿ ಪ್ರಸಾದ್, ಸಿ. ವರದರಾಜ ಪಲ್ಲವಿ ಚಂದ್ರಪ್ಪ, ಲಕ್ಷ್ಮಣದಾಸ್, ದ್ವಂದ್ವ ವೀಣಾವಾದನ: ರೇವತಿ ಕಾಮತ್, ಮೀನಾಮೂರ್ತಿ, ಮೃದಂಗ: ಬಿ.ಆರ್. ಶ್ರೀಧರ್, ಮೋರ್ಚಿಂಗ್: ಜಿ. ಲಕ್ಷ್ಮೀನಾರಾಯಣ, ಆಯೋಜನೆ ಮತ್ತು ಸ್ಥಳ: ಮುರಳೀಧರ ಸಂಗೀತ ನೃತ್ಯ ಮಹಾವಿದ್ಯಾಲಯ, ಉಲ್ಲಾಳ ಉಪನಗರ, ಮಧ್ಯಾಹ್ನ 3ರಿಂದ

'ಕಲಾಂಬಿಕ ಸಹೋದರಿಯರ' ಸಂಗೀತ ಕಾರ್ಯಕ್ರಮ: ಅಂಬಿಕಾ ಜಿ. ದತ್, ಕಲಾಧರಿ ಭವಾನಿ, ಪಿಟೀಲು: ಪ್ರೇಮಾ ವಿವೇಕ್, ಮೃದಂಗ: ಸಿ.ಎ. ಗುರುದತ್, ಘಟಂ: ಎನ್.ಎಸ್. ಕೃಷ್ಣಪ್ರಸಾದ್, ಆಯೋಜನೆ: ಸುಸ್ವರಾಲಯ ಸಂಗೀತ ವಿದ್ಯಾಲಯ, ಸ್ಥಳ: ವರಸಿದ್ಧಿ ವಿನಾಯಕ ದೇವಸ್ಥಾನ, ಕುಮಾರಸ್ವಾಮಿ ಬಡಾವಣೆ, ಸಂಜೆ 6



ಕಲಾಂಬಿಕ ಸಹೋದರಿಯರು

'ಕರ್ನಾಟಕ ಶಾಸ್ತ್ರೀಯ ಕೊಳಲು' ವಾದನ: ಬಿ.ಕೆ. ಅನಂತರಾಮ್, ಪಿಟೀಲು: ಅರ್ಜುನ್ ಎಂ. ದಿನಕರ್, ಮೃದಂಗ: ಬಿ.ಎಸ್. ಆನಂದ್, ಘಟ: ಸಚಿನ್ ದೇವಿಪ್ರಾಸದ್, ಆಯೋಜನೆ: ಸಾಮಗಾನ ಸಂಗೀತ ಸಭಾ, ಸ್ಥಳ: ಬಲಮುರಿ ಸಿದ್ಧಿ ವಿನಾಯಕ ದೇವಸ್ಥಾನ, ಸಹಕಾರನಗರ, ಸಂಜೆ 5ರಿಂದ

ಶಿವರಾತ್ರಿ ಸ್ವರ ಸಂಭ್ರಮ: ಉದ್ಘಾಟನೆ: ಅಕ್ಕ ಓಂಕಾರೇಶ್ವರಿ, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಅತಿಥಿ: ಮೃತ್ಯುಂಜಯ ದೊಡ್ಡವಾಡ, ಉಪಸ್ಥಿತಿ: ಉಮಾಮಹೇಶ್ವರ್ ಗುರೂಜಿ, ಭಕ್ತಿ ಸಂಗೀತ: ವಿಶ್ವನಾಥ್ ನಾಕೋಡ್, ವಾದ್ಯ ಸಹಕಾರ: ಸಾಯಿತೇಜಸ್ ಚಂದ್ರಶೇಖರ್, ನಾಗೇಂದ್ರ ಟಿ. ರಾಣಾಪೂರ್, ಪುನೀತ್ ರಾಣಾಪೂರ್, ಅಮಿತ್ ಭಟ್, ಆಯೋಜನೆ: ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆ, ಸ್ಥಳ: ಪಂಡಿತ್ ಆರ್.ವಿ. ಶೇಷಾದ್ರಿ ಗವಾಯಿ ಸಭಾಂಗಣ, ನೇವಿ ಬಡಾವಣೆ, ಚಿಮಣಿ ಹಿಲ್ಸ್, ಸಂಜೆ 6.30ರಿಂದ

ಕಾವ್ಯ ಶಿವರಾತ್ರಿ: 'ಮಂಟೇಸ್ವಾಮಿ ಮತ್ತು ಮಲೆಮಹದೇಶ್ವರ ಮಹಾಕಾವ್ಯಗಳ ಗಾಯನ': ಸಿ.ಎಂ. ನರಸಿಂಹಮೂರ್ತಿ ಮತ್ತು ತಂಡ, ಪ್ರಸ್ತಾವನೆ: ಪ್ರದೀಪ್ ಮಾಲ್ಗುಡಿ, ಉದ್ಘಾಟನೆ: ಎಂ.ಎಸ್. ಮೂರ್ತಿ, ಅತಿಥಿಗಳು: ಬಿ. ಗಂಗಾಧರ್, ಕೆ.ಎನ್. ಸಹನ, ಕೆ.ಎನ್. ಕವನ, ಕೆ.ಎನ್. ಚಂದನ, ಎಚ್.ಆರ್. ಸ್ವಾಮಿ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ನಿರ್ವಹಣೆ: ರುದ್ರೇಶ್ ಅದರಂಗಿ, ಆಯೋಜನೆ: ಜನಸಂಸ್ಕೃತಿ ಪ್ರತಿಷ್ಠಾನ ಕಾವ್ಯಮಂಡಲ, ಸ್ಥಳ: ಸಿ. ಅಶ್ವತ್ಥ್ ಕಲಾಭವನ, ಎನ್.ಆರ್. ಕಾಲೊನಿ, ಸಂಜೆ 6.30ರಿಂದ

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ದೇವಿಯ ಪ್ರತಿಷ್ಠಾಪನೆ, ಮಹಾಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸಂಜೆ 6.30

'ಕುರುಕ್ಷೇತ್ರ' ನಾಟಕ ಪ್ರದರ್ಶನ: ಉದ್ಘಾಟನೆ: ಎಂ. ಸತೀಶ್ ರೆಡ್ಡಿ, ಅಧ್ಯಕ್ಷತೆ: ಕುಪೇಂದ್ರ ರೆಡ್ಡಿ, ಅತಿಥಿ: ಸಿದ್ರಾಮ ಸಿಂಧೆ, ಆಯೋಜನೆ: ಡಾ. ರಾಜ್‌ಕುಮಾರ್ ಕಲಾಭಿಮಾನಿಗಳ ಸಾಂಸ್ಕೃತಿಕ ವೇದಿಕೆ, ಸ್ಥಳ: ಅಗರ ಗ್ರಾಮ, ಸರ್ಜಾಪುರ, ರಾತ್ರಿ 9

ಒಡಿಸ್ಸಿ-ಕಥಕ್-ಭರತನಾಟ್ಯ ಪ್ರದರ್ಶನ: ವಂದನ ಸುಪ್ರಿಯ ಕಾಸರವಳ್ಳಿ, ಅರ್ಪಿತಾ ಬ್ಯಾನರ್ಜಿ, ಪವಿತ್ರಾ ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ಕಾಸ್ಮೊಪಾಲಿಟ್ ಕ್ಲಬ್‌ನ ಆವರಣ, ಜಯನಗರ, ರಾತ್ರಿ 10.30

ಇತರ ಕಾರ್ಯಕ್ರಮಗಳು:

'ಭಾರತದಲ್ಲಿ ಪ್ರಸ್ತುತ ಸಮಸ್ಯೆಗಳು ಮತ್ತು ಸವಾಲುಗಳು' ವಿಚಾರಸಂಕಿರಣ: ಉದ್ಘಾಟನೆ: ನಿ. ನ್ಯಾ. ಅಬ್ದುಲ್ ನಜೀರ್, ಅತಿಥಿಗಳು: ರಾಮ ಮೋಹನ್ ರೆಡ್ಡಿ, ವೇದವ್ಯಾಸಾಚಾರ್ ಶ್ರೀಶಾನಂದ, ಸಿ. ಬಸವರಾಜು, ಕೆ. ಸುಬ್ರಹ್ಮಣ್ಯ, ಆಯೋಜನೆ ಮತ್ತು ಸ್ಥಳ: ಬೆಂಗಳೂರು ಕಾನೂನು ಕಾಲೇಜು, ಬಸವೇಶ್ವರನಗರ, ಬೆಳಿಗ್ಗೆ 10ರಿಂದ

ಕರ್ನಾಟಕ ಶಾಸ್ತ್ರೀಯ ವಾದ್ಯ ಸಂಗೀತ ಸ್ಪರ್ಧೆಗಳ ಉದ್ಘಾಟನೆ: ಬೈರಮಂಗಲ ರಾಮೇಗೌಡ, ಉಪಸ್ಥಿತಿ: ಕೆ. ಮೋಹನ್ ದೇವ್ ಆಳ್ವ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎಂ.ವಿ.ಸಿ ಸಭಾಂಗಣ, ಬಿ.ಎಂ.ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ಕಲ್ಲು ಉದ್ಯಮ 'ಸ್ಟೋನಾ' ಮೇಳದ ಸಮಾರೋಪ ಸಮಾರಂಭ: ಅತಿಥಿಗಳು: ಬಸವರಾಜ ಬೊಮ್ಮಾಯಿ, ರಾಜೀವ ಅರೋರ, ಇಶ್ವಿಂದರ್ ಸಿಂಗ್, ಮನೋಜ್ ಕುಮಾರ್ ಸಿಂಗ್, ಎಸ್. ಕೃಷ್ಣ ಪ್ರಸಾದ್, ಆಯೋಜನೆ: ಎಸ್‌ಐಜಿಎಸ್‌ಐ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಪ್ರದರ್ಶನ ಕೇಂದ್ರ (ಬಿಐಇಸಿ), ಬೆಳಿಗ್ಗೆ 10.30

ಮ್ಯೂಸಿಯಂ ಉದ್ಘಾಟನೆ: ವೀಕ್ ಸೆಲೆಬ್ರೇಷನ್ಸ್, ಆರ್ಟ್ ಇಸ್ ಲೈಫ್–ನ್ಯೂ ಬಿಗಿನಿಂಗ್ಸ್, ಸ್ಥಳ: ಮ್ಯೂಸಿಯಂ ಆಫ್ ಆರ್ಟ್ ಆ್ಯಂಡ್ ಫೋಟೊಗ್ರಫಿ, ಕಸ್ತೂರ ಬಾ ರಸ್ತೆ, ಬೆಳಿಗ್ಗೆ 11

ಅದಾನಿ ಉದ್ಯಮದ ಬೆಳವಣಿಗೆ ಕುರಿತು ಅಮೆರಿಕ ಉದ್ಯಮಿ ಜಾರ್ಜ್ ಸೊರೊಸ್ ವ್ಯಾಖ್ಯಾನ

‘ಕೇಂದ್ರಕ್ಕೆ ಬಿರುಗಾಳಿ ಕಂಟಕ ತಂದೀತು’

ನವದೆಹಲಿ (ಪಿಟಿಐ): ‘ಗೌತಮ್ ಅದಾನಿ ನೇತೃತ್ವದ ಸಮೂಹದ ಉದ್ಯಮದಲ್ಲಿ ಈಗ ಎದ್ದಿರುವ ಬಿರುಗಾಳಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನೂ ದುರ್ಬಲಗೊಳಿಸಬಹುದು’ ಎಂದು ಅಮೆರಿಕದ ಶ್ರೀಮಂತ ಉದ್ಯಮಿ ಜಾರ್ಜ್ ಸೊರೊಸ್ ಹೇಳಿದ್ದಾರೆ.

ತೀವ್ರ ಚರ್ಚೆಗೆ ಗ್ರಾಸವಾಗಿರುವ ಅದಾನಿ ಉದ್ಯಮ ಕುರಿತ ಬೆಳವಣಿಗೆಗೆ ಸಂಬಂಧಿಸಿದ ಈ ಹೇಳಿಕೆಗೆ ಆಡಳಿತಾರೂಢ ಬಿಜೆಪಿ ಕಟುವಾಗಿ ಟೀಕಿಸಿದೆ. ‘ಅದಾನಿ ಸಮೂಹದ ಬೆಳವಣಿಗೆ, ಜಾರ್ಜ್‌ಗೆ ಸಂಬಂಧಪಡದ ವಿಷಯ’ ಎಂದು ಕಾಂಗ್ರೆಸ್ ಪ್ರತಿಕ್ರಿಯಿಸಿದೆ.

ಷೇರು ಮೌಲ್ಯದ ನಿಗದಿಯಲ್ಲಿ ವಂಚನೆ ಕುರಿತಂತೆ ಅಮೆರಿಕ ಮೂಲದ ಹಿಂಡನ್‌ಬರ್ಗ್ ರಿಸರ್ಚ್ ವರದಿಯ ಬಳಿಕ ಅದಾನಿ ಸಮೂಹವು ತೀವ್ರ ಒತ್ತಡದಲ್ಲಿದೆ. ಇನ್ನೊಂದೆಡೆ, ಈ ವರದಿಯ ಆರೋಪವನ್ನು ಸಮೂಹವು ‘ಆಧಾರ ರಹಿತ’ ಎಂದು ನಿರಾಕರಿಸಿದೆ.

ಮ್ಯೂನಿಚ್ ಸೆಕ್ಯುರಿಟಿ ಕಾನ್ಫರೆನ್ಸ್‌ನಲ್ಲಿ ಮಾತನಾಡಿದ ಸೊರೊಸ್ ಅವರು, ‘ಅದಾನಿ ಸಮೂಹದ ಬೆಳವಣಿಗೆಗಳಿಗೆ ಸಂಬಂಧಿಸಿ ವಿದೇಶಿ ಹೂಡಿಕೆದಾರರ ಪ್ರಶ್ನೆಗಳು ಮತ್ತು ಸಂಸತ್ತಿನಲ್ಲಿ ವ್ಯಕ್ತವಾಗಿರುವ ಆರೋಪ ಕುರಿತಂತೆ ಮೋದಿ ಅವರು ‘ಉತ್ತರಿಸಲೇಬೇಕು’ ಎಂದಿದ್ದಾರೆ.


ಜಾರ್ಜ್ ಸೊರೊಸ್

‘ಪ್ರಧಾನಿ ಮೋದಿ ಮತ್ತು ಉದ್ಯಮಿ ಅದಾನಿ ಆಪ್ತರು. ಅವರ ಹಣೆಬರಹ ಪರಸ್ಪರ ಬೆಸೆದುಕೊಂಡಿದೆ. ಷೇರು ಮೌಲ್ಯ ವಿರೂಪಗೊಳಿಸಿದ ಆರೋಪ ಅದಾನಿ ಮೇಲಿದೆ. ಅವರ ಕಂಪನಿಯ ಷೇರುಗಳ ಮೌಲ್ಯ ಕಾಗದದ ಮನೆಯಂತೆ ಕುಸಿದಿದೆ. ಈ ಬೆಳವಣಿಗೆ ಕುರಿತು ಮೋದಿ ಮೌನ ತಳೆದಿದ್ದಾರೆ. ಆದರೆ, ಅವರು ಉತ್ತರಿಸಲೇಬೇಕಿದೆ’ ಎಂದು ಸೊರೊಸ್ ಹೇಳಿದರು.

ಆದರೆ, ತಮ್ಮ ಮಾತುಗಳಿಗೆ ಪೂರಕವಾಗಿ ಅವರು ಯಾವುದೇ ಅಂಕಿಅಂಶಗಳನ್ನು ಉಲ್ಲೇಖಿಸಲಿಲ್ಲ. ಈ ಬೆಳವಣಿಗೆಯು ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮೋದಿ ಅವರು ಹೊಂದಿರುವ ಹಿಡಿತ ದುರ್ಬಲಗೊಳಿಸಿದೆ ಎಂದು ಅವರು ಹೇಳಿದ್ದಾರೆ.

ಸಂಬಂಧಪಡದ ವಿಷಯ: ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ಅದಾನಿ ಸಮೂಹದ ಬೆಳವಣಿಗೆಯು ಭಾರತದಲ್ಲಿ ಸರ್ಕಾರದ ಬದಲಾವಣೆಗೆ ಕಾರಣವಾಗಲಿದೆಯೇ ಎಂಬುದು ಪೂರ್ಣವಾಗಿ ಕಾಂಗ್ರೆಸ್ ಮತ್ತು ಇತರ ವಿರೋಧಪಕ್ಷಗಳಿಗೆ ಸಂಬಂಧಿಸಿದ್ದಾಗಿದೆ. ಇದು, ಉದ್ಯಮಿ ಜಾರ್ಜ್ ಸೊರೊಸ್ ಅವರಿಗೆ ಸಂಬಂಧಿಸಿದ್ದಲ್ಲ ಎಂದು ಕಾಂಗ್ರೆಸ್ ಪಕ್ಷ ಪ್ರತಿಕ್ರಿಯಿಸಿದೆ.

ಸೊರೊಸ್ ಅವರ ಹೇಳಿಕೆ ಹಿನ್ನೆಲೆಯಲ್ಲಿ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಟ್ವೀಟ್ ಮಾಡಿದ್ದು, ಅದಾನಿ ಸಮೂಹದ ಬೆಳವಣಿಗೆ ಆಡಳಿತ ಬದಲಾವಣೆಗೆ ಕಾರಣವಾಗಲಿದೆಯೇ ಎಂಬುದು ಸಂಪೂರ್ಣವಾಗಿ ಆಂತರಿಕವಾದುದು ಎಂದು ಪ್ರತಿಪಾದಿಸಿದ್ದಾರೆ.

ನಮ್ಮ ಚುನಾವಣಾ ಫಲಿತಾಂಶಗಳನ್ನು ನಿರ್ಧರಿಸಲು ನೆಹರೂ ಪರಂಪರೆಯು ಸೊರೊಸ್ ಅಂತಹವರಿಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದಾರೆ.

ವಿದೇಶಿ ಶಕ್ತಿ ಸೋಲಿಸುತ್ತೇವೆ: ಸ್ಮೃತಿ ಇರಾನಿ

ನವದೆಹಲಿ (ಪಿಟಿಐ): ‘ಸೊರೊಸ್ ಅವರು ಪ್ರಧಾನಿ ಮೋದಿ ಅವರನ್ನಷ್ಟೇ ಅಲ್ಲ, ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಗುರಿಯಾಗಿಸಿ ಟೀಕಿಸುತ್ತಿದ್ದಾರೆ’ ಎಂದು ಬಿಜೆಪಿ ಕಟುವಾಗಿ ಪ್ರತಿಕ್ರಿಯಿಸಿದೆ.

ಭಾರತದ ವಿರುದ್ಧ ಯುದ್ಧದ ಒತ್ತಡ ಹೇರಲಾಗುತ್ತಿದೆ. ಈ ಒತ್ತಡ ಮತ್ತು ಭಾರತದ ಹಿತಾಸಕ್ತಿಯ ನಡುವೆ ಮೋದಿ ಇದ್ದಾರೆ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರು ಪ್ರತಿಕ್ರಿಯಿಸಿದ್ದಾರೆ.

‘ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆ ಹಾಳುಗೆಡವಲು ಸೊರೊಸ್ ಬಯಸಿದ್ದಾರೆ. ತಾವು ಬಯಸಿದ ಕೆಲವರು ಇಲ್ಲಿ ಸರ್ಕಾರ ರಚಿಸಬೇಕು ಎಂದು ಅವರು ಬಯಸುತ್ತಿದ್ದಾರೆ. ನಾವು ಇಂಥ ವಿದೇಶಿ ಶಕ್ತಿಗಳನ್ನು ಹಿಂದೆಯೂ ಸೋಲಿಸಿದ್ದೇವೆ. ಮತ್ತೆ ಸೋಲಿಸಲಿದ್ದೇವೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ನಾನು ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಗುರಿಯಾಗಿಸಿ ದಾಳಿ ಮಾಡುತ್ತೇನೆ. ಮೋದಿ ಅವರೇ ನನ್ನ ದಾಳಿಯ ಕೇಂದ್ರ ಬಿಂದುವಾಗಿರುತ್ತಾರೆ ಎಂದು ಸೊರೊಸ್ ಹೇಳಿದ್ದಾರೆ. ಅವರು ಭಾರತದ ಹಿತಾಸಕ್ತಿಯ ರಕ್ಷಣೆಯಲ್ಲ, ತನ್ನ ಹಿತಾಸಕ್ತಿ ರಕ್ಷಿಸುವವರು ಕೇಂದ್ರದಲ್ಲಿ ಇರಬೇಕು ಎಂದು ಬಯಸುತ್ತಾರೆ’ ಎಂದಿದ್ದಾರೆ.

ನಬಂ ರಬಿಯಾ ತೀರ್ಪಿನ ಪುನರ್ ಪರಿಶೀಲನೆ ವಿಸ್ತೃತ ಪೀಠಕ್ಕೆ ಇಲ್ಲ



ನವದೆಹಲಿ (ಪಿಟಿಐ): ವಿಧಾನಸಭಾ ಸ್ಪೀಕರ್ ಅನ್ನು ಪದಚ್ಯುತಗೊಳಿಸಲು ಕೋರಿ ಸಲ್ಲಿಕೆಯಾದ ಅರ್ಜಿಯು ಸದನದ ಮುಂದೆ ಬಾಕಿ ಇರುವಾಗ, ಆ ಸ್ಪೀಕರ್ ಶಾಸಕರ ಅನರ್ಹತೆಗೆ ಸಂಬಂಧಿಸಿದ ಅರ್ಜಿಯ ವಿಚಾರಣೆಯ ಪ್ರಕ್ರಿಯೆ ನಡೆಸಲು ಬರುವುದಿಲ್ಲ ಎಂದು ಸುಪ್ರೀಂ ಕೋರ್ಟ್‌ನ ಸಾಂವಿಧಾನಿಕ ಪೀಠ (ನಬಂ ರಬಿಯಾ ಪ್ರಕರಣದಲ್ಲಿ) ನೀಡಿದ್ದ ತೀರ್ಪನ್ನು ಪುನರ್ ಪರಿಶೀಲನೆಗಾಗಿ ಏಳು ಸದಸ್ಯರ ವಿಸ್ತೃತ ಪೀಠಕ್ಕೆ ವಹಿಸಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

2016ರ ನಬಂ ರಬಿಯಾ (ಅರುಣಾಚಲ ಪ್ರದೇಶ) ಪ್ರಕರಣದ ತೀರ್ಪಿನ ಪುನರ್ ಪರಿಶೀಲನೆಗೆ ಕೋರಿ ಮಹಾರಾಷ್ಟ್ರದ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣ ಸಲ್ಲಿಸಿದ್ದ ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರ ನೇತೃತ್ವದ ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠ ನಿರಾಕರಿಸಿತು.

ಈ ಬೆಳವಣಿಗೆಯಿಂದಾಗಿ, 2022ರಲ್ಲಿ ಶಿವಸೇನಾದಿಂದ ಬಂಡಾಯವೆದ್ದಿದ್ದ ಏಕನಾಥ ಶಿಂದೆ ನೇತೃತ್ವದ ಬಣ ಸದ್ಯಕ್ಕೆ ನಿರಾಳವಾಗಿದೆ. ಮಹಾರಾಷ್ಟ್ರದಲ್ಲಿ 2022ರ ಜೂನ್‌ನಲ್ಲಿ ನಡೆದಿದ್ದ ರಾಜಕೀಯ ಬಿಕ್ಕಟ್ಟಿನ ಕುರಿತ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಸಾಂವಿಧಾನಿಕ ಪೀಠವು 2016ರಲ್ಲಿ ನಬಂ ರಬಿಯಾ ಪ್ರಕರಣದ ತೀರ್ಪು ನೀಡಿತ್ತು.

ಶಿಂದೆ ಬಣವು ಮಹಾರಾಷ್ಟ್ರ ವಿಧಾನಸಭೆಯ ಡೆಪ್ಯುಟಿ ಸ್ಪೀಕರ್ ನರಹರಿ ಸೀತಾರಾಂ ಝಿರ್ವಾಳ್ (ಠಾಕ್ರೆ ಆಪ್ತರು) ಅವರ ಪದಚ್ಯುತಿ ಕೋರಿ ಸಲ್ಲಿಸಿದ್ದ ನೋಟಿಸ್ ಸದನದ ಮುಂದೆ ಬಾಕಿ ಇರುವಾಗಲೇ, ಈ ಬಣದ ಶಾಸಕರನ್ನು ಅನರ್ಹಗೊಳಿಸುವಂತೆ ಕೋರಿ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ ಬಣ ಮನವಿ ಸಲ್ಲಿಸಿತ್ತು.

‘2016ರ ನಬಂ ರಬಿಯಾ ತೀರ್ಪಿನ ಉಲ್ಲೇಖದ ಅಗತ್ಯವಿದೆಯೇ ಅಥವಾ ಇಲ್ಲವೋ ಎಂಬುದನ್ನು ಪ್ರಕರಣದ ಯೋಗ್ಯತೆ ಆಧರಿಸಿ ಇದೇ 21ರಂದು ಪರಿಗಣಿಸಲಾಗುವುದು’ ಎಂದು ಪೀಠ ತಿಳಿಸಿತು.

ಠಾಕ್ರೆ ಬಣದ ಪರ ವಾದ ಮಂಡಿಸಿದ ಹಿರಿಯ ವಕೀಲ ಕಪಿಲ್ ಸಿಬಲ್ ಮತ್ತು ಎ.ಎಂ.ಸಿಂಘ್ವಿ ಅವರು, ನಬಂ ರಬಿಯಾ ತೀರ್ಪನ್ನು ಮರುಪರಿಶೀಲನೆಗಾಗಿ ಏಳು ನ್ಯಾಯಮೂರ್ತಿಗಳ ಪೀಠಕ್ಕೆ ಉಲ್ಲೇಖಿಸುವಂತೆ ಕೋರಿದರು.

ಶಿಂದೆ ಬಣದ ಪರ ವಕೀಲರಾದ ಹರೀಶ್ ಸಾಳ್ವೆ ಮತ್ತು ಎನ್.ಕೆ.ಕೌಲ್ ಹಾಗೂ ಮಹಾರಾಷ್ಟ್ರ ರಾಜ್ಯಪಾಲರ ಪರ ವಕೀಲರಾದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಇದನ್ನು ವಿಸ್ತೃತ ಪೀಠಕ್ಕೆ ವಹಿಸುವುದಕ್ಕೆ ವಿರೋಧ ವ್ಯಕ್ತಪಡಿಸಿದರು.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ, ಕೃಷ್ಣ ಮುರಾರಿ, ಹಿಮಾ ಕೊಹ್ಲಿ ಮತ್ತು ಪಿ.ಎಸ್.ನರಸಿಂಹ ಅವರನ್ನು ಪೀಠ ಒಳಗೊಂಡಿದೆ.

ದೆಹಲಿ ಮೇಯರ್ ಆಯ್ಕೆ ಪ್ರಕ್ರಿಯೆ ನಾಮನಿರ್ದೇಶಿತರಿಗೆ ಮತದ ಹಕ್ಕಿಲ್ಲ

ನವದೆಹಲಿ (ಪಿಟಿಐ): ದೆಹಲಿ ಮಹಾನಗರ ಪಾಲಿಕೆಯ(ಎಂಸಿಡಿ) ನಾಮನಿರ್ದೇಶಿತ ಸದಸ್ಯರು ಮೇಯರ್ ಆಯ್ಕೆ ಚುನಾವಣೆಯಲ್ಲಿ ಮತ ಚಲಾಯಿಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ತೀರ್ಪು ನೀಡಿದೆ.

ಮೇಯರ್, ಉಪಮೇಯರ್ ಮತ್ತು ಸ್ಥಾಯಿ ಸಮಿತಿ ಸದಸ್ಯರ ಆಯ್ಕೆಗಾಗಿ ಚುನಾವಣೆಯ ದಿನಾಂಕ ನಿಗದಿಪಡಿಸಲು ಸಭೆ ಸೇರುವ ಸಲುವಾಗಿ 24 ಗಂಟೆಗಳೊಳಗೆ ನೋಟಿಸ್ ಜಾರಿ ಮಾಡಬೇಕೆಂದು ನಿರ್ದೇಶನ ನೀಡಿದೆ.

ದಿನಾಂಕ ನಿಗದಿಯಾದ ಮೊದಲ ಸಭೆಯಲ್ಲೇ ಮೇಯರ್ ಚುನಾವಣೆ ನಡೆಯಬೇಕು ಮತ್ತು ಬಳಿಕ ಉಪಮೇಯರ್ ಚುನಾವಣೆ ನಡೆಯಬೇಕು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಜೆ.ಬಿ. ಪಾರ್ದಿವಾಲಾ ಅವರನ್ನೊಳಗೊಂಡ ನ್ಯಾಯಪೀಠವು ನಿರ್ದೇಶನ ನೀಡಿದೆ.

ಈ ಮೂಲಕ ಆಮ್ ಆದ್ಮಿ ಪಕ್ಷದ (ಎಎಪಿ) ವಾದವನ್ನು ನ್ಯಾಯಾಲಯವು ಪುರಸ್ಕರಿಸಿದೆ.

ಮೇಯರ್ ಚುನಾವಣೆ ಶೀಘ್ರ ನಡೆಸಲು ನಿರ್ದೇಶನ ನೀಡಬೇಕೆಂದು ಕೋರಿ ಎಎಪಿಯ ಮೇಯರ್ ಅಭ್ಯರ್ಥಿ ಶೆಲ್ಲಿ ಒಬೆರಾಯ್ ಅವರು ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಮೂರು ಬಾರಿ ನಡೆದಿದ್ದ ಎಂಸಿಡಿ ಸಭೆಗಳಲ್ಲಿ ಬಿಜೆಪಿ ಮತ್ತು ಎಎಪಿ ಸದಸ್ಯರ ನಡುವೆ ಗದ್ದಲ ಉಂಟಾದ ಕಾರಣ ಮೇಯರ್ ಆಯ್ಕೆಗೆ ಚುನಾವಣೆ ನಡೆದಿರಲಿಲ್ಲ.

ಪ್ರಜಾಪ್ರಭುತ್ವಕ್ಕೆ ಸಂದ ಜಯ: ಎಂಸಿಡಿ ಮೇಯರ್ ಆಯ್ಕೆ ಚುನಾವಣೆ ಸಂಬಂಧ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಕುರಿತು ಪ್ರತಿಕ್ರಿಯಿಸಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್, ‘ಇದು ಪ್ರಜಾಪ್ರಭುತ್ವಕ್ಕೆ ಸಂದ ಜಯ’ ಎಂದು ಬಣ್ಣಿಸಿದ್ದಾರೆ.

‘ಬಿಜೆಪಿ ಮತ್ತು ಲೆಫ್ಟಿನೆಂಟ್ ಗವರ್ನರ್ ಅವರು ಕಾನೂನುಬಾಹಿರ ಮತ್ತು ಅಸಾಂವಿಧಾನಿಕ ಆದೇಶಗಳನ್ನು ಹೇಗೆ ಜಾರಿ ಮಾಡುತ್ತಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗಿದೆ’ ಎಂದು ಹೇಳಿದ್ದಾರೆ.

ಏಕನಾಥ ಶಿಂದೆ ಬಣಕ್ಕೆ ‘ಶಿವಸೇನಾ’

ನವದೆಹಲಿ (ಪಿಟಿಐ): ಚುನಾವಣಾ ಆಯೋಗವು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣಕ್ಕೆ ‘ಶಿವಸೇನಾ’ ಹೆಸರು ಹಾಗೂ ಬಿಲ್ಲು-ಬಾಣ ಒಳಗೊಂಡ ಪಕ್ಷದ ಚಿಹ್ನೆಯನ್ನು ಶುಕ್ರವಾರ ಮಂಜೂರು ಮಾಡಿದೆ. ಇದರಿಂದಾಗಿ ಉದ್ಧವ್ ಠಾಕ್ರೆ ಬಣಕ್ಕೆ ದೊಡ್ಡ ಹಿನ್ನಡೆ ಉಂಟಾಗಿದೆ.

ತಮ್ಮ ಬಣವನ್ನು ನೈಜ ಶಿವಸೇನಾ ಎಂದು ಮಾನ್ಯ ಮಾಡಿ, ಬಿಲ್ಲು-ಬಾಣ ಒಳಗೊಂಡ ಪಕ್ಷದ ಚಿಹ್ನೆಯನ್ನು ತಮಗೇ ಮಂಜೂರು ಮಾಡುವಂತೆ ಕೋರಿ ಶಿಂದೆ ಬಣವು ಅರ್ಜಿ ಸಲ್ಲಿಸಿತ್ತು. ಆರು ತಿಂಗಳಿಂದ ಬಾಕಿ ಇದ್ದ ಈ ಅರ್ಜಿಯ ವಿಚಾರಣೆ ನಡೆಸಿದ ಮೂವರು ಸದಸ್ಯರನ್ನೊಳಗೊಂಡ ಆಯೋಗವು ಶಿಂದೆ ಬಣದ ಪರವಾಗಿ ಸರ್ವಾನುಮತದ ತೀರ್ಪು ನೀಡಿದೆ.

ಪಂಜಿನ ಚಿಹ್ನೆ ಹಾಗೂ ‘ಶಿವಸೇನಾ-ಉದ್ಧವ್ ಬಾಳಾ ಸಾಹೇಬ್ ಠಾಕ್ರೆ’ ಹೆಸರನ್ನು ತನ್ನಲ್ಲಿಯೇ ಉಳಿಸಿಕೊಳ್ಳಲು ಉದ್ಧವ್ ಬಣಕ್ಕೆ ಅವಕಾಶ ಕಲ್ಪಿಸಿದೆ.

ಚುನಾವಣಾ ಆಯೋಗದ ತೀರ್ಪಿನ ಕುರಿತು ಪ್ರತಿಕ್ರಿಯಿಸಿರುವ ಶಿಂದೆ, ‘ಇದು ಸತ್ಯಕ್ಕೆ ಹಾಗೂ ಮಹಾರಾಷ್ಟ್ರದ ಜನರಿಗೆ ಸಂದ ಗೆಲುವು’ ಎಂದು ಸಂತಸ ವ್ಯಕ್ತಪಡಿಸಿದ್ದಾರೆ.

‘ಆಯೋಗದ ನಿರ್ಧಾರದಿಂದ ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ನಮ್ಮ ಪಕ್ಷವು ಈ ವಿಚಾರವನ್ನು ಮಹಾರಾಷ್ಟ್ರದ ಜನರ ಬಳಿಗೆ ತೆಗೆದುಕೊಂಡು ಹೋಗಲಿದೆ’ ಎಂದು ಉದ್ಧವ್ ಬಣದ ಸಂಸದ ಸಂಜಯ್ ರಾವುತ್ ಹೇಳಿದ್ದಾರೆ.

ಮುಖ್ಯಾಂಶಗಳು

- ಉದ್ಧವ್ ಠಾಕ್ರೆ ಬಣಕ್ಕೆ ಹಿನ್ನಡೆ
- ಜನರ ಬಳಿಗೆ ಹೋಗಲಿದ್ದೇವೆ: ರಾವುತ್

‘ಸುಪ್ರೀಂ’ನಲ್ಲಿ ಪ್ರಶ್ನೆ: ಉದ್ಧವ್

ಮುಂಬೈ (ಪಿಟಿಐ): ‘ಚುನಾವಣಾ ಆಯೋಗದ ತೀರ್ಪು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕವಾದುದು. ಇದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ’ ಎಂದು ಉದ್ಧವ್ ಠಾಕ್ರೆ ಅವರು ಶುಕ್ರವಾರ ತಿಳಿಸಿದ್ದಾರೆ.

‘ಶಿಂದೆ ಬಣದವರು ಬಿಲ್ಲು-ಬಾಣ ಒಳಗೊಂಡ ನಮ್ಮ ಚಿಹ್ನೆಯನ್ನು ಕಳವು ಮಾಡಿದ್ದಾರೆ. ರಾಜ್ಯದ ಜನರು ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಭಾರತವು ಪ್ರಜಾಪ್ರಭುತ್ವ ರಾಷ್ಟ್ರವಾಗಿ ಉಳಿದಿಲ್ಲ. ದೇಶದಲ್ಲಿ ಸರ್ವಾಧಿಕಾರಿ ಆಡಳಿತ ಜಾರಿಗೊಂಡಿರುವ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಘೋಷಿಸಲಿ’ ಎಂದೂ ಹೇಳಿದ್ದಾರೆ.

ಜಮ್ಮು ತಲುಪಿದ ಶೃಂಗೇರಿ ಶಾರದಾ ದೇವಿ ವಿಗ್ರಹ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕುಪ್ವಾರಾದ ತೀತ್ವಾಲ್‌ನಲ್ಲಿ ನಿರ್ಮಿಸಲಾಗಿರುವ ಶಾರದಾ ದೇವಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸುವ ಸಲುವಾಗಿ ಕರ್ನಾಟಕದ ಶೃಂಗೇರಿಯಿಂದ ಕಳುಹಿಸಲಾದ ಶಾರದಾ ದೇವಿ ವಿಗ್ರಹವು ಶುಕ್ರವಾರ ಇಲ್ಲಿಗೆ ತಲುಪಿದೆ.

ಜಮ್ಮು ನಗರದ ಪ್ರವೇಶದ್ವಾರ ಖುಂಜ್ವಾನಿಯಲ್ಲಿ ಭಕ್ತರು ಪ್ರಾಚೀನ ಕಾಶ್ಮೀರದ ಮುಖ್ಯ ದೇವತೆಗೆ ಪುಷ್ಪವೃಷ್ಟಿ ನೆರವೇರಿಸಿ, ಭಜನೆಗಳನ್ನು ಹಾಡುವ ಮೂಲಕ ಸ್ವಾಗತಿಸಿದರು.

ಪಂಚಲೋಹಗಳಿಂದ ಮಾಡಿದ ವಿಗ್ರಹವನ್ನು ನಂತರ ಕಾಶ್ಮೀರಿ ಪಂಡಿತ್ ಸಭಾಕ್ಕೆ (ಕೆಪಿಎಸ್) ತರಲಾಯಿತು. ಅಲ್ಲಿ ನೂರಾರು ಕಾಶ್ಮೀರಿ ಪಂಡಿತರು ದೇವಿಯನ್ನು ಸ್ವಾಗತಿಸಿದರು.



ವಾದ್ಯ ಮೇಳ... ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಏಳು ದಿನಗಳವರೆಗೆ ನಡೆಯುವ ಶಿವರಾತ್ರಿ ಉತ್ಸವಕ್ಕಾಗಿ ಶುಕ್ರವಾರ ದೇವತೆಗಳನ್ನು ಕರೆತರುವಾಗ ಭಕ್ತರು ಸಾಂಪ್ರದಾಯಿಕ ಸಂಗೀತ ವಾದ್ಯಗಳನ್ನು ನುಡಿಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

‘ಪ್ರತಿಪಕ್ಷ ಒಬ್ಬ ಅಭ್ಯರ್ಥಿ ಕೇಂದ್ರೀಕರಿಸಿದರೆ ಬಿಜೆಪಿಗೆ ಸವಾಲು’

ನವದೆಹಲಿ (ಪಿಟಿಐ): ‘2024ರ ಸಾರ್ವತ್ರಿಕ ಚುನಾವಣೆಯಲ್ಲಿ ವಿರೋಧ ಪಕ್ಷಗಳು ಪ್ರತಿ ಕ್ಷೇತ್ರದಲ್ಲಿ ಒಬ್ಬ ಅಭ್ಯರ್ಥಿಯನ್ನು ಕೇಂದ್ರೀಕರಿಸಿ ಒಗ್ಗಟ್ಟು ಪ್ರದರ್ಶಿಸಿದರೆ ಆಡಳಿತಾರೂಢ ಬಿಜೆಪಿಯು ಕಠಿಣ ಸವಾಲು ಎದುರಿಸಬೇಕಾದೀತು’ ಎಂದು ಕಾಂಗ್ರೆಸ್ ಮುಖಂಡ ಶಶಿ ತರೂರ್ ಅಭಿಪ್ರಾಯಪಟ್ಟಿದ್ದಾರೆ.

‘ಹಲವು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿದ್ದರೂ 2019ರ ಮಾದರಿಯನ್ನು ಪುನರಾವರ್ತಿಸುವುದು ಬಿಜೆಪಿಗೆ ಸುಲಭವಲ್ಲ’ ಎಂದೂ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ವಿರೋಧ ಪಕ್ಷಗಳ ಮೈತ್ರಿಕೂಟವು ಕಾಂಗ್ರೆಸ್ ಅನ್ನೇ ಅವಲಂಬಿಸಬೇಕೇ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ‘ವಾಸ್ತವಿಕವಾಗಿ ಬಿಜೆಪಿಯನ್ನು ಹೊರತುಪಡಿಸಿದರೆ ರಾಷ್ಟ್ರೀಯ ಅಸ್ತಿತ್ವವನ್ನು ಹೊಂದಿರುವ ಏಕೈಕ ಪಕ್ಷ ಕಾಂಗ್ರೆಸ್ ಆಗಿದೆ. ನನ್ನ ರಾಜ್ಯ ಕೇರಳ, ತಮಿಳುನಾಡು ಸೇರಿದಂತೆ ದೇಶದ ಹಲವು ಭಾಗಗಳಲ್ಲಿ ಕಾಂಗ್ರೆಸ್ ಬಿಜೆಪಿಗಿಂತ ಬಲವಾದ ರಾಷ್ಟ್ರೀಯ ಅಸ್ತಿತ್ವವನ್ನು ಹೊಂದಿದೆ’ ಎಂದಿದ್ದಾರೆ.

ವಿರೋಧ ಪಕ್ಷಗಳು ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಒತ್ತಿ ಹೇಳಿದ ತರೂರ್ ಅವರು, ‘ಚುನಾವಣಾ ಪೂರ್ವ ಮೈತ್ರಿ ಮಾಡಿಕೊಂಡು, ಬುದ್ಧಿವಂತಿಕೆಯಿಂದ ಸ್ಥಾನಗಳನ್ನು ಆಯ್ಕೆ ಮಾಡಿ, ಪ್ರಬಲ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದರೆ ಬಿಜೆಪಿಯು ಕಠಿಣ ಪರಿಸ್ಥಿತಿ ಎದುರಿಸಬೇಕಾದೀತು’ ಎಂದಿದ್ದಾರೆ.

ಬಿಜೆಪಿ ಶಾಸಕರ ಕಚೇರಿಯಲ್ಲಿ ಕಳವು

ನವದೆಹಲಿ (ಪಿಟಿಐ): ಇಲ್ಲಿನ ವಿಶ್ವಾಸ ನಗರ ಕ್ಷೇತ್ರದ ಬಿಜೆಪಿ ಶಾಸಕ ಓಂ ಪ್ರಕಾಶ್ ಶರ್ಮಾ ಅವರ ಕಚೇರಿಗೆ ಬೀಗ ಒಡೆದು ಕಳವು ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಫೆ. 10ರಂದು ಕರ್ಕರ್ದೂಮಾ ಕೋರ್ಟ್ ಟ್ರಾಫಿಕ್ ಸಿಗ್ನಲ್ ಬಳಿಯ ಶರ್ಮಾ ಅವರ ಕಚೇರಿಯಲ್ಲಿ ಕಳ್ಳತನ ಆಗಿರುವ ಬಗ್ಗೆ ಪೊಲೀಸರಿಗೆ ಮಾಹಿತಿ ಬಂದಿತ್ತು. ಫೆ.9 ರಂದು ನಿರಂಜನ್ ಅವರು ಮಧ್ಯಾಹ್ನ 3 ಗಂಟೆಗೆ ಕಚೇರಿ ಬಾಗಿಲು ಹಾಕಿಕೊಂಡು ಹೋಗಿದ್ದರು. ಮರುದಿನ ಬೆಳಿಗ್ಗೆ ಕಚೇರಿ ಬಾಗಿಲು ತೆರೆದು ನೋಡಿದಾಗ, ಕಿಟಕಿ ಬಾಗಿಲು ಒಡೆದಿರುವುದು ಹಾಗೂ ಕೆಲ ವಸ್ತುಗಳು ಕಳ್ಳತನವಾಗಿರುವುದು ಕಂಡು ಬಂದಿದೆ ಎಂದುತಿಳಿಸಿದ್ದಾರೆ.

ಕಚೇರಿ ಸುತ್ತಮುತ್ತಲ ಪ್ರದೇಶದ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲನೆ ವೇಳೆ ಇಬ್ಬರು ವ್ಯಕ್ತಿಗಳು ಓಡಾಡುವುದು ಕಂಡು ಬಂದಿದೆ. ಆರೋಪಿಗಳನ್ನು ಬಂಧಿಸಿ ಎರಡು ಟಿ.ವಿ, ಐದು ನೀರಿನ ನಲ್ಲಿಗಳು, ನೀರಿನ ಮೋಟರ್ ಅನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಡಿಸಿಪಿ ರೋಹಿತ್ ಮೀನಾ ತಿಳಿಸಿದ್ದಾರೆ.

‘ಕಠಿಣ ಕ್ರಮದಿಂದ ಬಾಲ್ಯವಿವಾಹ ರದ್ದು’

ಗುವಾಹಟಿ (ಪಿಟಿಐ): ‘ಅಸ್ಸಾಂ ಸರ್ಕಾರವು 15 ದಿನಗಳಿಂದ ಬಾಲ್ಯವಿವಾಹದ ವಿರುದ್ಧ ಕೈಗೊಳ್ಳಲಾದ ಕಠಿಣ ಕ್ರಮಗಳು ಸಕಾರಾತ್ಮಕ ಪರಿಣಾಮ ಬೀರಿದ್ದು, ಹಲವಾರು ಕುಟುಂಬಗಳು ಈಗಾಗಲೇ ನಿಗದಿ ಮಾಡಿದ್ದ ಬಾಲ್ಯವಿವಾಹಗಳನ್ನು ರದ್ದುಗೊಳಿಸಿವೆ’ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ಶುಕ್ರವಾರ ಹೇಳಿದ್ದಾರೆ.

ಅಸ್ಸಾಂ ಸರ್ಕಾರವು ಬಾಲ್ಯ ವಿವಾಹದ ವಿರುದ್ಧ ಫೆಬ್ರುವರಿ 3ರಿಂದ ಕಾರ್ಯಾಚರಣೆಯನ್ನು ಪ್ರಾರಂಭಿಸಿತ್ತು. ಈ ಕುರಿತು ಮಂಗಳವಾರದವರೆಗೆ 4,225 ಪ್ರಕರಣಗಳನ್ನು ದಾಖಲಿಸಿ 3,031 ಮಂದಿಯನ್ನು ಬಂಧಿಸಲಾಗಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಶರ್ಮಾ, ‘ಈಗಾಗಲೇ ನಿಗದಿ ಮಾಡಲಾಗಿದ್ದ ಬಾಲ್ಯವಿವಾಹಗಳನ್ನು ಹಲವರು ರದ್ದುಪಡಿಸಿರುವುದಾಗಿ ಅಸ್ಸಾಂನ ವಿವಿಧೆಡೆಗಳಿಂದ ವರದಿಗಳು ಬಂದಿವೆ. ಇದು ನಿಜವಾಗಿಯೂ 15 ದಿನಗಳ ನಮ್ಮ ಪ್ರಯತ್ನಕ್ಕೆ ಸಂದ ಸಕಾರಾತ್ಮಕ ಫಲ’ ಎಂದು ಹೇಳಿದ್ದಾರೆ.

ಅಶ್ವತ್ಥನಾರಾಯಣ ರಾಜೀನಾಮೆಗೆ ‘ಜಾಗೃತ ಕರ್ನಾಟಕ’ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತ್ತೀಚೆಗೆ ಮಂಡ್ಯದಲ್ಲಿ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡುತ್ತಾ ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ಅವರು 'ಟಿಪ್ಪುವಿನಂತೆ ಸಿದ್ದರಾಮಯ್ಯ ಅವರನ್ನು ಹೊಡೆದು ಹಾಕಬೇಕು' ಎಂದು ಹೇಳಿದ್ದಾರೆ. ಇದು ಅತ್ಯಂತ ಖಂಡನೀಯ ಸಂಗತಿಯಾಗಿದ್ದು, ಅವರ ರಾಜೀನಾಮೆ ಪಡೆಯುವಂತೆ ವಿವಿಧ ಕ್ಷೇತ್ರಗಳ ಪ್ರಮುಖರು ‘ಜಾಗೃತ ಕರ್ನಾಟಕ’ ಸಂಘಟನೆಯ ಮೂಲಕ ಮುಖ್ಯಮಂತ್ರಿಗೆ ಬಹಿರಂಗ ಪತ್ರ ಬರೆದಿದ್ದಾರೆ.

ಕಾನೂನು ವ್ಯವಸ್ಥೆ ಕಾಪಾಡುವ ಜವಾಬ್ದಾರಿಯನ್ನೂ ನಿಭಾಯಿಸಬೇಕಿದ್ದ ಸಚಿವರೊಬ್ಬರು ಈ ರೀತಿ ಹೊಡೆದು ಹಾಕಿ ಎಂದು ತಮ್ಮ ಕಾರ್ಯಕರ್ತರನ್ನು ಪ್ರಚೋದಿಸುವಂತಹ ಹೇಳಿಕೆ ಕೊಡುವುದು ಆತಂಕಕಾರಿ. ಇದು ಶಿಕ್ಷಾರ್ಹ ಅಪರಾಧ ಎನಿಸಿಕೊಳ್ಳುತ್ತದೆ ಎಂದು ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ, ವಿಜಯಾ, ಎಸ್.ಜಿ.ಸಿದ್ದರಾಮಯ್ಯ, ರಾಜೇಂದ್ರ ಚೆನ್ನಿ, ಬಂಜಗೆರೆ ಜಯಪ್ರಕಾಶ್, ವಿಮಲಾ. ಕೆ.ಎಸ್. ಮುಂತಾದವರು ಪತ್ರಿಕಾ ಹೇಳಿಕೆ ಮೂಲಕ ಪ್ರತಿಕ್ರಿಯಿಸಿದ್ದಾರೆ.

ತನ್ನ ರಾಜಕೀಯ ವಿರೋಧಿಗಳನ್ನು, ಸಿದ್ಧಾಂತವನ್ನು ವಿರೋಧಿಸುವವರನ್ನು ದೇಶದ್ರೋಹಿ ಎನ್ನುತ್ತಿದ್ದ ಬಿಜೆಪಿಗೆ ಅದರಿಂದ ರಾಜಕೀಯ ಲಾಭ ಇಲ್ಲ ಎಂದು ಖಾತರಿಯಾದಂತಿದೆ. ಹೀಗಾಗಿ ಇವರ ವಿಕೃತಿ ಮುಂದುವರಿದು ‘ಕೊಚ್ಚಿ, ಕೊಲ್ಲಿ’ ಅಂತ ಪ್ರಚೋದಿಸುವ ಹಂತಕ್ಕೆ ತಲುಪಿದೆ. ಇದುವರೆಗೂ ಸಮಾಜದ ಪುಂಡು ಗುಂಪುಗಳು ಮಾತನಾಡುವ ಇಂತಹ ದ್ವೇಷಪೂರಿತ ಮಾತುಗಳನ್ನು ಜನರಿಂದ ಆಯ್ಕೆಯಾದ ರಾಜಕಾರಣಿಗಳು ಮಾತನಾಡತೊಡಗಿರುವುದು ದುರಂತ ಎಂದಿದ್ದಾರೆ.

ಆಡಳಿತ ಪಕ್ಷದ ಮುಖಂಡರೊಬ್ಬರು ವಿರೋಧ ಪಕ್ಷದ ಮುಖಂಡರನ್ನು ಹೊಡೆದು ಕೊಲ್ಲಿ ಎಂದು ಹೇಳಿದ್ದು ರಾಜ್ಯದ ಇತಿಹಾಸದಲ್ಲಿ ಇದೇ ಮೊದಲು. ಅಶ್ವತ್ಥನಾರಾಯಣ ವಿರುದ್ಧ ಕೇಸ್ ದಾಖಲಿಸಬೇಕು. ಅವರ ಹೇಳಿಕೆ ಕುರಿತು ವಿಚಾರಣೆ ನಡೆಯಬೇಕು ಹಾಗೂ ಅವರು ಈ ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಇಲ್ಲವೇ ತಾವು ಪಡೆಯಬೇಕು ಎಂದು ತಮ್ಮಲ್ಲಿ ಆಗ್ರಹಿಸುತ್ತಿದ್ದೇವೆ ಎಂದೂ ಬರೆದಿದ್ದಾರೆ.

ಹೇಳಿಕೆ ಖಂಡಿಸಿ 20ರಂದು ಪ್ರತಿಭಟನೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆ ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥ ನಾರಾಯಣ ನೀಡಿರುವ ಹೇಳಿಕೆಯನ್ನು ಕರ್ನಾಟಕ ಪ್ರದೇಶ ಕುರುಬರ ಸಂಘ ಮತ್ತು ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟ ಖಂಡಿಸಿದೆ.

ಇದೇ 20ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಮಾಡಲಾಗುವುದು ಎಂದು ತಿಳಿಸಿದೆ.

‘ಫೆ. 13ರಂದು ಮಂಡ್ಯ ಜಿಲ್ಲೆಯ ಸಾತನೂರು ಗ್ರಾಮದಲ್ಲಿ ನಡೆದ ಬಿಜೆಪಿ ಮಹಾಶಕ್ತಿ ಕೇಂದ್ರದ ಸಭೆಯಲ್ಲಿ ಟಿಪ್ಪುವಿನಂತೆ ಸಿದ್ದರಾಮಯ್ಯ ಅವರನ್ನೂ ಹೊಡೆದುಹಾಕಬೇಕು ಎಂದು ಪ್ರಚೋದನಕಾರಿ ಹೇಳಿಕೆ ನೀಡಿದ ಡಾ.ಸಿ.ಎನ್. ಅಶ್ವತ್ಥನಾರಾಯಣ ಸಚಿವ ಸ್ಥಾನಕ್ಕೆ ರಾಜಿನಾಮೆ ನೀಡಬೇಕು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಡಿ. ವೆಂಕಟೇಶಮೂರ್ತಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

‘ಸಚಿವರು ಕೂಡಲೇ ಸಾರ್ವಜನಿಕವಾಗಿ ಸಿದ್ದರಾಮಯ್ಯ ಅವರ ಬಳಿ ಕ್ಷಮೆ ಕೇಳಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಖಜಾಂಚಿ ದೇವರಾಜ ಸುಬ್ಬರಾಯಪ್ಪ, ಕುರುಬರ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಕೆ.ಆರ್. ಪ್ರಭಾವತಿ, ಕರ್ನಾಟಕ ರಾಜ್ಯ ಹಿಂದುಳಿದ ಜಾತಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಎ.ಆರ್. ವೆಂಕಟರಾಮಯ್ಯ ಇದ್ದರು.

‘ಮೀಸಲಾತಿ: ಜನತಾ ನ್ಯಾಯಾಲಯದಲ್ಲಿ ಹೋರಾಟ’

ಬೆಂಗಳೂರು: ಪಂಚಮಸಾಲಿ ಸಮುದಾಯಕ್ಕೆ ಮಾರ್ಚ್ 15ರ ಒಳಗಾಗಿ ಪ್ರವರ್ಗ 2‘ಎ’ ಮೀಸಲಾತಿ ಕಲ್ಪಿಸದಿದ್ದರೆ ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಲ್ಲೂ ಹೋರಾಟ ನಡೆಸಲು ಪಂಚಮಸಾಲಿ ಮುಖಂಡರು ನಿರ್ಧರಿಸಿದ್ದಾರೆ.

ಮುಂದಿನ ಹೋರಾಟದ ಕುರಿತು ಚರ್ಚಿಸಲು ನಡೆದ ರಾಜ್ಯ ಕಾರ್ಯಕಾರಿಣಿ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ನೇತೃತ್ವದಲ್ಲಿ ಮೀಸಲಾತಿ ಸೌಲಭ್ಯಕ್ಕೆ ಆಗ್ರಹಿಸಿ ಧರಣಿ ನಡೆಯುತ್ತಿದೆ. ಶನಿವಾರ ರಾತ್ರಿ 8ರಿಂದ ಸ್ವಾತಂತ್ರ್ಯ ಉದ್ಯಾನದಲ್ಲೇ ಶಿವರಾತ್ರಿ ಜಾಗರಣೆ ನಡೆಸಲು ತೀರ್ಮಾನಿಸಲಾಗಿದೆ

‘ಗಡುವಿನ ಒಳಗಾಗಿ ಮೀಸಲಾತಿ ಕಲ್ಪಿಸಬೇಕು. ಇಲ್ಲದಿದ್ದರೆ ಧರಣಿ ಅಂತ್ಯಗೊಳಿಸಿ, ಎಲ್ಲ ವಿಧಾನಸಭೆ ಕ್ಷೇತ್ರಗಳಲ್ಲಿ ಜನತಾ ನ್ಯಾಯಾಲಯದ ಎದುರು ಈ ವಿಷಯ ಕೊಂಡೊಯ್ಯುತ್ತೇವೆ. ಮೀಸಲಾತಿ ನೀಡದೇ ಎರಡು ವರ್ಷದಿಂದ ಸರ್ಕಾರವು ವಿಳಂಬ ಧೋರಣೆ ಅನುಸರಿಸುತ್ತಿರುವುದನ್ನು ಜನರಿಗೆ ಮನವರಿಕೆ ಮಾಡಲಾಗುವುದು’ ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ತಿಳಿಸಿದ್ದಾರೆ.

ಶಾಸಕ ಬಸನಗೌಡ ಪಾಟೀಲ ಯತ್ನಾಳ, ಸಿದ್ದು ಸವದಿ ಹಾಗೂ ವಿಜಯಾನಂದ ಕಾಶಪ್ಪನವರ್, ಮಹೇಶ್ ಕುಮಟಳ್ಳಿ, ಎಂ.ವೈ.ಪಾಟೀಲ್, ಕಾಂಗ್ರೆಸ್ ಮುಖಂಡ ವಿನಯ ಕುಲಕರ್ಣಿ ಹಾಜರಿದ್ದರು.

ರಮೇಶ್ ಕುಮಾರ್‌ಗೆ ಪತ್ನಿ ವಿಯೋಗ



ಕೋಲಾರ: ಶ್ರೀನಿವಾಸಪುರ ಕ್ಷೇತ್ರದ ಶಾಸಕ ಕೆ.ಆರ್. ರಮೇಶ್ ಕುಮಾರ್ ಅವರ ಪತ್ನಿ ವಿಜಯಮ್ಮ (69) ಅನಾರೋಗ್ಯದಿಂದ ಶುಕ್ರವಾರ ನಿಧನರಾದರು. ಅವರಿಗೆ ಪತಿ, ಪುತ್ರ ಹಾಗೂ ಪುತ್ರಿ ಇದ್ದಾರೆ. ಶ್ರೀನಿವಾಸಪುರ ತಾಲ್ಲೂಕಿನ ಅಡ್ಡಗಲ್ ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಿತು. ಕೇಂದ್ರ ಮಾಜಿ ಸಚಿವ ಕೆ.ಎಚ್.ಮುನಿಯಪ್ಪ, ಶಾಸಕ ಕೃಷ್ಣಬೈರೇಗೌಡ ಸೇರಿದಂತೆ ಹಲವರು ಅಂತಿಮ ದರ್ಶನ ಪಡೆದರು.

ವಿಜಯಮ್ಮ ಅವರನ್ನು 2 ದಿನಗಳ ಹಿಂದೆ ನಗರದ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಬೊಮ್ಮಾಯಿ ತೇರು: ಭರವಸೆ ಜೋರು

ಒಂದನೇ ಪುಟದಿಂದ...

ಮಹಿಳೆಯರು ಮತ್ತು ಮಕ್ಕಳನ್ನು ತಲುಪುವ ಮೂಲಕ ಮತ ಬುಟ್ಟಿಯನ್ನು ಭದ್ರಗೊಳಿಸುವ ಪ್ರಯತ್ನ ಬೊಮ್ಮಾಯಿ ಅವರು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಎದ್ದು ಕಾಣುತ್ತಿದೆ.

ರೈತರಿಗೆ ನೀಡುವ ಬಡ್ಡಿರಹಿತ ಅಲ್ಪಾವಧಿ ಸಾಲದ ಮಿತಿ ಹೆಚ್ಚಳ, ರಸಗೊಬ್ಬರ, ಬಿತ್ತನೆ ಬೀಜ, ಔಷಧಿ ಖರೀದಿಗೆ ಸಹಾಯಧನ, ಸಣ್ಣ ಮತ್ತು ಅತಿಸಣ್ಣ ರೈತರ ಕುಟುಂಬಗಳಿಗೆ ವಿಮಾ ಭದ್ರತೆಯ ಯೋಜನೆಗಳ ಮೂಲಕ ರೈತಾಪಿ ಮತಗಳನ್ನು ಖಾತರಿಪಡಿಸಿಕೊಳ್ಳುವ ಯತ್ನ ಮಾಡಿದ್ದಾರೆ.

ರಾಜ್ಯದ 5.05 ಕೋಟಿ ಮತದಾರರಲ್ಲಿ 2.50 ಕೋಟಿಗೂ ಹೆಚ್ಚು ಮಹಿಳೆಯರಿದ್ದಾರೆ. ಅವರನ್ನು ನೇರವಾಗಿ ಗುರಿಯಾಗಿಸಿಕೊಂಡು ಹಲವು ಹೊಸ ಕಾರ್ಯಕ್ರಮಗಳನ್ನು ಘೋಷಿಸಲಾಗಿದೆ. ಅದರಲ್ಲೂ ವಿಶೇಷವಾಗಿ ದುಡಿಯುವ ವರ್ಗದ ಮಹಿಳೆಯರಿಗೆ ಬಲತುಂಬುವ ಕಾರ್ಯಕ್ರಮಗಳನ್ನು ಪ್ರಕಟಿಸುವ ಮೂಲಕ, ಅವರ ಬೆಂಬಲವನ್ನು ಗಳಿಸಿಕೊಳ್ಳುವತ್ತ ಹೆಜ್ಜೆ ಇರಿಸಿದ್ದಾರೆ.

‘ಗೃಹಿಣಿ ಶಕ್ತಿ’, ‘ಶ್ರಮ ಶಕ್ತಿ’, ಸಂಘಟಿತ ವಲಯದ ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್, ಮಹಿಳೆಯರಲ್ಲಿನ ಅಪೌಷ್ಟಿಕತೆ ಮತ್ತು ರಕ್ತಹೀನತೆ ತಡೆಯುವ ‘ಆರೋಗ್ಯ ಪುಷ್ಟಿ’ ಯೋಜನೆ, ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ಸ್ವಯಂ ನಿವೃತ್ತಿ ಸಂದರ್ಭದಲ್ಲಿ ‘ಗ್ರಾಚ್ಯುಟಿ’ ಸೇರಿದಂತೆ ಹಲವು ಜನಪ್ರಿಯ ಯೋಜನೆಗಳೊಂದಿಗೆ ಮಹಿಳೆಯರನ್ನು ಮನವೊಲಿಸುವ ಪ್ರಯತ್ನ ಬಜೆಟ್‌ನಲ್ಲಿದೆ.

ಯುವಕರೇ ಗುರಿ: ಶಾಲಾ– ಕಾಲೇಜುಗಳ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುವ ‘ಮುಖ್ಯಮಂತ್ರಿ ವಿದ್ಯಾಶಕ್ತಿ’, ಶಾಲಾ ಶಿಕ್ಷಣದ ಹಂತದಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ವೃತ್ತಿಪರ ಶಿಕ್ಷಣ, ವಿದ್ಯಾರ್ಥಿಗಳಿಗಾಗಿಯೇ ಹೊಸ ಬಸ್ ಸಂಚಾರದಂತಹ ಯೋಜನೆಗಳ ಮೂಲಕ ಹೊಸ ಮತದಾರರನ್ನು ಬಿಜೆಪಿಯತ್ತ ಸೆಳೆಯುವ ತಂತ್ರಗಾರಿಕೆಯನ್ನು ಮಾಡಿದ್ದಾರೆ.

ಹೆಚ್ಚಿನ ಶಿಕ್ಷಣ ಪಡೆಯದ ಯುವಜನರಿಗೆ ವೃತ್ತಿಪರ ತರಬೇತಿ ನೀಡುವ ‘ಬದುಕುವ ದಾರಿ’, ನಿರುದ್ಯೋಗಿ ಯುವಕರಿಗೆ ಒಂದು ಬಾರಿಯ ಆರ್ಥಿಕ ನೆರವು ನೀಡುವ ‘ಯುವಸ್ನೇಹಿ’ ಯೋಜನೆಗಳ ಗುರಿಯೂ ಹೊಸ ಮತದಾರರೇ ಆಗಿದ್ದಾರೆ. ನಿರುದ್ಯೋಗದ ಸಮಸ್ಯೆ ಪರಿಹಾರದ ಭರವಸೆ ಮೂಡಿಸಿ ಯುವಕರ ಮತ ಖಾತರಿಪಡಿಸಿಕೊಳ್ಳಲು ರಾಜ್ಯ ಸರ್ಕಾರದಲ್ಲಿ ಖಾಲಿ ಇರುವ ಒಂದು ಲಕ್ಷ ಹುದ್ದೆಗಳನ್ನು ಭರ್ತಿ ಮಾಡುವ ಘೋಷಣೆ ಮಾಡಿದ್ದಾರೆ.

ಅಭಿವೃದ್ಧಿಗೂ ಒತ್ತು: ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಿಗೆ ವಿಶೇಷ ಅನುದಾನ, ಕಲ್ಯಾಣ ಕರ್ನಾಟಕ ಅಭಿವೃದ್ಧಿ ಅನುದಾನದ ಹೆಚ್ಚಳ, ರಸ್ತೆ, ಸೇತುವೆ, ರೈಲ್ವೆ ಯೋಜನೆಗಳಿಗೆ ಹೆಚ್ಚಿನ ಹಣ ಮೀಸಲಿಡುವ ಮೂಲಕ ಬೊಮ್ಮಾಯಿ ಅವರು, ಮೂಲಸೌಕರ್ಯ ಅಭಿವೃದ್ಧಿಗೂ ಬಜೆಟ್‌ನಲ್ಲಿ ಆದ್ಯತೆ ನೀಡಿದ್ದಾರೆ.

ನೀರಾವರಿ ಕ್ಷೇತ್ರಕ್ಕೆ ₹ 25,000 ಕೋಟಿ ಒದಗಿಸುವುದಾಗಿ ಘೋಷಿಸಲಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆ–3ನೇ ಹಂತಕ್ಕೆ ₹ 5,300 ಕೋಟಿ ಮತ್ತು ಕಳಸಾ– ಬಂಡೂರಿ ಯೋಜನೆಗೆ ₹ 1,000 ಕೋಟಿ ಒದಗಿಸಿದ್ದಾರೆ. ಉಳಿದಂತೆ ನೀರಾವರಿ ಯೋಜನೆಗಳಲ್ಲಿನ ವೆಚ್ಚದ ಕುರಿತು ಬಜೆಟ್‌ನಲ್ಲಿ ಸ್ಪಷ್ಟತೆಯೇ ಇಲ್ಲ.

ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯಮಟ್ಟದಲ್ಲಿ ಅತ್ಯಾಧುನಿಕ ಪ್ರಯೋಗಾಲಯಗಳನ್ನು ನಿರ್ಮಿಸುವ ಮೂಲಕ ರಾಜ್ಯದ ಆರೋಗ್ಯ ವ್ಯವಸ್ಥೆಗೆ ಹೊಸ ಸ್ಪರ್ಶ ನೀಡುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಸುಸಜ್ಜಿತ ಆಸ್ಪತ್ರೆಗಳಿಲ್ಲದ ತಾಲ್ಲೂಕು ಕೇಂದ್ರಗಳು ಮತ್ತು ಪ್ರಮುಖ ಪಟ್ಟಣಗಳಲ್ಲಿ ಸರ್ಕಾರಿ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸುವ ಮೂಲಕ ಅಂತಹ ಪ್ರದೇಶಗಳ ಜನರ ಬಹುದಿನಗಳ ಕೂಗಿಗೆ ಸ್ಪಂದಿಸುವ ಕೆಲಸವನ್ನು ಮಾಡಿದ್ದಾರೆ.

ಬಜೆಟ್ ಗಾತ್ರಕ್ಕೆ ಸಮನಾಗಿ ಪರಿಶಿಷ್ಟ ಜಾತಿ ಉಪ ಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ ಅನುದಾನದಲ್ಲಿ ಹೆಚ್ಚಳವಾಗಿಲ್ಲ. ಅಲೆಮಾರಿಗಳು, ಅರೆ ಅಲೆಮಾರಿಗಳಿಗೆ ಬಜೆಟ್‌ನಲ್ಲಿ ಪ್ರಾತಿನಿಧ್ಯವೇ ದೊರಕಿಲ್ಲ.

ತೆರಿಗೆ ಹೊರೆ ಇಲ್ಲ

ಈ ಬಜೆಟ್‌ನಲ್ಲಿ ರಾಜ್ಯದ ಜನರ ಮೇಲೆ ಯಾವುದೇ ತೆರಿಗೆ ಭಾರವನ್ನು ಹೊರಿಸಿಲ್ಲ. ಅಬಕಾರಿ, ನೋಂದಣಿ ಮತ್ತು ಮುದ್ರಾಂಕ, ಮೋಟಾರು ವಾಹನಗಳ ತೆರಿಗೆಗಳನ್ನು ಯಥಾಸ್ಥಿತಿಯಲ್ಲೇ ಮುಂದುವರಿಸುವ ಘೋಷಣೆಯನ್ನು ಬೊಮ್ಮಾಯಿ ಮಾಡಿದ್ದಾರೆ.

₹ 15,000 ಕ್ಕಿಂತ ಹೆಚ್ಚು ವೇತನ ಪಡೆಯುವವರು ವೃತ್ತಿ ತೆರಿಗೆ ಪಾವತಿಸಬೇಕಿತ್ತು. ಈ ಮಿತಿಯನ್ನು ₹ 25,000ಕ್ಕೆ ಹೆಚ್ಚಿಸಲಾಗಿದೆ. ಇದರಿಂದಾಗಿ ₹ 15,000 ದಿಂದ ₹ 25,000 ದವರೆಗಿನ ವೇತನ ಪಡೆಯುವವರು ವೃತ್ತಿ ತೆರಿಗೆ ಪಾವತಿಯಿಂದ ಹೊರಗುಳಿಯಲಿದ್ದಾರೆ.

ಅನುದಾನ ಘೋಷಿಸಿದ್ದರೂ ನಿಗೂಢ

ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ವಿವಿಧ ಜಾತಿವಾರು ಮಠಗಳು, ಸಂಸ್ಥೆಗಳಿಗೆ ಮುಖ್ಯಮಂತ್ರಿಯವರು ಬಜೆಟ್‌ನಲ್ಲಿ ₹ 375 ಕೋಟಿ ಅನುದಾನ ಪ್ರಕಟಿಸಿದ್ದಾರೆ. ದೇವಸ್ಥಾನಗಳು, ಮಠ– ಮಂದಿರಗಳಿಗೆ ಎರಡು ವರ್ಷಗಳಲ್ಲಿ ₹ 1,000 ಕೋಟಿ ಒದಗಿಸುವುದಾಗಿಯೂ ಘೋಷಿಸಿದ್ದಾರೆ. ಆದರೆ, ಈ ಅನುದಾನದ ಫಲಾನುಭವಿಗಳ ವಿವರನ್ನು ನಿಗೂಢವಾಗಿರಿಸಿದ್ದಾರೆ.

ಕಿವಿಗೆ ಹೂವು: ವಿಚಲಿತರಾದ ಸಿಎಂ

ಒಂದನೇ ಪುಟದಿಂದ...

ಬಜೆಟ್ ಪುಸ್ತಕ ಓದುವುದನ್ನು ಬಿಟ್ಟ ಬೊಮ್ಮಾಯಿ, ‘ನೀವು ಕಿವಿಗೆ ಹೂವು ಮುಡಿದುಕೊಂಡಾದರೂ ಬನ್ನಿ, ಏನಾದರೂ ಮಾಡಿ. ನೀವು (ಕಾಂಗ್ರೆಸ್‌ನವರು) ಅಲ್ಲೇ (ಪ್ರತಿಪಕ್ಷದ ಸಾಲಿನಲ್ಲಿ) ಇರುತ್ತೀರಿ. ನಾವು (ಬಿಜೆಪಿಯವರು) ಇಲ್ಲೇ (ಆಡಳಿತ ಪಕ್ಷದ ಸಾಲಿನಲ್ಲಿ) ಇರುತ್ತೀವಿ’ ಎಂದರು.

‘ಅವರು ಹೇಳುವುದೆಲ್ಲಾ ಬಜೆಟ್ ಪುಸ್ತಕದಲ್ಲಿದೆಯಾ’ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಪ್ರಶ್ನಿಸಿದ ಸಿದ್ದರಾಮಯ್ಯ, ‘ಇಡೀ ರಾಜ್ಯದ ಜನರಿಗೆ ಹೂವು ಇಡಲು ಹೊರಟಿದ್ದೀರಿ. ಏಳು ಕೋಟಿ ಜನರಿಗೆ ಮೋಸ ಮಾಡುತ್ತಿದ್ದೀರಿ. ಅದಕ್ಕಾಗಿ ನಾವು ಹೂವು ಮುಡಿದು ಬಂದಿದ್ದೇವೆ’ ಎಂದರು.

‘ಎಲ್ಲದಕ್ಕೂ ಸಾಕ್ಷ್ಯ ಇದೆ’ ಎಂದು ಮುಖ್ಯಮಂತ್ರಿ ಹೇಳಿದರು. ಬಿಜೆಪಿ ಮತ್ತು ಕಾಂಗ್ರೆಸ್ ಸದಸ್ಯರ ವಾಕ್ಸಮರದಿಂದ ಗದ್ದಲದ ವಾತಾವರಣ ನಿರ್ಮಾಣವಾಯಿತು.

ಮಧ್ಯ ಪ್ರವೇಶಿಸಿದ ಸ್ಪೀಕರ್, ‘ನೀವೆಲ್ಲ (ಬಿಜೆಪಿಯವರು) ಸಂತೋಷಪಡಬೇಕು. ಕೇಸರಿ ಬಣ್ಣ ನಮ್ದೇ ಅಂತ ಇಷ್ಟು ದಿನ ಹೇಳುತ್ತಿದ್ದೀರಿ. ಈಗ ಅವರು (ಕಾಂಗ್ರೆಸ್‌ನವರು) ಕೇಸರಿ ಬಣ್ಣದ ಹೂವು ಮುಡಿದು ಬಂದಿದ್ದಾರೆ ಅಲ್ಲವೆ’ ಎಂದು ಕೇಳಿದರು.

‘ಕೇಸರಿ ಬಣ್ಣ ಯಾರಿಗೂ ಸೇರಿದಲ್ಲ’ ಎಂದು ಸಿದ್ದರಾಮಯ್ಯ ಹೇಳಿದರು.

ಕೆಲಕಾಲದ ಗದ್ದಲದ ಬಳಿಕ ಪುನಃ ಬಜೆಟ್ ಪ್ರತಿ ಕೈಗೆತ್ತಿಕೊಂಡ ಮುಖ್ಯಮಂತ್ರಿ ಓದು ಮುಂದುವರಿಸಿದರು.



ನಳಪಾಕ

ಬಿಸಿಲ ಧಗೆಗೆ ವಿಧವಿಧ ಪಾನೀಯ

ಚಳಿಗಾಲ ಮುಗಿದು ಬೇಸಿಗೆ ಆರಂಭವಾಗುತ್ತಿದೆ. ಬಿಸಿಲಿನ ದಾಹಕ್ಕೆ ದೇಹ ಬಳಲುತ್ತದೆ. ಬಳಲಿಕೆ ಹೋಗಲಾಡಿಸಲು ಸಾಮಾನ್ಯವಾಗಿ ಎಲ್ಲರೂ ತಂಪು ಪಾನೀಯಗಳಿಗೆ ಮೊರೆ ಹೋಗುತ್ತಾರೆ. ಈ ಹಿನ್ನೆಲೆಯಲ್ಲಿ ಮನೆಯಲ್ಲೇ ತಯಾರಿಸಿಕೊಳ್ಳ ಬಹುದಾದ, ಆರೋಗ್ಯಪೂರ್ಣ ವಿಶೇಷ ತಂಪು ಪಾನೀಯಗಳ ರೆಸಿಪಿಗಳನ್ನು **ಪುತ್ತೂರಿನ ಸೌಗಂಧಿಕ ಚಂದ್ರು** ಅವರು ಇಲ್ಲಿ ಪರಿಚಯಿಸಿದ್ದಾರೆ.

ಚಿತ್ರಗಳು: ಲೇಖಕರವು



ಗಾಂಧಾರಿ-ಲೆಮನ್ ಜ್ಯೂಸ್

ಬೇಕಾಗುವ ಸಾಮಗ್ರಿಗಳು
ಗಾಂಧಾರಿ ಮೆಣಸು - 50 ಗ್ರಾಂ, ಸಕ್ಕರೆ- ಅರ್ಧ ಕೆಜಿ, ನೀರು – ಎರಡು ಲೀಟರ್.

ಮಾಡುವ ವಿಧಾನ: ಸಕ್ಕರೆಯನ್ನು ಎರಡು ಲೀಟರ್ ನೀರು ಬೆರೆಸಿ ಕುದಿಸಿ ಸಕ್ಕರೆಯ ದ್ರಾವಣ ಮಾಡಿಕೊಳ್ಳಿ. ದ್ರಾವಣ ಸಿದ್ಧವಾದ ಬಳಿಕ, 50 ಗ್ರಾಂ ಗಾಂಧಾರಿ ಮೆಣಸಿನಕಾಯಿಯನ್ನು ಒಮ್ಮೆ ಮಿಕ್ಸಿಯಲ್ಲಿ ಹಾಕಿ ರುಬ್ಬಿಕೊಳ್ಳಿ (ಮಿಕ್ಸಿ ಒಂದೆರಡು ಸುತ್ತು ತಿರುಗಿದರೆ ಸಾಕು).

ನಂತರ ಆ ಕುದಿಯುತ್ತಿರುವ ಸಕ್ಕರೆ ದ್ರಾವಣಕ್ಕೆ ಪೇಸ್ಟ್ ಬೆರೆಸಿ. ಚೆನ್ನಾಗಿ ಕುದಿಸಿ.

ಸುಮಾರು ಐದು ನಿಮಿಷ ಕುದಿಸಿದ ನಂತರ ತಣ್ಣಗಾಗಲು ಬಿಡಿ. ಸಂಪೂರ್ಣ ತಣ್ಣಗಾದ ಬಳಿಕ, ಈ ದ್ರಾವಣದಿಂದ ಐವತ್ತು ಮಿಲಿ ಲೀಟರ್‌ನಷ್ಟನ್ನು ತೆಗೆದುಕೊಳ್ಳಿ (ಇದು ಒಂದು ಗ್ಲಾಸ್ ಜ್ಯೂಸ್ ತಯಾರಿಸಲು ಸಾಕು). ಅದಕ್ಕೆ ಒಂದು ಚಿಟಿಕೆ ಉಪ್ಪನ್ನು ಹಾಕಿ ಒಂದು ಲಿಂಬೆ ಹಣ್ಣಿನ ರಸವನ್ನು ಬೆರೆಸಿ.

ನಂತರ ಬೇಕಾಗುವಷ್ಟು ನೀರನ್ನು ಹಾಕಿಕೊಳ್ಳಿ ಅಥವಾ ಸೋಡವನ್ನು ಬೆರೆಸಬಹುದು ಅದು ನಿಮ್ಮ ಆಯ್ಕೆ. ಈಗ ಸ್ಪೈಸಿ ಗಾಂಧಾರಿ ಲೆಮನ್ ಸೋಡಾ ರಾಕೆಟ್ ಜ್ಯೂಸ್ ರೆಡಿ.



ದಾಸವಾಳದ ಜ್ಯೂಸ್

ಬೇಕಾಗುವ ಸಾಮಗ್ರಿಗಳು
ದಾಸವಾಳ – 25, ತುಳಸಿ –10 (ಚಿಗುರು) ತುದಿ, ದೊಡ್ಡಪತ್ರೆ – 5 ಎಲೆಗಳು, ಕಾಮಕಸ್ತೂರಿ – 5 (ಚಿಗುರು) ತುದಿ, ವೀಳ್ಯದೆಲೆ – 5 (ಚಿಗುರು) ತುದಿ, ಒಣಶುಂಠಿ 10 ಗ್ರಾಂ, ಕಾಳುಮೆಣಸು– 50 ಗ್ರಾಂ, ಬೆಲ್ಲ –ಅರ್ಧ ಕೆಜಿ ನಿಂಬೆ ಹಣ್ಣು – ರುಚಿಗೆ ತಕ್ಕಷ್ಟು, ಜೇನು ತುಪ್ಪ – 100 ಮಿಲಿ ಲೀಟರ್, ಕಚೂರ ಗಡ್ಡೆ – 5 ಗ್ರಾಂ

ಮಾಡುವ ವಿಧಾನ: ಎರಡು ಲೀಟರ್ ನೀರಿಗೆ, ತುಳಸಿ, ದೊಡ್ಡಪತ್ರೆ, ಕಾಮಕಸ್ತೂರಿ ಚಿಗುರು, ಕಾಳುಮೆಣಸು, ಒಣಶುಂಠಿ ಹಾಕಿ ಕಾಲುಗಂಟೆ ಕುದಿಸಿ. ಕುದಿಯುವ ನೀರಿಗೆ ದಾಸವಾಳ ಹಾಕಿ. ಜೊತೆಗೆ ಬೆಲ್ಲ ಹಾಕಿ ಕರಗಿಸಿ. ನಂತರ ತಣ್ಣಾಗಿಸಿ. ತಂಪಾದ ನಂತರ, ಆ ಮಿಶ್ರಣಕ್ಕೆ ಸ್ವಲ್ಪ ಜೇನು ತುಪ್ಪ ಬೆರೆಸಿ. ಈಗ ದಾಸವಾಳ ಜ್ಯೂಸ್ ಟಾನಿಕ್ ಸಿದ್ಧವಾಯಿತು. ಇದನ್ನು ನಿಮಗೆ ಎಷ್ಟು ಬೇಕೋ ಅಷ್ಟು ನೀರಿಗೆ ಬೆರೆಸಿಕೊಂಡು, ಮೇಲೆ ಸ್ವಲ್ಪ ಜೇನುತುಪ್ಪ, ರುಚಿಗೆ ತಕ್ಕಷ್ಟು ನಿಂಬೆಹಣ್ಣಿನ ರಸ ಬೆರೆಸಿಕೊಂಡರೆ ಆರೋಗ್ಯಪೂರ್ಣ ದಾಸವಾಳದ ತಂಪು ಪಾನೀಯ ಕುಡಿಯಲು ಸಿದ್ಧ.

ಉಪಯೋಗ : ಬಿಸಿಲಿನ ದಾಹ ನೀಗಿಸುವ ತಂಪು ಪಾನೀಯ ಇದು. ಅಷ್ಟೇ ಅಲ್ಲ, ಶೀತ, ತಲೆನೋವು ಮತ್ತು ಗಂಟಲ ಕೆರೆತ ನಿವಾರಣೆಗೆ ಔಷಧಿಯೂ ಹೌದು. ನಿಂಬೆಯ ರಸ ಬೆರೆಸುವುದರಿಂದ, ಬಿರುಬಿಸಿಲಿದ್ದಾಗಲೂ ಕುಡಿಯಲು ಬಹಳ ಹಿತವೆನಿಸುತ್ತದೆ. ಯಾವುದೇ ರಾಸಾಯನಿಕ ಬೆರೆಸದೆ ಇರುವುದರಿಂದ ಫ್ರಿಜ್‌ನೊಳಗೆ ಕೆಲ ದಿನಗಳವರೆಗೆ ಕೆಡದಂತೆ ಇಡಬಹುದು.

ಫ್ಯಾಷನ್ ಫ್ರೂಟ್ ಜ್ಯೂಸ್

ಬೇಕಾಗುವ ಸಾಮಗ್ರಿಗಳು
ಫ್ಯಾಷನ್‌ಫ್ರೂಟ್ – 50 ಹಣ್ಣುಗಳು. ನೀರು– 2 ಲೀಟರ್, ಸಕ್ಕರೆ – ಅರ್ಧ ಕೆ.ಜಿ

ಮಾಡುವ ವಿಧಾನ: ಎಲ್ಲ ಫ್ಯಾಷನ್ ಫ್ರೂಟ್ ಹಣ್ಣುಗಳನ್ನು ಕತ್ತರಿಸಿ, ಅದರಿಂದ ರಸವನ್ನು ತೆಗೆದು ಒಂದು ಕಡೆ ಸಂಗ್ರಹಿಸಿಟ್ಟುಕೊಳ್ಳಬೇಕು. ಇದಕ್ಕೂ ಮೊದಲು 2 ಲೀಟರ್ ನೀರಿನಲ್ಲಿ ಅರ್ಧ ಕೆ.ಜಿ ಸಕ್ಕರೆಯನ್ನು ಸೇರಿಸಿ, ಕುದಿಸಿ ದ್ರಾವಣ ಸಿದ್ಧ ಮಾಡಿಟ್ಟುಕೊಳ್ಳಬೇಕು. ಈ ದ್ರಾವಣಕ್ಕೆ ಮೊದಲೇ ತಯಾರಿಸಿಟ್ಟುಕೊಂಡ ಹಣ್ಣಿನ ರಸವನ್ನು ಬೆರೆಸಬೇಕು. ಮತ್ತೆ ಈ ದ್ರಾವಣವನ್ನು ಸುಮಾರು ಐದು ನಿಮಿಷ ಕುದಿಸಬೇಕು.

ಒಂದು ವಿಷಯ ಗಮನಿಸಬೇಕು; ಫ್ಯಾಷನ್‌ಫ್ರೂಟ್‌ನಲ್ಲಿ ಸಕ್ಕರೆ ಪ್ರಮಾಣ ಇರುವುದರಿಂದ, ಸಕ್ಕರೆ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳಬಹುದು.

ನಂತರ ತಣ್ಣಗಾಗಿಸಬೇಕು. ದ್ರಾವಣ ಸಂಪೂರ್ಣ ತಣ್ಣಗಾದ ನಂತರ ಗಾಜಿನ ಶೀಶೆಗಳಲ್ಲಿ ತುಂಬಿಸಿಟ್ಟುಕೊಳ್ಳಬೇಕು. ಫ್ಯಾಷನ್‌ಫ್ರೂಟ್ ಜ್ಯೂಸ್ ಕುಡಿಯಬೇಕೆನಿಸಿದಾಗ, ಈ ಶೀಶೆಯಲ್ಲಿರುವ ದ್ರಾವಣವನ್ನು 50 ಎಂಎಲ್ ತೆಗೆದುಕೊಂಡು, ಒಂದು ಲೋಟ ನೀರಿಗೆ ಬೆರೆಸಿಕೊಂಡು, ಅದಕ್ಕೆ ಅರ್ಧ ನಿಂಬೆಹಣ್ಣಿನ ರಸವನ್ನು ಸೇರಿಸಿ ಜ್ಯೂಸ್ ಮಾಡಿಕೊಂಡು ಸೇವಿಸಬಹುದು. ಸೋಡಾ ಅಭ್ಯಾಸವಿರುವವರು, ನೀರಿನ ಬದಲು ಸೋಡಾ ಬೆರೆಸಿಕೊಳ್ಳಬಹುದು. ಬಿಸಿಲಿನ ಬೇಗೆಯ ಸಮಯದಲ್ಲಿ ಇದು ಉತ್ತಮ ಪಾನೀಯ.

ಇದಕ್ಕೆ ಯಾವುದೇ ರಾಸಾಯನಿಕಗಳನ್ನು ಬೆರೆಸದ ಕಾರಣ ಕೆಲ ದಿನಗಳ ಕಾಲ ಫ್ರಿಜ್‌ನಲ್ಲಿಟ್ಟು ಬಳಸಬಹುದು.

ಮಾತೃಭಾಷೆಯೆಂಬ ಬೆಚ್ಚನೆಯ ಮಡಿಲು

ಫೆಬ್ರುವರಿ 21 ‘ವಿಶ್ವ ಮಾತೃಭಾಷಾ ದಿನ’. ಬಹುಭಾಷೆ ಮತ್ತು ಬಹುಸಂಸ್ಕೃತಿಯ ಅಸ್ಮಿತೆಯನ್ನು ಉಳಿಸಲು ಈ ದಿನವನ್ನು ಆಚರಿಸಲಾಗುತ್ತದೆ. ಈ ದಿನದ ನೆಪದಲ್ಲಿ ತಾಯ್ನುಡಿಯ ಕಲಿಕೆಯೊಂದಿಗೆ ಬೆಸೆದುಕೊಂಡ ಮಕ್ಕಳ ಮನೋವಿಕಸನದ ಹಂತಗಳನ್ನು **ಮಂಗಳೂರಿನ ಮನೋವೈದ್ಯೆ ಡಾ. ಅರುಣಾ ಯಡಿಯಾಳ್** ಇಲ್ಲಿ ವಿಶ್ಲೇಷಿಸಿದ್ದಾರೆ.

ಭಾವಜೀವಿಯಾದ ಮನುಷ್ಯ ಸಾಮಾಜಿಕ ಜೀವಿಯೂ ಹೌದು. ಭಾವನೆಗಳನ್ನು ಸಮಾಜದಲ್ಲಿನ ಇನ್ನಿತರರೊಂದಿಗೆ ಹಂಚಿಕೊಳ್ಳಲು ಸಂವಹನ, ಸ್ಪಂದನದ ಅಗತ್ಯ ಇರಲೇಬೇಕು. ಇದಕ್ಕೆ ಚಂದದ ಸೇತುವೆಯೇ ಭಾಷೆ.

ಎಷ್ಟೇ ಭಾಷೆ ಕಲಿತರೂ ಮೂಲ ಯೋಚನೆಗಳೆಲ್ಲ ರೂಪುಗೊಳ್ಳುವುದು, ಚಂದದ ಭಾವನೆಗಳು ಹುಟ್ಟಿ, ಅವು ಮಾತಿನ ಅನುಭೂತಿಗೆ ನಿಲುಕುವುದೆಲ್ಲ ಮಾತೃಭಾಷೆಯಲ್ಲಿಯೇ. ಹಾಗಾಗಿ ತಾಯ್ನುಡಿ ಎನ್ನುವುದು ಹೃದಯದ ಭಾಷೆ.

ಮಾತೃಭಾಷೆಯೆಂದರೆ ತಾಯಿಯ ಭಾಷೆ ಎಂದು ಅರ್ಥೈಸಿಕೊಳ್ಳುವುದಕ್ಕಿಂತಲೂ, ಮಗು ತನ್ನ ಬಾಲ್ಯದಲ್ಲಿ ತಂದೆ-ತಾಯಿಯಿಂದ, ಮನೆಯವರಿಂದ, ತನ್ನದೇ ಮನೆಯೆಂಬ ಆಪ್ತ ವಲಯದಲ್ಲಿ ರೂಢಿಸಿಕೊಳ್ಳುವ, ತಾನು ವಿಕಸನಗೊಂಡಂತೆ ತನ್ನೊಂದಿಗೆ ಬೆಳೆಯುತ್ತ ಹೋಗುವ ಭಾಷೆಯೇ ಮಾತೃಭಾಷೆ. ಮಗು ತನ್ನ ಬಾಲ್ಯಾವಸ್ಥೆಯಲ್ಲಿ ಕಲಿಯುವ ಭಾಷೆ ಎಂದೂ ಅರ್ಥ ಮಾಡಿಕೊಳ್ಳಬಹುದು.

ನಡೆ–ನುಡಿಗೆ ಅಡಿಪಾಯ

ಮಾತೃಭಾಷೆಯೆಂಬುದು ಬೇರೆ ಭಾಷೆಗಳ ಹಾಗೆ, ಕೇವಲ ಸಂಪರ್ಕ, ಸಂವಹನದ ಒಂದು ಸಾಧನವಷ್ಟೇ ಅಲ್ಲ! ಅದು ಮಗುವಿನ ವೈಯಕ್ತಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಗಟ್ಟಿನ ಅವಿಭಾಜ್ಯ ಕುರುಹೂ ಆಗಿದೆ. ಸಾಮಾಜಿಕ ನಡೆ-ನುಡಿಗಳ ಅಡಿಪಾಯವೂ ಆಗಿರುತ್ತದೆ. ನೈತಿಕ ಹಾಗೂ ಭೌತಿಕ ವಿಕಸನಕ್ಕೆ ನಾಂದಿಯೂ ಆಗಿರುತ್ತದೆ.



ಮಾತೃಭಾಷೆಯಿಂದಲೇ ಮಕ್ಕಳ ತೊದಲ ನುಡಿ. ಜೊತೆಗೆ ನಡೆ, ಅಭ್ಯಾಸಗಳು, ರೀತಿ-ನೀತಿ, ತತ್ವಗಳು, ನಂಬಿಕೆಗಳು ಈ ಭಾಷೆಯಲ್ಲಿಯೇ ರೂಪಗೊಳ್ಳುತ್ತಾ ಹೋಗುತ್ತವೆ. ಪುಟ್ಟ ಮಗುವೊಂದು ತನ್ನ ಇಡೀ ಪ್ರಪಂಚವನ್ನು ಗ್ರಹಿಸುವುದೇ ತಾನು ಕಲಿತ ಮಾತೃಭಾಷೆಯಿಂದ. ಹಾಗಾಗಿ ಇದನ್ನು ಪರಿಣಾಮಕಾರಿಯಾಗಿ ಕಲಿಸುವುದು ಬಹಳ ಮುಖ್ಯ.

ಮಾತೃಭಾಷೆಯಲ್ಲಿ ಸ್ಪಷ್ಟವಾಗಿ ಓದು-ಬರಹ ಕಲಿಯುವ ಮಗುವಿಗೆ ಇನ್ನಷ್ಟು ಭಾಷೆ ಹಾಗೂ ವಿಷಯಗಳ ಕಲಿಕೆ ಸುಗಮವಾಗುತ್ತದೆ. ಬಾಲ್ಯದಿಂದಲೇ ಅಥವಾ ಮೊದಲ ಭಾಷೆಯಾಗಿ ಮಕ್ಕಳಿಗೆ ಮಾತೃಭಾಷೆಯನ್ನು ಕಲಿಸುವಲ್ಲಿ ಹಲವಾರು ಸಾಮಾಜಿಕ ಲಾಭಗಳೂ ಇವೆ ಎಂದು ಸಂಶೋಧನೆಗಳು ತೋರಿಸಿವೆ.

ಕಲಿಕೆಯಲ್ಲಿ ಆಸಕ್ತಿ

ಮಾತೃಭಾಷೆಯನ್ನು ಚೆನ್ನಾಗಿ ಕಲಿತ ಮಕ್ಕಳು ಕಲಿಕೆಯಲ್ಲಿ ಆಸಕ್ತಿ ತೋರಿಸುತ್ತಾರೆ. ಶಾಲೆಯ ದಾಖಲಾತಿ ಹೆಚ್ಚಳ ಹಾಗೂ ಶಾಲಾಭ್ಯಾಸ ಮುಂದುವರಿಸುವ ಸಾಧ್ಯತೆಗಳು ದಟ್ಟವಾಗಿವೆ. ತಂದೆ ತಾಯಂದಿರು ಮುಕ್ತವಾಗಿ ಶಿಕ್ಷಕರೊಂದಿಗೆ ಬೆರೆತು, ಸಂವಹನ ನಡೆಸಿ ಮಕ್ಕಳ ವಿದ್ಯಾಭ್ಯಾಸದಲ್ಲಿ ಜಾಸ್ತಿ ಪಾಲುಗಾರಿಕೆ ವಹಿಸಿಕೊಳ್ಳಬಹುದು. ಪರಿಣಾಮಕಾರಿಯಾಗಿ ಮಾತೃಭಾಷೆಯನ್ನು ಕಲಿಯುವುದರಿಂದ ಶಾಲೆಯಲ್ಲಿ ಉತ್ತಮ ಶೈಕ್ಷಣಿಕ ಪ್ರಗತಿಯನ್ನು ಸಾಧಿಸಬಹುದು.

ಆತ್ಮವಿಶ್ವಾಸದ ಆಸರೆ

ಮಕ್ಕಳಿಗೆ ಆರಂಭಿಕ ಹಂತದಲ್ಲಿಯೇ ಮಾತೃಭಾಷೆಯನ್ನು ಚೆನ್ನಾಗಿ ಕಲಿಸಿ. ಶಾಲೆಯಲ್ಲಿ ಯಾವ ಮಾಧ್ಯಮದಲ್ಲಿ ಕಲಿತರೂ ಮನೆಯಲ್ಲಿ ಆಡುವ ಭಾಷೆಯ ಕಲಿಕೆಯಲ್ಲಿ ಸ್ಪಷ್ಟತೆ ಇರಲಿ. ಮಾತೃಭಾಷೆಯ ಜತೆ ಬೇರೆ ಭಾಷೆಗಳನ್ನು ಕಲಿಸಿದರೆ ಎರಡೂ ಭಾಷೆಗಳ ಮೇಲೆ ಹಿಡಿತ ಸಾಧಿಸಬಹುದು. ಮಾತೃಭಾಷೆ ಸ್ಪಷ್ಟವಾಗಿ ಕಲಿಯುತ್ತಲೇ ಅದರ ಮೇಲಿನ ಒಲವು ಕೂಡ ಹೆಚ್ಚುತ್ತದೆ. ಅದರೊಂದಿಗೆ ತಮ್ಮದೇ ಆದ ನೆಲ, ಜಲ, ನಾಡು, ಸಂಸ್ಕೃತಿ, ಆಚಾರ, ವಿಚಾರದ ಬಗ್ಗೆ ಜ್ಞಾನ ಹಾಗೂ ಹೆಮ್ಮೆಯೂ ಮೂಡುವಂತಾಗುತ್ತದೆ. ಇದರಿಂದ ಕಲಿಕೆಯಲ್ಲಿ ಇನ್ನಷ್ಟೂ ಆಸಕ್ತಿಯೂ ಹೆಚ್ಚಿ, ಮುಂದೆ ಆತ್ಮವಿಶ್ವಾಸ ಹಾಗೂ ಸಮಗ್ರ ರೀತಿಯ ವ್ಯಕ್ತಿತ್ವ ವಿಕಸನಕ್ಕೂ ದಾರಿಯಾಗುತ್ತದೆ.

ಎಲ್ಲಾ ಭಾಷೆಯೂ ಸುಮಧುರವೇ. ಎಲ್ಲಾ ಅಮ್ಮಂದಿರೂ ಮಮತಾಮಯಿಗಳೇ! ಆದರೂ ನಮಗೆ ನಮ್ಮಮ್ಮನ ಮಡಿಲೇ ವಿಶೇಷ. ಹಾಗೆಯೇ ಭಾಷೆಗಳು ಎಷ್ಟೇ ಇರಲಿ. ಹೃದಯದ ಭಾಷೆಗೆ ಆದ್ಯತೆ ಸಿಗಲಿ. ❖



ಸಾಂದರ್ಭಿಕ ಚಿತ್ರ

ಪೂರಕ ವಾತಾವರಣ ಇರಲಿ



ನಾವು ಅಮೆರಿಕಕ್ಕೆ ಹೋದಾಗ ಮಗ ಧನ್ವಿನ್‌ಗೆ ಮೂರು ವರ್ಷ. ಮೂರೂವರೆ ವರ್ಷಗಳ ನಂತರ ಮಗಳು ಧಾತ್ರಿ ಹುಟ್ಟಿದಳು. ಮಗನಿಗೆ ಶಾಲೆಯಲ್ಲಿ ಇಂಗ್ಲಿಷ್ ಮಾಧ್ಯಮದ ಕಲಿಕೆ. ಆದರೆ ಮನೆಯಲ್ಲಿ ನಾವಿಬ್ಬರೂ ಅವನೊಂದಿಗೆ ನಮ್ಮ ಮಾತೃಭಾಷೆ ಕನ್ನಡದಲ್ಲೇ ವ್ಯವಹರಿಸುತ್ತಿದ್ದೆವು. ಅವನು ಇಂಗ್ಲಿಷ್‌ನಲ್ಲಿ ಪ್ರಶ್ನೆ ಕೇಳಿದರೂ ಕನ್ನಡದಲ್ಲೇ ಉತ್ತರಿಸುತ್ತಿದ್ದೆವು. ಮಕ್ಕಳಿಬ್ಬರಿಗೂ ಬಾಲ್ಯದಿಂದಲೂ ಪ್ರಾಸ ಪದ್ಯಗಳು(ರೈಮ್ಸ್), ಕಥೆಗಳನ್ನು ಕನ್ನಡದಲ್ಲೇ ಹೇಳಿಕೊಡುತ್ತಿದ್ದೆವು. ಒಟ್ಟಾರೆ ಮನೆಯಲ್ಲಿ ನಿತ್ಯದ ಸಂವಹನವೆಲ್ಲ ತಾಯ್ನುಡಿಯ ಭಾಷೆಯಲ್ಲೇ. ಈಗ ಮಗಳಿಗೆ 5 ವರ್ಷ. ಮಗನಿಗೆ 12 ವರ್ಷ. ಇಷ್ಟು ವರ್ಷ ವಿದೇಶದಲ್ಲಿ ಬೆಳೆದರೂ ಮಕ್ಕಳಿಬ್ಬರೂ ಚೆನ್ನಾಗಿ ಕನ್ನಡ ಮಾತಾಡ್ತಾರೆ, ಓದುತ್ತಾರೆ –ಬರೆಯುತ್ತಾರೆ. ಮನೆಯಲ್ಲಿ ತಾಯ್ನುಡಿಯಾಡುವ ವಾತಾವರಣವಿದ್ದರೆ, ಶಾಲೆಯಲ್ಲಿ ಯಾವುದೇ ಮಾಧ್ಯಮವಿದ್ದರೂ ಮಕ್ಕಳು ಮಾತೃಭಾಷೆ ಮರೆಯುವುದಿಲ್ಲ.

-ದೀಪ್ತಿ ಮಧು, ಬೆಂಗಳೂರು

ಮಾತೃಭಾಷೆಯತ್ತ ಒಲವು ಮೂಡಿಸುವುದು ಹೇಗೆ?

ಕನ್ನಡದ ನೆಲದಲ್ಲಿ ತುಳು, ಕೊಂಕಣಿ, ಮಲಯಾಳಯಂ, ತಮಿಳು, ಮರಾಠಿ, ತೆಲುಗು ಹೀಗೆ ನಾನಾ ಮಾತೃಭಾಷೆಗಳನ್ನಾಡುವ ಜನರಿದ್ದಾರೆ. ಹೀಗಿದ್ದೂ ಬಹುತೇಕರ ಮಾತೃಭಾಷೆ ಕನ್ನಡ. ಕನ್ನಡದಲ್ಲಿಯೂ ನಾನಾ ಬಗೆಗಳಿವೆ. ಮೈಸೂರು ಕನ್ನಡ, ಮಲೆನಾಡ ಕನ್ನಡ, ಮಂಗಳೂರು ಕನ್ನಡ, ಹುಬ್ಬಳ್ಳಿ ಕನ್ನಡ, ಕುಂದಾಪುರ ಕನ್ನಡ, ಹವ್ಯಗನ್ನಡ, ಅರೆಗನ್ನಡ, ಚಾಮರಾಜನಗರ ಕನ್ನಡ, ಬಯಲು ಸೀಮೆ ಕನ್ನಡ ಹೀಗೆ ಭಾಷೆ ಪ್ರತಿ 60 ಕಿ.ಮೀಗೆ ತನ್ನ ಸ್ವರೂಪವನ್ನು ಬದಲಾಯಿಸಿಕೊಂಡಿದೆ. ಅಷ್ಟು ವೈವಿಧ್ಯ ಭಾಷಾ ಸಂಪತ್ತು ನಮಗಿದೆ.

ಜಾಗತಿಕ ಭಾಷೆ ಎನಿಸಿಕೊಂಡ ಇಂಗ್ಲಿಷ್ ಸದ್ಯಕ್ಕೆ ಮಾತೃಭಾಷೆಗಳಿಗೆ ಹೊಸ ಹೊಸ ಸವಾಲನ್ನು ತಂದಿಟ್ಟಿದೆ. ಇಂಗ್ಲಿಷ್‌ನೆಡೆಗಿನ ವ್ಯಾಮೋಹದಿಂದ ಮಾತೃಭಾಷೆಯನ್ನು ಸಮರ್ಪಕವಾಗಿ ಕಲಿಯುವ ವಾತಾವರಣವೇ ರೂಪುಗೊಳ್ಳುತ್ತಿಲ್ಲ. ಈ ಬಗ್ಗೆ ಪೋಷಕರು ಅನುಸರಿಸಬೇಕಾದ ಸರಳ ಉಪಾಯ ಇಲ್ಲಿದೆ.

- ಹೊರಗೆ ಯಾವುದೇ ಭಾಷೆಯಲ್ಲಿ ವ್ಯವಹಾರ ನಡೆಸಿದರೂ, ಮನೆಯೊಳಗೆ ತಮ್ಮ ಮಾತೃಭಾಷೆಯನ್ನು ಬಳಸುವ ಬಗ್ಗೆ ಪೋಷಕರು ಸಂಕಲ್ಪ ಮಾಡಬೇಕು. ಇದಕ್ಕೆ ಪೂರಕ ವಾತಾವರಣ ಕಲ್ಪಿಸಬೇಕು.
- ತರಕಾರಿ, ಬೇಳೆಕಾಳು, ತಿನ್ನುವ ಆಹಾರ ಪದಾರ್ಥ ಹೀಗೆ ನಿತ್ಯ ಬಳಸುವ ವಸ್ತುಗಳ ಪರಿಚಯವೂ ಮಾತೃಭಾಷೆಯಲ್ಲಿ ಆಗಲಿ.
- ಒಂದೇ ವಸ್ತುವಿನ ಹೆಸರನ್ನು ಬೇರೆ ಬೇರೆ ಭಾಷೆಗಳಲ್ಲಿ ಹೇಳುವ, ಕೇಳುವ ಆಟವನ್ನು ಆಡಬೇಕು. ಹೀಗೆ ಬೇರೆ ಬೇರೆ ಆಟ, ಹಾಡು, ಪದ್ಯ, ಕಥೆ, ಚಿತ್ರ, ಚಲನಚಿತ್ರ, ಬೇರೆ ಬೇರೆ ಮಾಧ್ಯಮಗಳಿಂದಲೂ ಮಾತೃಭಾಷೆಯನ್ನು ಮಕ್ಕಳಿಗೆ ಪರಿಚಯಿಸಿರಿ.
- ಮಾತೃಭಾಷೆಯಲ್ಲಿ ಓದು–ಬರೆಯುವುದನ್ನು ಅಭ್ಯಾಸ ನಡೆಸಬೇಕು. ಎಷ್ಟೋ ಮಾತೃಭಾಷೆಗಳಿಗೆ ಲಿಪಿಯಿಲ್ಲ. ಅದು ಅಳವಡಿಸಿಕೊಂಡಿರುವ ಲಿಪಿಯಲ್ಲಿಯೇ ಬರೆಸುವ, ಅರ್ಥ ಮಾಡಿಸುವ ಪ್ರಯತ್ನ ಮಾಡಬೇಕು. ಉತ್ತಮ ಅಭಿರುಚಿ ಇರುವ ಪುಸ್ತಕಗಳಿಗೆ ಪುಟ್ಟ ಮನಸ್ಸು ತೆರೆದುಕೊಳ್ಳುವಂತೆ ಮಾಡಬೇಕು.
- ಜಾಗತಿಕವಾಗಿ ಮನ್ನಣೆ ಗಳಿಸಿರುವ ಭಾಷೆಯನ್ನು ಕಲಿಯುವುದು ಹಿರಿಮೆಯೂ ಆಗಿರಬಹುದು. ಆದರೆ, ಮಾತೃಭಾಷೆಯನ್ನು ಸುಲಲಿತವಾಗಿ ಕಲಿತು, ಅದರ ಮೂಲಕ ಜಗತ್ತನ್ನು ಗ್ರಹಿಸುವ ಸಾಮರ್ಥ್ಯವನ್ನು ಬೆಳೆಸಬೇಕಿದೆ. ಇದಕ್ಕೆ ಮೊದಲು ಮಾತೃಭಾಷೆಯೆಡೆಗೆ ಮಕ್ಕಳಲ್ಲಿ ಅಭಿಮಾನವನ್ನು ತುಂಬಬೇಕಿದೆ. ಅಭಿಮಾನವೇ ಆತ್ಮವಿಶ್ವಾಸವಾಗಿ ರೂಪುಗೊಳ್ಳುತ್ತದೆ.

ಫ್ಯಾಷನ್

ಬ್ಯಾಗ್‌ನಲ್ಲೂ ಬಹು ಬಗೆ



ಅಭಿಲಾಷ ಬಿ.ಸಿ.

ಮನಸ್ಸುಗಳ ನಾಡಿಮಿಡಿತ ಹಿಡಿದು ಮಗ್ಗಲು ಬದಲಿಸುವ ಕ್ಷೇತ್ರ ಫ್ಯಾಷನ್. ಇಲ್ಲಿ ದಿನಕ್ಕೊಂದು ವಿನ್ಯಾಸ, ದಿನಕ್ಕೊಂದು ಟ್ರೆಂಡ್ ಇದ್ದರೇನೇ ಚೆಂದ. ಉಡುಗೆ ತೊಡುಗೆಯಿಂದ ಹಿಡಿದು ಅದಕ್ಕೆ ಹೊಂದುವ ಚೆಂದದ ಆ್ಯಕ್ಸಸರಿಸ್, ಅಂದದ ಬ್ಯಾಗ್‌ಗಳಲ್ಲೂ ಸದಾ ಬದಲಾವಣೆ ಬಯಸುತ್ತಾರೆ ಫ್ಯಾಷನ್ ಪ್ರಿಯರು.

ಮಹಿಳೆಯರಿಗಂತೂ ಬ್ಯಾಗ್‌ಗಳೆಂದರೆ ಹೆಚ್ಚೇ ಮೆಚ್ಚು. ಅದರಲ್ಲೂ ವಿವಿಧ ವಿನ್ಯಾಸಗಳು ಆಕರ್ಷಿತ. ಪ್ರತಿ ಮಹಿಳೆಯರೂ ಒಂದಲ್ಲಾ ಒಂದು ಬಗೆಯ ಬ್ಯಾಗ್ ಇಟ್ಟುಕೊಂಡಿರುತ್ತಾರೆ. ಆಯಾ ಸಂದರ್ಭ, ಸಮಾರಂಭ ಹಾಗೂ ಅಭಿರುಚಿಗನುಸಾರ ಬ್ಯಾಗ್‌ಗಳು ಟ್ರೆಂಡ್‌ಗೆ ಅನುಗುಣವಾಗಿ ಹಲ ಬಗೆಯ ಬ್ಯಾಗುಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಅವುಗಳ ಕಿರುಪರಿಚಯ ಇಲ್ಲಿದೆ...

ಹ್ಯಾಂಡ್ ಬ್ಯಾಗ್: ಅಲಂಕಾರಿಕ ಸಾಧನವಾಗಿಯೇ ಹೆಚ್ಚು ಬಳಕೆಯಾಗುವ ಈ ಬ್ಯಾಗ್ ಮಧ್ಯಮ ಗಾತ್ರದ್ದಾಗಿದ್ದು, ಅತಿ ಅಗತ್ಯ ವಸ್ತುಗಳನ್ನು ಇಟ್ಟುಕೊಳ್ಳಲಷ್ಟೇ ಅವಕಾಶವಿರುತ್ತದೆ. ಕೈಯಲ್ಲಿ ಹಿಡಿದರೆ ಒಂದು ಬಗೆ, ಮುಂಗೈನಲ್ಲಿ ತೊಟ್ಟರೆ ಮತ್ತೊಂದು ರೀತಿಯಲ್ಲಿ ಅಂದವನ್ನು ಹೆಚ್ಚಿಸುವ ಇದು ಪ್ರತಿಷ್ಠೆಯ ದ್ಯೋತಕವೂ ಹೌದು.

ಬ್ಯಾಕ್‌ಪ್ಯಾಕ್: ಬುಕ್ ಬ್ಯಾಗ್, ಕಿಟ್‌ಬ್ಯಾಗ್, ಬ್ಯಾಕ್‌ಕೇಸ್ ಮೊದಲಾದ ಹೆಸರುಗಳೊಂದಿಗೆ ಎಲ್ಲರಿಗೂ ಪರಿಚಿತವಾಗಿರುವ ಬ್ಯಾಕ್‌ಪ್ಯಾಕ್ ಹೆಚ್ಚು ಬಳಕೆಯಲ್ಲಿವೆ. ಗಟ್ಟಿಮುಟ್ಟಾದ, ದೀರ್ಘಕಾಲಿವಾಗಿ ಬಳಸಬಹುದಾದ ಈ ಬ್ಯಾಗ್‌ಗಳ ಹಿಂಬಂದಿಯಲ್ಲಿ ಎಂದು ಹಿಡಿಕೆಗಳಿರುತ್ತವೆ. ಬಹುತೇಕ ಪ್ರಯಾಣ, ಪ್ರವಾಸಗಳಿಗೆ ಬಳಕೆಯಾಗುತ್ತವೆ.

ಟೋಟೆ: ಲೆದರ್‌ನಂತಹ ಗಟ್ಟಿ ವಸ್ತುಗಳಿಂದ ಸಿದ್ಧವಾಗುವ ಇವು ಸಾಮಾನ್ಯವಾಗಿ ಅಗಲವಾಗಿದ್ದು, ಆಯತಾಕಾರದಲ್ಲಿರುತ್ತವೆ. ಚಿಕ್ಕ, ಪುಟ್ಟ ಖರೀದಿಗೆ ಬಳಸುವಂತಹ ಇವು ಶಾಪಿಂಗ್‌ಗೆ ಹೆಚ್ಚು ಬಳಕೆಯಾಗುತ್ತವೆ. ಪುಸ್ತಕ ಹಾಗೂ ಫೈಲ್‌ಗಳನ್ನು ಇಡಬಹುದಾದಷ್ಟು ಸ್ಥಳಾವಕಾಶ ಇರುವ ಈ ಬ್ಯಾಗ್ ಬಹುತೇಕರಿಗೆ ಕಚೇರಿ, ಕಾಲೇಜಿಗೆ ಕೊಂಡೊಯ್ಯಲು ಅಚ್ಚುಮೆಚ್ಚು.

ಮೆಸೆಂಜರ್ ಬ್ಯಾಗ್: ಮಧ್ಯಮ ಗಾತ್ರದ ಈ ಬ್ಯಾಗ್‌ಗಳನ್ನು ಕೊರಿಯರ್ ಬ್ಯಾಗ್ ಎಂದೂ ಕರೆಯುತ್ತಾರೆ, ಬಳಸುವವರು ತಮ್ಮ ಎತ್ತರಕ್ಕೆ ಹೊಂದಿಸಿಕೊಂಡು ಹೆಗಲಿಗೆ ಅಡ್ಡವಾಗಿ ಧರಿಸುವಂತಹ ಹಿಡಿಕೆಯನ್ನು ಹೊಂದಿರುತ್ತವೆ.

ಹೊಬೊ ಬ್ಯಾಗ್ (hobo): ಅತ್ಯಂತ ಮೃದುವಾದ ಸಾಮಗ್ರಿಯಿಂದ ತಯಾರಿಸುವ ಈ ಬ್ಯಾಗ್‌ಗಳು ಹೆಚ್ಚಾಗಿ ಅರ್ಧಚಂದ್ರಾಕೃತಿಯಲ್ಲಿರುತ್ತವೆ. ಹಿಡಿಕೆಯನ್ನು ಹಿಡಿದುಕೊಂಡಾಗ, ಅರ್ಧಚಂದ್ರಾಕೃತಿ ಸ್ಪಷ್ಟವಾಗಿ ಕಾಣಿಸುವುದರಿಂದ ಚಂದವೂ ಇಮ್ಮಡಿಯಾಗುತ್ತದೆ. ಹೆಚ್ಚು ಬಳಕೆಯಲ್ಲಿರುವ ಈ ಬ್ಯಾಗ್‌ಗಳು ಎಲ್ಲ ಸಂದರ್ಭಕ್ಕೂ ಒಗ್ಗುತ್ತವೆ.

ಬಕೆಟ್ ಬ್ಯಾಗ್: ಫ್ಯಾಷನ್ ಪ್ರಿಯರಿಗೆ ಮೆಚ್ಚು ಎನಿಸುವ ಈ ಬ್ಯಾಗ್‌ಗಳಿಗೆ ದಾರದಂತಹ ವಿನ್ಯಾಸವಿರುತ್ತದೆ. ಅದನ್ನು ಎಳೆದಾಗ ಈ ಬ್ಯಾಗ್ ಪೂರ್ತಿಯಾಗಿ ಮುಚ್ಚಿಕೊಳ್ಳುವುದರಿಂದ ಬ್ಯಾಗ್‌ಗೊಂದು ಚೆಂದದ ರೂಪ ಬರುತ್ತದೆ. ವಿವಿಧ ಆಕಾರ, ಬಣ್ಣಗಳಲ್ಲಿ ಲಭ್ಯವಿರುವ ಇವು ಆಕರ್ಷಕವಾಗಿವೆ.

ಕ್ಲಚ್ (Clutch): ಹ್ಯಾಂಡ್ ಬ್ಯಾಗ್‌ಗಳ ಪುಟ್ಟ ರೂಪವೇ ಈ ಕ್ಲಚ್ ಬ್ಯಾಗ್. ಯಾವುದೇ ಹಿಡಿಕೆ ಇಲ್ಲದ ಇದು ಕೈಯಲ್ಲಿ ಹಿಡಿದುಕೊಳ್ಳಬಹುದಷ್ಟೆ. ಮೊಬೈಲ್, ಕ್ರೆಡಿಟ್ ಕಾರ್ಡ್, ಲಿಪ್‌ಸ್ಟಿಕ್‌ನಂತಹ ಸಣ್ಣ ಪುಟ್ಟ ವಸ್ತುಗಳಿಗಷ್ಟೇ ಇದರಲ್ಲಿ ಸ್ಥಳಾವಕಾಶ.

ಶಾಪಿಂಗ್ ಬ್ಯಾಗ್: ಈ ಬ್ಯಾಗ್‌ಗಳನ್ನು ಪರಿಚಯಿಸುವ, ವರ್ಣಿಸುವ ಅಗತ್ಯವೇ ಇಲ್ಲ. ಪ್ರತಿ ಮನೆಯಲ್ಲಿಯೂ ಬಳಕೆಯಾಗುವ ಇವುಗಳನ್ನು ಬಟ್ಟೆ, ಪ್ಲಾಸಿಕ್ ಬಳಸಿ ತಯಾರಿಸಲಾಗುತ್ತದೆ. ವಿವಿಧ ಗಾತ್ರಗಳಲ್ಲಿ ಇವು ಲಭ್ಯ. ಹೆಚ್ಚು ಸಂಗ್ರಹ ಸಾಮರ್ಥ್ಯ, ದೀರ್ಘಕಾಲಿಕ ಬಳಕೆ ಈ ಬ್ಯಾಗ್‌ನ ವಿಶೇಷ.

ಮೇಕಪ್ ಬ್ಯಾಗ್: ಸೌಂದರ್ಯವರ್ಧಕ ಸಾಧಗಳನ್ನು ಇಡಲು ಬಳಸುವ ಸುಲಭವಾಗಿ ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸಬಹುದಾದ ಕಿರಿದಾದ ಬ್ಯಾಗ್‌ಗಳಿವು. ಈ ಬ್ಯಾಗ್‌ಗ ಒಳಗೆ ಪುಟ್ಟ, ಪುಟ್ಟ ಘಟಕಗಳಿದ್ದು, ಸೌಂದರ್ಯ ಸಾಧನಗಳು ಸುಲಭವಾಗಿ ಸಿಗುವಂತೆ, ಪ್ರತ್ಯೇಕವಾಗಿ ಜೋಡಿಸಿಡುವಂತೆ ವಿನ್ಯಾಸಗೊಂಡಿರುತ್ತವೆ.



ಫ್ಯಾನಿ ಪ್ಯಾಕ್ (Fanny Pack): ಬೆಲ್ಟ್ ಬ್ಯಾಗ್ ಎಂದೇ ಪರಿಚಿತವಿರುವ ಇವು ಬೆಲ್ಟ್‌ಗೆ ಪೌಚ್‌ಅನ್ನು ಜೋಡಿಸಿರುವಂತೆ ವಿನ್ಯಾಸಗೊಂಡಿರುತ್ತದೆ. ಧರಿಸಲು ಅರಾಮಾದಾಯಕವಾದ ಹಾಗೂ ನೋಡಲು ಆಕರ್ಷಕವಾಗಿರುತ್ತವೆ. ❖

ನಮ್ಮೊಳಗಿನ ಶತ್ರುಗಳನ್ನು ಸಂತೈಸುವುದು ಹೇಗೆ?



ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

ನನಗೆ ವಿಪರೀತ ಸಿಟ್ಟು ಬರುತ್ತದೆ. ಸಣ್ಣ ಸಣ್ಣ ಕಾರಣಕ್ಕೂ ಸಿಡುಕುತ್ತೀನಿ. ಆಫೀಸ್‌ನಲ್ಲಿಯೂ ಸಿಡುಕಿ ದ್ವೇಷ ಕಟ್ಟಿಕೊಂಡಿದ್ದೀನಿ. ಮನೆಯಲ್ಲಿಯೂ ನೆಮ್ಮದಿ ಇಲ್ಲದಂತಾಗಿದೆ. ಹೇಳಿಕೊಳ್ಳಲು ಸ್ನೇಹಿತರು ಯಾರೂ ಇಲ್ಲ. ಕೋಪ ನಿಯಂತ್ರಿಸುವುದು ಹೇಗೆ?

ಹೆಸರು, ಊರು ತಿಳಿಸಿಲ್ಲ.

ಸಿಟ್ಟಿನಿಂದ ಸಂಬಂಧಗಳು ಹಾಳಾಗುತ್ತಿರುವ ನೋವನ್ನು ಅನುಭವಿಸುತ್ತಾ ಅದನ್ನು ದ್ವೇಷಿಸುತ್ತಿದ್ದೀರಲ್ಲವೇ? ಸಿಟ್ಟು ನಿಮ್ಮ ವ್ಯಕ್ತಿತ್ವದ ಒಂದು ಭಾಗ. ಅದು ನೋವನ್ನು ಕೊಡುತ್ತಿದೆ ಎನ್ನುವುದು ನಿಜವಾದರೂ ನಮ್ಮ ವ್ಯಕ್ತಿತ್ವದ ಅಂಶಗಳನ್ನೇ ನಾವು ದ್ವೇಷಿಸಿದರೆ ಅಂತರಂಗದಲ್ಲಿ ನಮ್ಮ ಕುರಿತೇ ಕೀಳು ಭಾವನೆಗಳನ್ನು ಮೂಡಿಸಿಕೊಂಡು ನೋವನ್ನು ಹೆಚ್ಚು ಮಾಡಿಕೊಳ್ಳುತ್ತೇವಲ್ಲವೇ? ಬದಲಾಗಿ ಸಿಟ್ಟಿನ ಬಗೆಗೆ ಸಹಾನುಭೂತಿಯನ್ನು ಮೂಡಿಸಿಕೊಂಡು ಅದರ ಆಳಕ್ಕೆ ಇಳಿದು ಅರ್ಥಮಾಡಿಕೊಂಡು ಪಳಗಿಸಬಹುದಲ್ಲವೇ? ಅದನ್ನು ಮಾಡುವುದಾದರೂ ಹೇಗೆ?

ಸುಮ್ಮನೆ ಏಕಾಂತದಲ್ಲಿ ಕಣ್ಣುಮುಚ್ಚಿ ದೇಹವನ್ನು ಸಡಿಲಬಿಟ್ಟು ಕುಳಿತು ನೀವು ಸಿಟ್ಟಾದ ಒಂದು ಘಟನೆಯನ್ನು ನೆನಪಿಸಿಕೊಳ್ಳಿ. ಸಾಧ್ಯವಾಗುವಷ್ಟು ಆ ಘಟನೆಯನ್ನು ಈಗಲೇ ಅನುಭವಿಸುತ್ತಿರುವಂತೆ ಕಲ್ಪಿಸಿಕೊಳ್ಳಿ. ಆಗ ನಿಮ್ಮ ದೇಹದ ಯಾವ ಭಾಗಗಳು ಬಿಗಿಯಾಗಿರುತ್ತವೆ ಅಥವಾ ತೀವ್ರವಾಗಿ ಪ್ರತಿಕ್ರಿಯೆ ತೋರಿಸುತ್ತಿರುತ್ತದೆ ಎನ್ನುವುದನ್ನು ಗಮನಿಸಿ. ದೇಹದ ಆ ಭಾಗಗಳನ್ನು ಗಮನಿಸುತ್ತಲೇ ದೀರ್ಘವಾಗಿ ಉಸಿರಾಡುತ್ತಿರಿ. ನಿಮ್ಮ ಸಿಟ್ಟು ಏನೋ ಸಂದೇಶವನ್ನು ಕೊಡುತ್ತಿರುತ್ತದೆ ಎನ್ನುವುದನ್ನು ಗಮನಿಸಿ. ಸಿಟ್ಟು ನಿಮ್ಮ ಯಾವುದೋ ಮಾನಸಿಕ ಕಹಿ ನೋವು ಹಿಂಜರಿಕೆ ಕೀಳರಿಮೆ ಮುಂತಾದವುಗಳ ಹೊರರೂಪವಾಗಿರುತ್ತದೆ. ಸಿಟ್ಟು ಹೀಗೇನನ್ನೋ ಹೇಳುತ್ತಿರಬಹುದು. ‘ಬೇರೆಯವರು ನನ್ನನ್ನು ಗೌರವಿಸುತ್ತಿಲ್ಲ, ನನ್ನನ್ನು ಕಡೆಗಣಿಸುತ್ತಿದ್ದಾರೆ, ಅವರ ಮಾತು ವರ್ತನೆಗಳ ಮೂಲಕ ನನ್ನ ವ್ಯಕ್ತಿತ್ವದ ಮೇಲೆ ಆಕ್ರಮಣ ಮಾಡುತ್ತಿದ್ದಾರೆ, ನನ್ನನ್ನು ಅವಮಾನಿಸುತ್ತಿದ್ದಾರೆ’ – ಮುಂತಾಗಿ.


ನಿಮ್ಮ ಈ ಎಲ್ಲಾ ಅನಿಸಿಕೆಗಳ ಹೊರರೂಪವೇ ಸಿಟ್ಟು. ಅಂದರೆ ಸಿಟ್ಟಿನ ಮೂಲಕ ನಿಮ್ಮ ವ್ಯಕ್ತಿತ್ವವನ್ನು ರಕ್ಷಣೆ ಮಾಡಿಕೊಳ್ಳಲು ನೀವು ಪ್ರಯತ್ನಿಸುತ್ತ ಇರುತ್ತೀರಲ್ಲವೇ? ಹಾಗಾಗಿ ಸಿಟ್ಟು ಒಂದು ರೀತಿಯಲ್ಲಿ ನಿಮಗೆ ಸಹಾಯ ಮಾಡುತ್ತಿರುತ್ತದೆ. ಆದರೆ ಇದು ನಿಮ್ಮ ಸ್ನೇಹಸಂಬಂಧಗಳನ್ನು ಹಾಳುಮಾಡುತ್ತಾ ಮಾನಸಿಕ ನೋವನ್ನು ಕೊಡುತ್ತಿದೆ. ಹೀಗೆ ಮಾನಸಿಕ ನೋವು ಅವಮಾನಗಳನ್ನು ಸಿಟ್ಟಿನ ರೂಪದಲ್ಲಿ ಹೊರಹಾಕುವುದನ್ನು ಬಾಲ್ಯದಲ್ಲಿಯೇ ಕಲಿತಿರುತ್ತೀರಿ ಅಥವಾ ಬಾಲ್ಯದಲ್ಲಿ ಅನುಭವಿಸಿದ ಹಿಂಸೆ, ನೋವು, ಅವಮಾನಗಳು ಆಗಿನ ನಿಮ್ಮ ಪರಿಸ್ಥಿತಿಗಳಿಂದಾಗಿ ಸಿಟ್ಟಾಗಿ ಬದಲಾಗುವುದು ಸಾಧ್ಯವಿರಲಿಲ್ಲ. ಆಗ ನಿಮ್ಮನ್ನು ನೀವು ರಕ್ಷಣೆ ಮಾಡಿಕೊಳ್ಳುವುದು ಸಾಧ್ಯವಾಗಿರಲಿಲ್ಲ. ಈ ಕಹಿ ನಿಮ್ಮ ದೇಹ ಮನಸ್ಸುಗಳಲ್ಲಿ ಆಳವಾಗಿ ದಾಖಲಾಗಿರುತ್ತದೆ. ಹಾಗಾಗಿ ಈಗ ಅಪಾಯವೇ ಇಲ್ಲದಿದ್ದರೂ ನಿಮ್ಮ ಮನಸ್ಸು ಅನಗತ್ಯವಾಗಿ ತೀವ್ರವಾಗಿ ಪ್ರತಿಕ್ರಿಯೆ ತೋರಿಸುತ್ತಿರುತ್ತದೆ. ಮುಂದಿನ ಹಂತದಲ್ಲಿ ಸಿಟ್ಟುಮಾಡದೆ ನನ್ನನ್ನು ರಕ್ಷಿಸಿಕೊಳ್ಳುವುದು ಹೇಗೆ? ನನ್ನ ಅನಿಸಿಕೆಗಳನ್ನು ನೇರವಾಗಿ ಸರಳವಾಗಿ ಹೇಳುವುದು ಹೇಗೆ? ಎಂದು ಯೋಚಿಸಿ.

ಉದಾಹರಣೆಗೆ ನಿಮ್ಮ ಮಾತುಗಳಿಂದ ನನಗೆ ನೋವಾಗುತ್ತಿದೆ, ಅವಮಾನವಾದಂತೆ ಅನ್ನಿಸುತ್ತಿದೆ ಎಂದು ಹೇಳಬಹುದಲ್ಲವೇ? ನಿಮ್ಮ ಅನಿಸಿಕೆಗಳೇ ಸರಿಯೆಂದು ವಾಗ್ವಾದಕ್ಕೆ ಇಳಿಯಬೇಡಿ. ಸಿಟ್ಟು ಬರುತ್ತಿದೆ ಎನ್ನುವುದು ಗಮನಕ್ಕೆ ಬಂದ ಕೂಡಲೇ ದೀರ್ಘವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಟ್ಟು ಸಿಟ್ಟನ್ನು ತೋರಿಸದೆ ಗೌರವ ಘನತೆಗಳಿಂದ ಹೇಗೆ ಪ್ರತಿಕ್ರಿಯೆ ತೋರಿಸಬಹುದು ಎಂದು ಯೋಚಿಸಿ. ಕೆಲವೊಮ್ಮೆ ನಿಮ್ಮ ಸಿಟ್ಟು ಹಿಡಿತ ಮೀರಿ ಹೊರಬಂದರೆ ಸಮಾಧಾನವಾದ ನಂತರ ಪ್ರಾಮಾಣಿಕವಾಗಿ ಅವರಲ್ಲಿ ಕ್ಷಮೆ ಕೇಳಿ. ಈ ಅಭ್ಯಾಸವನ್ನು ಆಗಾಗ ಮಾಡುತ್ತಲೇ ಇದ್ದರೆ ನಿಧಾನವಾಗಿ ನಿಮ್ಮ ದೇಹ ಮನಸ್ಸುಗಳು ಹಗುರಾಗಿ ಸಿಟ್ಟು ಕಡಿಮೆಯಾಗುತ್ತದೆ. ಜತೆಗೆ ಯಾರಾದರೂ ನಿಮಗೆ ನೋವುಂಟು ಮಾಡಿದರೆ ಅದನ್ನು ಸ್ಪಷ್ಟವಾಗಿ ಆದರೆ ಗೌರವದಿಂದ ಹೇಳುವುದನ್ನು ಕಲಿಯಬಹುದು. ನಮ್ಮೆಲ್ಲರಲ್ಲಿ ನಾವೇ ಇಷ್ಟಪಡದ ಹಲವಾರು ಅಂಶಗಳಿರುತ್ತವೆ. ಅವುಗಳನ್ನು ದ್ವೇಷಿಸಿದೆ ಸಹಾನುಭೂತಿಯಿಂದ ಸಮಾಧಾನಪಡಿಸಬೇಕು. ಆಗ ನಮ್ಮೊಳಗಿರುವ ಹಲವಾರು ಉತ್ತಮ ಅಂಶಗಳು ಹೊರಬರುತ್ತವೆ. ಹೀಗೆ ನಿಮ್ಮೊಳಗಿರುವ ಪ್ರಾಮಾಣಿಕತೆ ಸರಳತೆ ಕಾಳಜಿ ಸ್ನೇಹಪರತೆ ಮುಂತಾದವುಗಳೆಲ್ಲವನ್ನೂ ನಿಧಾನವಾಗಿ ಹೊರತನ್ನಿ. ❖

ಏನಾದ್ರೂ ಕೇಳ್ಬೋದು: ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ




ಸುಭಾಷಿತ

ಒಂದು ಬಟ್ಟಲು ಖಾಲಿ ಇದ್ದಾಗಷ್ಟೇ ಉಪಯೋಗಕ್ಕೆ ಬರುತ್ತದೆ. ಹಾಗೆಯೇ ನಂಬಿಕೆಗಳು, ಸಿದ್ಧಾಂತಗಳು, ಸಮರ್ಥನೆಗಳು ಹಾಗೂ ಉಲ್ಲೇಖಗಳಿಂದ ತುಂಬಿ ಹೋಗಿರುವ ಮನಸ್ಸು ಸೃಜನಶೀಲವಾಗಿ ಇರುವುದಿಲ್ಲ.

-ಜಿಡ್ಡು ಕೃಷ್ಣಮೂರ್ತಿ

ಚುನಾವಣೆ ಹೊಸಿಲಲ್ಲಿ ಭರಪೂರ ಘೋಷಣೆ ಫಲಿತಾಂಶವನ್ನು ಅವಲಂಬಿಸಿದೆ ಅನುಷ್ಠಾನ

ರೈತರು, ಮಹಿಳೆಯರು ಮತ್ತು ಯುವಜನರು– ಚುನಾವಣೆಯ ಈ ಹೊತ್ತಿನಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಶುಕ್ರವಾರ ಮಂಡನೆಯಾದ ರಾಜ್ಯದ 2023–24ನೇ ಸಾಲಿನ ಬಜೆಟ್‌ನಲ್ಲಿ ಈ ಮೂರೂ ವರ್ಗದವರ ಜಪವೇ ಎದ್ದು ಕಾಣುತ್ತಿದೆ. ಅದರ ಹಿಂದಿನ ಕಾರಣವನ್ನು ಬಿಡಿಸಿ ಹೇಳುವ ಅಗತ್ಯವೇನೂ ಇಲ್ಲ. ಬಿಜೆಪಿಯ ಮತಬುಟ್ಟಿಯನ್ನು ಹಿಗ್ಗಿಸುವ ಹಿರಿದಾಸೆಯೇ ಇಲ್ಲಿ ಕೆಲಸ ಮಾಡಿದೆ. ಚುನಾವಣೆಯಲ್ಲಿ ಎದುರಾಗಬಹುದಾದ ಆಡಳಿತವಿರೋಧಿ ಅಲೆಯ 'ಪ್ರಭಾವ'ವನ್ನು ತಗ್ಗಿಸಲು ಸೃಷ್ಟಿಯಾದ ಭರಪೂರ ಘೋಷಣೆಗಳ ಮೇಲೆಯೇ ಈ ಬಜೆಟ್ ತೇಲಿರುವುದು ಸ್ಪಷ್ಟ. ಅಲ್ಪಸಂಖ್ಯಾತರ ಕಡೆಗೆ, ಅದರಲ್ಲೂ ಆ ಸಮುದಾಯದ ಯುವಕರ ಕಡೆಗೆ ಬಿಜೆಪಿಯ ಚಿತ್ತ ಈ ಸಲ ಹರಿದಿರುವುದು ವಿಶೇಷ. ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗಾಗಿ ಹಲವು ಯೋಜನೆಗಳನ್ನು ಘೋಷಿಸಲಾಗಿದೆ. ಅಲ್ಲದೆ, ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ ಮುಂದಿನ ಹಣಕಾಸು ವರ್ಷದಲ್ಲಿ ₹ 110 ಕೋಟಿ ತೆಗೆದಿರಿಸಲಾಗಿದೆ. ಈ ಮೊತ್ತ, ಹಾಲಿ ಹಣಕಾಸು ವರ್ಷಕ್ಕೆ ಒದಗಿಸಿರುವ ಅನುದಾನಕ್ಕೆ ಹೋಲಿಸಿದರೆ ಹೆಚ್ಚು–ಕಡಿಮೆ ದುಪ್ಪಟ್ಟು. ಮತದಾನಕ್ಕೆ ರೈತರು ಸಂತುಷ್ಟರಾಗಿ ಹೋಗುವಂತೆ ನೋಡಿಕೊಳ್ಳುವ ಎಲ್ಲ ಪ್ರಯತ್ನಗಳನ್ನೂ ಬಜೆಟ್‌ನಲ್ಲಿ ಮಾಡಲಾಗಿದೆ. ರೈತರಿಗೆ ನೀಡಲಾಗುತ್ತಿರುವ ಬಡ್ಡಿರಹಿತ ಸಾಲದ ಮಿತಿಯನ್ನು ₹ 3 ಲಕ್ಷದಿಂದ ₹ 5 ಲಕ್ಷಕ್ಕೆ ಹೆಚ್ಚಿಸಲು ತೀರ್ಮಾನಿಸಲಾಗಿದೆ. ಹಾಗೆಯೇ 'ಭೂಸಿರಿ' ಸಹಾಯಧನ, 'ಜೀವನ್ ಜ್ಯೋತಿ' ವಿಮೆ, 'ರೈತ ಸಂಪದ' ತೋಟಗಾರಿಕೆ ಬೆಳೆಗಳ ಮೌಲ್ಯವರ್ಧನೆ ಯೋಜನೆಗಳನ್ನು ಘೋಷಿಸಲಾಗಿದ್ದು, ಇವುಗಳೆಲ್ಲ ಕೃಷಿಕರನ್ನು ಖುಷಿಗೊಳಿಸುವ ಪ್ರಯತ್ನಗಳೇ ಆಗಿವೆ.



ಬಿಜೆಪಿಯ ಮತಬುಟ್ಟಿಯನ್ನು ಹಿಗ್ಗಿಸುವ ಹಿರಿದಾಸೆಯೇ ಇಲ್ಲಿ ಕೆಲಸ ಮಾಡಿದೆ

ಸರ್ಕಾರಿ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಶುಲ್ಕರಹಿತ ಪ್ರವೇಶಾವಕಾಶವನ್ನು ಕಲ್ಪಿಸುವ 'ಮುಖ್ಯಮಂತ್ರಿ ವಿದ್ಯಾಶಕ್ತಿ' ಯೋಜನೆ ಕೂಡ ಗಮನ ಸೆಳೆಯುವಂಥದ್ದು. ಐಟಿಐಗಳಲ್ಲಿ ಭತ್ಯೆ ಸಹಿತ ಮೂರು ತಿಂಗಳು ತರಬೇತಿ ನೀಡುವ 'ಬದುಕುವ ದಾರಿ', ಸಿಇಟಿ ಮೂಲಕ ವೃತ್ತಿಶಿಕ್ಷಣಕ್ಕೆ ಸೇರುವ ಗ್ರಾಮೀಣ ಭಾಗದ ಹಾಗೂ ಸರ್ಕಾರಿ ಕನ್ನಡ ಶಾಲೆಗಳಲ್ಲಿ ಓದಿದ ಆಯ್ದ 500 ವಿದ್ಯಾರ್ಥಿಗಳ ಸಂಪೂರ್ಣ ಶುಲ್ಕವನ್ನು ಸರ್ಕಾರವೇ ಭರಿಸುವ 'ಹಳ್ಳಿ ಮುತ್ತು', ನಿರುದ್ಯೋಗಿ ಪದವೀಧರರಿಗೆ ಭತ್ಯೆ ನೀಡುವ 'ಯುವಸ್ನೇಹಿ' ಯೋಜನೆಗಳು ಯುವಪೀಳಿಗೆಯ ಬೆಂಬಲ ಪಡೆಯುವುದಕ್ಕಾಗಿಯೇ ರೂಪುಗೊಂಡಂಥವು. ಮಹಿಳಾ ಕೃಷಿ ಕಾರ್ಮಿಕರಿಗೆ ಪ್ರತೀ ತಿಂಗಳು ತಲಾ ₹ 500 ಸಹಾಯಧನ ನೀಡುವ 'ಶ್ರಮಶಕ್ತಿ', ವಿದ್ಯಾರ್ಥಿನಿಯರು ಮತ್ತು ಮಹಿಳಾ ಕಾರ್ಮಿಕರಿಗೆ ಉಚಿತ ಬಸ್‌ಪಾಸ್ ಯೋಜನೆ ಘೋಷಿಸಲಾಗಿದೆ. ಪ್ರತೀ ಕುಟುಂಬದ ಮತ ಹಂಚಿಕೆಯಲ್ಲಿ ಬಿಜೆಪಿಯ ಪಾಲು ಹೆಚ್ಚಿಸಿಕೊಂಡು ಚುನಾವಣೆಯಲ್ಲಿ ಗೆಲುವು ಖಾತರಿಪಡಿಸಿಕೊಳ್ಳುವ ಯೋಚನೆ ಈ ಕಾರ್ಯತಂತ್ರದ ಹಿಂದೆ ಇರುವಂತಿದೆ. ರಾಜ್ಯದ ಮತದಾರರ ಪಟ್ಟಿಯಲ್ಲಿ ಸಂಖ್ಯಾಬಾಹುಳ್ಯ ಇಲ್ಲದ ಸಮುದಾಯಗಳು, ವರ್ಗಗಳ ಜನರ ಬೇಡಿಕೆಗಳಿಗೆ ಈ ಬಜೆಟ್ ಸ್ಪಂದಿಸಿಲ್ಲ ಎಂಬುದು ಮೇಲ್ನೋಟಕ್ಕೇ ಎದ್ದುಕಾಣುತ್ತದೆ. ತೆರಿಗೆ ಹೇರಿಕೆ ಇಲ್ಲದ ಬಜೆಟ್ ಮಂಡಿಸಿರುವುದರ ಹಿಂದೆ ಕೂಡ ಚುನಾವಣೆಯೇ ಕೆಲಸ ಮಾಡಿದೆ ಎಂಬುದರಲ್ಲಿ ಅನುಮಾನವಿಲ್ಲ.

ಹಿಂದುತ್ವದ ಕಾರ್ಯಸೂಚಿಯನ್ನು ಬಜೆಟ್‌ನಲ್ಲಿ ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಮುಖ್ಯಮಂತ್ರಿ ಹೊಸ ಹಾದಿ ತುಳಿದಿದ್ದಾರೆ. ಮಠ–ಮಂದಿರಗಳಿಗೆ ಘೋಷಿಸಿರುವ ಅನುದಾನದ ಫಲಾನುಭವಿಗಳ ನಿರ್ದಿಷ್ಟ ಮಾಹಿತಿಯನ್ನು ಪ್ರಕಟಿಸಿಲ್ಲ. ರಾಮನಗರದಲ್ಲಿ ರಾಮಮಂದಿರ ನಿರ್ಮಾಣ, ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟದ ಅಭಿವೃದ್ಧಿ ಸೇರಿದಂತೆ ಬಿಜೆಪಿಯು ಚುನಾವಣಾ ಉದ್ದೇಶಕ್ಕೆ ಬಳಸಿಕೊಳ್ಳುತ್ತಿರುವ ಹಲವು ಧಾರ್ಮಿಕ ಕೇಂದ್ರಗಳತ್ತ ಬಜೆಟ್ ಗಮನಹರಿಸಿದೆ. ಮೂಲಸೌಕರ್ಯ ಅಭಿವೃದ್ಧಿಯ ಘೋಷಣೆಗಳಲ್ಲಿ ಬಿಜೆಪಿಯು ಬಲ ಹೆಚ್ಚಿಸಿಕೊಳ್ಳಲು ಗಮನ ಕೇಂದ್ರೀಕರಿಸಿರುವ ಪ್ರದೇಶಗಳಿಗೆ ಹೆಚ್ಚು ಒತ್ತು ದೊರೆತಿದೆ. ಅಲೆಮಾರಿಗಳು, ಅರೆಅಲೆಮಾರಿ ಸಮುದಾಯಗಳ ಬಗೆಗೆ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ. ಉದ್ಯೋಗಾಕಾಂಕ್ಷಿ ಯುವಜನರನ್ನು ಸೆಳೆಯುವುದಕ್ಕೆ ಹಲವು ಘೋಷಣೆಗಳನ್ನು ಮಾಡಲಾಗಿದೆ. ಒಂದೇ ವರ್ಷದಲ್ಲಿ ಒಂದು ಲಕ್ಷ ಸರ್ಕಾರಿ ಹುದ್ದೆಗಳನ್ನು ಭರ್ತಿ ಮಾಡುವ ವಾಗ್ದಾನವೂ ಬಜೆಟ್‌ನಲ್ಲಿದೆ. ಆದರೆ, ಅದಕ್ಕೆ ಪೂರಕವಾಗಿ ಅನುದಾನ ಮೀಸಲಿಡುವ ಕೆಲಸ ಆಗಿಲ್ಲ. ಚುನಾವಣೆಗೆ ಎರಡು ತಿಂಗಳಷ್ಟೇ ಉಳಿದಿರುವಾಗ ಮುಖ್ಯಮಂತ್ರಿಯವರು ಸಂಪ್ರದಾಯದಂತೆ ಬಜೆಟ್ ಮಂಡಿಸಿದ್ದಾರೆ. ಈ ಬಜೆಟ್ ಘೋಷಣೆಗಳು ಅನುಷ್ಠಾನಕ್ಕೆ ಬರುತ್ತವೆ ಎಂಬ ಖಾತರಿಯೇನೂ ಇಲ್ಲ. ಮುಂದೆ ಯಾರು ಅಧಿಕಾರದ ಗದ್ದುಗೆ ಹಿಡಿಯುತ್ತಾರೆ ಎಂಬುದು ಬಜೆಟ್ ಘೋಷಣೆಗಳ ಭವಿಷ್ಯವನ್ನು ನಿರ್ಧರಿಸುತ್ತದೆ. ಹಿಂದಿನ ಅನುಭವಗಳ ಆಧಾರದಲ್ಲಿ ಹೇಳುವುದಾದರೆ, ಚುನಾವಣೆಯ ಹೊಸ್ತಿಲಲ್ಲಿ ನಿರ್ಗಮಿತ ಸರ್ಕಾರ ಮಂಡಿಸಿದ ಯಾವ ಬಜೆಟ್ ಕೂಡ ವಾಸ್ತವದಲ್ಲಿ ಕಾರ್ಯರೂಪಕ್ಕೆ ಬಂದಿಲ್ಲ. ಈ ಬಜೆಟ್‌ನ ಆಯಸ್ಸು ಕೂಡ ಚುನಾವಣೆಯ ಫಲಿತಾಂಶ ಮತ್ತು ಆನಂತರದ ಬೆಳವಣಿಗೆಗಳನ್ನು ಅವಲಂಬಿಸಿದೆ.

ದಿನದ ಟ್ವೀಟ್


ಹಣವೆಲ್ಲಾ ಏನಾಗುತ್ತಿದೆ?



ಬಿಬಿಎಂಪಿಯು ಆರು ವರ್ಷಗಳಲ್ಲಿ ಕರ್ನಾಟಕ ಸರ್ಕಾರದಿಂದ ₹ 28,000 ಕೋಟಿ ಪಡೆದುಕೊಂಡಿದ್ದು, ಇದರಲ್ಲಿ ಶೇ 60ರಷ್ಟನ್ನು ರಸ್ತೆಗಳು ಮತ್ತು ಮೇಲ್ಸೇತುವೆಗಳಿಗಾಗಿ ವ್ಯಯಿಸಲಾಗಿದೆ. ಇದೀಗ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಬಜೆಟ್‌ನಲ್ಲಿ ಮತ್ತೆ ₹ 9,698 ಕೋಟಿ ತೆಗೆದಿರಿಸಿದ್ದಾರೆ. ಬೆಂಗಳೂರಿನ ಸ್ಥಿತಿಯನ್ನು ನೋಡಿದರೆ, ಈ ಹಣವೆಲ್ಲಾ ಎಲ್ಲಿಗೆ ಹೋಗುತ್ತಿದೆ ಎಂಬ ಪ್ರಶ್ನೆ ಮೂಡುತ್ತದೆ.

ಗೌತಮ್ ಮಾಚಯ್ಯ, ಪತ್ರಕರ್ತ

ಕಿಡಿನುಡಿ



ಚುನಾವಣಾ ಬಾಂಡ್‌ಗಳು ಭಾರತದ ಪ್ರಜಾಪ್ರಭುತ್ವದ ಮೇಲಿನ ದಾಳಿಯೇ ವಿನಾ ಬೇರೇನೂ ಅಲ್ಲ. ಆದರೆ ಭಾರತೀಯ ಚುನಾವಣಾ ಆಯೋಗವು ಈ ಚೋದ್ಯವನ್ನು ನಿಯಮಬಾಹಿರಗೊಳಿಸಲು ನಿರಾಕರಿಸುತ್ತಿದೆ. ಭಾರತದ ಮೇಲೆ ದಾಳಿ ಮಾಡಲು ಬಿಬಿಸಿ ಸಾಕ್ಷ್ಯಚಿತ್ರ ಅಥವಾ ಜಾರ್ಜ್ ಸೊರೋಸ್ ಬೇಕಾಗಿಲ್ಲ. ಚುನಾವಣಾ ಆಯೋಗವು ತಕ್ಷಣವೇ ಕಾರ್ಯಪ್ರವೃತ್ತವಾಗಬೇಕು ಎಂಬುದು ಭಾರತದ ಪ್ರಜಾಪ್ರಭುತ್ವದ ಆಗ್ರಹ.

ರಾಧಾಕೃಷ್ಣನ್ ಆರ್.ಕೆ., ಪತ್ರಕರ್ತ

25 ವರ್ಷಗಳ ಹಿಂದೆ

ಬುಧವಾರ, 18-2-1998

• 1108 ಮತಗಟ್ಟೆಗಳಲ್ಲಿ ಮರು ಮತದಾನ

ನವದೆಹಲಿ, ಫೆ. 17 (ಪಿಟಿಐ)– ಲೋಕಸಭೆಗೆ ಸೋಮವಾರ ನಡೆದ ಮೊದಲ ಹಂತದ ಮತದಾನದ ಸಮಯದಲ್ಲಿ ಸಂಭವಿಸಿದ ಅಕ್ರಮದ ಹಿನ್ನೆಲೆಯಲ್ಲಿ ಹತ್ತು ರಾಜ್ಯಗಳ 1108 ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಚುನಾವಣಾ ಆಯೋಗ ಆದೇಶ ನೀಡಿದೆ.

ಬಿಹಾರದಲ್ಲಿ ಅತಿ ಹೆಚ್ಚು ಮತಗಟ್ಟೆಗಳಲ್ಲಿ (509) ಮರುಮತದಾನ ನಡೆಯಲಿದೆ. ಇತರ ರಾಜ್ಯಗಳ ವಿವರ ಈ ರೀತಿ ಇದೆ. ಆಂಧ್ರಪ್ರದೇಶ–238, ಅಸ್ಸಾಂ –211, ಉತ್ತರ ಪ್ರದೇಶ–70, ರಾಜಸ್ಥಾನ –43, ಮಣಿಪುರ– 15, ಕರ್ನಾಟಕ – 8, ಹರಿಯಾಣ–5, ಮೇಘಾಲಯ–4 ಹಾಗೂ ಜಮ್ಮು–ಕಾಶ್ಮೀರದ 3 ಮತಗಟ್ಟೆಗಳಲ್ಲಿ ಮರುಮತದಾನಕ್ಕೆ ಆದೇಶ ನೀಡಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ಎಂ.ಎಸ್.ಗಿಲ್ ಇಂದು ಪ್ರಕಟಿಸಿದರು.

• ಕೊಯಮತ್ತೂರು: ಮತ್ತೆ ಸ್ಫೋಟ 4 ಬಾಲಕರ ಸಾವು

ಕೊಯಮತ್ತೂರು, ಫೆ. 17 (ಯುಎನ್‌ಐ, ಪಿಟಿಐ)– ಶನಿವಾರದಿಂದ ಸರಣಿ ಬಾಂಬ್ ಸ್ಫೋಟಕ್ಕೆ ಸಿಕ್ಕಿ ತತ್ತರಿಸಿರುವ ಕೊಯಮತ್ತೂರಿನಲ್ಲಿ ಇಂದು ಮಧ್ಯಾಹ್ನ ಮತ್ತೊಂದು ಬಾಂಬ್ ಸ್ಫೋಟಿಸಿ ನಾಲ್ವರು ಬಾಲಕರು ಮೃತಪಟ್ಟರು.

50 ವರ್ಷಗಳ ಹಿಂದೆ

ಭಾನುವಾರ, 18-2-1973

• ಯಾವುದೇ ಒತ್ತಡಕ್ಕೆ ಮಣಿದು ಪ್ರಧಾನಿ ಅಧಿಕಾರ ತ್ಯಜಿಸರು

ನವದೆಹಲಿ, ಫೆ. 17– 'ಅಧಿಕಾರಕ್ಕೆ ಅಂಟಿಕೊಳ್ಳಲು ನನಗೆ ಇಷ್ಟ ಇಲ್ಲ. ಆದರೆ ವಿರೋಧ ಪಕ್ಷಗಳ ಅಥವಾ ಬೇರೆ ಯಾವುದೇ ಒತ್ತಡಕ್ಕೆ ಮಣಿದು ಅಧಿಕಾರ ಬಿಡುವುದಿಲ್ಲ' ಎಂದು ಪ್ರಧಾನಿ ಇಂದಿರಾ ಗಾಂಧಿ ಅವರು ಇಲ್ಲಿ ಸ್ಪಷ್ಟವಾಗಿ ಹೇಳಿದರು.

ಬಜೆಟ್ ಅಧಿವೇಶನದ ಪೂರ್ವದಲ್ಲಿ ಸಂಸದೀಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಉದ್ದೇಶಿಸಿ ಮಾತನಾಡಿದ ಪ್ರಧಾನಿ ಅವರು 'ನನ್ನ ಕರ್ತವ್ಯವನ್ನು ಪೂರ್ಣ ಮಾಡಿದ್ದೇನೆ ಎಂದು ಭಾವಿಸಿದಾಗ ಅಧಿಕಾರದಿಂದ ಇಳಿಯುತ್ತೇನೆ' ಎಂದು ದೃಢವಾದ ಧ್ವನಿಯಲ್ಲಿ ನುಡಿದರು.

• ಪೊಲೀಸ್ ಇಲಾಖೆ ದಕ್ಷತೆ ಹೆಚ್ಚಿಸಲು ಕ್ರಮ: ಪಿ.ಸಿ. ಹುದ್ದೆಗೆ ಎಸ್ಸೆಲ್ಸಿ ಅರ್ಹತೆ

ಬೆಂಗಳೂರು, ಫೆ. 17– 'ಸಬ್ ಇನ್‌ಸ್ಪೆಕ್ಟರ್' ಹುದ್ದೆಗಳಿಗೆ ಅರ್ಧದಷ್ಟು ನೇರ ನೇಮಕ ಮತ್ತು ಕಾನ್‌ಸ್ಟೆಬಲ್ ಹುದ್ದೆಗೆ ಇನ್ನು ಮುಂದೆ ಎಸ್ಸೆಲ್ಸಿ ಆದವರನ್ನು ಮಾತ್ರ ನೇಮಕ ಮಾಡುವ ಕ್ರಮಗಳನ್ನು ಪೊಲೀಸ್ ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸುವ ದೃಷ್ಟಿಯಿಂದ ಕಾರ್ಯಗತಗೊಳಿಸಲಾಗುವುದು ಎಂದು ಮುಖ್ಯಮಂತ್ರಿ ಶ್ರೀ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

'ಇಲಾಖೆಯಲ್ಲಿ ದಕ್ಷತೆ ಹೆಚ್ಚಿಸಲು ಅವರು ಶಾಸಕರ ಸಹಕಾರವನ್ನೂ ಬಯಸಿದರು.

ಸರ್ವಾಧಿಕಾರ ತನ್ನ ಮರಿಗಳನ್ನು ಒಂದೊಂದಾಗಿ ಹೊರಬಿಡುತ್ತಿರುವ ಸಂದರ್ಭವಿದು!

ತನಿಖಾ ಸಂಸ್ಥೆ: ಆಳುವವರ ಅಸ್ತ್ರವೇ?



ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಆದಾಯ ತೆರಿಗೆ ಇಲಾಖೆಯು ಬಿಬಿಸಿ- ಇಂಡಿಯಾ (ಬ್ರಿಟಿಷ್ ಬ್ರಾಡ್‌ಕಾಸ್ಟಿಂಗ್ ಕಾರ್ಪೊರೇಷನ್) ಸಂಸ್ಥೆಯ ದೆಹಲಿ ಮತ್ತು ಮುಂಬೈ ಕಚೇರಿಗಳನ್ನು ಪರಿಶೀಲನೆಗೆ ಒಳಪಡಿಸಿದ್ದು ಸಾಮಾನ್ಯ ಸಂದರ್ಭದಲ್ಲಾದರೆ ಇಷ್ಟೊಂದು ಕಾವು ಪಡೆಯುವ ಅಗತ್ಯವಿರಲಿಲ್ಲ. ಆದಾಯ ತೆರಿಗೆ ಇಲಾಖೆಯಂತಹ ಸಂಸ್ಥೆಗಳಿಗೆ ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ಮೇಲೆ ದೂರು, ಅನುಮಾನ ಬಂದರೆ ಸೂಕ್ತ ತನಿಖೆ ನಡೆಸುವ ಕಾನೂನಾತ್ಮಕ ಅಧಿಕಾರವಿದ್ದೇ ಇರುತ್ತದೆ. ಆದಾಯ ತೆರಿಗೆ ಕಾಯ್ದೆಯ ನಿಯಮಗಳ ಅಡಿ ದಾಳಿ, ಪರಿಶೀಲನೆ, ಶೋಧನೆಗಳಿಂದ ಮಾಧ್ಯಮ ಸಂಸ್ಥೆಗಳೂ ಹೊರತಾಗಬೇಕಿಲ್ಲ. ಇಂತಹ ಕ್ರಮವನ್ನು ಮಾಧ್ಯಮ ಸ್ವಾತಂತ್ರ್ಯದ ಮೇಲಿನ ದಾಳಿ ಎಂದು ಸಾರಾಸಗಟಾಗಿ ಖಂಡಿಸುವ ಅಗತ್ಯವೂ ಇರಲಿಲ್ಲ. ಅದು ಒಂದು ಸಾಮಾನ್ಯ ಸುದ್ದಿಯಾಗಿ ಪ್ರಸಾರವಾಗಬಹುದಾದ ಸಹಜ ಪ್ರಕ್ರಿಯೆ.

ಆದರೆ ಆದಾಯ ತೆರಿಗೆ ಇಲಾಖೆಯ ಇಂತಹ ಸಾಮಾನ್ಯ 'ಪರಿಶೀಲನೆ' ಅಂತರರಾಷ್ಟ್ರೀಯ ಮಹತ್ವ ಪಡೆಯುವಂತಾಗಲು, ಹಲವು ಪ್ರಶ್ನೆಗಳ ಹುಟ್ಟಿಗೆ, ಆರೋಪಗಳ ಪಟ್ಟಿಗೆ, ಸಮರ್ಥನೆಯ ನೇಯ್ಗೆಗೆ ಕಾರಣವಾಗಲು ಬಲವಾದ ಹಿನ್ನೆಲೆ ಇದೆ. ಒಕ್ಕೂಟ ಸರ್ಕಾರಕ್ಕೆ ಬಹಳಷ್ಟು ಮುಜುಗರ ತರಿಸಿದ 'ಇಂಡಿಯಾ: ದ ಮೋದಿ ಕ್ವೆಶ್ಚನ್' ಸಾಕ್ಷ್ಯಚಿತ್ರ ನಿರ್ಮಿಸಿದ್ದು ಇದೇ ಬಿಬಿಸಿ. 2002ರಲ್ಲಿ ಗುಜರಾತಿನಲ್ಲಿ ಸಾವಿರಕ್ಕೂ ಹೆಚ್ಚು ಜನರ ಸಾವಿಗೆ ಕಾರಣವಾದ ಕೋಮುಗಲಭೆ ಹಾಗೂ ಮುಖ್ಯಮಂತ್ರಿಯಾಗಿ ನರೇಂದ್ರ ಮೋದಿ ಅವರು ಅದನ್ನು ನಿಭಾಯಿಸಿದ ಬಗೆಯನ್ನು ಎರಡು ಭಾಗಗಳಲ್ಲಿ ನಿರೂಪಿಸುವ ಈ ಚಿತ್ರ ಸಹಜವಾಗಿಯೇ ಅಧಿಕಾರಸ್ಥರ ಕೆಂಗಣ್ಣಿಗೆ ಗುರಿಯಾಗಿತ್ತು.

ಇಂಗ್ಲೆಂಡಿನಲ್ಲಿ ಬಿಡುಗಡೆಯಾಗಿದ್ದ ಸಾಕ್ಷ್ಯಚಿತ್ರದ ಮೊದಲ ಭಾಗ ಭಾರತದಲ್ಲಿ ಅನಧಿಕೃತವಾಗಿ ಹರಿದಾಡಿ ಪರ– ವಿರೋಧದ ಸಂಘರ್ಷ ನಡೆಯುತ್ತಿರುವಾಗಲೇ ಒಕ್ಕೂಟ ಸರ್ಕಾರವು ಅದನ್ನು 'ದುರುದ್ದೇಶದ ವಸಾಹತುಶಾಹಿ ಮನಃಸ್ಥಿತಿ' ಎಂದು ಜರಿದು ನಿರ್ಬಂಧ ವಿಧಿಸಿತು.

ಈ ಬೆಳವಣಿಗೆಗಳು ಜನರ ಮನದೊಳಗೆ ಪೂರ್ತಿಯಾಗಿ ಇಳಿಯುವ ಮೊದಲೇ ಬಿಬಿಸಿ ಕಚೇರಿಗಳ ಮೇಲೆ ಆದಾಯ ತೆರಿಗೆ ಇಲಾಖೆ ಪರಿಶೀಲನೆಯ ಕ್ರಮ ಜರುಗಿಸಲಾಗಿದೆ. ಹಾಗಾಗಿ ಇಲ್ಲಿ ಕಾನೂನು ಕ್ರಮಕ್ಕಿಂತ ಅದನ್ನು ಜಾರಿಗೊಳಿಸಿದ ಸಂದರ್ಭ ಹೆಚ್ಚಿನ ಮಹತ್ವ ಪಡೆಯುತ್ತದೆ.

ವಾಸ್ತವದಲ್ಲಿ ಒಕ್ಕೂಟ ಸರ್ಕಾರದ ಮರ್ಜಿಯಲ್ಲೇ ಕಾರ್ಯನಿರ್ವಹಿಸುವ ಕೇಂದ್ರೀಯ ತನಿಖಾ ದಳ (ಸಿಬಿಐ), ಜಾರಿ ನಿರ್ದೇಶನಾಲಯ (ಇಡಿ), ಆದಾಯ ತೆರಿಗೆ ಇಲಾಖೆ (ಐಟಿ), ರಾಷ್ಟ್ರೀಯ ತನಿಖಾ ದಳದಂತಹ (ಎನ್‌ಐಎ) 'ಸ್ವತಂತ್ರ' ತನಿಖಾ ಸಂಸ್ಥೆಗಳು ರಾಜಕೀಯ ಹಿತಾಸಕ್ತಿಯ ಅಸ್ತ್ರಗಳಾಗಿ ಬಳಕೆಯಾಗುವುದರಲ್ಲಿ ಯಾವುದೇ ಮುಚ್ಚುಮರೆ ಉಳಿದಿಲ್ಲ. ಇದು, ಅಧಿಕಾರ ದುರ್ಬಳಕೆಯೇ ಸಹಜ ನಡೆ ಎಂಬಷ್ಟು ರಾಜಾರೋಷವಾಗಿ ನಡೆಯುತ್ತಿದೆ. ತನಿಖಾ ಸಂಸ್ಥೆಗಳ ದುರ್ಬಳಕೆಯನ್ನು ಎರಡು ಬಗೆಗಳಲ್ಲಿ ಗುರುತಿಸಬಹುದು. ಮೊದಲನೆಯದು ಅಸ್ತ್ರ. ಅಧಿಕಾರಸ್ಥರಿಗೆ ಆಗದವರ ವಿರುದ್ಧ ವ್ಯವಸ್ಥಿತವಾಗಿ ಬಳಸಲಾಗುತ್ತದೆ. ಎರಡನೆಯದು ಗುರಾಣಿ. ತಮಗೆ ಬೇಕಾದವರನ್ನು ರಕ್ಷಿಸಲು ಬಳಕೆಯಾಗುವಂತಹದು. ಸ್ವಪಕ್ಷೀಯರನ್ನು ಹದ್ದುಬಸ್ತಿನಲ್ಲಿ ಇಡಲು ಕೂಡ ತನಿಖಾಸ್ತ್ರ ಬಳಕೆಯಾಗುವುದುಂಟು.

ನೆಲದ ಕಾನೂನಿಗೆ ಯಾರೂ ಅತೀತರಾಗಬೇಕಿಲ್ಲ. ಹಾಗೆಯೇ ಯಾವುದೇ ತನಿಖೆ ನ್ಯಾಯೋಚಿತ, ನಿಷ್ಪಕ್ಷಪಾತ ಹಾಗೂ ಪಾರದರ್ಶಕ ಆಗಿರಬೇಕು ಎಂಬುದೂ ಪ್ರಾಥಮಿಕ ನಿರೀಕ್ಷೆ. ತನಿಖಾ ಏಜೆನ್ಸಿಗಳನ್ನು ರಾಜಕೀಯ ಲಾಭಕ್ಕಾಗಿ ದುರುಪಯೋಗಪಡಿಸಿಕೊಂಡರೆ ಅಥವಾ ಸಂಬಂಧವಿಲ್ಲದ ಕಾರಣಗಳಿಗಾಗಿ ವ್ಯಕ್ತಿಗಳು ಅಥವಾ ಸಂಸ್ಥೆಗಳನ್ನು ಗುರಿಯಾಗಿಸಿದರೆ ಅದು ಕಾನೂನಿನ ಆಶಯವನ್ನು ದುರ್ಬಲಗೊಳಿಸುತ್ತದೆ ಮತ್ತು ಸರ್ಕಾರದ ಮೇಲಿನ ಸಾರ್ವಜನಿಕ ನಂಬಿಕೆಯನ್ನೂ ಕುಗ್ಗಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ ತನಿಖಾಸ್ತ್ರವನ್ನು ವಿರೋಧಿ ರಾಜಕಾರಣಿಗಳು, ಮಾನವಹಕ್ಕುಗಳ ಹೋರಾಟಗಾರರು ಮತ್ತು ಪತ್ರಕರ್ತರ ಮೇಲೆ ಪ್ರಯೋಗಿಸಿ ಕಿರುಕುಳ ನೀಡಲಾಗುತ್ತಿದೆ. ಭಿನ್ನಾಭಿಪ್ರಾಯ ಮತ್ತು ವಾಕ್ ಸ್ವಾತಂತ್ರ್ಯವನ್ನು ಹತ್ತಿಕ್ಕುವುದು ಇಂತಹ ಕ್ರಮಗಳ ಗುರಿ.

ಇದಕ್ಕೆ ಬಹಳಷ್ಟು ಉದಾಹರಣೆಗಳು ಕಣ್ಣೆದುರಿಗಿವೆ: ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ವಿರುದ್ಧದ ಮೊಕದ್ದಮೆ, ಭ್ರಷ್ಟಾಚಾರ ಆರೋಪದ ಮೇಲೆ ಕಾಂಗ್ರೆಸ್ ನಾಯಕ ಪಿ.ಚಿದಂಬರಂ ಅವರ ಬಂಧನ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ವಿರುದ್ಧದ ಪ್ರಕರಣಗಳು, ದೆಹಲಿ ಸರ್ಕಾರದಲ್ಲಿ ಸಚಿವರಾಗಿದ್ದ ಸತ್ಯೇಂದರ್ ಜೈನ್ ಬಂಧನ, ದೆಹಲಿ ಉಪಮುಖ್ಯಮಂತ್ರಿ ಮನಿಷ್ ಸಿಸೋಡಿಯಾ ಅವರ ಮನೆಯ ಮೇಲಿನ ಸಿಬಿಐ ದಾಳಿ, ಮಾಧ್ಯಮ ಸಂಸ್ಥೆಗಳಾದ ನ್ಯೂಸ್ ಕ್ಲಿಕ್, ನ್ಯೂಸ್ ಲಾಂಡ್ರಿ, ದೈನಿಕ್ ಭಾಸ್ಕರ್, ಭಾರತ್ ಸಮಾಚಾರ್ ಮೇಲಿನ ಶೋಧನಾ ಕಾರ್ಯ, ಕಬೀರ್ ಕಲಾಮಂಚ್ ಕಾರ್ಯಕರ್ತರ ಬಂಧನ, ಕೇರಳದ ಪತ್ರಕರ್ತ ಸಿದ್ದಿಕ್ ಕಪ್ಪನ್ ಪ್ರಕರಣ...


ಈ ವಿಷಯದಲ್ಲಿ ರಾಜ್ಯ ಸರ್ಕಾರವೇನೂ ಹಿಂದೆ ಉಳಿದಿಲ್ಲ. ಈ ಹಿಂದೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಸಮಯದಲ್ಲಿ ಲೋಕಾಯುಕ್ತ ಸಂಸ್ಥೆಯನ್ನು ಅಪ್ರಸ್ತುತಗೊಳಿಸಿ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಹೆಸರಿನ ಕೈಗೊಂಬೆ ತನಿಖಾ ಸಂಸ್ಥೆ ಸ್ಥಾಪಿಸಿದ್ದನ್ನು, ಅದನ್ನು ಇತ್ತೀಚೆಗೆ ಹೈಕೋರ್ಟ್ ರದ್ದುಗೊಳಿಸಿದ್ದನ್ನು ನಾಡು ನೋಡಿದೆ. ಇದೀಗ ಬಿಜೆಪಿ ನೇತೃತ್ವದ ಸರ್ಕಾರದ ಮೇಲೆ 40 ಪರ್ಸೆಂಟ್ ಕಮಿಷನ್ ಆರೋಪ ಬಲಗೊಂಡಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹಿಂದಿನ ಸರ್ಕಾರದ 59 ಪ್ರಕರಣಗಳನ್ನು ಲೋಕಾಯುಕ್ತಕ್ಕೆ ವಹಿಸಲು ಮುಂದಾಗಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಮ್ಮ ಪಕ್ಷದ ನೇತೃತ್ವದ ಸರ್ಕಾರ ಬಂದಮೇಲೆ ಈಗಿನ ಸರ್ಕಾರದ ಎಲ್ಲಾ ಅಕ್ರಮಗಳನ್ನು ತನಿಖೆಗೆ ಒಳಪಡಿಸುವುದಾಗಿ ಗುಡುಗಿದ್ದಾರೆ. ಕೆ.ಎಸ್.ಈಶ್ವರಪ್ಪ ಸಾಚಾಚೀಟಿ ಪಡೆದಿದ್ದಾರೆ. ಡಿಕೆಶಿ ವಿರುದ್ಧ ಸಿಬಿಐ ತನಿಖೆ ಆಗಲಿ ಎಂದು ರಮೇಶ್ ಜಾರಕಿಹೊಳಿ ಬಯಸುತ್ತಿದ್ದಾರೆ ಮತ್ತು ಅದಕ್ಕಾಗಿ ದೆಹಲಿಗೆ ಎಡತಾಕುತ್ತಿದ್ದಾರೆ. ಹೀಗೆ ಎಲ್ಲರ ಬತ್ತಳಿಕೆಯಲ್ಲಿಯೂ ತನಿಖಾಸ್ತ್ರಗಳೇ!

ಒಟ್ಟಾರೆಯಾಗಿ, ಈ ನಿದರ್ಶನಗಳು ಬೇಡದವರಿಗೆ ಕಿರುಕುಳ, ಬೇಕಾದವರಿಗೆ ರಕ್ಷಣೆ ನೀಡಲು ತನಿಖಾ ಸಂಸ್ಥೆಗಳನ್ನು ಬಳಸಿಕೊಳ್ಳುವ ನಮೂನೆಗಳನ್ನು ಸೂಚಿಸುತ್ತವೆ. ಹಾಗೆಂದು ತನಿಖಾ ಸಂಸ್ಥೆಗಳ ಕ್ರಮಕ್ಕೆ ಗುರಿಯಾದ ಎಲ್ಲ ಆರೋಪಿಗಳು, ಮಾಧ್ಯಮ ಸಂಸ್ಥೆಗಳು ಸಾಚಾ ಎಂಬ ನಿರ್ಣಯಕ್ಕೆ ಬರಬೇಕಿಲ್ಲ. ಅವರಲ್ಲಿ ಅನೇಕರು ಶಿಕ್ಷಾರ್ಹ ಅಪರಾಧಿಗಳೇ ಆಗಿರಬಹುದು. ಆದರೆ ಮೇಲ್ನೋಟಕ್ಕೆ ಕಾಣುವಂತೆ ತನಿಖಾ ಸಂಸ್ಥೆಗಳ ಕ್ರಮ ದುರುದ್ದೇಶದಿಂದ ಕೂಡಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡುವ, ವಿಶ್ವಾಸ ಮೂಡಿಸುವ ಹೊಣೆ ಮತ್ತು ವರ್ತನೆಯನ್ನು ಅಧಿಕಾರಸ್ಥರೇ ಪ್ರಕಟಿಸಬೇಕಾಗುತ್ತದೆ.

'ಬಿಬಿಸಿ 'ಪ್ರಶ್ನೆ'ಯನ್ನು ಮಾಧ್ಯಮ ಸ್ವಾತಂತ್ರ್ಯದ ಮೇಲಿನ 'ದಾಳಿ' ಎಂದು ಸಮೀಕರಿಸುವುದು ಸರಿಯಲ್ಲ' ಎಂಬ ಮೇಲ್ಪದರದ ವಾದ ಮಂಡಿಸುವ 'ದೀಡ್' ಪಂಡಿತರಿಗೇನೂ ಕೊರತೆ ಇಲ್ಲ. ಅಂತಹವರು ವ್ಯವಸ್ಥೆಯ ಸಮರ್ಥನೆಯ ಭರದಲ್ಲಿ ತೀರಾ ಹತ್ತಿರ ಸುಳಿಯುತ್ತಿರುವ ಅಪಾಯವನ್ನು ಮರೆಯುತ್ತಾರೆ.

ತನಿಖಾ ಸಂಸ್ಥೆಗಳ ದುರುಪಯೋಗಕ್ಕೆ ಸುದೀರ್ಘ ಇತಿಹಾಸವೇ ಇದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬಹುಕಾಲ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ಕಾಲಕಾಲಕ್ಕೆ ಸರ್ವಾಧಿಕಾರದ ಎಲ್ಲ ಬಗೆಯ ಸೌಮ್ಯ ಮುಖಗಳನ್ನೂ ದಾಖಲಿಸಿದೆ. ಸಿಬಿಐ ಅನ್ನು ಕಾಂಗ್ರೆಸ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್ ಎಂದು ಕರೆಯುವಷ್ಟರ ಮಟ್ಟಿಗೆ ಅದು ಆ ದಿನಗಳಲ್ಲಿ ಅಗ್ಗಳಿಕೆಗೆ ಪಾತ್ರವಾಗಿತ್ತು! ಅಪರೂಪದ ಸಂದರ್ಭದಲ್ಲಿ ಚುನಾಯಿತ ರಾಜ್ಯ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತ ಹೇರಿಕೆಗೆ ಅಧಿಕಾರ ನೀಡುವ ಸಂವಿಧಾನದ 356ನೇ ವಿಧಿಯನ್ನು ಕಾಂಗ್ರೆಸ್ ನೇತೃತ್ವದ ಸರ್ಕಾರವು ಶಕ್ತ್ಯಾನುಸಾರ ಶೋಷಿಸಿದೆ. ಆದರೆ ಭ್ರಷ್ಟಾಚಾರ, ರಾಜಕೀಯ ಅನೈತಿಕತೆ, ಕೋಮುವಾದ, ಅಧಿಕಾರ ದಾಹ, ಚುನಾವಣಾ ಅಕ್ರಮಗಳಂತೆ ಅಧಿಕಾರಸ್ಥರ ಸರ್ವಾಧಿಕಾರಿ ವರ್ತನೆಯ ಗ್ರಾಫ್ ಕೂಡ ಕಾಲಾನುಕ್ರಮೇಣ ಊರ್ಧ್ವಮುಖಿಯಾಗಿ ಸಾಗಿರುವುದನ್ನು ಕಾಣಬಹುದು. ಅದೇನಿದ್ದರೂ ಐತಿಹಾಸಿಕ ಪ್ರಮಾದಗಳು ವರ್ತಮಾನದ ದುಷ್ಟತನದ ಸಮರ್ಥನೆಗೆ, ಸಬೂಬಿಗೆ ಸಾಮಗ್ರಿಯಾಗಬೇಕಿಲ್ಲ.

ಅಧಿಕಾರದ ಕೋಣೆಯಲ್ಲಿ ಕತ್ತಲು ಹೊತ್ತಿಸಿದ ಸರ್ವಾಧಿಕಾರ ತನ್ನ ಮರಿಗಳನ್ನು ಒಂದೊಂದಾಗಿ ಹೊರಬಿಡುತ್ತಿರುವ ಸಂದರ್ಭಕ್ಕೆ ನಾಡು ಸಾಕ್ಷಿಯಾಗಿದೆ. ಪ್ರಜಾಸತ್ತೆಯ ಬೆಳಕಿಗಾಗಿ ಸಕಲ ದಿಕ್ಕುಗಳನ್ನು ದಿಟ್ಟಿಸಬೇಕಷ್ಟೇ!



ಚುರುಮುರಿ



ತೂಕದ ಮಾತು

• ನಾರಾಯಣ ರಾಯಚೂರ್

'ರೀ, ನನ್ನ ಹುಬ್ಬಳ್ಳಿ ಫ್ರೆಂಡು ಭಾಮಿನಿ ವೇಟ್ ಇಳಿಸಿಕೊಂಡು ಸ್ಟೇಟಸ್‌ನಲ್ಲಿ ಸ್ಲಿಮ್ ಆಗಿ ಕಾಣ್ತಾ ಇದಾಳೆ, ಇಲ್ಲಿ ನೋಡಿ' ಮೊಬೈಲ್ ಮುಂದೆ ಹಿಡಿದಳು ಮಡದಿ.

'ಈವಾಗೇನು?... ವೇಟ್ ಗೈನ್, ವೇಟ್ ಲಾಸ್ ಸೆಂಟರ್‌ಗಳು ಓಣಿಗೊಂದು ಬಂದಿವೆ. ಜಾಸ್ತಿ ಆದರೆ ಕಡಿಮೆ ಮಾಡ್ಕೋಬಹುದು, ಕಡಿಮೆಯಾದರೆ ಜಾಸ್ತಿ ಮಾಡ್ಕೋಬಹುದು, ಪರ್ಸ್ ಮಾತ್ರ ಭರ್ತಿ ತುಂಬಿರಬೇಕು... ಅದಲ್ಲ ವಿಷಯ. ನಿಂಗೊಂದು ತಮಾಷೆ ಸುದ್ದಿ'.

'ನಿಮಗ್ ಬಿಡಿ, ಪೇಪರ್ ಎತ್ತಿಕೊಂಡ್ರೆ ಮೊದಲು ಕಾಣೋದೇ ತಮಾಷೆ ಸುದ್ದಿಗಳು'.

'ಕಂಡಕ್ಟರ್ ಪೋಸ್ಟ್‌ಗೆ ಸಂದರ್ಶನಕ್ಕೆ ಬಂದ ಅಭ್ಯರ್ಥಿಗಳು ದೈಹಿಕ ಪರೀಕ್ಷೆ ಎದುರಿಸುವಾಗ ಮಿನಿಮಮ್ ವೇಟ್ 55 ಕೆ.ಜಿಗೂ ಕಮ್ಮಿ ಇದ್ದವರು ಮಾಡಿರೊ ಉಪಾಯಗಳನ್ನ ನೋಡಿದ್ರೆ ಬಿದ್ದೂ ಬಿದ್ದು ನಗ್ತೀಯ'.

'ಹೋದ ವರ್ಷ ಪಿಎಸ್ಐ ಟೆಸ್ಟ್‌ಗಳಲ್ಲಿ ಬ್ಲೂಟೂತ್ ಉಪಯೋಗಿಸಿ ರಾದ್ಧಾಂತ ಆಗಿತ್ತಲ್ಲ'.

'ಅದೇ ತರಹ, ಆದ್ರೆ ಸ್ವಲ್ಪ ಭಿನ್ನ. 55 ಕೆ.ಜಿ ಬರಬೇಕು ಅಂತ ತೂಕದ ಬಟ್ಟುಗಳನ್ನು ಉಡುಪುಗಳಲ್ಲಿ ಅಡಗಿಸಿಕೊಳ್ಳೋದು, ಕಬ್ಬಿಣದ ಸರಪಳಿ ಸುತ್ತಿಕೊಳ್ಳೋದು, ಕಬ್ಬಿಣದ ರಾಡ್‌ಗಳನ್ನ ಕಾಲಿಗೆ ಕಟ್ಟಿಕೊಳ್ಳೋದು, ಅಷ್ಟೇ ಅಲ್ಲ ಇದಕ್ಕಾಗಿ ವಿಶೇಷ ಶರ್ಟ್‌ಗಳನ್ನ ಹೊಲಿಸಿ ಒಳಗಡೆ ಕಬ್ಬಿಣದ ವಸ್ತುಗಳನ್ನು ತುಂಬಿ ಗಂಟೆಗಟ್ಟಲೆ ಅಡಗಿಸಿಕೊಂಡು ಸಂದರ್ಶನ ನೀಡಿದ್ದಾರಂತೆ. ನಿಜವಾದ 'ಐರನ್ ಮ್ಯಾನ್' ಇವ್ರೇ ಕಣೇ'.

'ನೋಡ್ರೀ, ನಮ್ಮ ಯುವಕರ ಪಾಡು. ಪಾಪ, ಉದ್ಯೋಗಕ್ಕಾಗಿ ಎಷ್ಟು ಕಷ್ಟ. ಆದರೂ ಈ ತರಹ ಅಡ್ಡದಾರಿ, ಕೆಟ್ಟ ತಂತ್ರ ಮಾಡೋದು ಈಗಿಂದ್ಲೇ ಕಲಿಬಾರ್ದು ಬಿಡಿ'.

'ಎಂಥೆಂಥಾ ತಂತ್ರಗಳು ಹೊಳೀತಾವೆ ನೋಡು! ಅದು ಪಾಯಿಂಟು. ಒಪ್ಪಿದೆ ಅಡ್ಡದಾರಿ ಹಿಡೀಬಾರ್ದು, ನಮ್ಮ ವ್ಯವಸ್ಥೆ ಸರಿಯಾಗಿದ್ರೆ ಆಳೋರು, ಆಳಿಸಿಕೊಳ್ಳೋರು ನೀತಿ ನಿಯಮ ಪಾಲಿಸೋ ನಿಯತ್ತಿನ ಮಕ್ಕಳಾಗಿರ್ತಿದ್ರು.

'ಹಾಗಂತ ಒಬ್ಬರ ಮೇಲೊಬ್ಬರು ಹಾಕ್ತಾ, ಕರ್ತವ್ಯ, ನಿಯಮ, ನ್ಯಾಯ ಬಿಡೋಕಾಗತ್ಯೇ? ಆವಾಗ ನಮಗೂ ಕಾನೂನು ಉಲ್ಲಂಘನೆ ಮಾಡೋರ್ಗೂ ಏನು ವ್ಯತ್ಯಾಸ?'

'ಅದಪ್ಪ... 'ತೂಕ'ದ ಮಾತು!

ಸಂಗತ

ಬಾಲ್ಯವಿವಾಹ ಮತ್ತು ವೈಯಕ್ತಿಕ ಕಾನೂನು

ಪೋಕ್ಸೊ ಕಾಯ್ದೆ ಕುರಿತು ಹೈಕೋರ್ಟ್‌ಗಳ ಭಿನ್ನ ವ್ಯಾಖ್ಯಾನಗಳು ಗಮನಾರ್ಹವಾಗಿವೆ

• ಸಿ.ಎನ್.ರಾಮಚಂದ್ರನ್

ಬಾಲ್ಯವಿವಾಹದ ವಿರುದ್ಧ ಅಸ್ಸಾಂ ಸರ್ಕಾರ ಜನವರಿಯಿಂದ ಒಂದು ಅಭಿಯಾನವನ್ನೇ ಪ್ರಾರಂಭಿಸಿದೆ. 18 ವರ್ಷವಾಗದ ಯುವತಿ ಅಥವಾ 21 ವರ್ಷವಾಗದ ಯುವಕನ ವಿವಾಹವು 'ಬಾಲ್ಯವಿವಾಹ'ದ ವ್ಯಾಪ್ತಿಗೆ ಒಳಪಡುತ್ತದೆ. ಸರ್ಕಾರದ ಈ ಅಭಿಯಾನವು ಎಷ್ಟು ಕಠಿಣವಾಗಿದೆಯೆಂದರೆ, 'ಇದು ಬಾಲ್ಯವಿವಾಹ' ಎಂದು ಗುರುತಿಸಿದ ಕೂಡಲೇ ಪತಿಯನ್ನು ಬಂಧಿಸಿ ಜೈಲಿಗೆ ಕಳಿಸಲಾಗುತ್ತಿದೆ. ಪತ್ರಿಕಾ ವರದಿಗಳ ಪ್ರಕಾರ, ಈವರೆಗೆ ಈ ರೀತಿ ಬಂಧನಕ್ಕೆ ಒಳಗಾಗಿರುವವರ ಸಂಖ್ಯೆ ಮೂರು ಸಾವಿರಕ್ಕಿಂತ ಹೆಚ್ಚು.


ಹೀಗೆ ಬಾಲ್ಯವಿವಾಹದ ಸಂಬಂಧ ಬಂಧಿತರಾದ ಕುಟುಂಬವೊಂದರ ಸ್ತ್ರೀಯರು ಆ ರಾಜ್ಯದ ಲಾಹರಿಪಾಡಾ ಎಂಬ ಪೊಲೀಸ್ ಠಾಣೆಯ ಎದುರು ಇತ್ತೀಚೆಗೆ ಪ್ರತಿಭಟನೆ ನಡೆಸಿದರು. ಬಂಧಿತ ವ್ಯಕ್ತಿಯೊಬ್ಬನೇ ತಮ್ಮ ಕುಟುಂಬದಲ್ಲಿ ದುಡಿಯುವವನಾಗಿರುವುದರಿಂದ ಈಗ ತಾವು ಅನಾಥರಾಗಿದ್ದೇವೆ, ಅನ್ನಾಹಾರಕ್ಕೂ ಗತಿಯಿಲ್ಲದಂತೆ ಆಗಿದೆ ಎಂದು ಅಳಲು ತೋಡಿಕೊಂಡರು.

ಇವರಂತೆಯೇ ಬಂಧನಕ್ಕೆ ಒಳಗಾಗಿರುವ ಇತರ ಕುಟುಂಬಗಳಲ್ಲಿ ಎಲ್ಲ ಧರ್ಮಗಳಿಗೂ ಸೇರಿದವರು ಇದ್ದಾರೆ ಎಂದು ಅಸ್ಸಾಂ ಮುಖ್ಯಮಂತ್ರಿ ಹೇಳಿದ್ದಾರೆ. ಆದರೂ ವಾಸ್ತವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಬಂಧಿತರಾಗಿರುವವರು ಇಸ್ಲಾಂ ಧರ್ಮಕ್ಕೆ ಸೇರಿದವರು. ಕಾರಣ, ಅವರು ಅನುಸರಿಸುವ ಶರಿಯತ್ ಕಾನೂನು. ಈ ಕಾನೂನಿನ ಪ್ರಕಾರ, ವಿವಾಹಕಾಲದಲ್ಲಿ ಕನ್ಯೆಗೆ 15 ವರ್ಷಗಳಾಗಿದ್ದರೆ ಸಾಕು, ಆ ವಿವಾಹವು ಸಿಂಧು. ಈಗೊಂದು ವರ್ಷದತನಕ ಇಂತಹ ವಿವಾಹಗಳನ್ನು ನ್ಯಾಯಾಲಯಗಳೂ ಮಾನ್ಯ ಮಾಡುತ್ತಿದ್ದವು.

ಈ ಸಂದರ್ಭದಲ್ಲಿ, ಕೇರಳ ಹೈಕೋರ್ಟ್ 2022ರಲ್ಲಿ ನೀಡಿರುವ ತೀರ್ಪನ್ನು ಉಲ್ಲೇಖಿಸಬೇಕು. 2021ರಲ್ಲಿ, 31 ವರ್ಷದ ಮುಸ್ಲಿಂ ಪುರುಷನೊಬ್ಬ 18 ವರ್ಷಗಳಾಗದ ಅದೇ ಸಮುದಾಯದ ಕನ್ಯೆಯನ್ನು ಮದುವೆಯಾದ. ಪಶ್ಚಿಮ ಬಂಗಾಳದ ಆ ಕನ್ಯೆಯನ್ನು ಮದುವೆಯ ನಂತರ ಕೇರಳಕ್ಕೆ ಕರೆದುಕೊಂಡು ಬಂದು, ಅಲ್ಲಿಯೇ ನೆಲೆಸಿದ. ಆನಂತರ, ಗರ್ಭಿಣಿಯಾದ ಆಕೆಯು ಆರೋಗ್ಯ ಕೇಂದ್ರವೊಂದಕ್ಕೆ ತಪಾಸಣೆಗೆಂದು ತೆರಳಿದ್ದಳು. ಅಲ್ಲಿ ಆಕೆಯನ್ನು ಪರೀಕ್ಷಿಸಿದ ವೈದ್ಯರು, ಆಕೆ ಇನ್ನೂ ಅಪ್ರಬುದ್ಧಳೆಂಬುದನ್ನು ಅರಿತು, ಆ ವಿಷಯವನ್ನು ಪೊಲೀಸ್ ಠಾಣೆಯ ಗಮನಕ್ಕೆ ತಂದರು. ಕೂಡಲೇ, ಅಪಹರಣ, ಅತ್ಯಾಚಾರ, ಬಾಲ್ಯವಿವಾಹದಂತಹ ಅಪರಾಧಗಳ ಆರೋಪದಲ್ಲಿ ಪತಿಯನ್ನು ಪೊಲೀಸರು ಬಂಧಿಸಿ ಜೈಲಿನಲ್ಲಿಟ್ಟರು. ಜಾಮೀನು ಕೋರಿ ಆತ ಕೇರಳ ಹೈಕೋರ್ಟ್ ಮೆಟ್ಟಿಲೇರಿದ. ಆ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಾಲಯದ ಏಕಸದಸ್ಯ ಪೀಠವು 2022ರ ನವೆಂಬರ್ 18ರಂದು ನೀಡಿದ ತೀರ್ಪಿನಲ್ಲಿ ಆತನಿಗೆ ಜಾಮೀನನ್ನು ನಿರಾಕರಿಸಿತು.

ಆರೋಪಿಯ ವಕೀಲರು, 'ಇದೊಂದು ನ್ಯಾಯಯುತ ವಿವಾಹ. ಮುಸ್ಲಿಮರಿಗೆ ಅನ್ವಯವಾಗುವ ಶರಿಯತ್ ಕಾನೂನಿನ ಪ್ರಕಾರ, ಕನ್ಯೆಗೆ 15 ವರ್ಷಗಳಾಗಿದ್ದರೆ ಸಾಕು, ಅವಳು ವಿವಾಹಕ್ಕೆ ಅರ್ಹಳು. ಈ ಮೊಕದ್ದಮೆಯ ಸಂದರ್ಭದಲ್ಲಿ, ಮದುವೆಯಾಗುವಾಗ ಆಕೆಗೆ 15 ವರ್ಷವಾಗಿತ್ತು. ಆದ್ದರಿಂದ ಆರೋಪಿ ಜಾಮೀನು ಪಡೆಯಲು ಅರ್ಹನಾಗಿದ್ದಾನೆ' ಎಂದು ವಾದಿಸಿದರು.

ಆದರೆ, ನ್ಯಾಯಮೂರ್ತಿಗಳು ಆ ವಾದವನ್ನು ಒಪ್ಪಲಿಲ್ಲ. ಅವರು ನೀಡಿದ ತೀರ್ಪಿನ ಮುಖ್ಯಾಂಶಗಳು ಹೀಗಿವೆ: 'ಬಹುಕಾಲದಿಂದ ಮುಸ್ಲಿಮರು ಶರಿಯತ್ ಕಾನೂನಿನ ಪ್ರಕಾರ ನಡೆದುಕೊಳ್ಳುತ್ತಿದ್ದಾರೆ ಮತ್ತು ಅದು ಸಿಂಧುವಾಗಿದೆ ಕೂಡಾ. ಆದರೆ, 2006ರಲ್ಲಿ ಪೋಕ್ಸೊ ಕಾಯ್ದೆ (ದಿ ಪ್ರೊಟೆಕ್ಷನ್ ಆಫ್ ಚಿಲ್ಡ್ರನ್ ಫ್ರಮ್ ಸೆಕ್ಷುಯಲ್ ಅಫೆನ್ಸಸ್ ಆ್ಯಕ್ಟ್– ಮಕ್ಕಳನ್ನು ಲೈಂಗಿಕ ಅಪರಾಧಗಳಿಂದ ರಕ್ಷಿಸುವ ಕಾಯ್ದೆ) ಜಾರಿಯಾಯಿತು. ಈ ಕಾಯ್ದೆಯು ಪ್ರಬುದ್ಧತೆ ಇಲ್ಲದವರನ್ನು, ಮಕ್ಕಳನ್ನು, ದುರ್ಬಲರನ್ನು ರಕ್ಷಿಸಲು ರಚಿಸಿರುವಂತಹ ವಿಶಿಷ್ಟ ಕಾಯ್ದೆ. ಆದ್ದರಿಂದ ಇದರ ನಿಯಮಗಳು ಎಲ್ಲ ವೈಯಕ್ತಿಕ ಕಾನೂನುಗಳನ್ನೂ (ಪರ್ಸನಲ್ ಲಾಸ್) ಮೀರುತ್ತವೆ. ಶರಿಯತ್‌ಗೆ ಕೂಡಾ ಪೋಕ್ಸೊ ಕಾಯ್ದೆ ಅನ್ವಯಿಸುತ್ತದೆ'.



ಆದರೆ, ಗುವಾಹಟಿ ಹೈಕೋರ್ಟ್ ಇತ್ತೀಚೆಗೆ ಇದಕ್ಕೆ ವ್ಯತಿರಿಕ್ತವಾದ ತೀರ್ಪು ನೀಡಿದ್ದು, 9 ಮಂದಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಅಸ್ಸಾಂ ಸರ್ಕಾರಕ್ಕೆ ಈ ಪ್ರಶ್ನೆಗಳನ್ನು ಕೇಳಿದೆ: 'ಇದರಲ್ಲಿ ಪೋಕ್ಸೊ ಕಾಯ್ದೆ ಅಡಿ ಬರುವ ಅಪರಾಧ ಯಾವುದು? ಈ ಬಂಧನ ಕಾರ್ಯಾಚರಣೆಯು ಪ್ರಜೆಗಳ ಖಾಸಗಿ ಬದುಕಿನ ಮೇಲೆ ವಿನಾಶಕಾರಿ ಪರಿಣಾಮವನ್ನು ಬೀರುತ್ತಿದೆ. ಮೊದಲು ಆರೋಪಿಗಳ ವಿಚಾರಣೆ ನಡೆಯಲಿ, ಆನಂತರ ಅವರು ಅಪರಾಧಿಗಳೆಂದು ಸಾಬೀತಾದರೆ, ಅವರಿಗೆ ಶಿಕ್ಷೆಯಾಗುವುದಿಲ್ಲವೇ?'

ಎಲ್ಲ ಪ್ರಜೆಗಳಿಗೂ ಸಮಾನವಾಗಿ ಅನ್ವಯವಾಗಬೇಕೆನ್ನುವ 2006ರ 'ಬಾಲ್ಯವಿವಾಹ ತಡೆ ಶಾಸನ' ಮತ್ತು ಇಸ್ಲಾಂ ಧರ್ಮಾನುಯಾಯಿಗಳಿಗೆ ಅನ್ವಯಿಸುವ 1936ರ 'ಶರಿಯತ್ ಶಾಸನ'ದ ನಡುವಿನ ವೈರುಧ್ಯವನ್ನು ಈಗ ಸುಪ್ರೀಂ ಕೋರ್ಟ್ ಮಾತ್ರ ಬಗೆಹರಿಸಲು ಸಾಧ್ಯ.

ಇಂತಹ ಪ್ರಕರಣಗಳು, ಒಂದು ಬೃಹತ್ ರಾಷ್ಟ್ರವು 'ಬಹುತ್ವ'ವೆಂಬ ಅಮೂರ್ತ ತತ್ವವನ್ನು ವಾಸ್ತವದಲ್ಲಿ ಅಳವಡಿಸಿಕೊಳ್ಳಲು ಮುಂದಾದಾಗ ಅನೇಕಾನೇಕ ಸಂದಿಗ್ಧಗಳನ್ನು ಹಾಗೂ ಸೂಕ್ಷ್ಮ ದ್ವಂದ್ವಗಳನ್ನು ಎದುರಿಸಬೇಕಾಗುತ್ತದೆ ಎಂಬ ಕಠೋರ ಸತ್ಯವನ್ನು ಮನೋಜ್ಞವಾಗಿ ನಿದರ್ಶಿಸುತ್ತವೆ.

ವಾಚಕರ ವಾಣಿ

ರಿಯಾಯಿತಿ ಘೋಷಣೆ ಜನಪರವಲ್ಲ

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರವು ಸಂಚಾರ ನಿಯಮ ಉಲ್ಲಂಘನೆ ದಂಡದ ಮೇಲಿನ ಶೇ 50 ರಿಯಾಯಿತಿ ಅವಧಿ ವಿಸ್ತರಣೆಗೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿರುವುದು ದುರದೃಷ್ಟಕರ. ರಿಯಾಯಿತಿಗಳು ಬಳಕೆದಾರರನ್ನು ನಿಯಮ ಉಲ್ಲಂಘಿಸುವಂತೆ ಉತ್ತೇಜಿಸುತ್ತವೆ. ಅದರಲ್ಲೂ ಮುಖ್ಯವಾಗಿ ಸಂಚಾರ ನಿಯಮ ಉಲ್ಲಂಘನೆಯು ಹೆಚ್ಚಿನಾಂಶ ರಸ್ತೆ ಅಪಘಾತಕ್ಕೆ, ಆ ಮೂಲಕ ಸಾವು ನೋವಿಗೆ ಕಾರಣವಾಗುತ್ತದೆ. ರಾಜ್ಯ ಸರ್ಕಾರವು ಕಾನೂನುಗಳನ್ನು ಅನುಸರಿಸದವರಿಗೆ ರಿಯಾಯಿತಿಗಳನ್ನು ನೀಡುವ ಬದಲು, ಕಾನೂನು ಪಾಲನೆಗೆ ಮತ್ತು ಅದರ ಪರಿಣಾಮಕಾರಿ ಅನುಷ್ಠಾನಕ್ಕೆ ಪೂರಕವಾಗುವಂತಹ ಕ್ರಮಗಳನ್ನು ಕೈಗೊಳ್ಳಬೇಕು. ಕಾನೂನಿನ ಬಗೆಗಿನ ಎಚ್ಚರವನ್ನು ಖಚಿತಪಡಿಸಿಕೊಳ್ಳಬೇಕು. ದಂಡಕ್ಕೆ ರಿಯಾಯಿತಿಯು ಜನಪರವಾದ ಕ್ರಮವಲ್ಲ, ಜನವಿರೋಧಿ ಕ್ರಮ.

ವಿಜಯಕುಮಾರ್ ಎಚ್.ಕೆ., ರಾಯಚೂರು

ಬಿಲ್ ವಿದ್ಯೆ!

ಗುರಿಯನ್ನೇ ನೋಡದೆ
ಬಾಣ ಹೊಡೆಯುವುದು
ಅಂದಿನ ಬಿಲ್ಲುಗಾರರ
ಬಿಲ್ವಿದ್ಯೆ,
ಕಾಮಗಾರಿಯನ್ನೇ ಮಾಡದೆ
ಹಣ ಪಡೆಯುವುದು
ಇಂದಿನ ಕೆಲವು
ಗುತ್ತಿಗೆದಾರರ
ಬಿಲ್ ವಿದ್ಯೆ!

ಡಾ. ವಸಂತ ಕುಮಾರ್
ಯರಬಳ್ಳಿ, ಹಿರಿಯೂರು

ಇದೆಂಥಾ ಸಂಸ್ಕೃತಿ ನಿಮ್ಮದು?

'ಟಿಪ್ಪು ಎಂದೊಡನೇ ಸಿದ್ದರಾಮಯ್ಯ ಬಂದುಬಿಡುತ್ತಾರೆ. ಉರಿಗೌಡ, ನಂಜೇಗೌಡ ಟಿಪ್ಪುವನ್ನು ಮೇಲೆ ಕಳುಹಿಸಿದಂತೆ, ಇವರನ್ನೂ ಮೇಲೆ ಕಳುಹಿಸಬೇಕು, ಹೊಡೆದುಹಾಕಬೇಕು' ಎಂದು ಉನ್ನತ ಶಿಕ್ಷಣ ಸಚಿವ ಡಾ. ಅಶ್ವತ್ಥ ನಾರಾಯಣ ಅವರು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಉನ್ನತ ಶಿಕ್ಷಣ ಸಚಿವರಾದವರು ಈ ರೀತಿ ಮಾತನಾಡಬಹುದೇ? ಇದೆಯೇ ಇವರು ನೀಡುವ ಉನ್ನತ ಶಿಕ್ಷಣ?

ಅಧಿಕಾರದಲ್ಲಿ ಇರುವವರು, ಬಹಳಷ್ಟು ಅಮಾಯಕ ಹಿಂಬಾಲಕರು ಇರುವಂಥವರು ಇಂತಹ ಮಾತುಗಳನ್ನು ಆಡುವುದು ಅಪಾಯಕರ. ಚುನಾವಣೆ ಸಮಯ, ನಿಮ್ಮ ನಿಮ್ಮ ಧ್ಯೇಯಗಳ ಬಗ್ಗೆ ಮಾತನಾಡಿ. ಅದುಬಿಟ್ಟು, ಹೊಡಿ, ಬಡಿ ಎನ್ನುವುದೇ? ಇದೆಂಥಾ ಸಂಸ್ಕೃತಿ ನಿಮ್ಮದು? ಇಂತಹ ಮಾತುಗಳು ಖಂಡಿತ ನಿಮಗೆ ಶ್ರೇಯಸ್ಕರವಲ್ಲ, ಸಚಿವ ಮಹಾಶಯರೇ.

ಜಿ.ಎಚ್.ವೆಂಕಟೇಶ್ ಮೂರ್ತಿ, ಚಿಂತಾಮಣಿ

ಹೊಸ ಚಿತ್ರಮಂದಿರ ನಿರೀಕ್ಷೆ ನೋವು ತಂದೀತು

'ಚೈತನ್ಯ ಇರುವ ನಟರು ಚಿತ್ರರಂಗದ ಬಗೆಗಿನ ಕಾಳಜಿಗಾದರೂ ಒಂದು ಚಿತ್ರಮಂದಿರ ನಿರ್ಮಿಸಿ ನಡೆಸಲಿ' ಎಂಬ ಮಲ್ಲಿಕಾರ್ಜುನ ಅವರ ಅಭಿಪ್ರಾಯ (ವಾ.ವಾ., ಫೆ. 17) ಸರಿಯಿದೆ. ಆದರೆ, ಅದು ಕಾರ್ಯಗತ ಆಗದಿದ್ದರೆ ನೋವನ್ನು ತರುತ್ತದೆ. ದಶಕಗಳ ಹಿಂದೆ ಬೆಂಗಳೂರಿನ ಜಯನಗರದಲ್ಲಿ ಸರ್ಕಾರಿ ಒಡೆತನದ 'ಪೂನಂ' ಎಂಬ ಹೆಸರಿನ ಚಿತ್ರಮಂದಿರ ಇತ್ತು. ಕನ್ನಡಪರರ ಒತ್ತಡಗಳಿಂದ ಸರ್ಕಾರವು ಅದಕ್ಕೆ 'ಪುಟ್ಟಣ್ಣ ಕಣಗಾಲ್' ಎಂಬ ಹೆಸರನ್ನಿಟ್ಟು ನಡೆಸುತ್ತಿತ್ತು. ವಾಣಿಜ್ಯ ದೃಷ್ಟಿಯಿಂದ ಸರ್ಕಾರವೇ ಅದನ್ನು ಕೆಡವಿ ವಾಣಿಜ್ಯ ಮಳಿಗೆ ನಿರ್ಮಿಸಿದೆ. ಪುಟ್ಟಣ್ಣ ಅವರೇ ಮುಂದೆತಂದ ನಟರಾದ ವಿಷ್ಣುವರ್ಧನ್ ಮತ್ತು ಅಂಬರೀಷ್ ಅವರಿಂದಲೂ ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಅಂಬರೀಷ್ ಅವರಂತೂ ಸಚಿವರಾಗಿದ್ದರು, ಚಿತ್ರರಂಗದ ಮೇಲೆ ಹಿಡಿತವನ್ನೂ ಹೊಂದಿದ್ದರು.

ಇನ್ನು ಚೈತನ್ಯ ಇರುವ ನಟರಿಂದ ಹೊಸ ಚಿತ್ರಮಂದಿರ ನಿರ್ಮಾಣ ನಿರೀಕ್ಷೆ ಬಿಸಿಲುಕುದುರೆಯೆ. ಚಿತ್ರರಂಗದಲ್ಲಿ ಮಿಂಚಿ ಮುಂದಿನ ಕ್ಷೇತ್ರದತ್ತ ಮುನ್ನುಗ್ಗುವವರೇ ಹೆಚ್ಚು. ಇದು ಒಂದು ಚಿಮ್ಮುಹಲಗೆ ಅಷ್ಟೆ. ಅನೇಕರು ಬೇರೆಬೇರೆ ರೀತಿಯ ಸಮಾಜಸೇವೆ ಮಾಡುವುದನ್ನು ಕಂಡಿದ್ದೇವೆ. ಆದರೆ ಮೂಲ ಚಿತ್ರರಂಗವನ್ನು ಉಳಿಸಿಕೊಳ್ಳುವತ್ತ ಚೈತನ್ಯ ಉಳ್ಳ ನಟರು ಕೂಡಲೇ ಗಮನಹರಿಸಲಿ. ಕಡಿಮೆ ಬೆಲೆಗೆ ಕುಟುಂಬದ ಸದಸ್ಯರೆಲ್ಲಾ ಚಿತ್ರಮಂದಿರದಲ್ಲೇ ಚಲನಚಿತ್ರ ನೋಡುವಂತಹ ಅವಕಾಶ ಲಭ್ಯವಾಗಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಡವರನ್ನು ಹೊರಗಿಡುವುದು ಎಷ್ಟು ಸರಿ?

ಚುನಾವಣಾ ಸಮಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೆಚ್ಚಿನ ಜನಪ್ರಿಯ ಘೋಷಣೆಗಳನ್ನು ಮಾಡದೆ ಅಭಿವೃದ್ಧಿಗೆ ಪೂರಕವಾದ ಬಜೆಟ್ ಮಂಡಿಸಿದ್ದಾರೆ. ಆದರೆ, ಎರಡು ವರ್ಷಗಳಿಂದ ಕೇಂದ್ರ ಸರ್ಕಾರದ ಯೋಜನೆಗಳಿಗೆ ಸಿಗುವ ಅನುದಾನ ಕಡಿಮೆಯಾಗುತ್ತಿರುವುದು ಕಂಡುಬರುತ್ತಿದೆ. ಕೇಂದ್ರದ ಯೋಜನೆಗಳು ಮುಖ್ಯವಾಗಿ ಬಡವರ ಆರ್ಥಿಕ ಉನ್ನತಿಗಾಗಿ ಕೈಗೊಳ್ಳಲಾಗುವ ಕಾರ್ಯಕ್ರಮಗಳು, ಅವು ಬಡವರ ಆದಾಯವನ್ನು ಹೆಚ್ಚಿಸುತ್ತವೆ. 15ನೇ ಹಣಕಾಸು ಆಯೋಗವು ಕರ್ನಾಟಕ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ರಾಜ್ಯವೆಂದು ಹೇಳಿ, ಕೇಂದ್ರದ ತೆರಿಗೆ ಪಾಲು ಹಾಗೂ ಅನುದಾನವನ್ನು ಕಡಿತಗೊಳಿಸಿದೆ. ನೀತಿ ಆಯೋಗದ ಪ್ರಕಾರ, ದಕ್ಷಿಣದ ಎಲ್ಲ ರಾಜ್ಯಗಳಿಗಿಂತ ಬಡತನದ ಪ್ರಮಾಣ ಕರ್ನಾಟಕದಲ್ಲಿ ಹೆಚ್ಚಿದೆ. ಆದರೆ ಬಡತನ ನಿರ್ಮೂಲನೆಗಾಗಿ ದಕ್ಷಿಣದ ಇತರ ರಾಜ್ಯಗಳಿಗಿಂತ (ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ) ಕಡಿಮೆ ಅನುದಾನವನ್ನು ಕರ್ನಾಟಕವು ಪಡೆಯುತ್ತಿದೆ. ಬೆಂಗಳೂರಿನಲ್ಲಿರುವ ಐಟಿ ಹಾಗೂ ಇತರ ಉದ್ದಿಮೆಗಳ ಉತ್ತಮ ನಿರ್ವಹಣೆಯಿಂದಾಗಿ ಕರ್ನಾಟಕದ ಜಿಡಿಪಿ ಬೆಳೆಯುತ್ತಿದೆ. ಆದರೆ ಇದರ ಅನುಕೂಲ ಉತ್ತರ ಕರ್ನಾಟಕದಲ್ಲಿರುವ ಬಡವರಿಗೆ ಆಗಿದೆಯೇ?

ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ (ಪಿಎಂಎವೈಜಿ) ಕೇಂದ್ರ ಸರ್ಕಾರ ₹ 3 ಕೋಟಿಗೂ ಅಧಿಕ ಮನೆಗಳನ್ನು ಗ್ರಾಮೀಣ ಬಡವರಿಗೆ ಹಂಚಿದೆ. ಆದರೆ ಕರ್ನಾಟಕದ ಬಡವರಿಗೆ ಈ ಯೋಜನೆಯ ಪ್ರಯೋಜನ ದೊರಕಿಲ್ಲ. ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಂದ ರಾಜ್ಯದ ಬಡವರನ್ನು ಹೊರಗಿಡುವುದು ಎಷ್ಟು ಸೂಕ್ತ? ಕೇಂದ್ರ ಸರ್ಕಾರ ಮಾಡುವ ರಸ್ತೆ, ರೈಲು ಮಾರ್ಗಗಳ ನಿರ್ಮಾಣಕ್ಕೂ ಇನ್ನು ಮುಂದೆ ರಾಜ್ಯ ಸರ್ಕಾರ ತನ್ನ ಪಾಲನ್ನು ನೀಡಬೇಕಾಗುತ್ತದೆ ಎನ್ನುವುದು ಮುಖ್ಯಮಂತ್ರಿಯವರ ಬಜೆಟ್ ಭಾಷಣದಲ್ಲಿ ತಿಳಿದುಬರುತ್ತದೆ.

ಡಾ. ದೇವಿದಾಸ ಪ್ರಭು, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಒಳಿತಿನ ಎಚ್ಚರಕ್ಕೆ ಶಿವರಾತ್ರಿ

• ಎಸ್. ಸೂರ್ಯಪ್ರಕಾಶ ಪಂಡಿತ್



ಇಂದು ಮಹಾಶಿವರಾತ್ರಿ

'ರಾತ್ರಿಯ ಹೊತ್ತು ಒಳ್ಳೆಯ ನಿದ್ರೆ ಮಾಡತಕ್ಕದ್ದು'. ಇದು ಲೋಕವ್ಯವಹಾರ; ಆರೋಗ್ಯಸೂತ್ರವೂ ಹೌದು; ಮಾತ್ರವಲ್ಲ, ಆಯಾಸಪರಿಹಾರಕ್ಕೆ ಜೀವಿಗಳು ಆಶ್ರಯಿಸುವ ಸಹಜಪ್ರವೃತ್ತಿ ಕೂಡ.

ಆದರೆ ಶಿವರಾತ್ರಿಯ ಆಚರಣೆ ಇದಕ್ಕೆ ವಿರುದ್ಧವಾದ ನಿಲುವನ್ನು ಪ್ರತಿಪಾದಿಸುತ್ತದೆ: 'ಶಿವರಾತ್ರಿಯ ದಿನ ಜಾಗರಣೆ ಇರಬೇಕು; ಅಂದು ಇಡಿಯ ರಾತ್ರಿ ಎಚ್ಚರವಾಗಿರಬೇಕು, ನಿದ್ರೆಗೆ ಜಾರಬಾರದು.'

ದಿಟ, ಈ ನಿಲುವು ಲೋಕವ್ಯವಹಾರವಲ್ಲ; ಆದರೆ ಅಲೌಕಿಕ ಸಂಕೇತ. ಇದು ಆರೋಗ್ಯಸೂತ್ರವಲ್ಲ; ಆಧ್ಯಾತ್ಮಿಕತತ್ತ್ವ. ಇದು ಜೀವಿಗಳ ಆಯಾಸಪರಿಹಾರದ ಸಹಜ ಪ್ರವೃತ್ತಿಯಲ್ಲ; ಆನಂದಾನುಭವದ ರಹಸ್ಯವನ್ನು ಕಾಣಿಸುವ ನಿವೃತ್ತಿಮಾರ್ಗದ ದಿಕ್ಸೂಚಿ.

ಹೌದು, ಶಿವರಾತ್ರಿಯ ಆಚರಣೆ ಮತ್ತು ಈ ದಿನದ ಆರಾಧ್ಯದೈವ ಶಿವ – ಈ ಎರಡೂ 'ತತ್ತ್ವ'ಗಳು ತುಂಬ ಸಂಕೇತಮಯವಾಗಿವೆ; ಹಲವು ಪದರಗಳಲ್ಲಿ ಈ ಸಂಕೇತಗಳು ಹರಡಿಕೊಂಡಿವೆ. ಶಿವತತ್ತ್ವ ಭಾರತೀಯ ಪರಂಪರೆಯ ದೊಡ್ಡ ಕಾಣ್ಕೆ; ಪರಿಪೂರ್ಣ ದೈವತ್ವದ ಕಲ್ಪನೆಯನ್ನು ಶಿವನಲ್ಲಿ ಕಾಣಬಹುದು. ತ್ಯಾಗ–ಭೋಗ, ಸಂಸಾರ–ಸನ್ಯಾಸ, ಕರ್ಮ–ಜ್ಞಾನ, ಲಾಸ್ಯ–ಭಯಾನಕ – ಹೀಗೆ ಪರಸ್ಪರ ವಿರುದ್ಧ ಎನಿಸುವಂಥ ಹಲವು ವಿವರಗಳ ಸಾಮರಸ್ಯಮೂರ್ತಿಯೇ ಶಿವ. ಕಾಳಿದಾಸನ ಪದ್ಯವೊಂದು ಈ ತತ್ತ್ವವನ್ನು ಚೆನ್ನಾಗಿ ವರ್ಣಿಸಿದೆ; ಅದರ ತಾತ್ಪರ್ಯ ಹೀಗೆ:

'ಶಿವನು ಎಂಥವನು ಎಂದರೆ – ನಮಿಸಿದ ಭಕ್ತರ ಬೇಡಿಕೆಗಳನ್ನೆಲ್ಲ ಪೂರೈಸುವಷ್ಟು ಅಖಂಡವಾದ ಐಶ್ವರ್ಯಸಂಪನ್ನ; ಆದರೆ ತಾನು ಧರಿಸಿರುವುದು ಗಜಚರ್ಮವನ್ನಷ್ಟೆ. ತನ್ನ ಮಡದಿಯ ಬಗ್ಗೆ ಅವನಿಗೆ ಎಷ್ಟು ಪ್ರೀತಿ ಎಂದರೆ ಅವಳಿಗೆ ತನ್ನ ದೇಹದ ಅರ್ಧಭಾಗವನ್ನೇ ಕೊಟ್ಟಿದ್ದಾನೆ; ಹೀಗಿದ್ದರೂ ಅವನು ವಿಷಯಾಸಕ್ತರಹಿತರಾದ ಯತಿಗಳನ್ನೂ ಮೀರಿಸುವಂಥ ಪರಮಯತಿ. ತನ್ನ ಅಷ್ಟಮೂರ್ತಿಗಳಿಂದ ಇಡಿಯ ಜಗತ್ತನ್ನೇ ಧರಿಸಿದ್ದಾನೆ; ಆದರೆ ನಾನು–ನನ್ನದು ಎಂಬ ಅಭಿಮಾನವೇ ಇಲ್ಲದವನು. ಮಾನವರ ತಾಮಸವೃತ್ತಿಯನ್ನು ಪರಿಹರಿಸಿ, ಒಳ್ಳೆಯ ದಾರಿಯನ್ನು ತೋರಲು ಇಂಥ ಶಿವನಿಗಲ್ಲದೆ, ಮತ್ತೆ ಇನ್ನಾರಿಗೆ ತಾನೆ ಸಾಧ್ಯವಾದೀತು?'

ಶಿವತತ್ತ್ವವೂ, ಶಿವರಾತ್ರಿಯ ಮಾಹಾತ್ಮ್ಯವೂ ಈ ಪದ್ಯದಲ್ಲಿ ಹರಳುಗಟ್ಟಿದೆ. ನಮ್ಮ ಜೀವನವು ಶಿವಮಯವಾಗಲು ತ್ಯಾಗ–ಭೋಗಗಳ ಸಮನ್ವಯ ನಮ್ಮಲ್ಲಿ ದೃಢವಾಗಬೇಕು; ಈ ವಿವೇಕ ಎಚ್ಚರವಾಗಲು ನಮ್ಮಲ್ಲಿ ಅಡಗಿರುವ ಮೊದಲು ತಾಮಸಬುದ್ಧಿ ತೊಲಗಬೇಕು; ಇದು ಸಾಧ್ಯವಾಗಬೇಕಾದರೆ ತಾಮಸ, ಎಂದರೆ ಅವಿದ್ಯೆಯ ಕತ್ತಲು ನಮ್ಮನ್ನು ಆವರಿಸದಂತೆ ನಾವು ಎಚ್ಚರವಾಗಿರಬೇಕು. ಹೀಗೆ ಎಚ್ಚರದಿಂದ ಕೂಡಿದ ಒಳಿತಿನ ರಾತ್ರಿಯೇ ಶಿವರಾತ್ರಿ.

ಶಿವನು ಯೋಗಿಗಳಿಗೆ ಮಹಾಯೋಗಿ; ಗೃಹಸ್ಥರಿಗೆ ಮಹಾಕುಟುಂಬಿ. ಅವನು ಎಲ್ಲ ತಪಸ್ಸುಗಳಿಗೂ ಫಲವನ್ನು ಕೊಡುವವನು; ಹೀಗಿದ್ದರೂ ದೇವತೆಗಳಲ್ಲಿ ಅವನಷ್ಟು ದೊಡ್ಡ ಸಂಸಾರಸ್ಥ ಇನ್ನೊಬ್ಬರಿಲ್ಲ – ಈ ಕುಟುಂಬವೂ ಹಲವು ವೈರುಧ್ಯಗಳ ನಿಲಯ. ಹೀಗಾಗಿ ಅವನು ಸನ್ಯಾಸಿಗಳಿಗೂ ಸಂಸಾರಿಗಳಿಗೂ ಒಲಿಯುವ ದೈವ; ಅವನಿಗೆ ತಪಸ್ವಿಗಳ ಸಾಧನೆಯೂ ಅರ್ಥವಾಗುತ್ತದೆ, ಸಂಸಾರಿಗಳ ರೋದನವೂ ಅರ್ಥವಾಗುತ್ತದೆ. ಅವನು ಲಯಕಾರಕ; ಎಂದರೆ ಸೃಷ್ಟಿಯ ಹುಟ್ಟನ್ನೇ ಅಡಗಿಸುತ್ತಾನೆ, ದಿಟ. ಆದರೆ ಅವನು ತನ್ನ ಡಮರುವಿನ ನಾದಮಾತ್ರದಿಂದಲೇ ಸೃಷ್ಟಿಕಾರ್ಯವನ್ನೂ ನೆರವೇರಿಸುವವನು; ಶಿವ ಮತ್ತು ಅವನ ಮಡದಿ ಶಕ್ತಿ – ಇವರು ಆದಿದಂಪತಿ; ಮಾತು–ಅರ್ಥಗಳ ಸಾಂಗತ್ಯದಂತೆ ಇವರಿಬ್ಬರ ದಾಂಪತ್ಯ.

ಹೀಗೆ ಪ್ರವೃತ್ತಿಮಾರ್ಗಕ್ಕೂ ನಿವೃತ್ತಿಮಾರ್ಗಕ್ಕೂ ಒಲಿಯುವ, ಒದಗುವ ಶಿವನ ಆರಾಧನೆಗೆ ಮೀಸಲಾದ ಮಹಾವ್ರತವೇ ಶಿವರಾತ್ರಿ.

ಎ.ಟಿ.ರಾಮಸ್ವಾಮಿಗೆ ಕರೆ ಮಾಡಿದ ಮುಖ್ಯಮಂತ್ರಿ ಬೊಮ್ಮಾಯಿ

ಬಿಜೆಪಿಗೆ ಸೆಳೆಯಲು ವರಿಷ್ಠರ ಆಸಕ್ತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ವಿಜಯ ಸಂಕಲ್ಪ ಯಾತ್ರೆ ವೇಳೆ ರಾಮಸ್ವಾಮಿ ಸೇರ್ಪಡೆ ನಿರೀಕ್ಷೆ
- ಜೆಡಿಎಸ್ ಭದ್ರಕೋಟೆಯಲ್ಲಿ ಬಲವರ್ಧನೆಗೆ ಬಿಜೆಪಿ ಯತ್ನ

ಹಾಸನ: ಜೆಡಿಎಸ್‌ನಿಂದ ಹೊರನಡೆದಿರುವ ಅರಕಲಗೂಡು ಶಾಸಕ ಎ.ಟಿ.ರಾಮಸ್ವಾಮಿ ಅವರನ್ನು ಬಿಜೆಪಿಗೆ ಸೆಳೆಯುವ ಪ್ರಯತ್ನಗಳು ಆರಂಭವಾಗಿವೆ. ಪಕ್ಷದ ರಾಷ್ಟ್ರೀಯ ವರಿಷ್ಠರೇ ಈ ವಿಷಯದಲ್ಲಿ ಆಸಕ್ತಿ ತೋರಿದಂತೆ ಕಾಣುತ್ತಿದ್ದು, ಸ್ವತಃ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೇ ರಾಮಸ್ವಾಮಿ ಅವರಿಗೆ ಕರೆ ಮಾಡಿದ್ದಾರೆ.



ಎ.ಟಿ. ರಾಮಸ್ವಾಮಿ

ಫೆ.21ರಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಹಲವು ನಾಯಕರು ಜಿಲ್ಲೆಯ ಬೇಲೂರಿಗೆ ಬರಲಿದ್ದಾರೆ. ಅಂದು ವಿಜಯ ಸಂಕಲ್ಪ ಯಾತ್ರೆ ನಡೆಸಲಾಗುತ್ತಿದ್ದು, ಈ ಸಂದರ್ಭದಲ್ಲಿ ರಾಮಸ್ವಾಮಿ ಅವರನ್ನು ಪಕ್ಷಕ್ಕೆ ಬರಮಾಡಿಕೊಳ್ಳುವ ಉದ್ದೇಶವಿದೆ ಎಂದು ಅವರ ಆಪ್ತ ಮೂಲಗಳು ತಿಳಿಸಿವೆ.

'ರಾಮಸ್ವಾಮಿ ಸಜ್ಜನ ರಾಜಕಾರಣಿ ಎಂದು ಹೆಸರಾಗಿದ್ದು, ಇಂಥವರನ್ನು ಪಕ್ಷಕ್ಕೆ ಕರೆತರುವ ಮೂಲಕ ಜಿಲ್ಲೆಯ ಜನರಿಗೆ ಸಂದೇಶ ಕೊಡಬೇಕು' ಎನ್ನುವ ಉದ್ದೇಶ ಬಿಜೆಪಿ ವರಿಷ್ಠರದ್ದು. ಹೀಗಾಗಿ ಮುಖ್ಯಮಂತ್ರಿಯೇ ಕರೆ ಮಾಡಿ ಪಕ್ಷಕ್ಕೆ ಆಹ್ವಾನ ನೀಡಿದ್ದಾರೆ ಎನ್ನಲಾಗುತ್ತಿದೆ.

ಜೆಡಿಎಸ್‌ನ ಭದ್ರಕೋಟೆಯಾದ ಜಿಲ್ಲೆಯಲ್ಲಿ ಬಿಜೆಪಿ ತನ್ನ ನೆಲೆ ವಿಸ್ತರಿಸಲು ಮುಂದಾಗಿದ್ದು, ರಾಮಸ್ವಾಮಿ ಅವರನ್ನು ಸೆಳೆಯುವ ಮೂಲಕ ಪಕ್ಷದ ಬಲವರ್ಧನೆಗೆ ನಿರ್ಧರಿಸಿದೆ ಎಂದು ಹೇಳಲಾಗುತ್ತಿದೆ. ಮೊದಲು ಕಾಂಗ್ರೆಸ್‌ನಲ್ಲಿದ್ದ ರಾಮಸ್ವಾಮಿ, ನಂತರ ಜೆಡಿಎಸ್‌ಗೆ ಬಂದಿದ್ದರು. ಇದೀಗ ಬಿಜೆಪಿಗೆ ಸೇರಬಹುದು ಎಂಬ ಮಾತುಗಳು ಕೇಳಿಬರುತ್ತಿವೆ.

ಈ ಬಗ್ಗೆ ಹೆಚ್ಚಿನ ಪ್ರತಿಕ್ರಿಯೆಗೆ ನಿರಾಕರಿಸಿದ ರಾಮಸ್ವಾಮಿ ಅವರು, 'ಕ್ಷೇತ್ರದ ಜನರ ಅಭಿಪ್ರಾಯ ಕೇಳಿದ ನಂತರ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ' ಎಂದಷ್ಟೆ ಹೇಳಿದರು.

ದೇವೇಗೌಡರ ಮಕ್ಕಳ ವಿರುದ್ಧ ಆಕ್ರೋಶ: ರಾಮಸ್ವಾಮಿ ಅವರು ದೇವೇಗೌಡರ ಆಪ್ತ ವಲಯದಲ್ಲಿ ಗುರುತಿಸಿಕೊಂಡವರು. ಇದೀಗ ದೇವೇಗೌಡರ ಮಕ್ಕಳು ತಮ್ಮನ್ನು ನಡೆಸಿಕೊಳ್ಳುತ್ತಿರುವುದರ ಬಗ್ಗೆ ರಾಮಸ್ವಾಮಿ ಆಕ್ರೋಶ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ.

'2019ರ ಲೋಕಸಭೆ ಚುನಾವಣೆಯಲ್ಲಿ ದೇವೇಗೌಡರ ಅಭಿಪ್ರಾಯ ಕೇಳದೇ ಪ್ರಜ್ವಲ್ ಅವರನ್ನು ಹಾಸನದಿಂದ ಕಣಕ್ಕೆ ಇಳಿಸಲಾಯಿತು. ಆಗ ನಾನು ಪ್ರಜ್ವಲ್ ಹೆಸರು ಹೇಳದೇ ಇರುವುದಕ್ಕೆ ನನ್ನನ್ನು ಪಕ್ಷದಿಂದ ಹೊರಹಾಕಿದ್ದಾರೆ' ಎಂದು ಹೊಳೆನರಸೀಪುರ ತಾಲ್ಲೂಕಿನಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ರಾಮಸ್ವಾಮಿ ಅಸಮಾಧಾನ ತೋಡಿಕೊಂಡಿದ್ದಾರೆ.

ಪ್ರಜಾ ಮತ ಜನತಂತ್ರದ ಹಬ್ಬ — ಕರ್ನಾಟಕ ವಿಧಾನಸಭಾ ಚುನಾವಣೆ - 2023

'ಸಿ.ಟಿ.ರವಿಯದು ಹಿಟ್ಲರ್ ಸಂಸ್ಕೃತಿ'

ಚಿಕ್ಕಮಗಳೂರು: 'ಬಿಜೆಪಿ ಜಿಲ್ಲಾ ಘಟಕದಲ್ಲಿ ಶಾಸಕ ಸಿ.ಟಿ. ರವಿ ವಿರುದ್ಧ ಮಾತನಾಡದಂಥ ಭಯದ ವಾತಾವರಣ ಇದೆ. ರವಿ ಅವರದು ಹಿಟ್ಲರ್ ಸಂಸ್ಕೃತಿ' ಎಂದು ಮುಖಂಡ ಎಚ್‌.ಡಿ.ತಮ್ಮಯ್ಯ ದೂರಿದರು.

ಎಚ್‌.ಡಿ. ತಮ್ಮಯ್ಯ ಅಭಿಮಾನಿ ಬಳಗ ವತಿಯಿಂದ ನಗರದಲ್ಲಿ ಶುಕ್ರವಾರ ಏರ್ಪಡಿಸಿದ್ದ, 'ಬದಲಾವಣೆ ಸಂಕಲ್ಪ ಯಾತ್ರೆ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸಿ.ಟಿ.ರವಿ ಮತ್ತು ಆರ್‌ಎಸ್‌ಎಸ್‌ನ ಒಬ್ಬರ ನಡೆ ತುಂಬಾ ನೋವುಂಟು ಮಾಡಿತ್ತು. ಹೀಗಾಗಿ ಬಿಜೆಪಿ ತೊರೆದೆ. ಈ ಇಬ್ಬರಿಂದಾಗಿ ಹಲವು ಗುತ್ತಿಗೆದಾರರು ಊರು ಬಿಟ್ಟಿದ್ದಾರೆ' ಎಂದು ದೂರಿದರು.

19ರಂದು ಕಾಂಗ್ರೆಸ್ ಸೇರ್ಪಡೆ: ಬಿಜೆಪಿ ತೊರೆದಿರುವ ಎಚ್‌.ಡಿ. ತಮ್ಮಯ್ಯ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ಇದೇ 19ರಂದು ಕಾಂಗ್ರೆಸ್ ಪಕ್ಷ ಸೇರುವುದಾಗಿ ತಿಳಿಸಿದರು.

ಆರ್‌ಎಸ್‌ಎಸ್ ಪದ ಬಳಸಿಲ್ಲ: ದೇವನೂರ ಮಹಾದೇವ

ಪ್ರಜಾವಾಣಿ ವಾರ್ತೆ



ಮೈಸೂರು: 'ಇಲ್ಲಿ ಪ್ರಕಾಶ್ ಕಮ್ಮರಡಿ ತಂಡದ ಚುನಾವಣಾ ಸಮೀಕ್ಷೆ ಅಧ್ಯಯನ ವರದಿಯನ್ನು ಮಂಗಳವಾರ ಬಿಡುಗಡೆ ಮಾಡಿ ಮಾತನಾಡಿದ ನಾನು ಆರ್‌ಎಸ್‌ಎಸ್ ಪದವನ್ನು ಬಳಸಿಲ್ಲ' ಎಂದು ಸಾಹಿತಿ ದೇವನೂರ ಮಹಾದೇವ ಅವರು ಸ್ಪಷ್ಟನೆ ನೀಡಿದ್ದಾರೆ.

ಪ್ರಕಟಣೆ ನೀಡಿರುವ ಅವರು, 'ಸಂಘ ಪರಿವಾರದಂತಹ ಗಟ್ಟಿ ಸಾಂಸ್ಥಿಕ ತಳಪಾಯದ ಮೂಲಕ ಬಿಜೆಪಿ 'ಸಾಂಸ್ಥಿಕ ರಣಗೊಂಡ ಪಕ್ಷ ರಚನೆಯನ್ನು ಹೊಂದಿರುತ್ತದೆ' ಎಂಬ ಅಧ್ಯಯನಕಾರರ ಅಭಿಪ್ರಾಯ ನಿಜವೆನ್ನಿಸುತ್ತದೆ. ತಳಮಟ್ಟದವರೆಗೂ ಬೇರೂರಿರುವ ವಿವಿಧ ಪ್ರಗತಿಪರ ಸಂಘ, ಸಂಸ್ಥೆ ಮತ್ತು ಸಂಘಟನೆಗಳು ಜೊತೆಗೆ ಯುವ ಕಾರ್ಯಕರ್ತರ ಪಡೆಗಳು ಹೊಸ ರಾಜಕೀಯ ಪ್ರಯೋಗಕ್ಕೆ ಈ ರೀತಿಯ ಸಾಂಸ್ಥಿಕ ರಚನೆಯನ್ನು ಒದಗಿಸಬಹುದು ಎಂದು ವರದಿ ಹೇಳುತ್ತದೆ. ಅಂದರೆ ಠೇವಣಿಯಂತೆ ಸಾಂಸ್ಥಿಕ ರಚನೆಯೂ ಬೇಕು. ಈ ಹಿನ್ನೆಲೆಯ ರಾಜಕೀಯ ಪಕ್ಷ ಅಥವಾ ಒಕ್ಕೂಟ ಅಲೆ ಎಬ್ಬಿಸಬೇಕು ಎಂದಿದ್ದೆ' ಎಂದು ಹೇಳಿದ್ದಾರೆ.

'ಇಂದು ಕರ್ನಾಟಕದ ಮುನ್ನಡೆಯ ಸಮಾಜಮುಖಿ ರಾಜಕೀಯ ಪಕ್ಷಗಳು ಅಲೆ ಎಬ್ಬಿಸುತ್ತಿಲ್ಲ. ಇವುಗಳ ಸಾಂಸ್ಥಿಕ ರಚನೆ ಗಟ್ಟಿಯಾಗೇ ಇದೆ. ಆದರೆ, ಈ ಪಕ್ಷ ಅಥವಾ ಒಕ್ಕೂಟದ ಸಾಂಸ್ಥಿಕ ರಚನೆಯಲ್ಲಿ ರಾಜಕೀಯ ಪ್ರಜ್ಞೆ ಅಷ್ಟಾಗಿ ಇಲ್ಲ. ಸಂಘ ಪರಿವಾರದಂತೆ ತನ್ನ ರಾಜಕೀಯ ಪಕ್ಷ ಗೆಲುವಿನಲ್ಲೆ ತನ್ನ ಅಳಿವು– ಉಳಿವು ಎಂಬಂತೆ ಮುನ್ನಡೆಯ ಪಕ್ಷಗಳ ಸಾಂಸ್ಥಿಕ ರಚನೆಗಳು ವರ್ತಿಸುತ್ತಿಲ್ಲ ಎಂದು ಹೇಳಿದ್ದೆ' ಎಂದು ಅವರು ತಿಳಿಸಿದ್ದಾರೆ.

ಎಲ್‌ಪಿಜಿ ಆಮದು: ಸರ್ಕಾರಿ ಬಂದರು ಬದಲು ಅದಾನಿ ಬಂದರು- ಕಾಂಗ್ರೆಸ್

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ವಿಶಾಖಪಟ್ಟಣ ಬಂದರು ಮೂಲಕ ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಆಮದು ಮಾಡುತ್ತಿದ್ದ ಅಡುಗೆ ಅನಿಲವನ್ನು (ಎಲ್‌ಪಿಜಿ) 'ಪ್ರತಿಕೂಲ' ಗುತ್ತಿಗೆ ಮೂಲಕ ಅದಾನಿ ಸಮೂಹದ ಮಾಲೀಕತ್ವದ ಗಂಗಾವರಂ ಬಂದರಿಗೆ ವರ್ಗಾಯಿಸಲಾಗಿದೆ ಎಂದು ಕಾಂಗ್ರೆಸ್ ಪಕ್ಷವು ಶುಕ್ರವಾರ ಆರೋಪಿಸಿದೆ.

ಐಒಸಿ ಈ ಆರೋಪದ ಕುರಿತು ಗುರುವಾರ ಸ್ಪಷ್ಟನೆ ನೀಡಿತ್ತು. ಹತ್ತಿರದಲ್ಲಿರುವ ಬಂದರುಗಳ ಜೊತೆಗಿನ ಒಪ್ಪಂದಗಳಿಗೆ ಹೆಚ್ಚುವರಿಯಾಗಿ ಅದಾನಿ ಸಮೂಹದ ಬಂದರಿನ ಜೊತೆಗೆ ಅಡುಗೆ ಅನಿಲ ಆಮದು ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಲ್ಲಿ ಹಣ ತೆಗೆದುಕೊಳ್ಳುವ ಅಥವಾ ನೀಡುವ ಯಾವುದೇ ಪ್ರಸ್ತಾವ ಇಲ್ಲ ಎಂದು ಐಒಸಿ ಹೇಳಿತ್ತು.

> **ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ನಿಮ್ಮವರನ್ನು (ಪ್ರಧಾನಿ ನರೇಂದ್ರ ಮೋದಿ ನಿಕಟವರ್ತಿಗಳು) ಇನ್ನಷ್ಟು ಶ್ರೀಮಂತರನ್ನಾಗಿ ಮಾಡಲು ಇರುವ ಸಾಧನಗಳೇ?**
>
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಆಮದಾದ ಎಲ್‌ಪಿಜಿ ನಿರ್ವಹಣೆಗೆ ಯಾವುದೇ ಟೆಂಡರ್ ಕರೆಯದೆ ಅದಾನಿ ಸಮೂಹದ ಜೊತೆಗೆ ಒಪ್ಪಂದ ಮಾಡಿಕೊಂಡಿರುವುದರಲ್ಲಿ ಅಕ್ರಮ ನಡೆದಿದೆ ಎಂದು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಗುರುವಾರ ಹೇಳಿದ್ದರು. ಅದಕ್ಕೆ ಪ್ರತಿಕ್ರಿಯೆಯಾಗಿ ಐಒಸಿ ಸ್ಪಷ್ಟನೆ ನೀಡಿದೆ. 'ಗಂಗಾವರಂ ಬಂದರಿನಲ್ಲಿ ಎಲ್‌ಪಿಜಿ ನಿರ್ವಹಣೆ ಸೌಲಭ್ಯಗಳನ್ನು ನಿರ್ಮಿಸಲು 'ಆಮದಾದ ಸರಕಿನಲ್ಲಿ ನಿರ್ದಿಷ್ಟ ಪ್ರಮಾಣವನ್ನು ಪಡೆದುಕೊಳ್ಳುವ ಮತ್ತು ಸರಕು ನೀಡದೇ ಇದ್ದರೆ ದಂಡ ಪಾವತಿಸಬೇಕು' ಎಂಬ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಅದಾನಿ ಪೋರ್ಟ್ಸ್ ಆ್ಯಂಡ್ ಸ್ಪೆಶಲ್ ಎಕನಾಮಿಕ್ ಜೋನ್ ಲಿ.ನ ಸಭೆಯಲ್ಲಿ ಹೇಳಲಾಗಿತ್ತು ಎಂದು ಮಹುವಾ ಆರೋಪಿಸಿದ್ದಾರೆ.

ಅದಾನಿಗೆ ಸಂಬಂಧಿಸಿದಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಾಂಗ್ರೆಸ್ ಪಕ್ಷವು ಪ್ರತಿ ದಿನವೂ ಪ್ರಶ್ನೆಗಳನ್ನು ಕೇಳುತ್ತಿದೆ. ಅದರ ಭಾಗವಾಗಿ, ಬಂದರು ಕ್ಷೇತ್ರದಲ್ಲಿ ಅದಾನಿ ಸಮೂಹವು ಏಕಸ್ವಾಮ್ಯ ಸಾಧಿಸುವಲ್ಲಿ ಪ್ರಧಾನಿಯ ಪಾತ್ರದ ಕುರಿತು ಈಗಾಗಲೇ ಪ್ರಶ್ನೆ ಕೇಳಲಾಗಿತ್ತು. ಅದರ ಮುಂದುವರಿದ ಭಾಗವಾಗಿ ಗಂಗಾವರಂ ಬಂದರು ಮೂಲಕ ಎಲ್‌ಪಿಜಿ ಆಮದಿಗೆ ಐಒಸಿ ಜೊತೆಗಿನ ಒಪ್ಪಂದ ಕುರಿತು ಶುಕ್ರವಾರ ಮೂರು ಪ್ರಶ್ನೆಗಳನ್ನು ಕೇಳಲಾಗಿದೆ.

'ಅದಾನಿ (ಸಮೂಹವು) ಬಂದರು ವ್ಯಾಪಾರವನ್ನು ವಿಸ್ತರಿಸಲು ನಿಮಗೆ ಸಾಧ್ಯವಾದ ಎಲ್ಲವನ್ನೂ ನೀವು ಮಾಡಿದ್ದೀರಿ ಎಂಬುದು ಈಗ ಎಲ್ಲರಿಗೂ ತಿಳಿದಿದೆ. ಟೆಂಡರ್ ಕರೆಯದೆಯೇ ವಿನಾಯಿತಿಗಳನ್ನು ನೀಡಿದ್ದೀರಿ ಅಥವಾ ಉದ್ಯಮ ಸಂಸ್ಥೆಗಳು ತಮ್ಮ ಮೌಲಿಕ ಸ್ವತ್ತನ್ನು ಅದಾನಿಗೆ ಮಾರಾಟ ಮಾಡುವುದನ್ನು ಉತ್ತೇಜಿಸುವುದಕ್ಕಾಗಿ ಆದಾಯ ತೆರಿಗೆ ಶೋಧಗಳನ್ನು ನಡೆಸಿದ್ದೀರಿ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ಭಾರತದ ಪೌರರ ಪರವಾಗಿ ಸರ್ಕಾರವು ಮುನ್ನಡೆಸಿಕೊಂಡು ಹೋಗಬೇಕಿದ್ದ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು 'ಉದ್ದೇಶಪೂರ್ವಕವಾಗಿ ನಿರ್ಲಕ್ಷ್ಯ' ಮಾಡುತ್ತಿರುವುದು ಏಕೆ ಎಂದು ಪ್ರಧಾನಿಯವರನ್ನು ಜೈರಾಮ್ ಪ್ರಶ್ನಿಸಿದ್ದಾರೆ.

ಕಸದ ರಾಶಿ ಬಳಿ ಶವ ಎಸೆದರು

ಉಡುಪಿ: ವ್ಯಕ್ತಿಯೊಬ್ಬರ ಶವವನ್ನು ಗೂಡ್ಸ್ ವಾಹನದಲ್ಲಿ ತಂದು ಮಲ್ಪೆ ಸಮೀಪದ ಕೆಮ್ಮಣ್ಣು ರಸ್ತೆ ಬದಿಯ ಕಸದ ರಾಶಿ ಬಳಿ ಎಸೆದು ಹೋಗುವ ದೃಶ್ಯಾವಳಿ ಜಾಲತಾಣದಲ್ಲಿ ಹರಿದಾಡುತ್ತಿದೆ.

ಮೃತರನ್ನು ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕಿನ ಹನುಮಂತ ಎಂದು ಗುರುತಿಸಲಾಗಿದೆ. ಹನುಮಂತ ಸ್ನೇಹಿತ ಬಸಯ್ಯ ಜತೆಗೆ ಸಂತೆಗೆ ವ್ಯಾಪಾರ ಮಾಡಲು ಬಂದಿದ್ದರು. 'ಮದ್ಯ ಸೇವಿಸಿದ್ದ ಹನುಮಂತ ಗೂಡ್ಸ್ ವಾಹನದಲ್ಲಿ ಮಲಗಿ ರುವಾಗಲೇ ಮೃತಪಟ್ಟಿದ್ದರು. ಈ ವಿಚಾರ ತಿಳಿಯದ ಬಸಯ್ಯ, ನಶೆ ಇಳಿದ ನಂತರ ಎದ್ದು ಬರುತ್ತಾನೆ ಎಂದು ಗೂಡ್ಸ್ ವಾಹನದಿಂದ ಅವರನ್ನು ರಸ್ತೆ ಬದಿ ಎತ್ತಿಹಾಕಿ ಹೋಗಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಗೂಡ್ಸ್ ವಾಹನದ ಮಾಲೀಕ, ಚಾಲಕ ಹಾಗೂ ಬಸಯ್ಯನನ್ನು ವಿಚಾರಣೆ ನಡೆಸಲಾಗಿದ್ದು ಮೇಲ್ನೋಟಕ್ಕೆ ದುರುದ್ದೇಶಿತ ಕೃತ್ಯವಲ್ಲ ಎಂಬುದು ಸ್ಪಷ್ಟವಾಗಿದೆ. ಮೃತರ ಕುಟುಂಬಸ್ಥರಿಗೆ ಶವವನ್ನು ಹಸ್ತಾಂತರ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಏಮ್ಸ್ ಕೊಡದಿದ್ದರೆ ಪ್ರತ್ಯೇಕ ರಾಜ್ಯ ಹೋರಾಟ'

ರಾಯಚೂರು: 'ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಘೋಷಿಸಿರುವ ಏಮ್ಸ್ ಮಾದರಿ ಆಸ್ಪತ್ರೆ ಸ್ಥಾಪನೆಯನ್ನು ಯಾವುದೇ ಕಾರಣಕ್ಕೂ ಒಪ್ಪಲ್ಲ. ರಾಯಚೂರಿನಲ್ಲೇ ಏಮ್ಸ್ ಸ್ಥಾಪಿಸಲು ಮುಖ್ಯಮಂತ್ರಿಯವರು 10 ದಿನಗಳಲ್ಲಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸದಿದ್ದರೆ, ಪ್ರತ್ಯೇಕ ರಾಜ್ಯ ಹೋರಾಟ ಆರಂಭಿಸುತ್ತೇವೆ' ಎಂದು ಜಿಲ್ಲಾ ಏಮ್ಸ್ ಹೋರಾಟ ಸಮಿತಿ ಪದಾಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

'ರಾಯಚೂರಿಗೆ ಎರಡು ಬಾರಿ ಭೇಟಿ ನೀಡಿದ ಸಂದರ್ಭದಲ್ಲಿ ಜನರಿಗೆ ಕೊಟ್ಟ ಮಾತನ್ನು ಮುಖ್ಯಮಂತ್ರಿಯವರು ಉಳಿಸಿಕೊಳ್ಳಬೇಕು. ಹೋರಾಟ ಸಮಿತಿಯ ಅನಿರ್ದಿಷ್ಟಾವಧಿ ಧರಣಿಯು ಶುಕ್ರವಾರ 281ನೇ ದಿನಕ್ಕೆ ಕಾಲಿರಿಸಿದ್ದು, 30 ದಿನಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದೇವೆ' ಎಂದು ಸಮಿತಿ ಅಧ್ಯಕ್ಷ ಡಾ.ಬಸವರಾಜ ಕಳಸ ಮತ್ತು ಹೋರಾಟಗಾರ ಎಂ.ಆರ್. ಭೇರಿ ತಿಳಿಸಿದ್ದಾರೆ.

ರಾಜ್ಯದ ಆರ್ಥಿಕತೆ ಕುರಿತು ಆಶಾದಾಯಕ ಚಿತ್ರಣ ನೀಡಿದ ಆರ್ಥಿಕ ಸಮೀಕ್ಷೆ ವರದಿ

ತಲಾವಾರು ಆದಾಯ ಶೇ 13.6ರಷ್ಟು ಹೆಚ್ಚಳ

ಪ್ರಜಾವಾಣಿ ವಾರ್ತೆ

ಜಿಎಸ್‌ಡಿಪಿ ವಲಯವಾರು ಕೊಡುಗೆ

ವಲಯ	2021-22	2022-23
ಕೃಷಿ	15.36	15.08
ಕೈಗಾರಿಕೆ	21.48	20.88
ಸೇವೆ	63.16	64.04

ಬೆಂಗಳೂರು: ರಾಜ್ಯದ ಜನರ ತಲಾ ಆದಾಯವು ಪ್ರಸಕ್ತ ಆರ್ಥಿಕ ವರ್ಷದಲ್ಲಿ (2022–23ನೆಯ ಸಾಲಿನಲ್ಲಿ) ₹ 3.01 ಲಕ್ಷಕ್ಕೆ ಹೆಚ್ಚಳ ಆಗಿದೆ ಎಂದು ಅಂದಾಜಿಸಿರುವ 'ಆರ್ಥಿಕ ಸಮೀಕ್ಷೆ 2022–23' ವರದಿಯು, ರಾಜ್ಯದ ಅರ್ಥ ವ್ಯವಸ್ಥೆಯ ವಿಚಾರವಾಗಿ ಆಶಾದಾಯಕ ಚಿತ್ರಣವೊಂದನ್ನು ಕಟ್ಟಿಕೊಟ್ಟಿದೆ.

ಹಿಂದಿನ ಆರ್ಥಿಕ ವರ್ಷದಲ್ಲಿ ರಾಜ್ಯದ ತಲಾ ಆದಾಯವು ₹ 2.65 ಲಕ್ಷ ಆಗಿತ್ತು. ಇದಕ್ಕೆ ಹೋಲಿಸಿದರೆ ಒಂದು ವರ್ಷದ ಅವಧಿಯಲ್ಲಿ ತಲಾ ಆದಾಯವು ಶೇಕಡ 13.6ರಷ್ಟು ಹೆಚ್ಚಳ ಕಂಡಂತೆ ಆಗುತ್ತದೆ. ಅಖಿಲ ಭಾರತ ಮಟ್ಟದಲ್ಲಿ ತಲಾ ಆದಾಯವು ₹ 1.70 ಲಕ್ಷ. ಇದಕ್ಕೆ ಹೋಲಿಸಿದರೆ ರಾಜ್ಯದ ತಲಾ ಆದಾಯವು ಶೇ 77ರಷ್ಟು ಹೆಚ್ಚು. 2011–12ನೇ ಆರ್ಥಿಕ ವರ್ಷದಿಂದಲೂ ರಾಜ್ಯದ ತಲಾ ಆದಾಯವು ರಾಷ್ಟ್ರೀಯ ತಲಾ ಆದಾಯಕ್ಕಿಂತ ಹೆಚ್ಚಿನ ಮಟ್ಟದಲ್ಲಿಯೇ ಇದೆ.

ಬೆಂಗಳೂರು ನಗರ ಜಿಲ್ಲೆಯಲ್ಲಿ ತಲಾ ಆದಾಯವು ₹ 6.21 ಲಕ್ಷ. ಇದು ರಾಜ್ಯದಲ್ಲೇ ಅತಿಹೆಚ್ಚು. ಕಲಬುರ್ಗಿ ಜಿಲ್ಲೆಯ ತಲಾ ಆದಾಯವು ₹ 1.24 ಲಕ್ಷ. ಇದು ರಾಜ್ಯದಲ್ಲಿ ಕನಿಷ್ಠ. ಕೋವಿಡ್ ಸಾಂಕ್ರಾಮಿಕವು ತೀವ್ರವಾಗಿದ್ದ 2019–20 ಹಾಗೂ 2020–21ನೆಯ ಸಾಲಿನಲ್ಲಿ ರಾಜ್ಯದಲ್ಲಿ ತಲಾವಾರು ಆದಾಯವು ₹ 2.21 ಲಕ್ಷದಲ್ಲಿ ಸ್ಥಿರವಾಗಿತ್ತು.

ಸಮೀಕ್ಷೆಯ ವರದಿಯನ್ನು ಬಜೆಟ್ ಮಂಡನೆಗೂ ಮೊದಲು ವಿಧಾನಸಭೆಯಲ್ಲಿ ಮಂಡಿಸಲಾಯಿತು. ರಾಜ್ಯದ ಆಂತರಿಕ ಉತ್ಪಾದನೆಯು (ಜಿಎಸ್‌ಡಿಪಿ) ಹಾಲಿ ಆರ್ಥಿಕ ವರ್ಷದಲ್ಲಿ ₹ 22.41 ಲಕ್ಷ ಕೋಟಿಗೆ ತಲುಪುವ ಸಾಧ್ಯತೆ ಇದೆ ಎಂದು ವರದಿಯಲ್ಲಿ ಹೇಳಲಾಗಿದೆ. ರಾಜ್ಯದ ಅರ್ಥ ವ್ಯವಸ್ಥೆಯು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ 7.9ರಷ್ಟು ಬೆಳವಣಿಗೆ ಕಾಣುವ ಅಂದಾಜು ಇದೆ ಎಂದು ವರದಿ ಹೇಳಿದೆ. ಇದು ದೇಶದ ಜಿಡಿಪಿ ಬೆಳವಣಿಗೆ ಅಂದಾಜಿಗಿಂತ ತುಸು ಹೆಚ್ಚು.

ಸೇವಾ ವಲಯ ಹಾಗೂ ಕೈಗಾರಿಕಾ ವಲಯವು ರಾಜ್ಯದ ಜಿಡಿಪಿಗೆ ಹೆಚ್ಚಿನ ಕೊಡುಗೆ ನೀಡುತ್ತಿವೆ. ರಾಜ್ಯದ ಜಿಡಿಪಿಗೆ ಕೈಗಾರಿಕಾ ವಲಯವು ಶೇ 20.88ರಷ್ಟು, ಸೇವಾ ವಲಯವು ಶೇ 64.04ರಷ್ಟು ಕೊಡುಗೆ ನೀಡುತ್ತಿವೆ. ಕೃಷಿ ವಲಯದ ಕೊಡುಗೆ ಶೇ 15.08ರಷ್ಟಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಈ ವರ್ಷದಲ್ಲಿ ಕೃಷಿ ಹಾಗೂ ಕೈಗಾರಿಕಾ ವಲಯಗಳ ಕೊಡುಗೆಯು ತಗ್ಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಸೇವಾ ವಲಯದಲ್ಲಿ ಶೇ 9.2ರಷ್ಟು, ಕೈಗಾರಿಕಾ ವಲಯದಲ್ಲಿ ಶೇ 5.1ರಷ್ಟು ಹಾಗೂ ಕೃಷಿ ವಲಯದಲ್ಲಿ ಶೇ 5.5ರಷ್ಟು ಬೆಳವಣಿಗೆ ಆಗಿದೆ.

ರಾಜ್ಯದಲ್ಲಿ ಕೊಡಲಾಗುತ್ತಿರುವ ಸಹಾಯಧನಗಳ ಪ್ರಮಾಣವು ಇತರ ರಾಜ್ಯಗಳಿಗೆ ಹೋಲಿಸಿದರೆ ಹೆಚ್ಚಿನ ಮಟ್ಟದಲ್ಲಿವೆ. ಆ ಸಹಾಯಧನದಲ್ಲಿ ಅರ್ಹವಲ್ಲದವು ಕೂಡ ದೊಡ್ಡ ಮಟ್ಟದಲ್ಲಿವೆ. ಇಂತಹ ಸಬ್ಸಿಡಿಗಳನ್ನು ಕಡಿತ ಮಾಡುವ ಮೂಲಕ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಸಂಪನ್ಮೂಲಗಳನ್ನು ಲಭ್ಯವಾಗಿಸಬಹುದು ಎಂಬ ಸಲಹೆಯು ವರದಿಯಲ್ಲಿ ಇದೆ.

ರಾಜ್ಯದಲ್ಲಿ ಒಟ್ಟು 1,856 ಯೋಜನೆಗಳು ಇವೆ. ಇವುಗಳಿಗೆ ಸಂಪನ್ಮೂಲ ಹಂಚಿಕೆ ಮಾಡುವುದು ಒಂದು ಸಮಸ್ಯೆಯಾಗಿದೆ. ಅಲ್ಲದೆ, ಇಷ್ಟು ದೊಡ್ಡ ಸಂಖ್ಯೆಯ ಯೋಜನೆಗಳನ್ನು ನಿರ್ವಹಿಸುವ ಕೆಲಸವು ಆಡಳಿತದ ಸಾಮರ್ಥ್ಯವನ್ನೇ ಮಿತಿಗೊಳಿಸಬಹುದು. ಹೀಗಾಗಿ, ಕೇಂದ್ರ ಸರ್ಕಾರದ ಮಾದರಿಯಲ್ಲಿ ಯೋಜನೆಗಳನ್ನು ವಿಲೀನಗೊಳಿಸಬೇಕಾಗಿದೆ ಎಂದು ಸಮೀಕ್ಷೆಯು ಸಲಹೆ ನೀಡಿದೆ.

ಸಂಕ್ಷಿಪ್ತ ಸುದ್ದಿ

ವಸತಿ ಶಾಲೆಯ 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಜ್ವರ

ಕಾನಹೊಸಹಳ್ಳಿ (ಬಳ್ಳಾರಿ ಜಿಲ್ಲೆ): ಸಮೀಪದ ಸಿದ್ದಾಪುರದಲ್ಲಿರುವ ಗುಡೇಕೋಟೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯ 20ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಕಳೆದ 2–3 ದಿನಗಳಿಂದ ಜ್ವರ ಕಾಣಿಸಿಕೊಂಡಿದೆ.

ಹುಡೇಂ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯರು ಹಾಗೂ ಸಿಬ್ಬಂದಿ ಭೇಟಿ ನೀಡಿ ವಿದ್ಯಾರ್ಥಿಗಳ ಆರೋಗ್ಯ ಪರೀಕ್ಷಿಸಿ ಚಿಕಿತ್ಸೆ ನೀಡಿದ್ದಾರೆ.

'ಜ್ವರ ಪೀಡಿತ ವಿದ್ಯಾರ್ಥಿಗಳ ರಕ್ತ ಪರೀಕ್ಷೆಗೆ ಕಳುಹಿಸಲಾಗಿದೆ' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಪ್ರದೀಪ್ ಕುಮಾರ್ ತಿಳಿಸಿದರು.

'ಜಾತ್ರೆ, ಉತ್ಸವಗಳಿಗೆ ವಿದ್ಯಾರ್ಥಿಗಳನ್ನು ಪಾಲಕರು ಕರೆದೊಯ್ದು, ವಾಪಸ್ ಕರೆತಂದಿದ್ದಾರೆ. ವಾತಾವರಣದ ಏರುಪೇರಿನಿಂದ ಕೆಮ್ಮು, ಜ್ವರ ಕಾಣಿಸಿಕೊಂಡಿರಬಹುದು' ಎಂದರು.

ಶಾಲೆಯ ಪ್ರಾಚಾರ್ಯರು ಸೇರಿ ಶಿಕ್ಷಕರು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡಿದ್ದಾರೆ. ವಿದ್ಯಾರ್ಥಿಗಳಿಗೆ ಕುಡಿಯಲು ಬಿಸಿನೀರು ಕೊಡಲಾಗುತ್ತಿದೆ. ಅನಾರೋಗ್ಯ ಪೀಡಿತ ವಿದ್ಯಾರ್ಥಿಗಳನ್ನು ಪಾಲಕರು ಮನೆಗಳಿಗೆ ಕರೆದೊಯ್ದಿದ್ದಾರೆ. ಕೆಲ ವಿದ್ಯಾರ್ಥಿಗಳು ಶಾಲೆಯ ಪ್ರತ್ಯೇಕ ಕೊಠಡಿಗಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದು ವೈದ್ಯರು ಸೂಚಿಸಿದಂತೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುತ್ತಿದ್ದಾರೆ.

ಡ್ರಗ್ಸ್ ಪೂರೈಕೆ ಜಾಲದಲ್ಲಿ ವೈದ್ಯ ವಿದ್ಯಾರ್ಥಿಗಳು

ಉಡುಪಿ: ಡ್ರಗ್ಸ್ ಪೂರೈಕೆ ಜಾಲದಲ್ಲಿ ತೊಡಗಿಸಿಕೊಂಡಿದ್ದ ಮಣಿಪಾಲದ ಮಾಹೆ ವಿಶ್ವವಿದ್ಯಾಲಯದ ಇಬ್ಬರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಕೆ ಅಕ್ಷಯ್ ಮಚ್ಚಿಂದ್ರ ತಿಳಿಸಿದರು.

ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ಭಾಗಿಯಾದ ಆರೋಪದ ಮೇಲೆ ಮಹಾರಾಷ್ಟ್ರ ಹಾಗೂ ಮಧ್ಯಪ್ರದೇಶ ಮೂಲದ ಇಬ್ಬರು ವಿದ್ಯಾರ್ಥಿಗಳ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಮಾದಕ ವಸ್ತುಗಳನ್ನು ಸೇವಿಸಿ ಸಿಕ್ಕಿ ಬೀಳುತ್ತಿದ್ದ ವಿದ್ಯಾರ್ಥಿಗಳು ಡ್ರಗ್ಸ್ ಪೂರೈಕೆಯಲ್ಲಿ ಭಾಗಿಯಾಗಿರುವುದು ಆತಂಕಕಾರಿ ವಿಚಾರ ಎಂದರು. ನ್ಯಾಯಾಲಯದಲ್ಲಿ ಪ್ರಕರಣ ಇತ್ಯರ್ಥವಾಗುವವರೆಗೂ ಆರೋಪಿತ ವಿದ್ಯಾರ್ಥಿಗಳನ್ನು ಮಾಹೆ ವಿವಿ ಅಮಾನತುಗೊಳಿಸಿದೆ. ಡ್ರಗ್ಸ್ ಪೂರೈಕೆ ಜಾಲದಲ್ಲಿ ಸಿಲುಕಿದವರ ರಕ್ಷಣೆಗೆ ನಿಲ್ಲುವುದಿಲ್ಲ ಎಂಬ ಸಂದೇಶವನ್ನು ಮಾಹೆ ಕೂಡ ರವಾನಿಸಿದೆ ಎಂದು ಎಸ್‌ಪಿ ತಿಳಿಸಿದರು.


ಮಂಗಳೂರಿನಲ್ಲಿ ವೈದ್ಯರೇ ಡ್ರಗ್ಸ್ ಜಾಲದಲ್ಲಿ ಸಿಲುಕಿರುವ ಘಟನೆ ನಡೆದ ಬೆನ್ನಲ್ಲೇ ಜಿಲ್ಲೆಯಲ್ಲೂ ಗಾಂಜಾ ಮಾರಾಟ, ಪೂರೈಕೆ ವಿರುದ್ಧ ಕಾರ್ಯಾಚರಣೆ ಚುರುಕುಗೊಳಿಸಲಾಗಿದೆ ಎಂದರು.

ಪದಬಂಧ 5234

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಆಶ್ರದಾತನನ್ನು ಹೊಗಳಿ ಕಾವ್ಯ ರಚಿಸುವವನು (5)
4. ಈತ ಸಂಪ್ರದಾಯ ವಿರೋಧಿ (3)
5. ಅವಸರವನ್ನು ಹೀಗೆ ಹೇಳಿ (3)
6. ಶೇಕಡಾವಾರು ಎನ್ನುತ್ತಿರುವವನ ಬೆನ್ನೆಲುಬು (3)
8. ಬಾವಿಯಿಂದ ನೀರೆತ್ತುವ ಸಾಧನತಿರುವು ಮುರುವಾಗಿದೆ (2)
9. ಭೂಮಂಡಳದಲ್ಲಿ ಅಡಗಿರುವ ಮೊಟ್ಟೆ (2)
10. ಕುಣಿಯುತ ಹಾಕಿರುವ ಸರಗಂಟು (3)
14. ನೂರು ಸಾವಿರದಿಂದ ಆಗಿರುವ ಶುಭ ಚಿಹ್ನೆ (3)
15. ಆಯಾಳಿಗೆ ಆಗಿರುವ ಸುಸ್ತು (3)
16. ಮರಳಿ ಸಂಭವಿಸು (5)

ಮೇಲಿಂದ ಕೆಳಕ್ಕೆ
1. ನಿರೀಶ್ವರವಾದಿ ಇಲ್ಲಿದ್ದಾನೆ (3)
2. ತಿರುಗಿ ನಿಂತು ಎಲ್ಲರನ್ನು ಒಂದುಗೂಡಿಸುವುದು! (5)
3. ವಿಧಿಯನ್ನು ಬರೆಯುವಾತ (3)
4. ಪಾಕದಲ್ಲಿರುವ ದೋಷ ಕಾಣುತ್ತಿದೆಯೇ? (3)
7. ನೂರಕ್ಕೆ ಇಷ್ಟು ಎಂಬ ದರ (3)
8. ತಾರುಣ್ಯವನ್ನು ಹೊಂದಿದವಳು (3)
9. ಈತ ಮೈಗಾವಲಿನವನು (5)
11. ಕೆಲವರು ಮಾಡುವ ಕಾರ್ಯ (3)
12. ಪ್ರಾಯಕ್ಕೆ ಬರುತ್ತಿರುವ ಎಮ್ಮೆ ಇಲ್ಲಿ ತಿರುಗಿದೆಯಲ್ಲಾ? (3)
13. ಮುನಿಗೆ ಬಂದಿರುವ ಕೋಪ! (3)



5233ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಾಯಮಾನ 3.ಅಸ್ತಿಭಾರ 5.ಕನ್ನಡ 6.ದ್ರವ 8.ವಿದ್ರೋಹ 10.ವಸಂತ 11.ಹಲುಬೆ 12.ರಮಿಸು 15.ರಸ 17.ಪರೋಕ್ಷ 18.ಅವಭೃಥ 19.ರಸಹೀನ

ಮೇಲಿಂದ ಕೆಳಕ್ಕೆ:
1.ಜಾಲಂದ್ರ 2.ನಕಲು 3.ಅಡವಿ 7.ವರ್ಣಸಂಕರ 9.ಹಲಾಲುಕೋರ 13.ಸುಪಥ 14.ಅಕ್ಷರ 16.ಸದನ

ಸುಡೊಕು 5620

			9		2	1		6
1		6						
	8	2		6			4	5
7								
	5		7	1	4	2		8
4					6			7
2		5		7			6	
						8		
8		1	6		3		2	9

5619 ಸುಡೊಕು

4	3	8	2	1	9	5	6	7
1	2	9	6	5	7	3	4	8
7	6	5	8	4	3	2	9	1
3	4	2	9	6	1	8	7	5
8	7	6	3	2	5	9	1	4
5	9	1	7	8	4	6	3	2
9	1	7	5	3	2	4	8	6
6	5	3	4	7	8	1	2	9
2	8	4	1	9	6	7	5	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 18, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣತ್ರಯೋದಶಿ ಗಂ. 20-03 **ನಕ್ಷತ್ರ:** ಉತ್ತರಾಷಾಢ ಗಂ. 17-42 **ಯೋಗ:** ವ್ಯತೀಪಾತ ಗಂ. 19-36, **ಕರಣ:** ಗರಜೆ ಗಂ. 09-52, ಕುಂಭ ಮಾಸದ 05 ನೇ ದಿನ. **ರಾಹುಕಾಲ :** ಬೆಳಿಗ್ಗೆ 09-00–10-30 **ಸೂರ್ಯೋದಯ :** 06-56 **ಸೂರ್ಯಾಸ್ತ :** 06-33
ಮುಸ್ಲಿಂ ದಿನಾಂಕ : 26 ರಜಬ್
ದಿನ ಭವಿಷ್ಯ : ಮಹಾ ಶಿವರಾತ್ರಿ
ಅದೃಷ್ಟ ಸಂಖ್ಯೆ : 1, 7

ಮೇಷ: ಅಚ್ಚುಕಟ್ಟಾದ ಕೆಲಸಗಳಿಂದ ಮೇಲಿನ ಬೇರೆ ಜನರ ಅಭಿಪ್ರಾಯಗಳು ಬದಲಾಗದು. ಈ ದಿನ ನಿಮಗೆ ಮಾರ್ಗದರ್ಶನಕ್ಕೆ ಕೊರತೆ ಇರುವುದಿಲ್ಲ. ಹಳೆಯ ವಾಹನದ ಬದಲಿಗೆ ಹೊಸ ದ್ವಿಚಕ್ರ ವಾಹನ ಕೊಳ್ಳುವ ಸಂಭವವಿದೆ.

ವೃಷಭ: ಹಿತಶತ್ರುಗಳಿಂದ ಪೀಡೆಯು ಹೆಚ್ಚಾಗಿ ಗುರಿಯ ಮಾರ್ಗಕ್ಕೆ ಅಡ್ಡಗಲ್ಲಾಗುವರು. ಅವಿವಾಹಿತರಿಗೆ ಕಂಕಣ ಬಲ ಸಂತಸ ತರಲಿದೆ. ಸರಕು ಸಾಗಾಣಿಕೆದಾರರಿಗೆ ಮತ್ತು ಬಂದರು ಕಾರ್ಮಿಕರಿಗೆ ಉತ್ತಮ ಪ್ರತಿಫಲ ದೊರೆಯಲಿದೆ.

ಮಿಥುನ: ಸಿನಿಮಾ ನಟ–ನಟಿಯರಿಗೆ ಶುಭ ಸುದ್ದಿ ಸಿಗುವುದು. ಮಕ್ಕಳ ಆರೋಗ್ಯದಲ್ಲಿನ ಕ್ಷೀಣತೆ ತಲೆನೋವಿಗೆ ಕಾರಣವಾಗುತ್ತದೆ. ಕುಟುಂಬದ ವಿಷಯಗಳನ್ನು ಮನೆಯವರೊಂದಿಗೆ ಸರಿಯಾಗಿ ಚರ್ಚಿಸಿ. ಶ್ರೀರಾಮನ ದರ್ಶನ ಶುಭತರಲಿದೆ.

ಕರ್ಕಾಟಕ: ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದರ್ಶಿಗಳ ಮಾತಿನಂತೆ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ಕೌಟುಂಬಿಕ ನೆಮ್ಮದಿ ಇರುವುದು. ಈಶ್ವರನ ಆರಾಧನೆಯಿಂದ ಸುಖ ಪ್ರಾಪ್ತಿ ಆಗುತ್ತದೆ.

ಸಿಂಹ: ಸುತ್ತಮುತ್ತಲ ಜನರೊಂದಿಗಿನ ಬಾಂಧವ್ಯ ಈ ದಿನ ಉತ್ತಮಗೊಳ್ಳುವುದು. ಸೌಂದರ್ಯ ಆಸ್ವಾದಿಸುವ ಆಕಾಂಕ್ಷೆಯು ಪ್ರಬಲವಾಗುವುದು. ಸಂಪಾದನೆಗಿಂತ ನೆಮ್ಮದಿ ಮುಖ್ಯವೆನ್ನುವ ತೀರ್ಮಾನಕ್ಕೆ ಬರಲಿದ್ದೀರಿ.

ಕನ್ಯಾ: ಜಾಣ್ಮೆಯಿಂದ ವ್ಯವಹರಿಸಿದರೆ ಪರಿಸ್ಥಿತಿಯ ಲಾಭ ಪಡೆಯುವಿರಿ. ಜತೆಗೆ ಜನರ ಮೆಚ್ಚುಗೆಗೆ ಪಾತ್ರರಾಗುವಿರಿ. ಅಪರಿಚಿತರೂ ಪ್ರಶಂಸಿಸುವಂತೆ ಆಗುವುದು. ಅನಗತ್ಯ ಹಣ ವ್ಯರ್ಥ ಮಾಡುವ ರೂಢಿ ಬದಲಿಸಿಕೊಳ್ಳಿರಿ.

ತುಲಾ: ಸದಾಕಾಲ ಪಕ್ಕದಲ್ಲಿ ಇರುವ ಶತ್ರುಗಳಿಂದ ವಂಚನಾ ಪ್ರಸಂಗವಿದ್ದರೂ ಖಂಡಿತವಾಗಿ ನೀವೇ ಜಯಶಾಲಿಯಾಗುವಿರಿ. ಶುಭ ಮಂಗಲ ಕಾರ್ಯಗಳಿಗೆ ಆತಂಕ ಇರುವುದಿಲ್ಲ. ತಾಯಿಯ ಆರೋಗ್ಯದ ಕಡೆ ಎಚ್ಚರವಹಿಸಿ.

ವೃಶ್ಚಿಕ: ಚಿರಂಜೀವಿಗಳ ಬಗೆಗಿನ ಚಿಂತೆಯೂ ಹೆಚ್ಚಾಗಲಿದೆ. ತಂದೆ-ತಾಯಿ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅನಿವಾರ್ಯ. ಈಶ್ವರ ಆರಾಧನೆಯಿಂದ ಶುಭ. ಸಿಹಿತಿನಿಸುಗಳ ತಯಾರಕರಿಗೆ ಬೇಡಿಕೆ ಹೆಚ್ಚಲಿದೆ.

ಧನು: ಜನ ಸಂಪರ್ಕದ ಮತ್ತು ಆರ್ಥಿಕ ಪ್ರಭಾವದಿಂದ ವಿನೂತನ ಅವಕಾಶಗಳು ದೊರೆಯುವುದು. ಮನಸ್ಸು ಬೇಡದ ದಿಕ್ಕಿನಲ್ಲಿ ಹರಿಯುವುದು. ಭಾವನೆಗಳ ಮೇಲೆ ಹಿಡಿತವನ್ನು ಸಾಧಿಸುವ ಪ್ರಯತ್ನ ಮಾಡಿ.

ಮಕರ: ಬೆಳ್ಳಿ ವಸ್ತುಗಳ ಮಾರಾಟ ಮಾಡುವವರು ಆದಾಯ ಗಳಿಸುವಿರಿ. ಮಗನಿಗೆ ಸಂಸ್ಥೆಯಿಂದ ವಿದೇಶದಲ್ಲಿ ಹೆಚ್ಚಿನ ವಿದ್ಯಾಭ್ಯಾಸಕ್ಕೆ ನೆರವು ಸಿಗುವುದು. ಆಕಸ್ಮಿಕ ಧನಾಗಮನದಿಂದ ಬಾಕಿ ಇರಿಸಿದ ವ್ಯವಹಾರ ಪೂರ್ಣಗೊಳ್ಳುವುದು.

ಕುಂಭ: ಬಾಕಿ ಇರುವ ಕೆಲಸಗಳನ್ನು ಆದಷ್ಟು ಬೇಗ ಪೂರ್ತಿಗೊಳಿಸುವುದಕ್ಕೆ ಸಹೋದ್ಯೋಗಿ ನೆರವಾಗುವರು. ಅಮೂಲ್ಯ ವಸ್ತುವೊಂದು ಉಡುಗೊರೆಯಾಗಿ ಪಡೆಯಲಿದ್ದೀರಿ. ಅನವಶ್ಯಕ ಖರ್ಚು ಸಂಭವಿಸಲಿದೆ.

ಮೀನ: ಜನರ ಜತೆ ನಗು-ನಗುತ್ತಾ ಬೆರೆಯುವ ವರ್ತನೆಯಿಂದ ಜನರ ಪ್ರೀತಿ, ವಿಶ್ವಾಸಕ್ಕೆ ಪಾತ್ರರಾಗುತ್ತೀರಿ. ಸ್ನೇಹಿತರು ಹಾಗೂ ಹಿತಚಿಂತಕರು ಸಹಾಯಕ್ಕೆ ಎಂದಿಗೂ ಇರುವರೆಂಬ ನಂಬಿಕೆ ಬರುವುದು.





ತಮ್ಮ ಎರಡೂ ಕಿವಿಗಳಿಗೆ ಹೂ ಇಟ್ಟಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಎದುರು ಸರ್ಕಾರವನ್ನು ಲೇವಡಿ ಮಾಡಿದರು

₹1 ಸಾವಿರ

ಗೌರವಧನ ಹೆಚ್ಚಳ

ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ತಯಾರಕರು, ಸಹಾಯಕರು, ಗ್ರಾಮ ಸಹಾಯಕರು ಮತ್ತು ಗ್ರಂಥಪಾಲಕರ ತಿಂಗಳ ಗೌರವಧನ ಹೆಚ್ಚಳ



ಯೋಗ ತರಬೇತಿ

ವಿದ್ಯಾರ್ಥಿನಿಯರ ದೈಹಿಕ ಸಾಮರ್ಥ್ಯ, ಆತ್ಮವಿಶ್ವಾಸ ವೃದ್ಧಿಗೆ ಎಲ್ಲಾ ಸರ್ಕಾರಿ ಮಹಿಳಾ ಪ್ರಥಮ ದರ್ಜೆ, ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಯೋಗ ತರಬೇತಿ ನೀಡಲಾಗುವುದು. ವಿದ್ಯಾರ್ಥಿಗಳಲ್ಲಿ ಸಮರ್ಪಣಾ ಭಾವ ಮೂಡಿಸಲು 2 ಹೊಸ ಎನ್‌ಸಿಸಿ ಘಟಕಗಳ ಸ್ಥಾಪನೆ.

ಶಿಕ್ಷಣಕ್ಕೆ ಆದ್ಯತೆ, ಸ್ತ್ರೀ ಸಬಲೀಕರಣಕ್ಕೆ ಒತ್ತು

₹100 ಕೋಟಿ

23 ತಾಲ್ಲೂಕುಗಳಲ್ಲಿ ಹೊಸದಾಗಿ ಪಬ್ಲಿಕ್ ಶಾಲೆಗಳ ನಿರ್ಮಾಣ, 46 ಶಾಲೆಗಳ ಅಭಿವೃದ್ಧಿಗೆ ಮೀಸಲು

₹135 ಕೋಟಿ

ತಾಲ್ಲೂಕುಗಳಲ್ಲಿ ಗುಣಮಟ್ಟದ ಶಿಕ್ಷಣ ಒದಗಿಸಿ ಕಲಿಕಾಮಟ್ಟ ಹೆಚ್ಚಿಸಲು, ಫಲಿತಾಂಶ ಉತ್ತಮ ಪಡಿಸಲು ಮೀಸಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಲಾ– ಕಾಲೇಜು ಶಿಕ್ಷಣಕ್ಕೆ ವಿಶೇಷ ಆದ್ಯತೆ. ಮಹಿಳೆಯರು ಮತ್ತು ಮಕ್ಕಳ ಆರೋಗ್ಯ, ಅಪೌಷ್ಟಿಕತೆ ನಿವಾರಣೆಗೆ ಒತ್ತು ನೀಡುವುದರ ಜತೆಗೆ ಬಡ ಮತ್ತು ಕೆಳ ವರ್ಗದ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೂ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಯುವ ಜನತೆಗೆ ಖಾಸಗಿ ಮತ್ತು ಸರ್ಕಾರಿ ವಲಯದಲ್ಲೂ ಉದ್ಯೋಗ ಸೃಷ್ಟಿಯ ಭರವಸೆ ನೀಡಲಾಗಿದೆ.

ಶಿಕ್ಷಣ ಕ್ಷೇತ್ರದ ಆಮೂಲಾಗ್ರ ಬದಲಾವಣೆಗೆ ಬೊಮ್ಮಾಯಿ ಚಿತ್ತ ಹರಿಸಿದ್ದು, ವಿಶೇಷವಾಗಿ ಬಡ– ಮಧ್ಯಮ ವರ್ಗದ ವಿದ್ಯಾರ್ಥಿಗಳಿಗೆ ಮತ್ತು ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಕಲಿಯುವವರಿಗೆ ಆದತ್ಯೆ ನೀಡಲಾಗಿದೆ. ಈ ವಲಯಕ್ಕೆ ₹37,960 ಕೋಟಿ ನೀಡುವ ಮೂಲಕ ಬಜೆಟ್‌ನಲ್ಲಿ ಶೇ 12 ರಷ್ಟು ಅನುದಾನ ಒದಗಿಸಲಾಗಿದೆ.

ಮೂಲ ಸೌಕರ್ಯ ವೃದ್ಧಿ, ಪರಿಶಿಷ್ಟ ಜಾತಿ–ವರ್ಗ, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಮಕ್ಕಳ ಕಲಿಕೆಯ ಗುಣಮಟ್ಟ ಹೆಚ್ಚಿಸಲು ಕಾರ್ಯಕ್ರಮಗಳನ್ನೂ ಪ್ರಕಟಿಸಿದೆ.

‘ಮುಖ್ಯಮಂತ್ರಿ ವಿದ್ಯಾಶಕ್ತಿ’ ಯೋಜನೆ ವಿನೂತನ ಯೋಜನೆಯಾಗಿದ್ದು, ಇದರಡಿ ಸರ್ಕಾರಿ ಪದವಿಪೂರ್ವ ಮತ್ತು ಸರ್ಕಾರಿ ಪದವಿ ಕಾಲೇಜುಗಳಲ್ಲಿ ಪ್ರವೇಶ ಪಡೆಯುವ ಎಲ್ಲಾ ವಿದ್ಯಾರ್ಥಿಗಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗುತ್ತದೆ. ಉಚಿತವಾಗಿ ಉನ್ನತ ಶಿಕ್ಷಣ ಪಡೆಯುವ ಅವಕಾಶ ಇದಾಗಿದ್ದು, 8 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 1,282 ಮೆಟ್ರಿಕ್ ಪೂರ್ವ ವಸತಿನಿಲಯಗಳ 10 ಸಾವಿರ ವಿದ್ಯಾರ್ಥಿಗಳಿಗೆ ವಿಜ್ಞಾನ, ಗಣಿತ ವಿಷಯಗಳ ಬುನಾದಿ ತರಬೇತಿಗೆ ₹8.50 ಕೋಟಿ ಒದಗಿಸಲಾಗಿದೆ.

ಅಪೌಷ್ಟಿಕತೆ ನಿವಾರಣೆಗೆ ಕ್ರಮ: ಕರ್ನಾಟಕದಲ್ಲಿ ಮಹಿಳೆಯರು ಮತ್ತು ಮಕ್ಕಳು ಅಪೌಷ್ಟಿಕತೆ ಮತ್ತು ರಕ್ತಹೀನತೆಯಿಂದ ಬಳಲುತ್ತಿದ್ದಾರೆಂಬ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ವರದಿಗಳ ಬೆನ್ನಲ್ಲೇ ಅದನ್ನು ಸರಿಪಡಿಸಲು ಸೂಕ್ತ ಕ್ರಮಗಳನ್ನು ಪ್ರಕಟಿಸಿದೆ. ಅಲ್ಲದೇ, ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿ ವೃತ್ತಿ ಕೌಶಲ ತರಬೇತಿ, ಹಣಕಾಸಿನ ನೆರವುಗಳಂತಹ ಘೋಷಣೆಗಳೂ ಆಗಿವೆ. ದುಡಿಯುವ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ವಿದ್ಯಾ ವಾಹಿನಿಯಡಿ ಉಚಿತ ಬಸ್ ಪಾಸ್ ಪ್ರಕಟಿಸಲಾಗಿದೆ. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ವಿಭಜಿಸಿ, ಮಕ್ಕಳ ಪೌಷ್ಟಿಕತೆ ಇಲಾಖೆ ಮತ್ತು ಮಹಿಳಾ ಸಬಲೀಕರಣ ಇಲಾಖೆ ಎಂದು ಘೋಷಿಸಲಾಗಿದೆ.

ಸರ್ಕಾರಿ ಹುದ್ದೆ ತುಂಬುವುದರ ಜತೆಗೆ ಖಾಸಗಿ ವಲಯದಲ್ಲಿ ಉದ್ಯೋಗ ಸೃಷ್ಟಿಯ ಭರವಸೆ ನೀಡಲಾಗಿದೆ. ಯುವ ಸಮೂಹವನ್ನು ತಲುಪುವ ಉದ್ದೇಶದಿಂದ ಕೌಶಲ್ಯ ತರಬೇತಿ, ವಿದೇಶಗಳಲ್ಲಿ ಉದ್ಯೋಗ ಅರಸುವವರಿಗೂ ತರಬೇತಿ ನೀಡಲಾಗುವುದು.

ವಿಶ್ವದ 250ರೊಳಗೆ ರ‍್ಯಾಂಕಿಂಗ್ ಹೊಂದಿರುವ ವಿ.ವಿಗಳಲ್ಲಿ ಪದವಿ, ಸ್ನಾತಕೋತ್ತರ ವ್ಯಾಸಂಗವನ್ನು ಮಾಡುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ₹20 ಲಕ್ಷದಂತೆ ಶೂನ್ಯ ಬಡ್ಡಿದರದಲ್ಲಿ ಸಾಲ ಪಡೆಯಲು ಸಹಾಯಧನ ಘೋಷಿಸಲಾಗಿದೆ.

500 ವಿದ್ಯಾರ್ಥಿಗಳು

‘ಹಳ್ಳಿ ಮುತ್ತು’

ಈ ಯೋಜನೆಯಡಿ ಗ್ರಾಮೀಣ ಸರ್ಕಾರಿ ಕನ್ನಡ ಮಾಧ್ಯಮ ಶಾಲೆಗಳಲ್ಲಿ ಶಿಕ್ಷಣ ಪಡೆಯುವ 500 ಅತ್ಯುತ್ತಮ ವಿದ್ಯಾರ್ಥಿಗಳು ಸಿಇಟಿ ಮೂಲಕ ಸರ್ಕಾರಿ ಕೋಟಾದಲ್ಲಿ ಆಯ್ಕೆಯಾದರೆ, ಅವರಿಗೆ ವೃತ್ತಿ ಶಿಕ್ಷಣದ ಸಂಪೂರ್ಣ ಶುಲ್ಕವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಭರಿಸಲಾಗುವುದು

₹100 ಕೋಟಿ

ಮಕ್ಕಳ ಬಸ್ಸು

ವಿದ್ಯಾರ್ಥಿಗಳು ಶಾಲಾ – ಕಾಲೇಜಿಗೆ ಹೋಗಲು ಬಸ್ಸುಗಳ ಕೊರತೆ ನಿವಾರಣೆಗೆ ಸಾರಿಗೆ ನಿಗಮಗಳ ಮೂಲಕ 1,000 ಹೊಸ ಸಂಚಾರ ಸೇವೆ ಆರಂಭಕ್ಕೆ ತೀರ್ಮಾನ. ‘ಮಕ್ಕಳ ಬಸ್ಸು’ ಎಂಬ ಈ ಯೋಜನೆಗೆ ₹100 ಕೋಟಿ ಒದಗಿಸಲಾಗುವುದು. 2 ಲಕ್ಷ ವಿದ್ಯಾರ್ಥಿಗಳಿಗೆ ಅನುಕೂಲ



₹146 ಕೋಟಿ

ಅಂಗಾಂಗ ಜೋಡಣೆ ಆಸ್ಪತ್ರೆ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಿಮ್ಹಾನ್ಸ್ ಸಂಸ್ಥೆಯ ಆವರಣದಲ್ಲಿ ₹146 ಕೋಟಿ ವೆಚ್ಚದಲ್ಲಿ ಅಂಗಾಂಗ ಜೋಡಣೆಗೆ ದೇಶದ ಪ್ರಥಮ ಸಾರ್ವಜನಿಕ ಆಸ್ಪತ್ರೆ ಸ್ಥಾಪನೆಗೆ ಕ್ರಮ. ₹5 ಕೋಟಿ ವೆಚ್ಚದಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜಿನಲ್ಲಿ ಸಂಪೂರ್ಣ ಸ್ವಯಂಚಾಲಿತ ಮತ್ತು ಕೇಂದ್ರೀಕೃತ ರಕ್ತನಿಧಿ ನಿರ್ವಹಣೆ ವ್ಯವಸ್ಥೆ ಸ್ಥಾಪನೆ



₹150 ಕೋಟಿ

ನಿರಂತರ ನಿರ್ವಹಣೆ

ಆರೋಗ್ಯ ಸಂಸ್ಥೆಗಳು 24x7 ಕಾರ್ಯನಿರ್ವಹಿಸಲು ₹150 ಕೋಟಿ ವೆಚ್ಚದಲ್ಲಿ ಮೂಲಸೌಕರ್ಯ ಮತ್ತು ಮಾನವ ಸಂಪನ್ಮೂಲ ಒದಗಿಸಲಾಗುವುದು. ತಾಲ್ಲೂಕು ಆಸ್ಪತ್ರೆಗಳಲ್ಲಿ ತಾಯಂದಿರು, ನವಜಾತ ಶಿಶುಗಳನ್ನು ಮನೆಗೆ ತಲುಪಿಸಲು ₹12.5 ಕೋಟಿ ವೆಚ್ಚದಲ್ಲಿ ‘ನಗು ಮಗು’ ವಾಹನ ಒದಗಿಸಲಾಗುವುದು

ಶಿಕ್ಷಣ, ಆರೋಗ್ಯ, ಮಹಿಳೆ ಮತ್ತು ಯುವಜನ ಸಬಲೀಕರಣ

ಭುವನೇಶ್ವರಿಯ ಬೃಹತ್ ಮೂರ್ತಿ ಸ್ಥಾಪನೆ

ಬೆಂಗಳೂರು: ಕನ್ನಡ ಮಾತೆ ‘ಭುವನೇಶ್ವರಿ’ಯ ಬೃಹತ್ ಮೂರ್ತಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲಾಗುವುದು. ಅದೇ ರೀತಿ, ಇಲ್ಲಿ ಥೀಮ್ ಪಾರ್ಕ್ ಅಭಿವೃದ್ಧಿಪಡಿಸಲಾಗುವುದು ಎಂದು ಸರ್ಕಾರ ಘೋಷಿಸಿದೆ.

ಆಡಳಿತ, ಕೈಗಾರಿಕೋದ್ಯಮ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಕನ್ನಡದ ವ್ಯಾಪಕ ಬಳಕೆಗೆ ಹಾಗೂ ಕನ್ನಡಿಗರ ಹಿತಾಸಕ್ತಿ ರಕ್ಷಣೆಗೆ ‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಮಸೂದೆ-2022’ ಅನ್ನು ಜಾರಿಗೆ ತರಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.



3ನೇ ‘ವಿಶ್ವ ಕನ್ನಡ ಸಮ್ಮೇಳನ’ವನ್ನು ದಾವಣಗೆರೆಯಲ್ಲಿ ಆಯೋಜಿಸಲಾಗುವುದು. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಮತ್ತು ಕರ್ನಾಟಕ ಏಕೀಕರಣಕ್ಕಾಗಿ ಹೋರಾಡಿದ ಮಹನೀಯರ ಬದುಕು ಹಾಗೂ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ಪರಿಚಯಿಸಲು ಅವರ ಜೀವನ-ಗಾಥೆಗಳನ್ನು ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗುತ್ತದೆ. ನಾಡು–ನುಡಿ ಹಾಗೂ ಸಂಸ್ಕೃತಿ ಕುರಿತು ಅಮೂಲ್ಯ ಕೃತಿಗಳನ್ನು ಪ್ರಕಟಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಚಟುವಟಿಕೆಗಳಿಗೆ ₹2 ಕೋಟಿ ನೆರವು ನೀಡಲು ಉದ್ದೇಶಿಸಲಾಗಿದೆ.

ಗಡಿನಾಡು ಪ್ರದೇಶದಲ್ಲಿ ಕನ್ನಡ ಭಾಷೆ, ಕಲೆ, ಶಿಕ್ಷಣ ಮತ್ತು ಸಂಸ್ಕೃತಿಯ ವಿಕಾಸಕ್ಕೆ ಪ್ರಾಶಸ್ತ್ಯ ನೀಡಲಾಗುವುದು. ಹಾಗೆಯೇ, ಗಡಿ ಪ್ರದೇಶದ ರಸ್ತೆಗಳ ಹಾಗೂ ಸಮಗ್ರ ಅಭಿವೃದ್ಧಿಗೆ ವಿವಿಧ ಇಲಾಖೆಗಳ ಮೂಲಕ ₹150 ಕೋಟಿ ಒದಗಿಸಲಾಗುವುದು. ‘ನಮ್ಮ ಜಿಲ್ಲೆ ನಮ್ಮ ಸಂಸ್ಕೃತಿ’ ಎಂಬ ಕಾರ್ಯಕ್ರಮದಡಿ ಪ್ರತಿ ಜಿಲ್ಲೆಯಲ್ಲಿ ಎಲ್ಲಾ ವರ್ಗದ ಸ್ಥಳೀಯ ಕಲಾವಿದರನ್ನು ಒಳಗೊಂಡಂತೆ, ‘ಜಾನಪದ ಹಬ್ಬ’ ಆಯೋಜಿಸಲಾಗುವುದು ಎಂದು ಉಲ್ಲೇಖಿಸಲಾಗಿದೆ.

ಬೆಂಗಳೂರಿನಲ್ಲಿ ನಡೆಯುವ ಕರಗ ಉತ್ಸವ ಆಚರಣೆಗೆ ಸರ್ಕಾರದಿಂದ ವಿಶೇಷ ಅನುದಾನ ಒದಗಿಸಲಾಗುವುದು. ದೇಶವನ್ನು ಆಳಿದ ಗಂಗ, ಕದಂಬ, ರಾಷ್ಟ್ರಕೂಟ, ಚಾಲುಕ್ಯ ಹೊಯ್ಸಳ ಮತ್ತಿತರ ಕನ್ನಡದ ರಾಜವಂಶಗಳ ಇತಿಹಾಸ ಹಾಗೂ ಕೊಡುಗೆಗಳ ಬಗ್ಗೆ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ಅಧ್ಯಯನ ಮಾಡಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ಐವಿಎಫ್ ಕ್ಲಿನಿಕ್, ಕ್ಯಾನ್ಸರ್ ತಪಾಸಣೆ

ಬೆಂಗಳೂರು: ಈ ಬಾರಿಯ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ₹15,151 ಕೋಟಿ ಹಂಚಿಕೆ ಮಾಡಲಾಗಿದ್ದು, ಐವಿಎಫ್ (ಕೃತಕ ಗರ್ಭಧಾರಣೆ) ಕ್ಲಿನಿಕ್ ಪ್ರಾರಂಭ ಹಾಗೂ ಆರಂಭಿಕ ಹಂತದಲ್ಲಿಯೇ ಕ್ಯಾನ್ಸರ್ ಪತ್ತೆಗೆ ರಾಜ್ಯದಾದ್ಯಂತ ವ್ಯಾಪಕ ತಪಾಸಣಾ ಶಿಬಿರ ನಡೆಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ಬೆಂಗಳೂರು, ಹುಬ್ಬಳ್ಳಿ, ಮೈಸೂರು ಮತ್ತು ಕಲಬುರ್ಗಿಯ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ, ₹6 ಕೋಟಿ ವೆಚ್ಚದಲ್ಲಿ ಐವಿಎಫ್ ಕ್ಲಿನಿಕ್ ಪ್ರಾರಂಭಿಸಲಾಗುತ್ತದೆ. ಸ್ತನ, ಬಾಯಿ ಮತ್ತು ಗರ್ಭಕಂಠ ಕ್ಯಾನ್ಸರ್ ಪತ್ತೆಗೆ ‘ಜೀವಸುಧೆ’ ಎಂಬ ತಪಾಸಣಾ ಶಿಬಿರ ನಡೆಸಲಾಗುವುದು. ಹೆಚ್ಚಿನ ಚಿಕಿತ್ಸೆಗೆ ತೃತೀಯ ಆರೈಕೆ ಆಸ್ಪತ್ರೆಗಳಿಗೆ ಕಳುಹಿಸಲಾಗುವುದು. ಕ್ಯಾನ್ಸರ್ ಪತ್ತೆಗೆ ಅಗತ್ಯವಿರುವ ಸಾಧನಗಳ ಖರೀದಿಗೆ ₹12 ಕೋಟಿ ಅನುದಾನ ಒದಗಿಸಲಾಗುವುದು. ಜಿಲ್ಲೆಗಳಲ್ಲಿ ‘ಹ್ಯಾಂಡ್ ಹೆಲ್ಡ್ ಎಕ್ಸ್–ರೇ’ ಯಂತ್ರಗಳ ಸಹಾಯದಿಂದ ಕ್ಷಯ ರೋಗ ತಪಾಸಣೆ ನಡೆಸಲಾಗುವುದು ಎನ್ನಲಾಗಿದೆ.

ಮಹಿಳೆಯರಲ್ಲಿ ರಕ್ತಹೀನತೆ ಹಾಗೂ ಅಪೌಷ್ಟಿಕತೆ ನಿವಾರಿಸಲು ಪರೀಕ್ಷೆ, ಚಿಕಿತ್ಸೆ ಹಾಗೂ ತರಬೇತಿಗೆ ₹ 100 ಕೋಟಿ ಒದಗಿಸಲಾಗುವುದು. ವರ್ಷಕ್ಕೆರಡು ಬಾರಿ ನವಜಾತ ಶಿಶುಗಳಿಂದ 6 ವರ್ಷದೊಳಗಿನ ಮಕ್ಕಳ ಆರೋಗ್ಯ ತಪಾಸಣೆಗೆ ‘ವಾತ್ಸಲ್ಯ’ ಯೋಜನೆ ರೂಪಿಸಲಾಗುತ್ತದೆ. ‘ಆರೋಗ್ಯ ಪುಷ್ಟಿ’ ಯೋಜನೆಯಡಿ ಅರ್ಹ ವಿವಾಹಿತ ಮಹಿಳೆಯರಿಗೆ ಅಪೌಷ್ಟಿಕತೆ ಮತ್ತು ರಕ್ತಹೀನತೆ ನಿವಾರಣೆಗೆ ಅಂಗನವಾಡಿಗಳಲ್ಲಿ ಬಿಸಿಯೂಟ ಹಾಗೂ ಐಎಫ್‌ಎ ಮಾತ್ರೆ ನೀಡಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

‘ಆಯುಷ್ಮಾನ್ ಭಾರತ್– ಆರೋಗ್ಯ ಕರ್ನಾಟಕ’ ಯೋಜನೆ ಅಡಿ ಹೆಚ್ಚಿನ ಸಂಖ್ಯೆಯಲ್ಲಿ ಖಾಸಗಿ ಆಸ್ಪತ್ರೆಗಳನ್ನು ಸೇರ್ಪಡೆಗೊಳಿಸಲು ಕ್ರಮ ಕೈಗೊಳ್ಳಲಾಗುವುದು. ಕೈಗೆಟಕುವ ದರದಲ್ಲಿ ಸ್ಥಳೀಯವಾಗಿಯೇ ಪ್ರಯೋಗಾಲಯ ಸೇವೆಗಳನ್ನು ಒದಗಿಸಲು 129 ತಾಲ್ಲೂಕು ಪ್ರಯೋಗಾಲಯ, ಜಿಲ್ಲೆಗಳಲ್ಲಿ ಜಿಲ್ಲಾ ಪ್ರಯೋಗಾಲಯ ಹಾಗೂ ಬೆಂಗಳೂರಿನಲ್ಲಿ ರಾಜ್ಯಮಟ್ಟದ ರೆಫರಲ್ ಪ್ರಯೋಗಾಲಯ ಸ್ಥಾಪಿಸಲಾಗುತ್ತದೆ ಎನ್ನಲಾಗಿದೆ.



₹1,000 ಕೋಟಿ

ಬಸ್ ಪಾಸ್

ರಾಜ್ಯದ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ಸೌಲಭ್ಯ ಒದಗಿಸಲಾಗುವುದು. 30 ಲಕ್ಷ ಮಹಿಳೆಯರಿಗೆ ಸಹಾಯವಾಗುವ ಈ ಯೋಜನೆಗೆ ₹1 ಸಾವಿರ ಕೋಟಿ ಒದಗಿಸಲಾಗುವುದು. ವಿದ್ಯಾರ್ಥಿನಿಯರಿಗೆ ‘ವಿದ್ಯಾವಾಹಿನಿ’ ಯೋಜನೆಯಡಿ ₹350 ಕೋಟಿ ವೆಚ್ಚದಲ್ಲಿ ಉಚಿತ ಬಸ್‌ಪಾಸ್ ಸೌಲಭ್ಯ



₹500

‘ಶ್ರಮಶಕ್ತಿ’

‘ಗೃಹಿಣಿ ಶಕ್ತಿ’ ಯೋಜನೆಯಡಿ ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ಶ್ರಮಶಕ್ತಿ ಯೋಜನೆ ಪರಿಚಯಿಸುತ್ತಿದ್ದು, ಪ್ರತಿ ತಿಂಗಳು ₹500 ಸಹಾಯಧನವನ್ನು ಡಿ.ಬಿ.ಟಿ. ಮೂಲಕ ನೀಡಲಾಗುತ್ತದೆ. ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೆ ಉಪಧನ ನೀಡಲು ₹40 ಕೋಟಿ ಅನುದಾನ



₹1,500

ಶಿಷ್ಯ ವೇತನ

ಶಾಲಾ ಶಿಕ್ಷಣದ ನಂತರ ವಿದ್ಯಾಭ್ಯಾಸ ಮುಂದುವರೆಸಲು ಸಾಧ್ಯವಾಗದೇ ಇರುವ ಯುವಜನರಿಗೆ ಐಟಿಐಗಳಲ್ಲಿ 3 ತಿಂಗಳ ವೃತ್ತಿಪರ ಸರ್ಟಿಫಿಕೇಟ್ ತರಬೇತಿ ಪಡೆಯಲು ತಿಂಗಳಿಗೆ ₹1,500 ಶಿಷ್ಯ ವೇತನ ನೀಡಲಾಗುವುದು. ತರಬೇತಿ ಪೂರ್ಣಗೊಳಿಸಿದವರಿಗೆ ಅಪ್ರೆಂಟಿಶಿಪ್ ಕಾರ್ಯಕ್ರಮದಡಿ 3 ತಿಂಗಳ ಕಾಲ ಪ್ರತಿ ತಿಂಗಳಿಗೆ ₹1,500 ಭತ್ಯೆ

₹2,000

ಆರ್ಥಿಕ ನೆರವು

ಪದವಿ ಶಿಕ್ಷಣ ಮುಗಿಸಿ ಮೂರು ವರ್ಷಗಳ ನಂತರವೂ ಯಾವುದೇ ಉದ್ಯೋಗ ದೊರೆಯದ ಯುವಕರಿಗೆ ಸ್ಪರ್ಧಾತ್ಮಕ ಪರೀಕ್ಷೆ ಎದುರಿಸಲು ಯುವ ಸ್ನೇಹಿ ಎಂಬ ಹೊಸ ಯೋಜನೆಯಡಿ ತಲಾ ₹2,000 ಒಂದು ಬಾರಿಯ ಆರ್ಥಿಕ ನೆರವು

₹5 ಲಕ್ಷ ಸಹಾಯಧನ

ಸ್ವಾಮಿ ವಿವೇಕಾನಂದ ಯುವಕರ ಜಂಟಿ ಬಾಧ್ಯತಾ ಗುಂಪುಗಳಿಗೆ ತಲಾ ₹10,000ಗಳಂತೆ ಸುತ್ತುನಿಧಿ, ಸ್ವಯಂ ಉದ್ಯೋಗ ಚಟುವಟಿಕೆಗಳನ್ನು ಕೈಗೊಳ್ಳಲು ₹1 ಲಕ್ಷ ಒಳಗೊಂಡಂತೆ ಬ್ಯಾಂಕ್‌ಗಳ ಸಹಾಯದೊಂದಿಗೆ ₹5 ಲಕ್ಷದವರೆಗೆ ಸಹಾಯಧನ

ಉದ್ಯೋಗ ಸೃಷ್ಟಿ: ನುಡಿದಂತೆ ನಡೆಯಿತೆ ಸರ್ಕಾರ?



ವಿಶ್ಲೇಷಣೆ

ರಾಜಾರಾಂ ತಲ್ಲೂರು

ಕಳೆದ ವರ್ಷ, 2022ರ ಜುಲೈ 22, ರಾಜ್ಯ ಸಚಿವ ಸಂಪುಟ ಸಭೆಯ ಬಳಿಕ ಮಾಧ್ಯಮಗಳಿಗೆ ಸಭೆಯ ವಿವರಗಳನ್ನು ನೀಡಿದ್ದ ಸಚಿವ ಜೆ. ಸಿ. ಮಾಧುಸ್ವಾಮಿ ಅವರು, ಮುಂದಿನ ಮೂರು ವರ್ಷಗಳಲ್ಲಿ, ಜವಳಿ, ಚರ್ಮ, ಆಹಾರ ಸಂಸ್ಕರಣೆಯಂತಹ ದುಡಿಯುವ ಕೈಗಳ ಆವಶ್ಯಕತೆ ಹೆಚ್ಚಿರುವ ಉದ್ಯಮ ಕ್ಷೇತ್ರಗಳಲ್ಲಿ 7.5 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಲಾಗುವುದು, ಇದರಲ್ಲಿ ಜವಳಿ ರಂಗದ ಪಾಲು 4 ಲಕ್ಷ ಉದ್ಯೋಗಗಳು ಎಂದು ಪ್ರಕಟಿಸಿದ್ದರು.

ಆ ಹಿನ್ನೆಲೆಯಲ್ಲಿ ಬಜೆಟ್ ಏನೇನು ಅವಕಾಶ ಕಲ್ಪಿಸಿದೆ ಎಂದು ಗಮನಿಸಿದರೆ ನಿರಾಸೆ ಕಾಣಿಸುತ್ತದೆ. 25 ಸ್ಥಳಗಳಲ್ಲಿ ಮೆಗಾ- ಮಿನಿ ಜವಳಿ ಪಾರ್ಕ್‌ಗಳ ಮೂಲಕ 25,000 ಉದ್ಯೋಗಗಳು ಮತ್ತು ಹೂಡಿಕೆದಾರರ ಸಮಾವೇಶದಲ್ಲಿ ಖಾಸಗಿಯವರು ₹4,292 ಕೋಟಿ ಹೂಡಿಕೆಗೆ ಒಪ್ಪಿದ್ದು, ಅವು ಸ್ಥಾಪನೆಗೊಂಡರೆ 44,257 ಉದ್ಯೋಗಗಳು ಸೃಷ್ಟಿ ಆಗಲಿವೆ ಎಂದು ಬಜೆಟ್ ಹೇಳಿದೆ. ಇದು ಸರ್ಕಾರದ ಆಕಾಂಕ್ಷೆಗಿಂತ ಬಹಳ ಕಡಿಮೆ ಇರುವುದು ಎದ್ದು ಕಾಣಿಸುತ್ತಿದೆ. ಚರ್ಮ, ಆಹಾರ ಸಂಸ್ಕರಣೆಗೆ ಸಂಬಂಧಿಸಿದಂತೆ ಉದ್ಯೋಗ ಸೃಷ್ಟಿಯ ಬಗ್ಗೆ ಬಜೆಟ್ ಮೌನ. ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಲೆಕ್ಕಾಚಾರಗಳ ಪ್ರಕಾರ ರಾಜ್ಯದ ನಿರುದ್ಯೋಗ ಸರಾಸರಿ ಶೇ 3.41ರಷ್ಟು ಇದೆ. ರಾಜ್ಯದ ಆದಾಯದಲ್ಲಿ ಶೇ 60ರಷ್ಟು ಪಾಲನ್ನು ತರುವ ಮಾಹಿತಿ ತಂತ್ರಜ್ಞಾನ ಸೇವಾಕ್ಷೇತ್ರದಲ್ಲಿ, ಜಾಗತಿಕ ಹಿಂಜರಿತದ ಕಾರಣಕ್ಕೆ ಕಳೆದ ಒಂದು ವರ್ಷದಿಂದ ಒಂದೇ ಸಮನೆ ಉದ್ಯೋಗ ಕಡಿತ ನಡೆಯುತ್ತಿರುವುದು ಕಳವಳಗಳಿಗೆ ಕಾರಣವಾಗಿದೆ; ಈ ನಿಟ್ಟಿನಲ್ಲಿ ಮುನ್ನೆಚ್ಚರಿಕೆಯಾಗಲೀ, ಉದ್ಯೋಗ ಸೃಷ್ಟಿಗಾಗಲೀ ಬಜೆಟ್ ಗಮನ ಹರಿಸಿದಂತೆ ಕಾಣಿಸುತ್ತಿಲ್ಲ.

ಶಿಕ್ಷಣವೂ ಕ್ಯಾಪೆಕ್ಸ್ ಅಲ್ಲವೆ?: ಶಿಕ್ಷಣ ಕ್ಷೇತ್ರಕ್ಕೆ ₹37,960 ಕೋಟಿ ಹಂಚಿಕೆ ಮಾಡಲಾಗಿದೆ. ಮುಖ್ಯಮಂತ್ರಿ ವಿದ್ಯಾಶಕ್ತಿ ಯೋಜನೆಯಡಿ ಎಲ್ಲ ಸರ್ಕಾರಿ ಪದವಿಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಸಂಪೂರ್ಣ ಉಚಿತ ಶಿಕ್ಷಣದ ಭರವಸೆ ಸ್ವಾಗತಾರ್ಹ ನಿರ್ಧಾರ. ಅದರಿಂದ ಎಂಟು ಲಕ್ಷ ವಿದ್ಯಾರ್ಥಿಗಳಿಗೆ ಸಹಾಯ ಆಗಲಿದೆ. ಅದನ್ನುಳಿದರೆ, ರಾಜ್ಯದ 50,000 ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ಶೇ 5ರಷ್ಟು ಪ್ರಾಥಮಿಕ ಶಿಕ್ಷಣದ ಶಾಲೆಗಳು ಮುಚ್ಚುವಂತಹ ಹಂತದಲ್ಲಿರುವಾಗ, ಸರ್ಕಾರ ಶಾಲಾ ಕೊಠಡಿಗಳ, ಶೌಚಾಲಯಗಳ, ವಸತಿ ನಿಲಯಗಳ ನಿರ್ಮಾಣದ -ದುರಸ್ತಿಯ ತೇಪೆಗಳ ಬದಲು ಸ್ವಲ್ಪ ಸಮಗ್ರವಾದ ದೂರಗಾಮಿ ಕ್ರಮಕ್ಕೆ ಮುಂದಾಗಬೇಕೆಂಬ ನಿರೀಕ್ಷೆ ಈ ಬಜೆಟ್‌ನಲ್ಲಿ ಈಡೇರಿಲ್ಲ. ಹೂಡಿಕೆಗೆ ದಶಕದಲ್ಲೇ ಹೆಚ್ಚು (ಶೇ 30.4ರಷ್ಟು) ಹಣ ಕಾದಿರಿಸಿ ರೈಲು, ವಿಮಾನ ನಿಲ್ದಾಣ, ಬಂದರು, ಲಾಜಿಸ್ಟಿಕ್ಸ್ ಎಂದು ಕಾರ್ಪೊರೇಟ್ ಕಂಪನಿಗಳಿಗೆ ಸವಲತ್ತು ಹೆಚ್ಚಿಸುವುದರಲ್ಲೇ ಉತ್ಸುಕತೆ ತೋರಿಸುತ್ತಿರುವ ಸರ್ಕಾರಕ್ಕೆ ಶಿಕ್ಷಣದ ಮೂಲಕ ಮಾನವ ಸಂಪನ್ಮೂಲಕ್ಕೆ ಮಾಡಬಹುದಾದ ಹೂಡಿಕೆ ಕೂಡ ಬಂಡವಾಳ ಹೂಡಿಕೆ ಆಗಬಹುದು ಅನ್ನಿಸಲಿಲ್ಲ.

ಆರೋಗ್ಯಕ್ಕೆ ಇಚ್ಛಾಶಕ್ತಿ ಇಲ್ಲ: ಆರೋಗ್ಯಕ್ಕೆ ಸಂಬಂಧಿಸಿ ದೇಶದ ಬೇರೆ ರಾಜ್ಯಗಳ ಸರಾಸರಿ ಹಂಚಿಕೆಗೆ ಹೋಲಿಸಿ ನೋಡಿದರೆ, ರಾಜ್ಯ ಸರ್ಕಾರವು ಇನ್ನೂ ಹಿಂದುಳಿದಿದೆ; ತಾನೇ ನೇಮಿಸಿದ ತಜ್ಞರ ಸಮಿತಿಯ ಶಿಫಾರಸುಗಳು ಮತ್ತು 15ನೇ ಹಣಕಾಸು ಆಯೋಗದ ಶಿಫಾರಸುಗಳನ್ನು ಪರಿಗಣಿಸುವುದಿದ್ದರೆ, 2025ರ ಹೊತ್ತಿಗೆ, ರಾಜ್ಯದ ಬಜೆಟ್‌ನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಕನಿಷ್ಠ ಶೇ 8ರಷ್ಟು ಹಣವನ್ನು ಮೀಸಲಿಡಬೇಕಿತ್ತು. ಆದರೆ, ಕಳೆದ ಐದು ವರ್ಷಗಳಲ್ಲಿ ಮಾಡಿದಂತೆಯೇ, ಈ ಬಾರಿ ಕೂಡ ಅದು ಶೇ 5ರಷ್ಟು ಮಾತ್ರ ಇದೆ.

ಸರ್ವೋದಯ- ಕ್ಷೇಮಾಭಿವೃದ್ಧಿ: ರಾಜ್ಯ ಸರ್ಕಾರ ಸರ್ವೋದಯ ಮತ್ತು ಕ್ಷೇಮಾಭಿವೃದ್ಧಿಗಳಿಗೆ ₹81,318 ಕೋಟಿಗಳನ್ನು ಮೀಸಲಿರಿಸಿರುವುದಾಗಿ ಹೇಳಿದೆ. ಇದರಲ್ಲಿ ದುರ್ಬಲ ಎಂದು ಪರಿಗಣಿಸಲಾಗುವ ಮಹಿಳೆ, ಮಕ್ಕಳು ಮತ್ತು ಹಿಂದುಳಿದ- ಪರಿಶಿಷ್ಟ ಜನ ಸಮುದಾಯಗಳಿಗೆ ಒಟ್ಟು ಹಂಚಿಕೆ ಕೇವಲ ₹16,839 ಕೋಟಿ; ಇಲ್ಲಿ ಎದ್ದು ಕಾಣಿಸಿದ್ದು, ಭೂರಹಿತ ಮಹಿಳಾ ಕೃಷಿ ಕಾರ್ಮಿಕ ಸಮುದಾಯಕ್ಕೆ ತಿಂಗಳಿಗೆ ₹500 ಸಹಾಯಧನ. ಅದನ್ನು ಬಿಟ್ಟರೆ, ಅಲ್ಲಲ್ಲಿ ಚದುರಿದಂತೆ ಕೆಲವು ಹಂಚಿಕೆಗಳು ಮತ್ತು ಈಗಾಗಲೇ ಜಾರಿಯಲ್ಲಿರುವ ಯೋಜನೆಗಳ ಮುಂದುವರಿಕೆ ಮಾತ್ರ ಕಾಣಿಸುತ್ತಿವೆ.

ಆಹಾ ಚುನಾವಣಾ ಬಜೆಟ್ ಎಂದು ಸರ್ಕಾರದ ಬೆಂಬಲಿಗರು ಸಂಭ್ರಮಿಸುವ ಆಕರ್ಷಕ ಪ್ಯಾಕೇಜಿಂಗನ್ನೂ ಈ ಬಜೆಟ್ ಹೊಂದಿಲ್ಲ.

ಲೇಖಕ: ಸಾಮಾಜಿಕ ವಿಶ್ಲೇಷಕ

ಬಜೆಟ್: ನಾವು ಕಂಡಂತೆ



ಅನುಷ್ಠಾನ ಬದ್ಧತೆ ಇಲ್ಲದ ಭರವಸೆ– ಗುರಿಗಳೇ ತುಂಬಿವೆ. ಶಿಕ್ಷಕರ ನೇಮಕಾತಿ ಸೇರಿದಂತೆ ಶಿಕ್ಷಣ ಕ್ಷೇತ್ರದಲ್ಲಿರುವ ನ್ಯೂನತೆಗಳ ನಿವಾರಣೆಯ ಯಾವ ಪ್ರಸ್ತಾಪವೂ ಈ ಬಾರಿಯ ಬಜೆಟ್‌ನಲ್ಲಿ ಇಲ್ಲ

ಚಂದ್ರಶೇಖರ ದಾಮ್ಲೆ
ಮಂಗಳೂರು



ಉದ್ಯೋಗ ಖಾತ್ರಿ ಅನುದಾನ ಕಡಿತಗೊಂಡಿದೆ. ರೈತರು, ಕಾರ್ಮಿಕರು ಸಂಕಷ್ಟಕ್ಕೆ ಸಿಲುಕುವಂತಾಗಿದೆ. ಉದ್ಯೋಗ ಸೃಷ್ಟಿಗೆ ಆದ್ಯತೆ ಕೊಟ್ಟಿಲ್ಲ.

ಅಶ್ವಿನಿ ಮದನಕರ
ಸಂಚಾಲಕಿ, ಪ್ರಬುದ್ಧ ಭಾರತ ಸಂಘರ್ಷ ಸಮಿತಿ, ಕಲಬುರಗಿ



ಮೂರ್ತಿ ಸ್ಥಾಪನೆ, ಥೀಮ್ ಪಾರ್ಕ್‌ಗಳಂಥ ಕಣ್ಣಿಗೆ ರಾಚುವ ದುಂದುಗಾರಿಕೆ ಬಿಟ್ಟು, ಕನ್ನಡವನ್ನು ಅನ್ನದ ಭಾಷೆಯಾಗಿಸುವ, ಸಾಹಿತ್ಯವನ್ನು ಪ್ರತಿ ಮಕ್ಕಳಿಗೂ ತಲುಪಿಸುವ ಕ್ರಿಯಾತ್ಮಕ ಯೋಜನೆಗಳನ್ನೂ ಘೋಷಿಸಬಹುದಿತ್ತು

ದಾದಾಪೀರ್ ಜೈಮನ್
ಸಾಹಿತಿ, ಬೆಂಗಳೂರು



ಕಳೆದ ಬಜೆಟ್ ಅನ್ನು ಕಾರ್ಯರೂಪಕ್ಕೆ ತರದ ಸರ್ಕಾರ, ಈಗ ಹೊಸ ಹೆಸರಿನೊಂದಿಗೆ ವಿಂಗಡಣೆ ಮಾಡಿದೆ. ಹಿಂದಿನ ದಿನದ ಅನ್ನವನ್ನು ಚಿತ್ರಾನ್ನ ಮಾಡಿದ ಹಾಗೆ, ಹೊಸ ಅಂಕಿ ಅಂಶ ನೀಡಲಾಗಿದೆ

ಪಲ್ಲವಿ ಇಡೂರು
ರಾಜಕೀಯ ವಿಶ್ಲೇಷಕಿ, ಬೆಂಗಳೂರು



ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳನ್ನು ಕೆಐಟಿಯನ್ನಾಗಿ ಮಾರ್ಪಾಡು ಮಾಡಿದಲ್ಲಿ, ಶುಲ್ಕ ಏರಿಕೆಯಿಂದ ಬಡ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ಕಷ್ಟವಾಗುತ್ತದೆ. ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೆ ಮೂಲಸೌಕರ್ಯ ಒದಗಿಸಲು ಆದ್ಯತೆ ನೀಡಬೇಕಾಗಿತ್ತು

ಅಭಯಾ ದಿವಾಕರ್
ಎಐಡಿಎಸ್‌ಒ, ಖಜಾಂಚಿ, ಬೆಂಗಳೂರು

ರಾಜ್ಯ ಬಜೆಟ್ 2023-24



ಮೇಕೆದಾಟು: ಅನುದಾನ ಪ್ರಸ್ತಾವ ಇಲ್ಲ

ಈ ಬಾರಿಯ ಬಜೆಟ್‌ನಲ್ಲಿ ರಾಜ್ಯದ ನೀರಾವರಿ ವಲಯಕ್ಕೆ ಒಟ್ಟಾರೆ ₹25 ಸಾವಿರ ಕೋಟಿ ಅನುದಾನ ಒದಗಿಸಲಾಗಿದೆ. ಆದರೆ ಮೇಕೆದಾಟು ಯೋಜನೆಗೆ ಅಗತ್ಯ ಅನುದಾನ ಕಲ್ಪಿಸಲಾಗುವುದು ಮತ್ತು ಎತ್ತಿನಹೊಳೆ ಯೋಜನೆಯ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲಾಗುವುದು ಎಂದಷ್ಟೇ ಹೇಳಲಾಗಿದೆ.

- ಯಾದಗಿರಿ, ಕಲಬುರಗಿಯಲ್ಲಿ ಸಣ್ಣ ನೀರಾವರಿಗೆ ₹443 ಕೋಟಿ
- ಪಶ್ಚಿಮ ವಾಹಿನಿ 2ನೇ ಹಂತದ ಯೋಜನೆಗೆ ₹378 ಕೋಟಿ
- ಕೃಷ್ಣಾ ಮೇಲ್ದಂಡೆ ಹಂತ 3ರ ಯೋಜನೆಗೆ ₹5,000 ಕೋಟಿ
- ಕಳಸಾ, ಬಂಡೂರಿ ನಾಲಾ ಯೋಜನೆಗೆ ₹1,000 ಕೋಟಿ
- ₹11,236 ಕೋಟಿ ವೆಚ್ಚದ 38 ಯೋಜನೆಗಳನ್ನು ಜಾರಿಗೊಳಿಸಿ 1.5 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ ಸೃಷ್ಟಿಸುವ ಗುರಿ

ರೈತರಿಗೆ ಬಡ್ಡಿರಹಿತ ಸಾಲ ₹5 ಲಕ್ಷಕ್ಕೆ ಏರಿಕೆ

₹3,500 ಕೋಟಿ
ಆವರ್ತ ನಿಧಿಗೆ ಬಲ

ಕನಿಷ್ಠ ಬೆಂಬಲ ಬೆಲೆ ಯೋಜನೆ ಅಡಿ ಖರೀದಿಸುವ ಧಾನ್ಯಗಳಿಗೆ, ತ್ವರಿತವಾಗಿ ರೈತರಿಗೆ ಹಣ ಪಾವತಿಸಲು ಸ್ಥಾಪಿಸಿರುವ ಆವರ್ತ ನಿಧಿಯನ್ನು ₹3,500 ಕೋಟಿಗೆ ಹೆಚ್ಚಿಸಲಾಗಿದೆ. ಇದಕ್ಕಾಗಿ ಪ್ರಸಕ್ತ ಆಯವ್ಯಯದಲ್ಲಿ ₹1,500 ಕೋಟಿ ಅನುದಾನ ಒದಗಿಸಲಾಗಿದೆ. ರಾಜ್ಯದ ಇತಿಹಾಸದಲ್ಲೇ ಹೆಚ್ಚಿನ ಗಾತ್ರದ ಆವರ್ತ ನಿಧಿ ಇದಾಗಿದೆ.

₹100 ಕೋಟಿ
ಕೃಷಿ ರಫ್ತಿಗೆ ಉತ್ತೇಜನ

ರೈತ ಸಂಘದ ಯೋಜನೆ ಅಡಿ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣೆ ಮತ್ತು ರಫ್ತು ಉತ್ತೇಜನಕ್ಕೆ ₹100 ಕೋಟಿ ಒದಗಿಸಲು ಉದ್ದೇಶಿಸಲಾಗಿದೆ.

- ₹20 ಕೋಟಿ ಅನುದಾನದಲ್ಲಿ ಉತ್ತಮ ತಳಿಯ ಬಲಿತ ಬಿತ್ತನೆ ಮೀನು ಮರಿಗಳ ದಾಸ್ತಾನು ಪ್ರೋತ್ಸಾಹ. ಹಾವೇರಿಯಲ್ಲಿ ಮೀನು ಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ ಸ್ಥಾಪನೆ.



₹10 ಕೋಟಿ
ಅಡಿಕೆ ಬೆಳೆ ನಿರ್ವಹಣೆ

ಅಡಿಕೆ ಬೆಳೆ ಬಾಧಿಸುವ ರೋಗಗಳ ನಿರ್ವಹಣೆಗೆ ನೂತನ ತಾಂತ್ರಿಕತೆಯನ್ನು ಅಭಿವೃದ್ಧಿಪಡಿಸಿ ಉತ್ಪಾದನೆ ಹೆಚ್ಚಿಸುವ ನಿಟ್ಟಿನಲ್ಲಿ ಸಂಶೋಧನೆ ಕೈಗೊಳ್ಳಲು ತೀರ್ಥಹಳ್ಳಿಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರಕ್ಕೆ ₹10 ಕೋಟಿ ನೆರವು ನೀಡಲು ಉದ್ದೇಶಿಸಲಾಗಿದೆ.



₹39,031 ಕೋಟಿ
ಕೃಷಿ ಮತ್ತು ಪೂರಕ ಚಟುವಟಿಕೆಗಳಿಗೆ ಮೀಸಲಾದ ಮೊತ್ತ

₹100 ಕೋಟಿ
ದ್ರಾಕ್ಷಾರಸ ಮಂಡಳಿಗೆ ನೆರವು

ಕರ್ನಾಟಕ ದ್ರಾಕ್ಷಿ ಮತ್ತು ದ್ರಾಕ್ಷಾರಸ ಮಂಡಳಿಯ ಮೂಲಕ ₹100 ಕೋಟಿ ವೆಚ್ಚದಲ್ಲಿ ವಿಶೇಷ ಯೋಜನೆ ಜಾರಿಗೆ ನಿರ್ಧಾರ

- ಚಿಕ್ಕಬಳ್ಳಾಪುರದಲ್ಲಿ ಅಂತರರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆ ಮತ್ತು ಬೆಂಗಳೂರು ಹಾಗೂ ಹಾವೇರಿಯಲ್ಲಿ ಹೂವಿನ ಅತ್ಯಾಧುನಿಕ ಚಿಲ್ಲರೆ ಮಾರುಕಟ್ಟೆ ನಿರ್ಮಿಸಲಾಗುವುದು



₹75 ಕೋಟಿ
ರೇಷ್ಮೆಗೂಡು ಮಾರುಕಟ್ಟೆ

ಶಿಡ್ಲಘಟ್ಟದಲ್ಲಿ ₹75 ಕೋಟಿ ವೆಚ್ಚದಲ್ಲಿ ಹೈಟೆಕ್ ರೇಷ್ಮೆ ಗೂಡು ಮಾರುಕಟ್ಟೆ ಸ್ಥಾಪನೆ.

- ಯಾದಗಿರಿ, ರಾಯಚೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಸಿಗಡಿ ಕೃಷಿ ಕ್ಲಸ್ಟರ್ ಮತ್ತು ಬೈಂದೂರು ತಾಲ್ಲೂಕು ಕಂಬದ ಕೋಣೆಯಲ್ಲಿ 'ಸೀ ಫುಡ್ ಪಾರ್ಕ್' ಸ್ಥಾಪನೆ



₹10 ಕೋಟಿ
ರೀಲಿಂಗ್ ಘಟಕ ಸ್ಥಾಪನೆ

32 ಸ್ವಯಂ ಚಾಲಿತ ರೀಲಿಂಗ್ ಘಟಕಗಳ ಸ್ಥಾಪನೆಗೆ ₹10 ಕೋಟಿ ನೆರವು, ಸಾವಿರ ರೇಷ್ಮೆ ಬೆಳೆಗಾರರಿಗೆ ಶ್ರೆಡ್ಡರ್ಸ್ ಒದಗಿಸಲು ₹12 ಕೋಟಿ ಅನುದಾನ.

- 10 ಸಾವಿರ ಮೀನುಗಾರರಿಗೆ ವಸತಿ ಸೌಲಭ್ಯ ಮತ್ತು ಮೀನುಗಾರರ ದೋಣಿಗಳ ಸುರಕ್ಷತೆಗೆ ಜಿಪಿಎಸ್ ವ್ಯವಸ್ಥೆಗೆ ₹17 ಕೋಟಿ ಅನುದಾನ ಮೀಸಲು.

₹100 ಕೋಟಿ
ಬಳ್ಳಾರಿಯಲ್ಲಿ ಮೆಗಾಡೇರಿ


ಬಳ್ಳಾರಿ ಜಿಲ್ಲೆಯಲ್ಲಿ ₹100 ಕೋಟಿ ವೆಚ್ಚದಲ್ಲಿ ಎರಡು ಲಕ್ಷ ಲೀಟರ್ ಹಾಲು ಸಂಸ್ಕರಣಾ ಸಾಮರ್ಥ್ಯದ ಮೆಗಾಡೇರಿ ಸ್ಥಾಪನೆ.

- ನಿರ್ಲಕ್ಷ್ಯಕ್ಕೆ ಒಳಗಾದ ಪ್ರಾಣಿಗಳ ಚಿಕಿತ್ಸೆಗೆ ಬೆಂಗಳೂರಿನಲ್ಲಿ ಸಂಚಾರಿ ಚಿಕಿತ್ಸಾಲಯಗಳ ಸ್ಥಾಪನೆ.

₹40 ಕೋಟಿ
ಸಹಾಯಧನ


ಸೀಮೆ ಎಣ್ಣೆ ಆಧಾರಿತ ದೋಣಿಗಳಲ್ಲಿ ಪೆಟ್ರೋಲ್ ಆಧಾರಿತ ಮೋಟಾರ್ ಎಂಜಿನ್ ಅಳವಡಿಸಲು ತಲಾ ₹50 ಸಾವಿರ ಸಹಾಯಧನ. ಇದಕ್ಕಾಗಿ ₹40 ಕೋಟಿ ಮೀಸಲು.

- ಮೀನುಗಾರರಿಗೆ ನೀಡುವ ಡೀಸೆಲ್ ಸಬ್ಸಿಡಿ 2 ಲಕ್ಷ ಕಿಲೋ ಲೀಟರ್‌ಗೆ ಏರಿಕೆ.



₹5 ಕೋಟಿ

ಪ್ರಾಣಿ ಕಲ್ಯಾಣಕ್ಕಾಗಿ ಪ್ರಾಣಿ ಕಲ್ಯಾಣ ಮಂಡಳಿಗೆ ₹5 ಕೋಟಿ. ಬೀದಿ ನಾಯಿಗಳನ್ನು ದತ್ತುವಿಗೆ ಆನ್‌ಲೈನ್ ವೇದಿಕೆ ಸೃಷ್ಟಿ. ಮುಧೋಳ ಹೌಂಡ್ ಶ್ವಾನ ತಳಿ ಅಭಿವೃದ್ಧಿಗೆ ಆದ್ಯತೆ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಕರಿಗೆ ಬಜೆಟ್‌ನಲ್ಲಿ ಹಲವು ಆಕರ್ಷಕ ಕೊಡುಗೆ ನೀಡಲಾಗಿದೆ. ಸಾಲದ ಮಿತಿ ಏರಿಕೆ ಹಾಗೂ 'ಭೂ ಸಿರಿ' ಮತ್ತು 'ಜೀವನ್ ಜ್ಯೋತಿ ವಿಮಾ ಯೋಜನೆ' ಜಾರಿಗೊಳಿಸಲು ಪ್ರಸ್ತಾಪಿಸಲಾಗಿದೆ. ಈ ವರ್ಷದಿಂದ ರೈತರಿಗೆ ನೀಡುವ ಬಡ್ಡಿ ರಹಿತ ಅಲ್ಪಾವಧಿ ಸಾಲದ ಮಿತಿಯನ್ನು ₹3 ಲಕ್ಷದಿಂದ ₹5 ಲಕ್ಷವರೆಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ. 30 ಲಕ್ಷಕ್ಕೂ ಅಧಿಕ ರೈತರಿಗೆ ₹25 ಸಾವಿರ ಕೋಟಿ ಸಾಲ ವಿತರಿಸಲು ಪ್ರಸ್ತಾಪಿಸಲಾಗಿದೆ.

56 ಲಕ್ಷ ಸಣ್ಣ ಮತ್ತು ಅತಿ ಸಣ್ಣ ರೈತರ ಕುಟುಂಬಗಳಿಗೆ ₹180 ಕೋಟಿ ವೆಚ್ಚದಲ್ಲಿ 'ಜೀವನ್ ಜ್ಯೋತಿ ವಿಮಾ' ಯೋಜನೆಯ ನೆರವಿನೊಂದಿಗೆ ಅವರ ಬದುಕಿಗೆ ಭದ್ರತೆ ಒದಗಿಸಲು ಪ್ರಸ್ತಾಪಿಸಲಾಗಿದೆ.

ಕೃಷಿ ಯಂತ್ರಧಾರೆ ಕೇಂದ್ರಗಳಲ್ಲಿ 300 ಹೈಟೆಕ್ ಹಾರ್ವೆಸ್ಟರ್‌ಗಳನ್ನು ಹಂತ ಹಂತವಾಗಿ ಒದಗಿಸಲು ಉದ್ದೇಶಿಸಲಾಗಿದೆ. 2023–24ನೇ ಸಾಲಿನಲ್ಲಿ 100 ಹೈಟೆಕ್ ಹಾರ್ವೆಸ್ಟರ್‌ಗಳಿಗೆ ತಲಾ ₹50 ಲಕ್ಷದಂತೆ ಈ ವರ್ಷ ₹50 ಕೋಟಿ ಒದಗಿಸಲು ಉದ್ದೇಶಿಸಲಾಗಿದೆ.

ಇಸ್ರೊ ಸಹಯೋಗದೊಂದಿಗೆ ಡಿಜಿಟಲ್ ಕೃಷಿಯಲ್ಲಿ ಜಿಯೋ–ಸ್ಪೇಷಿಯಲ್ ತಾಂತ್ರಿಕತೆ ಅಳವಡಿಸಲು ₹50 ಕೋಟಿ ವೆಚ್ಚದ ಹೊಸ ಯೋಜನೆ ರೂಪಿಸಲಾಗಿದೆ. ಉತ್ತಮ ರೈತ ಉತ್ಪಾದಕರ ಸಂಸ್ಥೆಗಳನ್ನು (ಎಫ್‌ಪಿಒ) ಪ್ರೋತ್ಸಾಹಿಸಲು ತಲಾ ₹10 ಲಕ್ಷವರೆಗಿನ ಬಂಡವಾಳಕ್ಕೆ ಬಡ್ಡಿ ಸಹಾಯಧನ ಒದಗಿಸಲಾಗುವುದು ಎಂದು ವಿವರಿಸಲಾಗಿದೆ.

ಕಿರುಧಾನ್ಯ ಬೆಳೆಗಾರರಿಗೆ ಉತ್ತೇಜನ ನೀಡಲು 'ರೈತ ಸಿರಿ ಯೋಜನೆ' ಅಡಿ ₹10 ಸಾವಿರ ಪ್ರೋತ್ಸಾಹ ಧನ ನೀಡುವುದಾಗಿ ಪ್ರಕಟಿಸಲಾಗಿದೆ. ಜತೆಗೆ, ರೈತರ ಜಮೀನುಗಳಲ್ಲಿ ಜಲಹೊಂಡ ನಿರ್ಮಿಸಿ ಅಂತರ್ಜಲ ಮಟ್ಟ ಹೆಚ್ಚಿಸಲು 'ಜಲನಿಧಿ' ಎನ್ನುವ ಹೊಸ ಯೋಜನೆ ಜಾರಿಗೊಳಿಸುವುದಾಗಿ ಉಲ್ಲೇಖಿಸಲಾಗಿದೆ.

ಗ್ರಾಮ ಪಂಚಾಯಿತಿಗಳಿಗೆ ಅನುದಾನ ಹೆಚ್ಚಳ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ₹20,494 ಕೋಟಿ ಅನುದಾನ ಮೀಸಲಿಡಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿಗೆ ನೀಡುವ ₹12 ಲಕ್ಷದಿಂದ ₹35 ಲಕ್ಷವರೆಗಿನ ಅನುದಾನವನ್ನು ₹24 ಲಕ್ಷದಿಂದ ₹60 ಲಕ್ಷವರೆಗೆ ಹೆಚ್ಚಿಸಲಾಗಿದೆ.

- ಗ್ರಾಮೀಣ ಪ್ರದೇಶದ ಮನೆಗಳಿಗೆ ನಲ್ಲಿಗಳ ಸಂಪರ್ಕ ಒದಗಿಸಲು ಜಲಜೀವನ್ ಮಿಷನ್ ಯೋಜನೆಗೆ ₹6,234 ಕೋಟಿ ಹಂಚಿಕೆ.
- ನರೇಗಾ ಯೋಜನೆಯಡಿ ₹1,800 ಕೋಟಿ ವೆಚ್ಚದಲ್ಲಿ 88 ಲಕ್ಷ ಕುಟುಂಬಗಳಿಗೆ ಉದ್ಯೋಗ ಕಲ್ಪಿಸುವ ಗುರಿ.
- ಗ್ರಾಮೀಣ ರಸ್ತೆ ಮತ್ತು ಜಮೀನುಗಳನ್ನು ಸಂಪರ್ಕಿಸುವ ಐದು ಸಾವಿರ ಕಿ.ಮೀ. ರಸ್ತೆ ನಿರ್ಮಾಣಕ್ಕೆ ₹300 ಕೋಟಿ ಅನುದಾನ. ಗ್ರಾಮೀಣ ಪ್ರದೇಶಗಳಲ್ಲಿ ಚರಂಡಿ ವ್ಯವಸ್ಥೆ ನಿರ್ಮಾಣಕ್ಕೆ ನರೇಗಾ, ಸ್ವಚ್ಛ ಭಾರತ್ ಮಿಷನ್ ಅಡಿ ₹4,190 ಕೋಟಿ ಅನುದಾನ.
- ಎರಡು ಸಾವಿರ ಕೆರೆಗಳ ಅಭಿವೃದ್ಧಿಗೆ ₹200 ಕೋಟಿ ವೆಚ್ಚ.
- ಗ್ರಂಥಾಲಯಗಳಿಲ್ಲದ 330 ಗ್ರಾಮ ಪಂಚಾಯಿತಿಗಳಲ್ಲಿ ಗ್ರಂಥಾಲಯ ಸ್ಥಾಪನೆ. ಅಂಗವಿಕಲ ಮಕ್ಕಳಿಗಾಗಿ 1,000 ಗ್ರಾಮೀಣ ಗ್ರಂಥಾಲಯಗಳ ಉನ್ನತೀಕರಣಗೊಳಿಸಲು ಉದ್ದೇಶಿಸಲಾಗಿದೆ.

₹75 ಕೋಟಿ
'ಸಹಸ್ರ ಸರೋವರ' ಮತ್ತು 'ಸಹ್ಯಾದ್ರಿ ಸಿರಿ' ಯೋಜನೆಗಳಿಗೆ ಅನುದಾನ

₹10 ಸಾವಿರ
ಭೂ ಸಿರಿ ಯೋಜನೆಯಡಿ ಕೃಷಿಕರಿಗೆ ಹೆಚ್ಚುವರಿ ಸಹಾಯಧನ



ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿ ಸ್ಥಾಪನೆ

ಬೆಂಗಳೂರು: ಅಸಂಘಟಿತ ಕಾರ್ಮಿಕರ ಬದುಕಿಗೆ ಭದ್ರತೆ ಒದಗಿಸಲು 'ಕರ್ನಾಟಕ ಅಸಂಘಟಿತ ಕಾರ್ಮಿಕರ ಕಲ್ಯಾಣ ನಿಧಿ' ಸ್ಥಾಪಿಸಲು ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ.

ಹೊರ ರಾಜ್ಯದಿಂದ ವಲಸೆ ಬಂದ ಕಟ್ಟಡ ಕಾರ್ಮಿಕರ ಯೋಗಕ್ಷೇಮಕ್ಕೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ನೆರವು ನೀಡಲಾಗುವುದು. ಸದ್ಯಕ್ಕೆ ಆಸ್ತಿ ತೆರಿಗೆ ಮೇಲೆ ವಿಧಿಸಿರುವ ಸೆಸ್ ಪ್ರಮಾಣ ಹೆಚ್ಚಿಸದೆ ಆಂತರಿಕವಾಗಿ ಸೆಸ್ ದರಗಳನ್ನು ಮಾರ್ಪಾಡುಗೊಳಿಸಲಾಗುವುದು. ಈ ಸೆಸ್ ಹಣದಲ್ಲಿ ನೋಂದಾಯಿತ 75 ಲಕ್ಷಕ್ಕೂ ಹೆಚ್ಚಿನ ಅಸಂಘಟಿತ ಕಾರ್ಮಿಕರಿಗೆ ವಿಶೇಷ ಯೋಜನೆಗಳನ್ನು ಜಾರಿಗೆ ತರಲಾಗುವುದು ಎಂದು ತಿಳಿಸಲಾಗಿದೆ.

ಏಳು ಇಎಸ್‌ಐ ಆಸ್ಪತ್ರೆಗಳಲ್ಲಿ ಐಸಿಯು ಸ್ಥಾಪನೆ, ಆರು ಆಸ್ಪತ್ರೆಗಳಲ್ಲಿ ಆಯುಷ್ ಘಟಕ ಪ್ರಾರಂಭ, ಜಿಲ್ಲೆಗೊಂದು ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳನ್ನು ಉನ್ನತೀಕರಿಸಲು ಕೇಂದ್ರ ಕಾರ್ಮಿಕ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು. ಹೊಸದಾಗಿ ಆರಂಭಿಸಿರುವ 19 ಇಎಸ್‌ಐ ಚಿಕಿತ್ಸಾಲಯಗಳಿಗೆ ಮೂಲಸೌಕರ್ಯ ಒದಗಿಸಲು ಹಾಗೂ ಆರು ಹೊಸ ಇಎಸ್‌ಐ ಚಿಕಿತ್ಸಾಲಯಗಳನ್ನು ಆರಂಭಿಸಲು ಯೋಜಿಸಲಾಗಿದೆ ಎಂದು ವಿವರಿಸಲಾಗಿದೆ.

ಕಾರ್ಮಿಕರಿಗೆ ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಒದಗಿಸುತ್ತಿರುವ ಎಲ್ಲಾ ಸೇವೆಗಳು ಸುಲಭ ಮತ್ತು ಸಕಾಲದಲ್ಲಿ ದೊರಕುವಂತೆ ಮಾಡಲು ಆನ್‌ಲೈನ್ ತಂತ್ರಾಂಶ ಅಭಿವೃದ್ಧಿಪಡಿಸಲಾಗುವುದು. ಪ್ರಸಕ್ತ ವರ್ಷದಲ್ಲಿ 5 ಲಕ್ಷ ಅಭ್ಯರ್ಥಿಗಳಿಗೆ ಕೌಶಲ ತರಬೇತಿ ನೀಡಲಾಗುವುದು ಎಂದು ಭರವಸೆ ನೀಡಲಾಗಿದೆ.

ಸಾಂಪ್ರದಾಯಿಕ ಕೌಶಲಗಳ ಪುನರುಜ್ಜೀವನಕ್ಕಾಗಿ ಬಿದಿರಿನ ಉತ್ಪನ್ನಗಳಲ್ಲಿ ಮೇದಾರ ಸಮುದಾಯಕ್ಕೆ, ಚನ್ನಪಟ್ಟಣ ಗೊಂಬೆಗಳ ತಯಾರಿಕೆಗೆ, ಕಿನ್ನಾಳ ಕಲೆಗಾಗಿ ಚಿತ್ರಗಾರ ಸಮುದಾಯಕ್ಕೆ ಹಾಗೂ ಕುಂಬಾರಿಕೆ, ಬಿದರಿ ಕಲೆ, ಕಸೂತಿ ಮುಂತಾದ ಕಲೆಗಳಲ್ಲಿ ಆಯ್ದ 100 ಅಭ್ಯರ್ಥಿಗಳಿಗೆ ಉನ್ನತ ಮಟ್ಟದ ಕೌಶಲವರ್ಧನೆ ತರಬೇತಿ ನೀಡಲು ಪ್ರಕಟಿಸಲಾಗಿದೆ. ಬೀದಿಬದಿ ವ್ಯಾಪಾರಿಗಳಿಗೆ ಯಾವುದೇ ಹೊಸ ಯೋಜನೆ ಘೋಷಣೆ ಮಾಡಿಲ್ಲ. 'ಪ್ರಧಾನಮಂತ್ರಿ ಸ್ವನಿಧಿ' ಯೋಜನೆಯಡಿ 2022ರ ನವೆಂಬರ್ ಅಂತ್ಯದವರೆಗೆ 69 ಸಾವಿರ ಬೀದಿ ಬದಿ ವ್ಯಾಪಾರಿಗಳಿಗೆ ₹70 ಕೋಟಿ ಸಾಲ ಮಂಜೂರು ಮಾಡಲಾಗಿದೆ ಎಂದಷ್ಟೇ ತಿಳಿಸಲಾಗಿದೆ.



ಚಿಕ್ಕಮಗಳೂರಿಗೆ ಹೊಸ ವಿಶ್ವವಿದ್ಯಾಲಯ, ಪಿಎಚ್‌.ಡಿ ಪ್ರವೇಶ ಸರಳ

ಬೆಂಗಳೂರು: ಕುವೆಂಪು ವಿಶ್ವವಿದ್ಯಾಲಯವನ್ನು ವಿಭಜಿಸಿ ಚಿಕ್ಕಮಗಳೂರಿನಲ್ಲಿ ನೂತನ ವಿಶ್ವವಿದ್ಯಾಲಯ ಸ್ಥಾಪಿಸಲಾಗುತ್ತಿದೆ. ಆದರೆ, ನೂತನ ವಿಶ್ವವಿದ್ಯಾಲಯಕ್ಕೆ ಯಾವುದೇ ಹೆಚ್ಚುವರಿ ಅನುದಾನ ಘೋಷಿಸಿಲ್ಲ.

ಬೀದರ್, ಹಾವೇರಿ, ಚಾಮರಾಜನಗರ, ಬಾಗಲಕೋಟೆ, ಕೊಡಗು, ಕೊಪ್ಪಳ ಮತ್ತು ಹಾಸನ ಜಿಲ್ಲೆಗಳಲ್ಲಿ ಸ್ಥಾಪಿಸಿರುವ ವಿಶ್ವವಿದ್ಯಾಲಯಗಳ ಮಾದರಿಯಲ್ಲೇ ಚಿಕ್ಕಮಗಳೂರು ವಿಶ್ವವಿದ್ಯಾಲಯವನ್ನು ತಂತ್ರಜ್ಞಾನದ ಗರಿಷ್ಠ ಬಳಕೆಯೊಂದಿಗೆ, ಕಡಿಮೆ ಮಾನವ ಸಂಪನ್ಮೂಲ ಒಳಗೊಂಡಂತೆ ಸ್ಥಾಪಿಸಲು ಕ್ರಮಕೈಗೊಳ್ಳುವುದಾಗಿ ಭರವಸೆ ನೀಡಲಾಗಿದೆ.

ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಲ್ಲಿ ಹೊಸ ಪಾಲಿಟೆಕ್ನಿಕ್ ಆರಂಭ, ಮುಖ್ಯಮಂತ್ರಿ ತವರು ಕ್ಷೇತ್ರ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಬಂಕಾಪುರದಲ್ಲಿನ ಪಾಲಿಟೆಕ್ನಿಕ್ ಕಾಲೇಜನ್ನು ಸರ್ಕಾರಿ ಎಂಜಿನಿಯರಿಂಗ್ ಕಾಲೇಜಾಗಿ ಮೇಲ್ದರ್ಜೆಗೇರಿಸಲಾಗಿದೆ.

ವೃತ್ತಿಪರ ಕೋರ್ಸ್‌ಗಳ ಪರೀಕ್ಷೆಯನ್ನು ಕನ್ನಡದಲ್ಲಿಯೂ ಬರೆಯಲು ಆಗುವಂತೆ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅನ್ಯ ಭಾಷೆ ಪುಸ್ತಕಗಳನ್ನು ಭಾಷಾಂತರಿಸಲು, ಪ್ರೊ.ಸಡಗೋಪನ್ ನೇತೃತ್ವದ ತಜ್ಞರ ಸಮಿತಿ ಶಿಫಾರಸಿನಂತೆ ಐಟಿಐಗಳನ್ನು ಕೆಐಟಿಗಳಾಗಿ ಅಭಿವೃದ್ಧಿಪಡಿಸಲು ₹ 50 ಕೋಟಿ, ಉತ್ತಮ ಆಡಳಿತ ನಿರ್ವಹಿಸುವ ವಿಶ್ವವಿದ್ಯಾಲಯಗಳಿಗೆ ತಲಾ ₹ 50 ಲಕ್ಷ ಪ್ರೋತ್ಸಾಹಧನ ನೀಡಲಾಗಿದೆ.

ಬೆಂಗಳೂರು ನಗರದ ಕೇಂದ್ರ ಭಾಗದ 5 ಕಿ.ಮೀ. ವ್ಯಾಪ್ತಿಯ ಒಳಗಿರುವ ಪಾರಂಪರಿಕ ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿರುವ ಪ್ರದೇಶವನ್ನು ಪಾರಂಪರಿಕ ಮತ್ತು ಶೈಕ್ಷಣಿಕ ಜಿಲ್ಲೆಯಾಗಿ ಘೋಷಿಸಲು ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ. ಪಿಎಚ್‌.ಡಿ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ಸರಳ, ಪಾರದರ್ಶಕ ಪ್ರವೇಶಕ್ಕೆ ಏಕರೂಪ ವ್ಯವಸ್ಥೆ ಕಲ್ಪಿಸಲಾಗುತ್ತಿದೆ.

ಅತಿ ಹೆಚ್ಚು ದಾಖಲಾತಿ ಹೊಂದಿರುವ ಸರ್ಕಾರಿ ಪ್ರಥಮದರ್ಜೆ ಕಾಲೇಜು ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ವೃದ್ಧಿ ಯೋಜನೆಯಡಿ ತಲಾ ₹ 2 ಕೋಟಿಯಂತೆ ₹ 124 ಕೋಟಿ ನೀಡಲಾಗಿದೆ.

ಉನ್ನತ ಶಿಕ್ಷಣವನ್ನು ಬಲಪಡಿಸಲು ₹ 125 ಕೋಟಿ ಮೀಸಲಿಡಲಾಗಿದೆ.



ಗ್ರಾಮೀಣ ಪ್ರದೇಶಕ್ಕೆ ಹಲವು ಭರವಸೆ



ವಿಶ್ಲೇಷಣೆ

ಜ್ಯೋತ್ಸ್ನಾ ಝಾ

ದೊಡ್ಡ ಮಟ್ಟದಲ್ಲಿಯೇ ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಬಿಜೆಪಿ ಸರ್ಕಾರವು ನಿರೀಕ್ಷೆಯಂತೆಯೇ ಚುನಾವಣಾ ಬಜೆಟ್ ಅನ್ನೇ ಮಂಡಿಸಿದೆ. ಗ್ರಾಮೀಣ ಪ್ರದೇಶದ ಜೀವನ ಮತ್ತು ಜೀವನೋಪಾಯಗಳನ್ನು ಗಮನದಲ್ಲಿ ಇರಿಸಿಕೊಂಡರೆ ಈ ಬಜೆಟ್ ಮಿಶ್ರ ಫಲ ನೀಡಿದೆ ಎನ್ನಬಹುದು. ಕೃಷಿ ಮತ್ತು ನೀರಾವರಿ ಕ್ಷೇತ್ರಕ್ಕೆ ಪ್ರಸ್ತುತ ವರ್ಷದ ಪರಿಷ್ಕೃತ ಅಂದಾಜು ಪ್ರಕಾರ ₹55,000 ಕೋಟಿ ನೀಡಲಾಗಿತ್ತು; 2023–24ರ ಬಜೆಟ್ ಅಂದಾಜಿನಲ್ಲಿ ₹57,000 ಕೋಟಿ ನಿಗದಿ ಮಾಡಲಾಗಿದೆ.

ಹಾಗಿದ್ದರೂ ರಾಜ್ಯದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಎಸ್‌ಜಿಡಿಪಿ) ಹೋಲಿಸಿ ನೋಡಿದರೆ, ಈ ಕ್ಷೇತ್ರಗಳಿಗೆ ವೆಚ್ಚ ಮಾಡಲು ಉದ್ದೇಶಿಸಿರುವ ಮೊತ್ತವು ಕಡಿಮೆಯಾಗಿದೆ. 2022–23ರ ಪರಿಷ್ಕೃತ ಅಂದಾಜಿನ ಪ್ರಕಾರ ಈ ಕ್ಷೇತ್ರಗಳ ಪಾಲು ಜಿಎಸ್‌ಡಿಪಿಯ ಶೇ 2.52 ಇದ್ದರೆ, 2023–24ರ ಬಜೆಟ್ ಅಂದಾಜಿನಲ್ಲಿ ನಿಗದಿ ಮಾಡಲಾದ ಮೊತ್ತವು ಜಿಎಸ್‌ಡಿಪಿಯ ಶೇ 2.46ರಷ್ಟಿದೆ. ನೈಜ ವೆಚ್ಚವು 2020–21ರಲ್ಲಿ ಶೇ 2.81 ಮತ್ತು 2021–22ರಲ್ಲಿ ಶೇ 2.57ರಷ್ಟಾಗಿತ್ತು. ಕೃಷಿ ಮತ್ತು ನೀರಾವರಿ ಕ್ಷೇತ್ರಗಳಿಗೆ ನೀಡುತ್ತಿರುವ ಮೊತ್ತವು ಕಡಿಮೆ ಆಗುತ್ತಲೇ ಸಾಗಿದ್ದನ್ನು ಗಮನಿಸಿದರೆ, ಈ ಎರಡು ಕ್ಷೇತ್ರಗಳು ಅತ್ಯಂತ ಮಹತ್ವದ ಕ್ಷೇತ್ರಗಳಲ್ಲ ಎಂಬುದು ಅರಿವಾಗುತ್ತದೆ. ಜಮೀನು ಹೊಂದಿರುವ ರೈತ ವರ್ಗದಂತಹ ಗ್ರಾಮೀಣ ಪ್ರದೇಶದ ಕೆಲವು ವರ್ಗಗಳು ಖುಷಿಪಡುವಂತಹ ಹಲವು ಯೋಜನೆಗಳು ಬಜೆಟ್‌ನಲ್ಲಿ ಇವೆ. ಗ್ರಾಮೀಣ ಪ್ರದೇಶದಲ್ಲಿ ನೆಲೆಸಿರುವ ಅಥವಾ ಅಲ್ಲಿ ಬೇರುಗಳನ್ನು ಹೊಂದಿರುವ ದೊಡ್ಡ ಸಂಖ್ಯೆಯ ಮತದಾರ ವರ್ಗಗಳನ್ನು ನಿರ್ಲಕ್ಷಿಸಲು ಸರ್ಕಾರ ಸಿದ್ಧವಿಲ್ಲ ಎಂಬುದನ್ನು ಇದು ತೋರಿಸುತ್ತದೆ.

ರೈತರ ಅಲ್ಪಾವಧಿ ಬಡ್ಡಿರಹಿತ ಸಾಲದ ಮೊತ್ತವನ್ನು ಈಗಿನ ₹3 ಲಕ್ಷದಿಂದ ₹5 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಐದು ಎಕರೆ ವರೆಗೆ ಜಮೀನು ಹೊಂದಿರುವವರಿಗೆ ಎಕರೆಗೆ ₹250ರಂತೆ ಡೀಸೆಲ್ ಸಬ್ಸಿಡಿ ಘೋಷಿಸಲಾಗಿದೆ.

ಭೂರಹಿತ ಕೃಷಿ ಕಾರ್ಮಿಕ ಮಹಿಳೆಯರಿಗೆ ಪ್ರತಿ ತಿಂಗಳು ₹500 ನೀಡುವ 'ಶ್ರಮ ಶಕ್ತಿ' ಎಂಬ ಯೋಜನೆಯನ್ನು ಘೋಷಿಸಲಾಗಿದೆ. ಇದೊಂದು ಸ್ವಾಗತಾರ್ಹ ಕ್ರಮ; ಏಕೆಂದರೆ, ನರೇಗಾಗೆ ನೀಡುವ ಮೊತ್ತವನ್ನು ಕೇಂದ್ರ ಸರ್ಕಾರ ಕಡಿಮೆ ಮಾಡುತ್ತಲೇ ಬಂದಿದೆ. ಇದು ಭೂರಹಿತ ಕೃಷಿ ಕಾರ್ಮಿಕರ ಕೆಲಸದ ಅವಕಾಶಗಳು ಮತ್ತು ಆದಾಯದ ಮೇಲೆ ಪ್ರತಿಕೂಲ ಪರಿಣಾಮ ಉಂಟು ಮಾಡಬಹುದು. ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ಯೋಜನೆಯಲ್ಲಿ ಕೆಲಸ ಮಾಡುವ ಅಡುಗೆಯವರು ಮತ್ತು ಸಹಾಯಕರು, ಆಶಾ ಕಾರ್ಯಕರ್ತೆಯರು ಮತ್ತು ಗ್ರಂಥಪಾಲಕರ ಗೌರವಧನವನ್ನು ಮಾಸಿಕ ₹1,000 ಹೆಚ್ಚಿಸಲಾಗಿದೆ. ಇದರಿಂದ ಸಾವಿರಾರು ಮಹಿಳೆಯರಿಗೆ ಅನುಕೂಲ ಆಗಲಿದೆ ಮತ್ತು ಇದೊಂದು ಮಹತ್ವದ ಕ್ರಮವಾಗಿದೆ.

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಮತ್ತು ಅವುಗಳಿಗೆ ಮಾರುಕಟ್ಟೆ ಸೃಷ್ಟಿಯನ್ನು ಉತ್ತೇಜಿಸಲು ಹೆಚ್ಚು ವೆಚ್ಚ ಮಾಡಲು ನಿರ್ಧರಿಸಲಾಗಿದೆ; ಹಾಗೆಯೇ ಆಡಳಿತ ವ್ಯವಸ್ಥೆ ಉತ್ತಮಪಡಿಸಲೂ ಯೋಜಿಸಲಾಗಿದೆ.

ಶಿಕ್ಷಣ, ಆರೋಗ್ಯ ಮತ್ತು ಪೌಷ್ಟಿಕತೆಯಂತಹ ವಿವಿಧ ಕ್ಷೇತ್ರಗಳಲ್ಲಿ ಹಲವಾರು ಹೂಡಿಕೆಗಳನ್ನು ಪ್ರಕಟಿಸಲಾಗಿದೆ. ಇವು ಗ್ರಾಮೀಣ ಪ್ರದೇಶದಲ್ಲಿ ಬಂಡವಾಳ ವೆಚ್ಚವನ್ನು ಹೆಚ್ಚಿಸಲಿದೆ. ಸಮರ್ಪಕವಾಗಿ ಜಾರಿ ಮಾಡಿದರೆ ಎರಡು ರೀತಿಯ ಲಾಭ ಇವುಗಳಿಂದ ಉಂಟಾಗಬಹುದು. ಇವು ದೀರ್ಘಾವಧಿಯಲ್ಲಿ ಗ್ರಾಮೀಣ ಸಾಮಾಜಿಕ ಮೂಲ-ಸೌಕರ್ಯವನ್ನು ಬಲಪಡಿಸಬಹುದು ಮತ್ತು ಜನರ ಆದಾಯವನ್ನು ಹೆಚ್ಚಿಸಬಹುದು. ಇದರಿಂದಾಗಿ ವಿಕೇಂದ್ರೀಕೃತ ಹಂತದಲ್ಲಿ ಸರಕುಗಳ ಬೇಡಿಕೆ ಹೆಚ್ಚಲಿದೆ. ಆರ್ಥಿಕ ಹಿಂಜರಿತವನ್ನು ಹಿಮ್ಮೆಟ್ಟಿಸಲು ಇಂತಹ ಬೆಳವಣಿಗೆ ಅಗತ್ಯವಾಗಿ ಬೇಕಾಗಿದೆ.


ಲೇಖಕಿ: ಮುಖ್ಯಸ್ಥೆ, ಸೆಂಟರ್ ಫಾರ್ ಬಜೆಟ್ ಆ್ಯಂಡ್ ಪಾಲಿಸಿ ಸ್ಟಡೀಸ್, ಬೆಂಗಳೂರು

ಬಜೆಟ್: ನಾವು ಕಂಡಂತೆ




ರೈತರ ಬದುಕಿಗೆ ಆರ್ಥಿಕ ಭದ್ರತೆ ನೀಡುವ ಪ್ರಸ್ತಾಪವಿಲ್ಲ. ಸಾಲದ ಪ್ರಮಾಣ ಹೆಚ್ಚಿಸಿದರೆ ಇನ್ನಷ್ಟು ಸಾಲಗಾರರಾಗುತ್ತಾರೆ. ಕೃಷಿ ಉತ್ಪನ್ನಗಳಿಗೆ ಸೂಕ್ತ ಬೆಲೆ ನಿಗದಿ, ಕೂಲಿ ಹೆಚ್ಚಳ, ಶೈತ್ಯಾಗಾರಗಳ ಸ್ಥಾಪನೆ ನಿರ್ಧಾರ ಘೋಷಿಸಿಲ್ಲ

ಸುನಂದಾ ಜಯರಾಂ
ರೈತ ನಾಯಕಿ, ಮಂಡ್ಯ



₹ 5 ಲಕ್ಷ ಬಡ್ಡಿ ರಹಿತ ಸಾಲದಿಂದ ರೈತರು ಮತ್ತೆ ದೊಡ್ಡ ಸಾಲಗಾರರೇ ಆಗುತ್ತಾರೆ. ರೈತರನ್ನು ಸಾಲಮುಕ್ತ ಮಾಡುವ ಯೋಜನೆ ಅಗತ್ಯವಿದೆ. ಇಲ್ಲಿರುವುದು ಯೋಜನೆಗಳಲ್ಲ; ಆಮಿಷಗಳು

ಸಿದಗೌಡ ಮೋದಗಿ,
ರಾಜ್ಯ ಘಟಕದ ಅಧ್ಯಕ್ಷ, ಭಾರತೀಯ ಕೃಷಿಕ (ಸಂಯುಕ್ತ) ಸಮಾಜ




ಬೆಂಬಲ ಬೆಲೆಯಡಿ ಶಾಶ್ವತ ಖರೀದಿ ಕೇಂದ್ರಗಳನ್ನು ತೆರೆದಿಲ್ಲ. ಕೇಂದ್ರ ಸರ್ಕಾರದ ಬೆಂಬಲ ಬೆಲೆಗೆ ಗೌರವಧನಕ್ಕಾಗಿ ರಾಜ್ಯ ಸರ್ಕಾರ ಅನುದಾನ ಮೀಸಲಿಟ್ಟಿಲ್ಲ. ನೀರಾವರಿ ಯೋಜನೆಗೂ ಒತ್ತು ಕೊಟ್ಟಿಲ್ಲ.

ವೀರೇಶ ಸೊಬರದಮಠ,
ಅಧ್ಯಕ್ಷ, ರೈತ ಸೇನಾ ಕರ್ನಾಟಕ




ಕೃಷಿ ಕ್ಷೇತ್ರ ಮತ್ತೆ ನಿರ್ಲಕ್ಷಿಸಿದ್ದಾರೆ. ನೀರಾವರಿಗೆ ಒತ್ತು ನೀಡಿರುವುದು ಸಮಾಧಾನ ತಂದಿದೆ. ಕೆ.ಸಿ.ವ್ಯಾಲಿ ನೀರನ್ನು ಮೂರನೇ ಹಂತದಲ್ಲಿ ಶುದ್ಧೀಕರಿಸಲು ಕ್ರಮ ವಹಿಸುವುದಾಗಿ ಘೋಷಣೆ ಮಾಡಿದ್ದರೂ ಯಾವುದೇ ಅನುದಾನ ನಿಗದಿಪಡಿಸಿಲ್ಲ.

ಎ.ನಳಿನಿ ಗೌಡ,
ರೈತ ನಾಯಕಿ, ಕೋಲಾರ



ಜಾರಿ ಸಾಧ್ಯವಿಲ್ಲ ಎಂಬುದು ಗೊತ್ತಿರುವುದರಿಂದ ಕಲ್ಪನೆಗಳನ್ನು ಬಿತ್ತಲಾಗಿದೆ. ಬಿಜೆಪಿ ಸರ್ಕಾರದ ಚುನಾವಣೆ ಪ್ರಣಾಳಿಕೆ ಬಜೆಟ್ ಎನ್ನಬಹುದು. ವಿದ್ಯಾರ್ಥಿಗಳ ಶುಲ್ಕ ವಿನಾಯಿತಿ ನಿರ್ಧಾರವನ್ನು ಸ್ವಾಗತಿಸುತ್ತೇವೆ.

ಸಾತಿ ಸುಂದರೇಶ್,
ಸಿಪಿಐ ರಾಜ್ಯ ಕಾರ್ಯದರ್ಶಿ



- ‘ಸ್ಮಾರ್ಟ್ ಸಿಟಿ’ ಯೋಜನೆಗೆ ₹ 3,395 ಕೋಟಿ
- ಕೊಳೆಗೇರಿಯ 3.36 ಲಕ್ಷ ಕುಟುಂಬಗಳಿಗೆ ಹಕ್ಕುಪತ್ರ
- ಆರ್ಥಿಕ ದುರ್ಬಲ ವರ್ಗಕ್ಕೆ 10 ಸಾವಿರ ನಿವೇಶನ
- ಶಂಕರ್ ನಾಗ್ ಹೆಸರಿನಲ್ಲಿ ಟ್ಯಾಕ್ಸಿ, ಆಟೊ ನಿಲ್ದಾಣ



ರಸ್ತೆ ಸಂಪರ್ಕ ಜಾಲ ಅಭಿವೃದ್ಧಿಗೆ ಒತ್ತು

ಬೆಂಗಳೂರು: ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳೊಂದಿಗೆ ಸಂಪರ್ಕ ಕಲ್ಪಿಸಲು, ಪ್ರಾದೇಶಿಕ ಅಸಮತೋಲನ ನಿವಾರಿಸಲು ಹಾಗೂ ಕೊನೆಯ ಹಂತದ ಸಂಪರ್ಕ ನೀಡಲು ಕೆಶಿಪ್-4 ಅಡಿಯಲ್ಲಿ 2,943 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿ ನಿರ್ಮಿಸಲು ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲಾಗುವುದು. ಈ ಯೋಜನೆಗೆ ₹ 5 ಸಾವಿರ ಕೋಟಿ ವೆಚ್ಚವಾಗುವ ಅಂದಾಜು ಮಾಡಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಜಿಲ್ಲಾ ಕೇಂದ್ರಗಳಲ್ಲಿ ಸಂಪರ್ಕ ಜಾಲ ವಿಸ್ತರಿಸಲು ಹಾಗೂ ಗ್ರಾಮೀಣ ರಸ್ತೆಗಳಿಗೆ ಸಂಪರ್ಕ ಕಲ್ಪಿಸಲು ಅನುಮೋದನೆಗೊಂಡಿರುವ 5 ಸಾವಿರ ಕಿ.ಮೀ ಉದ್ದದ ಜಿಲ್ಲಾ ಪ್ರಮುಖ ರಸ್ತೆಗಳ ಕಾಮಗಾರಿಗಳಿಗೆ ₹1,500 ಕೋಟಿ ಅನುದಾನವನ್ನು ಬಜೆಟ್‌ನಲ್ಲಿ ಒದಗಿಸಲು ನಿರ್ಧರಿಸಲಾಗಿದೆ.

ಪಶ್ಚಿಮ ಘಟ್ಟಗಳ ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಳೆಗಾಲದಲ್ಲಿ ರಭಸದಿಂದ ಹರಿಯುವ ಹಳ್ಳ ತೊರೆಗಳನ್ನು ಸುರಕ್ಷಿತವಾಗಿ ದಾಟಲು ಹಾಗೂ ಸಂಪರ್ಕರಹಿತ ಜನ ವಸತಿ ಪ್ರದೇಶಗಳಿಗೆ ಸಂಪರ್ಕ ಕಲ್ಪಿಸಲು 500 ಕಾಲುಸಂಕಗಳ ನಿರ್ಮಾಣ ಕಾಮಗಾರಿಯನ್ನು ₹250 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗುವುದು.

ಕೊಡಗು ಜಿಲ್ಲೆಯ ಮುಖ್ಯ ರಸ್ತೆಗಳ ಅಭಿವೃದ್ಧಿಗಾಗಿ ₹100 ಕೋಟಿಯ ವಿಶೇಷ ಪ್ಯಾಕೇಜ್ ನೀಡಲಾಗುವುದು

ರಾಜ್ಯ ಕೋರ್ ನೆಟ್‌ವರ್ಕ್ ರಸ್ತೆ ಜಾಲದಲ್ಲಿ 1,700 ಕಿ.ಮೀ ಉದ್ದದ ರಾಜ್ಯ ಹೆದ್ದಾರಿಗಳನ್ನು ‘ರಾಜ್ಯ ಹೆದ್ದಾರಿ ರಸ್ತೆ ಅಭಿವೃದ್ಧಿ’ ಯೋಜನೆಯ ಹಂತ-4, ಘಟ್ಟ-3ರ ಅಡಿಯಲ್ಲಿ ₹2 ಸಾವಿರ ಕೋಟಿ ಮೊತ್ತದಲ್ಲಿ ನಿರ್ಮಾಣ ಮಾಡಲು ನಿರ್ಧರಿಸಲಾಗಿದೆ.

ಬೆಳಗಾವಿ-ಕಿತ್ತೂರು-ಧಾರವಾಡ ರೈಲ್ವೆ ಮಾರ್ಗಕ್ಕೆ ಭೂ ಸ್ವಾಧೀನಕ್ಕಾಗಿ ₹150 ಕೋಟಿಯನ್ನು ಈ ವರ್ಷ ಒದಗಿಸಲು ಸರ್ಕಾರ ಉದ್ದೇಶಿಸಿದೆ.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ

- ₹1.20 ಲಕ್ಷ ಕೋಟಿ ವೆಚ್ಚದಲ್ಲಿ 3,084 ಕಿ.ಮೀ. ಹೆದ್ದಾರಿ ಅಭಿವೃದ್ಧಿ
- ₹5,486 ಕೋಟಿ ವೆಚ್ಚದಲ್ಲಿ ಬೆಂಗಳೂರು-ಚೆನ್ನೈ ಎಕ್ಸ್‌ಪ್ರೆಸ್‌ವೇ
- ₹8,408 ಕೋಟಿ ವೆಚ್ಚದಲ್ಲಿ ಬೆಂಗಳೂರು-ರಾಮನಗರ-ಮಂಡ್ಯ-ಮೈಸೂರು ಹೆದ್ದಾರಿ
- ₹4,544 ಕೋಟಿ ವೆಚ್ಚದಲ್ಲಿ ಸೂರತ್-ಚೆನ್ನೈ ಎಕ್ಸ್‌ಪ್ರೆಸ್‌ವೇ
- ₹1,200 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ-ಧಾರವಾಡ ಆರು ಪಥಗಳ ರಸ್ತೆ
- ₹2,200 ಕೋಟಿ ವೆಚ್ಚದಲ್ಲಿ ಹುಬ್ಬಳ್ಳಿ-ಹೊಸಪೇಟೆ-ಬಳ್ಳಾರಿ-ಆಂಧ್ರ ಗಡಿ ಹೆದ್ದಾರಿ
- ₹2,611 ಕೋಟಿ ವೆಚ್ಚದಲ್ಲಿ ಚಿತ್ರದುರ್ಗ-ದಾವಣಗೆರೆ-ಹಾವೇರಿ ಮಾರ್ಗದ ಆರು ಪಥದ ಹೆದ್ದಾರಿ
- ಮೈಸೂರು-ಕುಶಾಲನಗರ ಮಾರ್ಗದಲ್ಲಿ ₹4,128 ಕೋಟಿ ವೆಚ್ಚದಲ್ಲಿ 92 ಕಿ.ಮೀ. ಉದ್ದದ ಹೆದ್ದಾರಿ ಅಭಿವೃದ್ಧಿ

9 ಕಡೆ ಹೊಸ ಕೈಗಾರಿಕಾ ವಸಾಹತು


ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮದ ವತಿಯಿಂದ ಉತ್ತರ ಕನ್ನಡ ಜಿಲ್ಲೆಯ ಕೋಡ್ಕಣಿ, ಬೆಳಗಾವಿಯ ಕಣಗಲಾ, ಚಾಮರಾಜನಗರದ ಬದನಗುಪ್ಪೆ, ಕಲಬುರಗಿಯ ಚಿತ್ತಾಪುರ, ತುಮಕೂರಿನ ಬೈರಗೊಂಡನಹಳ್ಳಿ-ಚಿಕ್ಕನಾಯಕನಹಳ್ಳಿ, ಬೀದರ್‌ನ ಹುಮನಾಬಾದ್, ಚಿತ್ರದುರ್ಗದ ಮೊಳಕಾಲ್ಮುರು ಸೇರಿ 9 ಸ್ಥಳಗಳಲ್ಲಿ ಹೊಸದಾಗಿ ಕೈಗಾರಿಕಾ ವಸಹಾತುಗಳ ಸ್ಥಾಪನೆ ಆಗಲಿದೆ.

ಬಹುರಾಷ್ಟ್ರೀಯ ಕಂಪನಿಗಳ ಕಾರ್ಯಾಚರಣೆಯನ್ನು ತ್ವರಿತವಾಗಿ ಪ್ರಾರಂಭಿಸಲು ಕೆಐಎಡಿಬಿ ಸಂಸ್ಥೆಯು ಬೆಂಗಳೂರು ಸುತ್ತಮುತ್ತ ವಿಶ್ವದರ್ಜೆಯ ಪ್ಲಗ್ ಆ್ಯಂಡ್ ಪ್ಲೇ ಕೈಗಾರಿಕಾ ಪಾರ್ಕ್‌ಗಳನ್ನು ಸ್ಥಾಪಿಸಲು ಉದ್ದೇಶಿಸಿದೆ.



ರೂಪಾಯಿ ಜಮೆ

- ಆವರಣದಲ್ಲಿ ಇರುವುದು ಹಿಂದಿನ ಬಜೆಟ್‌ನ ಲೆಕ್ಕಾಚಾರ



54 ಪೈಸೆ (50ಪೈಸೆ) ರಾಜ್ಯ ತೆರಿಗೆ

26 ಪೈಸೆ (27ಪೈಸೆ) ಸಾಲ


4 ಪೈಸೆ (4ಪೈಸೆ) ರಾಜ್ಯ ತೆರಿಗೆಯೇತರ ರಾಜಸ್ವದಿಂದ

4 ಪೈಸೆ (6ಪೈಸೆ) ಕೇಂದ್ರ ಸರ್ಕಾರದ ಸಹಾಯಾನುದಾನ

12 ಪೈಸೆ (11ಪೈಸೆ) ಕೇಂದ್ರ ತೆರಿಗೆ ಪಾಲಿನಿಂದ

- ಕಳೆದ ಬಜೆಟ್‌ನಲ್ಲಿ ಸಾರ್ವಜನಿಕ ಲೆಕ್ಕದ (ನಿವ್ವಳ) ಮೂಲಕ 2 ಪೈಸೆ ಆದಾಯವನ್ನು ನಿರೀಕ್ಷಿಸಲಾಗಿತ್ತು. 2023–24ನೇ ಬಜೆಟ್‌ನಲ್ಲಿ ಇದನ್ನು ಕೈಬಿಡಲಾಗಿದೆ
- 2023–24ನೇ ಸಾಲಿನ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ಬರುವ ಸಹಾಯಾನುದಾನದ ಪ್ರಮಾಣ ಕಡಿಮೆಯಾಗಿದೆ. 2022–23ನೇ ಸಾಲಿನ ರಾಜ್ಯದ ಒಟ್ಟು ಬಜೆಟ್‌ನಲ್ಲಿ ಕೇಂದ್ರ ಸರ್ಕಾರದ ಸಹಾಯಾನುದಾನದ ಪ್ರಮಾಣ 6 ಪೈಸೆಗಳಷ್ಟು (ಒಂದು ರೂಪಾಯಿಯಲ್ಲಿ) ಇತ್ತು. 2023–24ನೇ ಸಾಲಿನಲ್ಲಿ ಇದು 4 ಪೈಸೆಗಳಿಗೆ ಕುಸಿದಿದೆ
- 2022–23ನೇ ಸಾಲಿನಲ್ಲಿ ರಾಜ್ಯದ ಬಜೆಟ್‌ನ ರೂಪಾಯಿ ಜಮೆಯಲ್ಲಿ ರಾಜ್ಯ ತೆರಿಗೆ ರೂಪದ ಆದಾಯವು 50 ಪೈಸೆಗಳಷ್ಟು ಇತ್ತು. 2023–24ನೇ ಸಾಲಿನಲ್ಲಿ ಈ ಆದಾಯವು 54 ಪೈಸೆಗಳಿಗೆ ಏರಿಕೆಯಾಗಿದೆ

ರೂಪಾಯಿ ವೆಚ್ಚ



17 ಪೈಸೆ (18ಪೈಸೆ) ಕೃಷಿ, ನೀರಾವರಿ ಮತ್ತು ಗ್ರಾಮೀಣ ಅಭಿವೃದ್ಧಿ

19 ಪೈಸೆ (17ಪೈಸೆ) ಸಾಲ ಮರುಪಾವತಿ

15 ಪೈಸೆ (14ಪೈಸೆ) ಇತರ ಆರ್ಥಿಕ ಸೇವೆಗಳು

11 ಪೈಸೆ (12ಪೈಸೆ) ಶಿಕ್ಷಣ

8 ಪೈಸೆ (8ಪೈಸೆ) ಸಮಾಜ ಕಲ್ಯಾಣ

18 ಪೈಸೆ (18ಪೈಸೆ) ಇತರೆ ಸಾಮಾನ್ಯ ಸೇವೆಗಳು

3 ಪೈಸೆ (3ಪೈಸೆ) ನೀರು ಪೂರೈಕೆ ಮತ್ತು ನೈರ್ಮಲ್ಯ


5 ಪೈಸೆ (5ಪೈಸೆ) ಆರೋಗ್ಯ

4 ಪೈಸೆ (5ಪೈಸೆ) ಇತರೆ ಸಾಮಾಜಿಕ ಸೇವೆಗಳು

- ಒಟ್ಟು ಬಜೆಟ್ ವೆಚ್ಚದಲ್ಲಿ ಹಲವು ಕ್ಷೇತ್ರಗಳಿಗೆ ಅನುದಾನ ಹಂಚಿಕೆ ಇಳಿಕೆಯಾಗಿದೆ
- 2022–23ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ವೆಚ್ಚ ಮಾಡಿದ ಪ್ರತಿ ರೂಪಾಯಿಯಲ್ಲಿ ಕೃಷಿ, ನೀರಾವರಿ ಮತ್ತು ಗ್ರಾಮೀಣಾಭಿವೃದ್ಧಿಗೆ 18 ಪೈಸೆ ಸಲ್ಲುತ್ತಿತ್ತು. 2023–24ನೇ ಸಾಲಿನಲ್ಲಿ ಇದು 17ಪೈಸೆಗೆ ಇಳಿಕೆಯಾಗಿದೆ. ಶಿಕ್ಷಣ (12 ಪೈಸೆಯಿಂದ 11 ಪೈಸೆಗೆ ಇಳಿಕೆ), ಇತರೆ ಸಾಮಾಜಿಕ ಸೇವೆಗಳಿಗೂ (5 ಪೈಸೆಯಿಂದ 4 ಪೈಸೆಗೆ) ಅನುದಾನವನ್ನು ಕಡಿತ ಮಾಡಲಾಗಿದೆ
- ಸಾಲ ಮರುಪಾವತಿಗೆ ಮೀಸಲಿಟ್ಟ ಅನುದಾನದ ಪ್ರಮಾಣವು 17 ಪೈಸೆಯಿಂದ 19 ಪೈಸೆಗಳಿಗೆ ಏರಿಕೆಯಾಗಿದೆ

ಅನುದಾನ ಹಂಚಿಕೆ


ವಿವಿಧ ಕ್ಷೇತ್ರ/ ವಲಯಗಳಿಗೆ ಹಂಚಿಕೆಯಾದ ಅನುದಾನ(ಕೋಟಿಗಳಲ್ಲಿ)



1. ಶಿಕ್ಷಣ	₹37,960
2. ಜಲಸಂಪನ್ಮೂಲ	₹22,854
3. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯಿತಿ ರಾಜ್	₹20,494
4. ನಗರಾಭಿವೃದ್ಧಿ	₹17,938
5. ಕಂದಾಯ	₹15,943
6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ	₹15,151
7. ಒಳಾಡಳಿತ ಮತ್ತು ಸಾರಿಗೆ	₹14,509
8. ಇಂಧನ	₹13,803
9. ಸಮಾಜ ಕಲ್ಯಾಣ	₹11,163
10. ಲೋಕೋಪಯೋಗಿ	₹10,741
11. ಕೃಷಿ ಮತ್ತು ತೋಟಗಾರಿಕೆ	₹9,456
12. ಮಹಿಳಾ ಮತ್ತು ಮಕ್ಕಳ ಕಲ್ಯಾಣ	₹5,676
13. ಆಹಾರ ಮತ್ತು ನಾಗರಿಕ ಸರಬರಾಜು	₹4,600
14. ವಸತಿ	₹3,787
15. ಇತರೆ	₹1.169 ಲಕ್ಷ

5 ಲಕ್ಷ ಮನೆ ನಿರ್ಮಾಣದ ಗುರಿ

₹500 ಕೋಟಿ ತಾಲ್ಲೂಕುಗಳಲ್ಲಿ ವಸತಿ ಸೌಲಭ್ಯಕ್ಕೆ



ಬೆಂಗಳೂರು: ಸರ್ವರಿಗೂ ಸೂರು ಒದಗಿಸಲು ವಿಶೇಷ ಆದ್ಯತೆ ನೀಡಲಾಗುವುದು. ₹ 5 ಸಾವಿರ ಕೋಟಿ ವೆಚ್ಚದಲ್ಲಿ ಒಟ್ಟಾರೆ 5 ಲಕ್ಷ ಮನೆಗಳನ್ನು ನಿರ್ಮಿಸಲಾಗುವುದು ಎಂದು ಬಜೆಟ್‌ನಲ್ಲಿ ಮುಖ್ಯಮಂತ್ರಿ ಪ್ರಸ್ತಾಪಿಸಿದ್ದಾರೆ.

ಜತೆಗೆ ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ವಸತಿ ಸೌಲಭ್ಯಕ್ಕೆ ₹ 500 ಕೋಟಿ ಹಂಚಿಕೆ ಮಾಡಲಾಗಿದೆ.

ಗ್ರಾಮೀಣ ಪ್ರದೇಶದಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ವಸತಿ ಯೋಜನೆಯ ಘಟಕ ಸಹಾಯಧನವನ್ನು ₹ 1.75 ಲಕ್ಷದಿಂದ ₹ 2 ಲಕ್ಷಕ್ಕೆ ಏರಿಕೆ ಮಾಡಲಾಗಿದೆ.

ವಸತಿರಹಿತ ಪೌರ ನೌಕರರಿಗೆ ‘ಪೌರ ಆಸರೆ’ ಯೋಜನೆ ಪ್ರಕಟಿಸಲಾಗಿದೆ. 5 ಸಾವಿರ ವಸತಿರಹಿತ ಪೌರ ನೌಕರರಿಗೆ ₹ 300 ಕೋಟಿ ವೆಚ್ಚದಲ್ಲಿ ವಸತಿ ಕಲ್ಪಿಸಲು ಉದ್ದೇಶಿಸಲಾಗಿದೆ.

‘ಅಮೃತ್ ಯೋಜನೆ’ ಅಡಿ 185 ನಗರ ಹಾಗೂ ಪಟ್ಟಣಗಳಲ್ಲಿ 7.21 ಲಕ್ಷ ಮನೆಗಳಿಗೆ ₹ 6,820 ಕೋಟಿ ವೆಚ್ಚದಲ್ಲಿ ನಲ್ಲಿ ಸಂಪರ್ಕ ಒದಗಿಸಲಾಗುವುದು. ‘ಸ್ಮಾರ್ಟ್ ಸಿಟಿ’ ಯೋಜನೆಯ ಅಡಿ ₹ 3,395 ಕೋಟಿ ವೆಚ್ಚದಲ್ಲಿ 143 ಕಾಮಗಾರಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವದಲ್ಲಿ ಮೈಸೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಹಾವೇರಿ, ಕೋಲಾರ ಮತ್ತು ರಾಮನಗರದಲ್ಲಿ ‘ಟೌನ್‌ಶಿಪ್’ ನಿರ್ಮಿಸಲಾಗುವುದು. ಈ ಟೌನ್‌ಶಿಪ್‌ಗಳಿಂದ ನಗರ ಯೋಜನೆ, ಹೊಸ ಉದ್ಯಮಗಳಿಗೆ ನೂತನ ಆಯಾಮ ಸಿಗಲಿದೆ. ಈ ಭಾಗದಲ್ಲಿ ಉತ್ತಮ ಜೀವನಶೈಲಿ ಹಾಗೂ ಕೆಲಸದ ವಾತಾವರಣ ಸೃಜಿಸಲಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

196 ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಂಗ್ರಹವಾಗಿರುವ 179 ಲಕ್ಷ ಟನ್ ತ್ಯಾಜ್ಯವನ್ನು ತೆರವುಗೊಳಿಸಲು ಯೋಜಿಸಲಾಗಿದೆ. ಇದರಿಂದ 1,180 ಎಕರೆ ಪ್ರದೇಶವನ್ನು ವಾಪಸ್ ಪಡೆದು ನಗರ ಅರಣ್ಯೀಕರಣ, ಉದ್ಯಾನ, ಮನರಂಜನೆ ತಾಣವಾಗಿ ಅಭಿವೃದ್ಧಿ ಪಡಿಸಲು ಯೋಜಿಸಲಾಗಿದೆ.


ಬೀದರ್, ರಾಯಚೂರು ನಗರಸಭೆಗಳನ್ನು ಮಹಾನಗರ ಪಾಲಿಕೆಯಾಗಿ ಉನ್ನತೀಕರಿಸಲು ಮಾನದಂಡಗಳ ಅನ್ವಯ ಪರಿಶೀಲಿಸಲು ಉದ್ದೇಶಿಸಲಾಗಿದೆ.ನಗರ ಹಾಗೂ ಪಟ್ಟಣ ಪ್ರದೇಶದಲ್ಲಿ ಖಾಲಿ ಸ್ಥಳ ಗುರುತಿಸಿ, ನಟ ಶಂಕರ್ ನಾಗ್ ಹೆಸರಿನಲ್ಲಿ ಟ್ಯಾಕ್ಸಿ, ಆಟೊ ನಿಲ್ದಾಣ ನಿರ್ಮಿಸಲು ಯೋಜಿಸಲಾಗಿದೆ.

ಕರ್ನಾಟಕ ಗೃಹ ಮಂಡಳಿಯ ‘ನಮ್ಮ ನೆಲೆ’ ಯೋಜನೆ ಅಡಿ ಅಭಿವೃದ್ಧಿ ಪಡಿಸುವ ನಿವೇಶನಗಳ ಪೈಕಿ 10 ಸಾವಿರ ನಿವೇಶನಗಳನ್ನು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಹಂಚಿಕೆ ಮಾಡಲಾಗುವುದು. ಕೊಳೆಗೇರಿ ಪ್ರದೇಶದ 3.36 ಲಕ್ಷ ಕುಟುಂಬಗಳಿಗೂ ಭೂಮಾಲೀಕತ್ವದ ಹಕ್ಕುಪತ್ರ ವಿತರಣೆ ಮಾಡಲಾಗುವುದು. ಜಮೀನಿನ ವ್ಯಾಜ್ಯ, ಭೂಮಾಲೀಕರ ಸಮಸ್ಯೆಯಿಂದ ಗೃಹ ಮಂಡಳಿಯಿಂದ ಅನುಮೋದನೆಯಾಗಿದ್ದ 38 ಯೋಜನೆಗಳು 10 ವರ್ಷದಿಂದ ನನೆಗುದಿಗೆ ಬಿದ್ದಿವೆ. ಈ ತೊಡಕು ನಿವಾರಿಸಿ 3,382 ಎಕರೆ ಪ್ರದೇಶದಲ್ಲಿ 48 ಸಾವಿರ ನಿವೇಶನ ಹಂಚಿಕೆ ಮಾಡಲಾಗುವುದು ಎಂದು ವಿವರಿಸಲಾಗಿದೆ.

ಬಜೆಟ್: ನಾವು ಕಂಡಂತೆ



ವಾಣಿಜ್ಯ, ಕೈಗಾರಿಕೆ ವಲಯಗಳಿಗೆ ಅನುಕೂಲಕರ ಬಜೆಟ್. ಎಂಎಸ್‌ಎಂಇಗೆ ಬೆಂಬಲ, ಮೂಲಸೌಕರ್ಯ ಅಭಿವೃದ್ಧಿ ಸೇರಿ ನಾವು ಸಲ್ಲಿಸಿದ್ದ ಹಲವು ಪ್ರಸ್ತಾವ ಪರಿಗಣಿಸಲಾಗಿದೆ.
ಬಿ.ವಿ. ಗೋಪಾಲ್ ರೆಡ್ಡಿ
ಅಧ್ಯಕ್ಷ, ಎಫ್‌ಕೆಸಿಸಿಐ




ಎಂಎಸ್‌ಎಂಇಗಳಿಗೆ ಕಡಿಮೆ ಬಡ್ಡಿದರಕ್ಕೆ ಸಾಲ ಸೌಲಭ್ಯ ಕಲ್ಪಿಸಿಲ್ಲ. ಖಾಸಗಿ ಕೈಗಾರಿಕಾ ವಸಹಾತುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ದಿಮೆಗಳಿಗೆ ಮೂಲಸೌಕರ್ಯಗಳ ಕೊರತೆ ನಿವಾರಿಸುವ ಪ್ರಯತ್ನ ಮಾಡಿಲ್ಲ
ಕೆ.ಎನ್. ನರಸಿಂಹಮೂರ್ತಿ
ಕಾಸಿಯಾ ಅಧ್ಯಕ್ಷ



ಕಲಬುರಗಿಗೆ ಬೈಪಾಸ್ ರಸ್ತೆ, ವಿಶೇಷ ಆರ್ಥಿಕ ವಲಯ, ಸಂಕಷ್ಟದಲ್ಲಿರುವ ದಾಲ್ ಮಿಲ್‌ಗಳಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ಕೋರಿದ್ದೆವು. ಮನ್ನಣೆ ಸಿಕ್ಕಿಲ್ಲ.
ಪ್ರಶಾಂತ ಮಾನಕರ
ಅಧ್ಯಕ್ಷ, ಕೆಕೆಸಿಸಿಐ, ಕಲಬುರಗಿ



ಕೈಗಾರಿಕಾ ವಲಯಕ್ಕೆ ಬಜೆಟ್ ನಿರಾಶದಾಯಕ. ಬೆಂಗಳೂರು ಹೊರತುಪಡಿಸಿ ಇತರ ನಗರಗಳಲ್ಲಿ ಕೈಗಾರಿಕೆ ಬೆಳವಣಿಗೆಗೆ ಒತ್ತು ನೀಡದಿರುವುದು ಹತಾಶೆಯಾಗಿದೆ
ಕೆ.ಬಿ.ಲಿಂಗರಾಜು, ಅಧ್ಯಕ್ಷ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ



ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆ ಮತ್ತು ರೈಲು ಯೋಜನೆಗಳಿಗೆ ಅನುದಾನ ಒದಗಿಸಿರುವುದರಿಂದ ಕೈಗಾರಿಕೆ, ಉದ್ಯಮ ಬೆಳವಣಿಗೆಯಾಗಲಿದೆ
ವಿನಯ ಜವಳಿ, ಅಧ್ಯಕ್ಷ, ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ಹುಬ್ಬಳ್ಳಿ

ಮೂಲಸೌಕರ್ಯ: ಇನ್ನಷ್ಟು ಬೇಕಿತ್ತು



ವಿಶ್ಲೇಷಣೆ

ರಕ್ಷಿತ್ ಪೊನ್ನಾಥಪುರ

ವಿರೋಧ ಪಕ್ಷದ ಸದಸ್ಯರು ಕಿವಿ ಮೇಲೆ ಹೂವು ಇಟ್ಟುಕೊಂಡು, ಪ್ರತಿಭಟನೆ ದಾಖಲಿಸಿದ್ದರ ನಡುವೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಮ್ಮ ಹಾಲಿ ಅವಧಿಯ ಕೊನೆಯ ಬಜೆಟ್ ಮಂಡಿಸಿದರು. ಕರ್ನಾಟಕವು ಕಳೆದ ಹಲವು ದಶಕಗಳಿಂದ ಆರ್ಥಿಕ ಸ್ವಾಸ್ಥ್ಯ ಕಾಪಾಡಿಕೊಂಡು ದೇಶದ ಮಾದರಿ ರಾಜ್ಯಗಳಲ್ಲಿ ಒಂದಾಗಿತ್ತು. ಆದರೆ ಕಳೆದ ಎರಡು ವರ್ಷಗಳಲ್ಲಿ ಕೋವಿಡ್-19ರ ಪರಿಣಾಮವಾಗಿ ರಾಜ್ಯದ ಆದಾಯವು ಖರ್ಚಿಗಿಂತ ಕಡಿಮೆಯಾಗಿತ್ತು. ರಾಜ್ಯವು ಆದಾಯ ಕೊರತೆಯ ಸ್ಥಿತಿ ತಲುಪಿತ್ತು.

ಜನಜೀವನ ನಿಧಾನವಾಗಿ ಯಥಾಸ್ಥಿತಿಗೆ ಮರಳುತ್ತಿರುವುದರಿಂದ ರಾಜ್ಯದ ಆರ್ಥಿಕ ಪರಿಸ್ಥಿತಿಯಲ್ಲೂ ಸುಧಾರಣೆ ಕಂಡುಬಂದಿದೆ. ಒಂದು ಕಡೆ ಕೈಗಾರಿಕೆ ಹಾಗೂ ಸೇವಾ ವಲಯಗಳು ಪ್ರಗತಿ ಸಾಧಿಸಿವೆ. ಚುನಾವಣೆಗೆ ಕೆಲವೇ ತಿಂಗಳುಗಳು ಉಳಿದಿರುವುದರಿಂದ ಎಲ್ಲ ಗುಂಪುಗಳನ್ನು ಓಲೈಸುವಂತಹ ಮುಂಗಡಪತ್ರವನ್ನೇ ಎಲ್ಲರೂ ನಿರೀಕ್ಷಿಸುತ್ತಿದ್ದರು. ಆದರೂ ಈ ಮುಂಗಡ ಪತ್ರವು ಮೂಲಸೌಕರ್ಯ ವಲಯದ ಪಾಲಿಗೆ ನಿರಾಶಾದಾಯಕವಾಗಿದೆ.

ಉಪನಗರ ರೈಲಿಗೆ ಕಡಿಮೆ ಹಣ ನಿಗದಿ: ಬೆಂಗಳೂರು ಉಪನಗರ ರೈಲು ಯೋಜನೆಯು ದಶಕಗಳಿಂದ ಕಾಗದದ ಮೇಲೆ ಮಾತ್ರ ಉಳಿದಿತ್ತು. ಇದೀಗ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಎಲ್ಲ ಅನುಮತಿಗಳು ಸಿಕ್ಕಿದ್ದರೂ ಯೋಜನೆಯ ಪ್ರಗತಿ ಮಂದಗತಿಯಲ್ಲಿದೆ. ಈ ವರ್ಷವೂ ರಾಜ್ಯ ಸರ್ಕಾರ ಉಪನಗರ ರೈಲು ಯೋಜನೆಗೆ ಕೇವಲ ₹ 1 ಸಾವಿರ ಕೋಟಿಯನ್ನು ನಿಗದಿ ಮಾಡಿದೆ. ಇದಕ್ಕಿಂತ ಹೆಚ್ಚು ಹಣವನ್ನು ಹೆದ್ದಾರಿ, ಮೇಲ್ಸೇತುವೆ, ವೈಟ್ ಟಾಪಿಂಗ್ ಯೋಜನೆಗಳಿಗೆ ನಿಗದಿ ಮಾಡಿದೆ.

ಬೆಂಗಳೂರು ಅತ್ಯಂತ ಹೆಚ್ಚಿನ ಸಂಚಾರ ದಟ್ಟಣೆಯಿರುವ ವಿಶ್ವದ ನಗರಗಳ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆದ ಕುಖ್ಯಾತಿಗೆ ಪಾತ್ರವಾಗಿದೆ. ಸಾರ್ವಜನಿಕ ಸಾರಿಗೆಯ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸುವುದೇ ಸಂಚಾರ ದಟ್ಟಣೆಯನ್ನು ತಪ್ಪಿಸಲು ಇರುವ ಅತ್ಯಂತ ಪರಿಣಾಮಕಾರಿ ಮಾರ್ಗವೆಂದು ನಗರ ಸಂಚಾರ ತಜ್ಞರು ಪ್ರತಿಪಾದಿಸುತ್ತಲೇ ಬಂದಿದ್ದಾರೆ. ಆದರೂ ಸರ್ಕಾರವು ಖಾಸಗಿ ವಾಹನ ಬಳಕೆಯನ್ನು ಉತ್ತೇಜಿಸುವಂತಹ ಮೂಲಸೌಕರ್ಯಕ್ಕೆ ಹೆಚ್ಚು ಒಲವು ತೋರಿಸುವ ತನ್ನ ಚಾಳಿಯನ್ನು ಈ ವರ್ಷವೂ ಮುಂದುವರೆಸಿದೆ.

ನಿರ್ಲಕ್ಷ್ಯಕ್ಕೆ ಒಳಗಾದ ಬಸ್ ವ್ಯವಸ್ಥೆ: ಸಾರ್ವಜನಿಕ ಮೂಲಸೌಕರ್ಯದ ಅವಿಭಾಜ್ಯ ಅಂಗ ಬಸ್ ವ್ಯವಸ್ಥೆ. ಕಳೆದ ಎರಡು ದಶಕಗಳಲ್ಲಿ ಬೆಂಗಳೂರಿನ ಜನಸಂಖ್ಯೆ ದುಪ್ಪಟ್ಟಾಗಿದ್ದರೂ ಬಸ್ಸುಗಳ ಸಂಖ್ಯೆ ಅದಕ್ಕೆ ಅನುಗುಣವಾಗಿ ಹೆಚ್ಚಾಗಿಲ್ಲ. ಜನಸಂಖ್ಯೆಗೆ ಅನುಗುಣವಾಗಿ ಬಸ್ಸುಗಳ ಸಂಖ್ಯೆಯನ್ನು ಇನ್ನಾದರೂ ಏರಿಸಬೇಕೆಂದು, ಅದಕ್ಕೆ ಅನುಗುಣವಾಗಿ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕೆಂದು ಈ ಬಾರಿ ಆಗ್ರಹಿಸಲಾಗಿತ್ತು. ಆದರೆ ಸರ್ಕಾರವು ಮುಂಗಡ ಪತ್ರದಲ್ಲಿ ರಾಜ್ಯದ ನಾಲ್ಕು ಸಾರಿಗೆ ಸಂಸ್ಥೆಗಳಿಗೆ ಸೇರಿ ಕೇವಲ 1,200 ಬಸ್ಸುಗಳನ್ನು ಖರೀದಿಸಲು ₹ 500 ಕೋಟಿ ನಿಗದಿಪಡಿಸಿದೆ. ಇದರಿಂದಾಗಿ ಸಾರ್ವಜನಿಕ ಬಸ್ ವ್ಯವಸ್ಥೆಯಲ್ಲಿ ಗಣನೀಯ ಸುಧಾರಣೆ ಅಸಾಧ್ಯ.


2012ರಲ್ಲಿ ದೆಹಲಿಯಲ್ಲಿ ನಡೆದ ಸಾಮೂಹಿಕ ಅತ್ಯಾಚಾರದ ಪ್ರಕರಣದ ನಂತರದಲ್ಲಿ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದ ಮೂಲಸೌಕರ್ಯವನ್ನು ಹೆಚ್ಚಿಸಲು ನಿರ್ಭಯಾ ನಿಧಿಯನ್ನು ಸ್ಥಾಪಿಸಲಾಯಿತು. ಆದರೆ ಈ ಯೋಜನೆಯ ಅಡಿಯಲ್ಲಿ ಸರ್ಕಾರವು ಪ್ರತಿ ವರ್ಷ ಸಿಸಿಟಿವಿ ಮಾತ್ರ ಖರೀದಿಸುತ್ತಾ, ಅಳವಡಿಸುತ್ತಾ ಬಂದಿದೆ. ಆದರೆ ಸಿಸಿಟಿವಿ ಅಳವಡಿಕೆ ಮಾಡಿದ ಮಾತ್ರಕ್ಕೆ ಮಹಿಳೆಯರ ಸುರಕ್ಷತೆ ಹೆಚ್ಚುತ್ತದೆ ಎನ್ನಲು ಯಾವ ಪುರಾವೆಗಳೂ ಇಲ್ಲ. ಸಿಸಿಟಿವಿಗಳು ಮಹಿಳೆಯರ ರಕ್ಷಣೆಯನ್ನು ಹೆಚ್ಚಿಸುವುದಕ್ಕಿಂತಲೂ ಸರ್ಕಾರಕ್ಕೆ ನಾಗರಿಕರ ಮೇಲೆ ಹೆಚ್ಚು ಕಣ್ಗಾವಲಿಡಲು ಸಹಾಯ ಮಾಡುತ್ತವೆ ಎಂಬುದು ಬಹುತೇಕ ತಜ್ಞರು ಹಾಗೂ ಸ್ತ್ರೀವಾದಿಗಳ ಅಭಿಪ್ರಾಯ.

ಹಾಗೆ ನೋಡಿದರೆ, ನಗರಗಳ ವಾಣಿಜ್ಯ ಕೇಂದ್ರಗಳ ಸುತ್ತಮುತ್ತ ಮಹಿಳೆಯರಿಗೆ ಶೌಚಾಲಯ ಕಟ್ಟಿಸುವ ಯೋಜನೆಯು ಹೆಚ್ಚು ಉಪಯುಕ್ತವಾಗಲಿದೆ. ಕೆಲಸ ಮಾಡುವ ಮಹಿಳೆಯರು ದಿನನಿತ್ಯದ ಓಡಾಟದಲ್ಲಿ ಎದುರಿಸುವ ಒಂದು ಅತಿ ದೊಡ್ಡ ಸಮಸ್ಯೆಯನ್ನು ಈ ಯೋಜನೆ ನಿವಾರಿಸಬಹುದು.

ಉದ್ಯೋಗಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ದೇಶದ ಪ್ರಗತಿಗೆ ಅತ್ಯಮೂಲ್ಯ. ಭಾರತದಲ್ಲಿ ಈ ಪ್ರಮಾಣವು ಅತ್ಯಂತ ಕಡಿಮೆಯಾಗಿ ಇದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಸುರಕ್ಷಿತವಾಗಿ ಸಾರ್ವಜನಿಕ ಪ್ರದೇಶಗಳಲ್ಲಿ ಓಡಾಡುವಂತಹ, ಕೆಲಸ ಮಾಡುವಂತಹ ಪರಿಸ್ಥಿತಿ ಸೃಷ್ಟಿಸುವುದು ಸರ್ಕಾರದ ಕರ್ತವ್ಯ. ನಿರ್ಭಯಾ ನಿಧಿಯನ್ನು ಈ ರೀತಿಯ ಯೋಜನೆಗಳಿಗೆ ಹೆಚ್ಚಾಗಿ ಬಳಸಬೇಕಾಗಿದೆ.

ಲೇಖಕ: ಹಣಕಾಸು ನೀತಿ ಸಂಶೋಧನಾ ಸಂಸ್ಥೆಯೊಂದರಲ್ಲಿ ಸಂಶೋಧಕ ಹಾಗೂ ದತ್ತಾಂಶ ವಿಶ್ಲೇಷಕ

ಸಹಾಯಧನ: ಹಲವು ಇಳಿಕೆ, ಕೆಲವು ಏರಿಕೆ



ಅಲ್ಪಸಂಖ್ಯಾತರಿಗೆ ಬೊಮ್ಮಾಯಿ ಬಲ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳಿಗಾಗಿ ಹಲವು ಯೋಜನೆಗಳನ್ನು ಪ್ರಕಟಿಸಿದ್ದು, ಈ ಮೂಲಕ ಬಿಜೆಪಿ ಅಲ್ಪಸಂಖ್ಯಾತರ ವಿರೋಧಿ ಎಂಬ ಆರೋಪವನ್ನು ನಿವಾರಿಸುವ ಯತ್ನ ಮಾಡಿದ್ದಾರೆ.

- ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಗುಣಾತ್ಮಕ ಉನ್ನತ ಶಿಕ್ಷಣ ಒದಗಿಸಲು ಮೆಟ್ರಿಕ್ ನಂತರದ 100 ವಿದ್ಯಾರ್ಥಿ ನಿಲಯಗಳಲ್ಲಿ ಸಂಖ್ಯಾ ಬಲ 2,500 ಕ್ಕೆ ಹೆಚ್ಚಳ.
- ಅಲ್ಪಸಂಖ್ಯಾತರ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ತರಬೇತಿ ನೀಡಲು ₹2 ಕೋಟಿ.
- ಅಲ್ಪಸಂಖ್ಯಾತರ ಪದವೀಧರ ಮಹಿಳೆಯರು ಉತ್ತಮ ಉದ್ಯೋಗಾವಕಾಶ ಪಡೆಯಲು ಮತ್ತು ಸ್ವಂತ ಉದ್ದಿಮೆ ಪ್ರಾರಂಭಿಸಲು ಪ್ರತಿಷ್ಠಿತ ಸಂಸ್ಥೆಯಾದ ಐಐಎಂಬಿ(ಬೆಂಗಳೂರು)ಯಲ್ಲಿ 300 ಅಭ್ಯರ್ಥಿಗಳಿಗೆ ₹3 ಕೋಟಿ ವೆಚ್ಚದಲ್ಲಿ ಉದ್ಯಮಶೀಲತಾ ತರಬೇತಿ.
- 29 ಸ್ಥಳಗಳಲ್ಲಿ 6 ರಿಂದ 12 ನೇ ತರಗತಿವರೆಗೆ ಸಿಬಿಎಸ್‌ಇ ಪಠ್ಯಕ್ರಮದೊಂದಿಗೆ ಡಾ.ಎ.ಪಿ. ಜೆ.ಅಬ್ದುಲ್ ಕಲಾಂ ವಸತಿ ಶಾಲೆಗಳನ್ನು ₹25 ಕೋಟಿ ವೆಚ್ಚದಲ್ಲಿ ನಿರ್ವಹಣೆ.
- ₹96 ಕೋಟಿ ವೆಚ್ಚದಲ್ಲಿ 31 ವಸತಿ ಶಾಲೆಗಳು, ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳ ಕಟ್ಟಡಗಳನ್ನು ನಿರ್ಮಿಸಲಾಗಿದ್ದು, ಇಲ್ಲಿ 7800 ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ.

ಸಿಂಪಿಗರ ಮಕ್ಕಳಿಗೂ ವಿದ್ಯಾನಿಧಿ

ರಾಜ್ಯದ 10.32 ಲಕ್ಷ ಮಕ್ಕಳಿಗೆ ರೈತ ವಿದ್ಯಾನಿಧಿ ಯೋಜನೆಯಲ್ಲಿ ₹ 725 ಕೋಟಿ ನೀಡಲಾಗಿದೆ. ಹೆಚ್ಚುವರಿಯಾಗಿ 3 ಲಕ್ಷ ವಿದ್ಯಾರ್ಥಿಗಳಿಗೆ ₹141 ಕೋಟಿ ಬಿಡುಗಡೆ ಮಾಡಲಾಗಿದ್ದು, ಪ್ರಸಕ್ತ ವರ್ಷದಲ್ಲಿ ಈ ಯೋಜನೆಯನ್ನು ಸಿಂಪಿಗರ ಮಕ್ಕಳಿಗೂ ವಿಸ್ತರಿಸಲಾಗುತ್ತಿದೆ.

‘ಅಹಿಂದ’ ಓಲೈಕೆಗೆ ‘ಪ್ರಸಾದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಯ ಹೊಸ್ತಿಲಲ್ಲಿ ‘ಮತ ಬೇಟೆ’ಯ ಮೇಲೆ ಕಣ್ಣಿಟ್ಟು ಅಲ್ಪಸಂಖ್ಯಾತ, ಹಿಂದುಳಿದ, ದಲಿತ (ಅಹಿಂದ) ಸಮುದಾಯಗಳ ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿಗೆ ಬಸವರಾಜ ಬೊಮ್ಮಾಯಿ ಸಾಕಷ್ಟು ಕೊಡುಗೆಗಳನ್ನು ಘೋಷಿಸಿರುವುದು ಸ್ಪಷ್ಟವಾಗಿ ಕಾಣುತ್ತದೆ. ವಿಶೇಷವಾಗಿ, ಮುಸ್ಲಿಂ ಸಮುದಾಯವನ್ನು ತೃಪ್ತಿಪಡಿಸಲು ಅವರು ಯತ್ನಿಸಿದ್ದಾರೆ.



ಈ ಮೂರು ವರ್ಗಗಳಿಗೆ ಸೇರಿದ 10 ಸಾವಿರ ಯುವಜನರು ಭಾರತೀಯ ಸೇನೆಯಲ್ಲಿ ‘ಅಗ್ನಿವೀರ’ರಾಗಿ ನೇಮಕಾತಿ ಹೊಂದಲು ಉಚಿತ ತರಬೇತಿ, ಅಲ್ಪಸಂಖ್ಯಾತರ ನಿರ್ದೇಶನಾಲಯದಡಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿನ ವಿದ್ಯಾರ್ಥಿನಿಯರಿಗೆ ಆತ್ಮರಕ್ಷಣೆ ತರಬೇತಿಗೆ ₹ 2 ಕೋಟಿ ನೀಡಲಾಗುವುದು ಎಂದು ಪ್ರಕಟಿಸಲಾಗಿದೆ.

ವಕ್ಫ್ ಆಸ್ತಿಗಳನ್ನು ಸಂರಕ್ಷಿಸಿ, ಅಭಿವೃದ್ಧಿಪಡಿಸಲು ಮತ್ತು ಖಬರ್‌ಸ್ತಾನಗಳ ಅಭಿವೃದ್ಧಿಗೆ ತಲಾ ₹ 10 ಕೋಟಿ ಒದಗಿಸುವ ಜೊತೆಗೆ, ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮಕ್ಕೆ ಕಳೆದ ಬಜೆಟ್‌ನಲ್ಲಿ ನೀಡಿದ್ದ ₹ 60 ಕೋಟಿಯನ್ನು ₹ 110 ಕೋಟಿಗೆ ಹೆಚ್ಚಿಸಲಾಗಿದೆ. ಅತಿ ಹಿಂದುಳಿದ ಪಿಂಜಾರ, ದರ್ವೇಸು ಮತ್ತು ನದಾಫ್ ಸಮುದಾಯಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಅಭಿವೃದ್ಧಿಗಾಗಿ ಕರ್ನಾಟಕ ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮದ ಯೋಜನೆಗಳಲ್ಲಿ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದೂ ಹೇಳಿದ್ದಾರೆ.

ಎಸ್‌ಸಿ ಮತ್ತು ಎಸ್‌ಟಿಗೆ ಸೇರಿದ ವಿವಿಧ ಆರು ಅಭಿವೃದ್ಧಿ ನಿಗಮಗಳಿಗೆ ನೀಡುತ್ತಿರುವ ಅನುದಾನವನ್ನು ₹795 ಕೋಟಿಗೆ ಹೆಚ್ಚಿಸಿದ್ದು, ಈಗಾಗಲೇ ಲಭ್ಯವಿರುವ ಮೊತ್ತವೂ ಸೇರಿ 2023-24ರಲ್ಲಿ ₹ 1,842 ಕೋಟಿಯಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು. ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಪಿ) ಮತ್ತು ಪರಿಶಿಷ್ಟ ಪಂಗಡ ಉಪ ಯೋಜನೆ (ಟಿಎಸ್‌ಪಿ) ಕಾಯ್ದೆಯಡಿ ಮೀಸಲಿಟ್ಟ ಹಣ ಅನ್ಯಉದ್ದೇಶಗಳಿಗೆ ಬಳಸದಂತೆ ಕಡಿವಾಣ ಹಾಕಲು ಕಾಯ್ದೆಯ ಸೆಕ್ಷನ್ 7(ಡಿ) ಪರಿಷ್ಕರಿಸುವುದೂ ಸೇರಿದಂತೆ ಹಲವು ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಿ ಜಾರಿ, ಪಿಟಿಸಿಎಲ್ ಕಾಯ್ದೆಗೆ ತಿದ್ದುಪಡಿ, ಎಸ್‌ಸಿ, ಎಸ್‌ಟಿ ಗುತ್ತಿಗೆದಾರರಿಗೆ ಕಾಮಗಾರಿಗಳಲ್ಲಿ ಶೇ 24ರಷ್ಟು ಮೀಸಲಾತಿಗೆ ನಿಗದಿಪಡಿಸಿದ್ದ ಮೊತ್ತ ₹ 1 ಕೋಟಿಗೆ ಹೆಚ್ಚಳದ ಭರವಸೆಯನ್ನೂ ನೀಡಲಾಗಿದೆ.

ಹಿಂದುಳಿದ ವರ್ಗಗಳಿಗೆ ಸೇರಿದ ವಿವಿಧ 11 ಅಭಿವೃದ್ಧಿ ನಿಗಮಗಳಿಗೆ ನೀಡುತ್ತಿರುವ ಅನುದಾನವನ್ನು ಹೆಚ್ಚಿಸಿ, ಪ್ರಸಕ್ತ ಸಾಲಿನಲ್ಲಿ ₹ 596 ಕೋಟಿ ಒದಗಿಸಲಾಗುವುದು. ಈ ನಿಗಮಗಳಿಗೆ ನೀಡಿರುವ ಹೆಚ್ಚುವರಿ ಅನುದಾನ ಮತ್ತು ಲಭ್ಯ ಮೊತ್ತವೂ ಸೇರಿ 2023-24ರಲ್ಲಿ ಒಟ್ಟು ₹ 1,600 ಕೋಟಿ ವೆಚ್ಚದಲ್ಲಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುವುದು ಎಂದು ತಿಳಿಸಲಾಗಿದೆ.

ಪರಿಶಿಷ್ಟ ಜಾತಿ– ಪಂಗಡ, ಅಲ್ಪಸಂಖ್ಯಾತ ನಿಗಮಕ್ಕೆ ಅನುದಾನ

₹21,343 ಕೋಟಿ	₹8,872 ಕೋಟಿ	₹110 ಕೋಟಿ
ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಪಿ)	ಪರಿಶಿಷ್ಟ ಪಂಗಡ ಉಪಯೋಜನೆ (ಟಿಎಸ್‌ಪಿ)	ಅಲ್ಪಸಂಖ್ಯಾತ ಅಭಿವೃದ್ಧಿ ನಿಗಮ

ನೀರಸ ಓದು; ತಪ್ಪುಗಳ ಸರಮಾಲೆ

ಬೆಂಗಳೂರು: ಎರಡೂ ಮುಕ್ಕಾಲು ಗಂಟೆಗಳಿಗೂ ಹೆಚ್ಚು ಅವಧಿಯ ಬಜೆಟ್ ಮಂಡನೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಲವು ಅಂಕಿಅಂಶಗಳು, ಶಬ್ದಗಳನ್ನು ತಪ್ಪಾಗಿ ವಾಚಿಸಿದರು. ಬಜೆಟ್ ಮಂಡನೆಯ ಶೈಲಿ ಆರಂಭದಿಂದ ಅಂತ್ಯದವರೆಗೂ ನೀರಸವಾಗಿಯೇ ಇತ್ತು.

ಬೆಳಿಗ್ಗೆ 10.17ಕ್ಕೆ ಬಜೆಟ್ ಮಂಡನೆ ಆರಂಭಿಸಿದ ಅವರು, ಮಧ್ಯಾಹ್ನ 12.55ಕ್ಕೆ ಮುಕ್ತಾಯಗೊಳಿಸಿದರು. ಕಾಂಗ್ರೆಸ್ ಸದಸ್ಯರು ಕಿವಿಯಲ್ಲಿ ಹೂವು ಮುಡಿದು ಬಂದದ್ದನ್ನು ಕಂಡು ವಿಚಲಿತರಾದ ಅವರು, ಕೆಲಕಾಲ ವಾಗ್ವಾದಕ್ಕೆ ಇಳಿದರು. ನಂತರ ಓದಿಗೆ ಮರಳಿದರು.

ಕೆಲವೊಮ್ಮೆ ಕನ್ನಡ ಪದಗಳನ್ನು ಉಚ್ಚರಿಸಲು ತುಸು ಕಷ್ಟ ಪಟ್ಟ ಬೊಮ್ಮಾಯಿ, ಕೆಲವು ವಾಕ್ಯಗಳನ್ನೇ ಬದಲಾಯಿಸಿದರು. ಬಜೆಟ್ ಅಧ್ಯಾಯಗಳ ಮಧ್ಯದಲ್ಲಿ ಉಲ್ಲೇಖಿಸಿದ್ದ ಪ್ರಸಿದ್ಧ ಕವಿಗಳ ರಚನೆಗಳ ಭಾಗವನ್ನು ವಾಚಿಸುವಾಗಲೂ ತಪ್ಪುಗಳಾದವು.

ಅಂಕಿಅಂಶಗಳೇ ಬದಲು: ಬಜೆಟ್ ಪುಸ್ತಕದಲ್ಲಿನ ಅಂಕಿಅಂಶಗಳನ್ನೇ ಹಲವು ಬಾರಿ ತಪ್ಪಾಗಿ ಉಲ್ಲೇಖಿಸಿದ್ದು ಕಂಡುಬಂತು. ಹೊಸ ಯೋಜನೆಗಳು, ತಾವು ನಿರ್ದಿಷ್ಟ ಜನರನ್ನು ಕೇಂದ್ರೀಕರಿಸಿ ರೂಪಿಸಿರುವ ಯೋಜನೆಗಳನ್ನು ಪ್ರಸ್ತಾಪಿಸುವಾಗ ಮುಖ್ಯಮಂತ್ರಿಯವರು ತುಸು ದನಿ ಏರಿಸಿ ಮಾತನಾಡಿದರು. ಅದನ್ನು ಅರಿತ ಬಿಜೆಪಿ ಸದಸ್ಯರು ಮೇಜುಕುಟ್ಟಿ ಸ್ವಾಗತಿಸಿದರು.

ಸಚಿವರ ಬೆಂಬಲ: ಕಲಾಪ ಆರಂಭಕ್ಕೂ ಕೆಲವು ನಿಮಿಷಗಳ ಮೊದಲೇ ಮುಖ್ಯಮಂತ್ರಿಯವರು ವಿಧಾನಸಭೆಯಲ್ಲಿದ್ದರು. ಸಚಿವರಾದ ಆರ್. ಅಶೋಕ, ಜೆ.ಸಿ. ಮಾಧುಸ್ವಾಮಿ ಮತ್ತಿತರರು ಜತೆಗಿದ್ದರು. ಬಜೆಟ್ ಮಂಡನೆ ಮುಕ್ತಾಯವಾದ ಬಳಿಕ ವಿಜಯದ ಸಂಕೇತ ಪ್ರದರ್ಶಿಸಿದ ಬೊಮ್ಮಾಯಿ ಸಂತಸ ವ್ಯಕ್ತಪಡಿಸಿದರು. ಕಿವಿಯಲ್ಲಿ ಹೂವು ಇರಿಸಿಕೊಂಡೇ ಮುಖ್ಯಮಂತ್ರಿಯವರ ಬಳಿ ತೆರಳಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕೆಲಕಾಲ ತಮಾಷೆಯಲ್ಲಿ ತೊಡಗಿದ್ದರು.

₹ 2 ಲಕ್ಷ ಕೋಟಿ ಸಾಲದ ಹೊರೆ ನೀಡಿದ್ದೇ ಕಾಂಗ್ರೆಸ್: ಮುಖ್ಯಮಂತ್ರಿ ಬೊಮ್ಮಾಯಿ

ಬೆಂಗಳೂರು: ‘ಕೋವಿಡ್‌ನಂತಹ ಸಂಕಷ್ಟ ಇಲ್ಲದಿದ್ದರೂ, ಹಿಂದಿನ ಕಾಂಗ್ರೆಸ್ ಸರ್ಕಾರ ಸುಮಾರು ₹ 2 ಲಕ್ಷ ಕೋಟಿ ಸಾಲ ಮಾಡಿತ್ತು. ಅವರು ಮಾಡಿದ ಸಾಲ ತೀರಿಸುತ್ತಿದ್ದೇವೆ. ಚುನಾವಣೆಗಾಗಿ ಉತ್ಪ್ರೇಕ್ಷಿತ ಘೋಷಣೆಗಳನ್ನು ಮಾಡಿಲ್ಲ. ನಮ್ಮದು ಬದ್ಧತೆಯ ಸರ್ಕಾರ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಬಜೆಟ್ ಮಂಡನೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅತ್ಯಂತ ದಕ್ಷತೆಯಿಂದ ಹಣಕಾಸಿನ ನಿರ್ವಹಣೆ ಮಾಡಲಾಗಿದೆ. ₹ 402 ಕೋಟಿ ವರಮಾನ ಹೆಚ್ಚಳದ ಬಜೆಟ್ ಮಂಡಿಸಲಾಗಿದೆ. ಹಿಂದಿನ ವರ್ಷ ₹ 14,699 ಕೋಟಿ ಕೊರತೆಯಿತ್ತು. ಕೋವಿಡ್ ಚೇತರಿಕೆಯ ನಂತರ ಎರಡೇ ವರ್ಷಗಳಲ್ಲಿ ಆರ್ಥಿಕತೆ ಹಳಿಗೆ ತರಲಾಗಿದೆ. ದೇಶದ ಆರ್ಥಿಕ ಸರಾಸರಿಗಿಂತ ಹೆಚ್ಚಿನ ಆದಾಯ ರಾಜ್ಯದಲ್ಲಿದೆ. ಆರ್ಥಿಕ ಬಲವರ್ಧನೆಗೆ ಕಾರ್ಯ ಕೈಗೊಂಡಿದ್ದೇವೆ’ ಎಂದರು.



‘ರೈತರ ಸಮಸ್ಯೆಗಳಿಗೆ ಪರಿಹಾರ ನೀಡುವ ಹಲವು ಯೋಜನೆಗಳನ್ನು ಆಯವ್ಯಯದಲ್ಲಿ ಘೋಷಿಸಿದ್ದೇವೆ. ಸರ್ಕಾರಿ ಪಿಯು ಮತ್ತು ಪದವಿ ಕಾಲೇಜಿನಲ್ಲಿ ಓದುವ ಮಕ್ಕಳಿಗೆ ಸಂಪೂರ್ಣ ಶುಲ್ಕ ವಿನಾಯಿತಿ ನೀಡಲಾಗಿದೆ. ಪರಿಶಿಷ್ಟರಿಗೆ ಮೀಸಲಾತಿಯಡಿ ನೀಡುವ ಗುತ್ತಿಗೆ ಮೊತ್ತವನ್ನು ₹ 1 ಕೋಟಿಗೆ ವಿಸ್ತರಿಸಲಾಗಿದೆ. ಹಲವು ಸಮುಯದಾಯಗಳಿಗೆ ಕಾನೂನು ಅಡಚಣೆಯಿಂದ ಯೋಜನೆಯಗಳ ಲಾಭ ಪಡೆಯಲು ಆಗುತ್ತಿಲ್ಲ. ಇಂತಹ ಸೂಕ್ಷ್ಮಗಳನ್ನು ಬಜೆಟ್‌ನಲ್ಲಿ ಗುರುತಿಸಲಾಗಿದೆ. ಹೊಸ ತೆರಿಗೆ ಇಲ್ಲದೇ ಉತ್ತಮ ಬಜೆಟ್ ನೀಡಲಾಗಿದೆ. ಇದು ಬಡವರ, ಶೋಷಿತರ ಪರವಾದ ಜನರ ಬಜೆಟ್’ ಎಂದರು.

ಜನರ ಮೇಲೆ ಸಾಲ ಹೊರಿಸಿದ ಬಜೆಟ್: ಸಿದ್ದರಾಮಯ್ಯ

ಬೆಂಗಳೂರು: ‘ರಾಜ್ಯ ಸರ್ಕಾರ ₹2,54,760 ಕೋಟಿ ಸಾಲದ ಹೊರೆಯನ್ನು ಜನರ ಮೇಲೆ ಹೊರಿಸಿರುವುದೇ ಬಜೆಟ್‌ನ ಬಹುದೊಡ್ಡ ಸಾಧನೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದರು.



‘ಕಾಂಗ್ರೆಸ್ ಅಧಿಕಾರದ ಅವಧಿಯಲ್ಲಿ ಒಟ್ಟು ಸಾಲ ₹1,16, 512 ಕೋಟಿ ಇತ್ತು. ಕೇವಲ ನಾಲ್ಕು ವರ್ಷಗಳ ಅವಧಿಯಲ್ಲಿ ಸಾಲ ದ್ವಿಗುಣಗೊಂಡಿದೆ. ಮತ್ತೆ 2023–24ನೇ ಸಾಲಿಗೆ ₹ 77,750 ಕೋಟಿ ಸಾಲ ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಮಂಡಿಸಿದ ಹಿಂದಿನ ಬಜೆಟ್‌ನ ಅನುದಾನದಲ್ಲೇ ಶೇ 56ರಷ್ಟು ಖರ್ಚಾಗಿಲ್ಲ. ಇದು ಬಿಜೆಪಿ ಸರ್ಕಾರದ ನಿರ್ಗಮನದ ಬಜೆಟ್’ ಎಂದು ಪತ್ರಿಕಾಗೋಷ್ಠಿಯಲ್ಲಿ ದೂರಿದರು.

‘ರಾಜ್ಯದಿಂದ ₹ 4.75 ಲಕ್ಷ ಕೋಟಿ ತೆರಿಗೆ ಸಂಗ್ರಹವಾದರೂ, ರಾಜ್ಯದ ಪಾಲಿನಲ್ಲೂ ಕಡಿಮೆ ನೀಡಲಾಗುತ್ತಿದೆ. ₹ 5 ಸಾವಿರ ಕೋಟಿ ಜಿಎಸ್‌ಟಿ ಬಾಕಿ ನೀಡಿಲ್ಲ. ಅನುದಾನದಲ್ಲೂ ತಾರತಮ್ಯ ಮಾಡಲಾಗಿದೆ. ಹಿಂದಿನ ಬಜೆಟ್‌ನಲ್ಲಿ 206 ಹೊಸ ಕಾರ್ಯಕ್ರಮಗಳನ್ನು ಘೋಷಿಸಿದ್ದರು. 56 ಕಾರ್ಯಕ್ರಮಗಳ ಅನುಷ್ಠಾನಕ್ಕೆ ಚಾಲನೆಯನ್ನೇ ನೀಡಿಲ್ಲ. ಜನರಿಗೆ ಬರೀ ಸುಳ್ಳು ಭರವಸೆಗಳನ್ನೇ ನೀಡಿದ್ದಾರೆ. ಮಕ್ಕಳನ್ನು ಸಾಕಲು ಜವಾಬ್ದಾರಿ ಇಲ್ಲದವರು ಎಷ್ಟು ಮಕ್ಕಳಾದರೂ ಯೋಚಿಸುವುದಿಲ್ಲ. ಹಾಗೆಯೇ, ಈ ಸರ್ಕಾರಕ್ಕೆ ಅನುಷ್ಠಾನ ಮಾಡುವ ಜವಾಬ್ದಾರಿ ಇಲ್ಲ’ ಎಂದು ಟೀಕಿಸಿದರು.

‘ನಮ್ಮ ಸರ್ಕಾರ ಇದ್ದಾಗ ಸರ್ಕಾರಿ ನೌಕರರಿಗೆ 6ನೇ ವೇತನ ಆಯೋಗ ರಚಿಸಿತ್ತು. ಬಜೆಟ್‌ನಲ್ಲೇ ₹ 10,600 ಕೋಟಿ ಮೀಸಲಿಟ್ಟಿದ್ದೆವು. ಆದರೆ, ಈ ಸರ್ಕಾರ ಅದರ ಪ್ರಸ್ತಾಪವನ್ನೇ ಮಾಡಿಲ್ಲ. ಲಂಬಾಣಿ ಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ರೂಪಿಸಿದ್ದು ನಮ್ಮ ಸರ್ಕಾರ. ಹೈಜಾಕ್ ಮಾಡಿ, ಪ್ರಧಾನಿಗೆ ಧನ್ಯವಾದ ಹೇಳುವ ಕೆಲಸವನ್ನು ಅವರು ಮಾಡಿದ್ದಾರೆ. ರಾಜ್ಯದ ಬದ್ಧತಾ ವೆಚ್ಚ ಪ್ರಸ್ತುತ ಶೇ 93 ಇದೆ. ಉಳಿದ ಶೇ 7ರಷ್ಟು ಹಣದಲ್ಲಿ ಅಭಿವೃದ್ಧಿ ಹೇಗೆ? ವೆಚ್ಚ ಕಡಿಮೆ ಮಾಡುವ ಪ್ರಯತ್ನಗಳೇ ಇಲ್ಲ’ ಎಂದರು.


2023-24

ರಾಜ್ಯ ಬಜೆಟ್



ಎಲ್ಲಾ ಜಿಲ್ಲೆಗಳಿಗೂ ಯೋಜನೆ

- ಪ್ರತಿ ಜಿಲ್ಲೆಗೆ ಒಂದರಂತೆ, ಅತಿ ಹೆಚ್ಚು ದಾಖಲಾತಿ ಹೊಂದಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ‘ವೃದ್ಧಿ’ ಯೋಜನೆಯಡಿ ತಲಾ ₹ 2 ಕೋಟಿಯಂತೆ ಒಟ್ಟು ₹ 124 ಕೋಟಿ ವೆಚ್ಚದಲ್ಲಿ ಅಗತ್ಯ ಸೌಲಭ್ಯ
- ತಾಲ್ಲೂಕು ಆಸ್ಪತ್ರೆಗಳಿಲ್ಲದ ಖಾನಾಪುರ, ಆನೇಕಲ್, ಶಿರಹಟ್ಟಿ, ಶೃಂಗೇರಿ, ಯಳಂದೂರು, ನೆಲಮಂಗಲ ಮತ್ತು ಹೊಸಕೋಟೆ ತಾಲ್ಲೂಕುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಆರೋಗ್ಯ ಕೇಂದ್ರಗಳು 100 ಹಾಸಿಗೆಗಳ ಸಾಮರ್ಥ್ಯದ ತಾಲ್ಲೂಕು ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೆ
- ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನರೇಗಾ ಯೋಜನೆಯಡಿ ₹ 5 ಕೋಟಿ ವೆಚ್ಚದಲ್ಲಿ ಒಂದು ಸುಸಜ್ಜಿತವಾದ ಕ್ರೀಡಾ ಅಂಕಣ ನಿರ್ಮಾಣ
- ಗ್ರಂಥಾಲಯಗಳಿಲ್ಲದ 330 ಗ್ರಾಮ ಪಂಚಾಯಿತಿಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಗ್ರಂಥಾಲಯಗಳ ಸ್ಥಾಪನೆ. ವಿಶೇಷಚೇತನ ಮಕ್ಕಳಿಗಾಗಿ ರಾಜ್ಯದ 1,000 ಗ್ರಾಮೀಣ ಗ್ರಂಥಾಲಯ ಉನ್ನತೀಕರಣ
- ಉತ್ತರ ಕನ್ನಡ ಜಿಲ್ಲೆಯ ಕೋಡ್ಕಣಿ, ಬೆಳಗಾವಿಯ ಕಣಗಲಾ, ಚಾಮರಾಜನಗರದ ಬದನಗುಪ್ಪೆ, ಕಲಬುರಗಿಯ ಚಿತ್ತಾಪುರ, ತುಮಕೂರಿನ ಬೈರಗೊಂಡನಹಳ್ಳಿ-ಚಿಕ್ಕನಾಯಕನಹಳ್ಳಿ, ಬೀದರ್‌ನ ಹುಮನಾಬಾದ್, ರಾಯಚೂರು ಗ್ರಾಮಾಂತರ, ವಿಜಯಪುರದ ಹೂವಿನ ಹಿಪ್ಪರಗಿ ಮತ್ತು ಚಿತ್ರದುರ್ಗದ ಮೊಳಕಾಲ್ಮುರು ಹೀಗೆ ರಾಜ್ಯದ ವಿವಿಧ ಒಂಬತ್ತು ಸ್ಥಳಗಳಲ್ಲಿ ಕೈಗಾರಿಕಾ ವಸಾಹತು ಸ್ಥಾಪನೆ



ವಿಜಯಪುರ
- ನೂತನ ಮೆಗಾ ಜವಳಿ ಪಾರ್ಕ್ ಸ್ಥಾಪನೆ
- ಗೋಲ್‌ಗುಂಬಜ್ ಅಭಿವೃದ್ಧಿ, ಅತ್ಯಾಧುನಿಕ ಬೆಳಕಿನ ವ್ಯವಸ್ಥೆ

ಧಾರವಾಡ
- ಹುಬ್ಬಳ್ಳಿಯ ಇಎಸ್‌ಐ ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ 50ರಿಂದ 100ಕ್ಕೆ ಹೆಚ್ಚಳ
- ಕೇಂದ್ರದ ಸಹಯೋಗದಲ್ಲಿ ವಿಧಿ ವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆ

ಉತ್ತರ ಕನ್ನಡ
- ಶಿರಸಿಯಲ್ಲಿ ರಾಜ್ಯದ ಪ್ರಥಮ ಪರಿಸರ ವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆ
- ಕುಮಟಾದಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ
- ಅಂಕೋಲದ ಕೇಣಿಯಲ್ಲಿ 30 ಎಂಟಿಪಿಎ ಸಾಮರ್ಥ್ಯದ ಮತ್ತು ಪಾವಿನ ಕುರ್ವೆಯಲ್ಲಿ 14 ಎಂಟಿಪಿಎ ಸಾಮರ್ಥ್ಯದ ಡೀಪ್ ವಾಟರ್ ಸರ್ವಋತು ಗ್ರೀನ್ ಫೀಲ್ಡ್ ಬಂದರು ಅಭಿವೃದ್ಧಿ
- ಹೊನ್ನಾವರದಲ್ಲಿ ಚೆನ್ನಭೈರಾದೇವಿ ಸ್ಮಾರಕ ಉದ್ಯಾನ ನಿರ್ಮಾಣ

ದಾವಣಗೆರೆ
- ದಾವಣಗೆರೆ ಇಎಸ್‌ಐ ಆಸ್ಪತ್ರೆಯ ಹಾಸಿಗೆ ಸಾಮರ್ಥ್ಯ 50ರಿಂದ 100ಕ್ಕೆ ಹೆಚ್ಚಳ
- ಸಂತ ಸೇವಾಲಾಲ್ ಜನ್ಮಸ್ಥಳ ಚನ್ನಗಿರಿ ತಾಲ್ಲೂಕಿನ ಸೂರಗೊಂಡನಕೊಪ್ಪಕ್ಕೆ ₹ 5 ಕೋಟಿ ವೆಚ್ಚದಲ್ಲಿ ಪ್ರವಾಸಿ ಸೌಲಭ್ಯ
- ಚನ್ನಗಿರಿಯ ಹೊದಿಗೆರೆಯಲ್ಲಿರುವ ಷಹಾಜಿ ಮಹಾರಾಜ್ ಸಮಾಧಿ ಸ್ಥಳ ₹ 5 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ

ಉಡುಪಿ
- ಬೈಂದೂರು ತಾಲ್ಲೂಕಿನ ಕಂಬದಕೋಣೆಯಲ್ಲಿ ಸೀ ಫುಡ್ ಪಾರ್ಕ್
- ಮರೀನಾ ಬೀಚ್ ಅಭಿವೃದ್ಧಿ
- ಜಿಲ್ಲಾ ಕ್ರೀಡಾಂಗಣದಲ್ಲಿ ಸುಸಜ್ಜಿತ ಕ್ರೀಡಾ ವಿಜ್ಞಾನ ಕೇಂದ್ರ

ಚಿಕ್ಕಮಗಳೂರು
- ನೂತನ ಮೆಗಾ ಜವಳಿ ಪಾರ್ಕ್ ಸ್ಥಾಪನೆ

ಕೊಡಗು
- ಮುಖ್ಯ ರಸ್ತೆಗಳ ಅಭಿವೃದ್ಧಿಗೆ ₹ 100 ಕೋಟಿ ವಿಶೇಷ ಪ್ಯಾಕೇಜ್

ಕಲಬುರಗಿ
- ನೂತನ ಮೆಗಾ ಜವಳಿ ಪಾರ್ಕ್ ಸ್ಥಾಪನೆ

ಮೈಸೂರು
- ಚಾಮುಂಡಿ ವಿಹಾರ ಕ್ರೀಡಾಂಗಣದ ಬಳಿ ಎರಡೂವರೆ ಎಕರೆ ಜಾಗದಲ್ಲಿ ₹ 10 ಕೋಟಿ ವೆಚ್ಚದಲ್ಲಿ ರಾಜ್ಯ ವಸ್ತು ಸಂಗ್ರಹಾಲಯ, ಕಲಾ ಗ್ಯಾಲರಿ

ಮಂಡ್ಯ
- ಮೈಶುಗರ್ ಕಾರ್ಖಾನೆಯಲ್ಲಿ ಎಥೆನಾಲ್ ಉತ್ಪಾದನಾ ಘಟಕ ಸ್ಥಾಪನೆ
- ಜಿಲ್ಲಾ ಕ್ರೀಡಾಂಗಣದಲ್ಲಿ ಸುಸಜ್ಜಿತ ಕ್ರೀಡಾ ವಿಜ್ಞಾನ ಕೇಂದ್ರ

ರಾಮನಗರ
- ರಾಮದೇವರ ಬೆಟ್ಟದಲ್ಲಿ ರಾಮ ಮಂದಿರ ನಿರ್ಮಾಣ
- ಮಂಚನಬೆಲೆ ಜಲಾಶಯದ ಹಿನ್ನೀರಿನಲ್ಲಿ 10 ಎಕರೆ ಪ್ರದೇಶದಲ್ಲಿ ₹ 10 ಕೋಟಿ ವೆಚ್ಚದಲ್ಲಿ ಜಂಗಲ್ ಲಾಡ್ಜಸ್ ಆ್ಯಂಡ್ ರೆಸಾರ್ಟ್ಸ್ ವತಿಯಿಂದ ರೆಸಾರ್ಟ್

ರಾಯಚೂರು
- ಏಮ್ಸ್ ಮಾದರಿಯ ಆಸ್ಪತ್ರೆ
- ನೂತನ ಮೆಗಾ ಜವಳಿ ಪಾರ್ಕ್ ಸ್ಥಾಪನೆ

ಹಾವೇರಿ
- ಮೀನು ಮರಿ ಉತ್ಪಾದನಾ ಮತ್ತು ಪಾಲನಾ ಕೇಂದ್ರ ಸ್ಥಾಪನೆ
- ಆಧುನಿಕ ತಂತ್ರಜ್ಞಾನ ಆಧಾರಿತ ಹೂವಿನ ಚಿಲ್ಲರೆ ಮಾರುಕಟ್ಟೆ
- ಶಿಗ್ಗಾವಿ ತಾಲ್ಲೂಕಿನ ಬಂಕಾಪುರದಲ್ಲಿರುವ ಪಾಲಿಟೆಕ್ನಿಕ್, ಸರ್ಕಾರಿ ಎಂಜಿನಿಯರಿಂಗ್ ಕಾಲೇಜು ಆಗಿ ಉನ್ನತೀಕರಣ
- ಸವಣೂರಿನಲ್ಲಿ ಹೊಸತಾಗಿ ತಾಯಿ ಮತ್ತು ಮಕ್ಕಳ ಆಸ್ಪತ್ರೆ
- ಬಂಕಾಪುರದಲ್ಲಿ 101 ಕಂಬಗಳ ನಗರೇಶ್ವರ ದೇವಸ್ಥಾನ ಪ್ರದೇಶ ಪ್ರವಾಸಿ ತಾಣವಾಗಿ ಅಭಿವೃದ್ಧಿ

ಬಳ್ಳಾರಿ
- ₹ 100 ಕೋಟಿ ವೆಚ್ಚದಲ್ಲಿ ಪ್ರತಿದಿನ 2 ಲಕ್ಷ ಲೀಟರ್ ಹಾಲು ಸಂಸ್ಕರಣಾ ಸಾಮರ್ಥ್ಯದ ಮೆಗಾ ಡೇರಿ

ತುಮಕೂರು
- ತಿಪಟೂರಿನಲ್ಲಿ ತೋಟಗಾರಿಕಾ ಮಹಾವಿದ್ಯಾಲಯ
- ಚಿಕ್ಕನಾಯಕನಹಳ್ಳಿಯಲ್ಲಿ ಹೊಸ ಪಾಲಿಟೆಕ್ನಿಕ್

ಚಿಕ್ಕಬಳ್ಳಾಪುರ
- ಶಿಡ್ಲಘಟ್ಟದಲ್ಲಿ ₹ 75 ಕೋಟಿ ವೆಚ್ಚದಲ್ಲಿ ಹೈ–ಟೆಕ್ ರೇಷ್ಮೆ ಗೂಡು ಮಾರುಕಟ್ಟೆ
- ಅಂತರರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆ
- ನಂದಿ ಗಿರಿಧಾಮದಲ್ಲಿ ರೋಪ್‌ವೇ ನಿರ್ಮಾಣ ಪ್ರಸಕ್ತ ವರ್ಷ ಪೂರ್ಣ
- ಭೋಗನಂದೀಶ್ವರ ದೇವಾಲಯ ಅಭಿವೃದ್ಧಿ

ವಿಜಯನಗರ
- ಹಂಪಿಯ ವಿಜಯವಿಠಲ ದೇವಾಲಯ ಪುರಂದರ ಮಂಟಪ ಅಭಿವೃದ್ಧಿ, ಅತ್ಯಾಧುನಿಕ ಬೆಳಕಿನ ವ್ಯವಸ್ಥೆ

ಬೆಂಗಳೂರು
- ನಿರ್ಲಕ್ಷಿತ ಪ್ರಾಣಿಗಳಿಗೆ ಸಂಚಾರಿ ಚಿಕಿತ್ಸಾಲಯ
- ತಂತ್ರಜ್ಞಾನ ಆಧಾರಿತ ಹೂವಿನ ಚಿಲ್ಲರೆ ಮಾರುಕಟ್ಟೆ
- ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ₹ 30 ಕೋಟಿ ವೆಚ್ಚದಲ್ಲಿ ಅತ್ಯಾಧುನಿಕ ಸ್ಟಾರ್ಟ್ ಅಪ್ ಪಾರ್ಕ್
- ಟಿನ್ ಫ್ಯಾಕ್ಟರಿಯಿಂದ ಮೇಡಹಳ್ಳಿವರೆಗೆ ₹ 350 ಕೋಟಿ ವೆಚ್ಚದಲ್ಲಿ 5 ಕಿ.ಮೀ ಎಲಿವೇಟೆಡ್ ರಸ್ತೆ ಯಶವಂತಪುರ ರೈಲು ನಿಲ್ದಾಣದಿಂದ ಮತ್ತಿಕೆರೆ ಹಾಗೂ ಬಿಇಎಲ್ ರಸ್ತೆವರೆಗೆ ಇಂಟಗ್ರೇಟೆಡ್ ಮೇಲ್ಸೇತುವೆ
- 40.15 ಕಿ.ಮೀ ಉದ್ದ ಮೆಟ್ರೊ ಮಾರ್ಗ ಕಾರ್ಯಗತ
- ಕಂಠೀರವ ಕ್ರೀಡಾಂಗಣದಲ್ಲಿ ಸುಸಜ್ಜಿತ ಕ್ರೀಡಾ ವಿಜ್ಞಾನ ಕೇಂದ್ರ

ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ಸ್ಥಾಪನೆ

ಬೆಂಗಳೂರು: ಕಿತ್ತೂರು ಕರ್ನಾಟಕ ಭಾಗದ ಅಭಿವೃದ್ಧಿಗೆ ‘ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ’ ಸ್ಥಾಪಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಪ್ರಾದೇಶಿಕ ಅಸಮತೋಲನ ಸರಿಪಡಿಸುವ ಉದ್ದೇಶದಿಂದ ‘ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ’ಯಿಂದ ₹ 5 ಸಾವಿರ ಕೋಟಿ ವೆಚ್ಚದಲ್ಲಿ ಕಾಮಗಾರಿ ಅನುಷ್ಠಾನ ಮಾಡಲಾಗುವುದು ಎಂದು ಪ್ರಸ್ತಾಪಿಸಲಾಗಿದೆ. ಹಿಂದಿನ ಬಜೆಟ್‌ನಲ್ಲಿ ₹ 3 ಸಾವಿರ ಕೋಟಿಯಲ್ಲಿ 3,155 ಕಾಮಗಾರಿ ನಡೆಸಲಾಗಿತ್ತು.

ಹಳೇ ಮಂಗಳೂರು ಬಂದರಿನಲ್ಲಿ ಹೆಚ್ಚುವರಿ ಶಿಪ್‌ಯಾರ್ಡ್ ಕಾರ್ಯಾಚರಣೆ ಆರಂಭಿಸಲಾಗುವುದು. ಇದರಿಂದ ಕರಾವಳಿ ಪ್ರದೇಶದಲ್ಲಿ ಕೈಗಾರಿಕೆ, ಮೀನುಗಾರಿಕೆ ಕ್ಷೇತ್ರದಲ್ಲಿ ಬೆಳವಣಿಗೆ ಆಗಲಿದೆ.

ಪ್ರಧಾನ ಮಂತ್ರಿ ಮತ್ಸ್ಯ ಸಂಪದ ಹಾಗೂ ಸಾಗರಮಾಲಾ ಯೋಜನೆ ಅಡಿ, ಉತ್ತರ ಕನ್ನಡ ಜಿಲ್ಲೆಯ ಮಾಜಾಳಿಯಲ್ಲಿಅತ್ಯಾಧುನಿಕ ಮೀನುಗಾರಿಕೆ ಬಂದರು ನಿರ್ಮಿಸಲು ₹ 275 ಕೋಟಿ ವಿಸ್ತೃತ ಯೋಜನಾ ವರದಿ ತಯಾರಿಸಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಪ್ರವಾಸೋದ್ಯಮ ಉತ್ತೇಜಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಉಡುಪಿ ಜಿಲ್ಲೆಯ ಬೈಂದೂರಿನ ‘ಮರೀನಾ’ ತಾಣ ಅಭಿವೃದ್ಧಿಪಡಿಸಲಾಗುವುದು.

ಗುರುಪುರ ಮತ್ತು ನೇತ್ರಾವತಿ ನದಿಗಳ ಪಾತ್ರದಲ್ಲಿ ಜಲಸಾರಿಗೆ ಸಂಪರ್ಕ ಕಲ್ಪಿಸಲು ಬಾರ್ಜ್ ಸೇವೆ ಆರಂಭಿಸಲಾಗುವುದು. ಬಾಗಲಕೋಟೆ-ಕಂಕಣವಾಡಿ – ಕದಮ್‌ಪುರ, ಕಲಬುರಗಿ– ಸನ್ನತಿ, ಶಿವಮೊಗ್ಗ– ಕೊಗರು–ಶಿಗ್ಲು, ಮಂಗಳೂರು –ಹಂಗಾರಕಟ್ಟೆಯಲ್ಲಿ ನೂತನ ಲಘು ಕಾರ್ಗೊ ಬೋಟ್ ಸೇವೆ ಆರಂಭಿಸಲು ಯೋಜಿಸಲಾಗಿದೆ.

ಕರಾವಳಿ ಪ್ರದೇಶದಲ್ಲಿ ಜನರ ಸುಗಮ ಸಂಚಾರ ಹಾಗೂ ವಾಣಿಜ್ಯ ವ್ಯವಹಾರ ಉತ್ತಮಗೊಳಿಸಲು ಮಂಗಳೂರು– ಕಾರವಾರ–ಗೋವಾ–ಮುಂಬೈ ಜಲಮಾರ್ಗವನ್ನು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿ ಪಡಿಸಲಾಗುವುದು ಎಂದು ಪ್ರಕಟಿಸಲಾಗಿದೆ.

ಆಕಾಂಕ್ಷಿ ತಾಲ್ಲೂಕಿಗೆ ಅನುದಾನ

ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಆರೋಗ್ಯ ಸುಧಾರಣೆಗೆ ₹ 720 ಕೋಟಿ ವೆಚ್ಚ ಮಾಡಲಾಗುವುದು. ಇದೇ ವರ್ಷ ₹ 345 ಕೋಟಿ ವೆಚ್ಚದಲ್ಲಿ, 25 ತಾಲ್ಲೂಕುಗಳಲ್ಲಿ 25 ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ಉಡುಪಿ, ದಕ್ಷಿಣ ಕನ್ನಡ, ಉತ್ತರ ಕನ್ನಡ ಹಾಗೂ ಶಿವಮೊಗ್ಗದಲ್ಲಿ ತಲಾ ಒಂದರಂತೆ ನಾರಾಯಣ ಗುರು ವಸತಿಶಾಲೆ ನಿರ್ಮಿಸಲಾಗುವುದು. ಪ್ರತಿ ಶಾಲೆಗೆ ₹ 18 ಕೋಟಿ ವೆಚ್ಚವಾಗಲಿದೆ. ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ₹ 50 ಕೋಟಿ ವೆಚ್ಚದಲ್ಲಿ 250 ಅಂಗನವಾಡಿ ಕಟ್ಟಡ ನಿರ್ಮಿಸಲಾಗುವುದು. ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜಾರಿಯಲ್ಲಿರುವ (14ರಿಂದ 18 ವರ್ಷದ ಬಾಲಕಿಯರಿಗೆ) ‘ಪೂರಕ ಪೌಷ್ಟಿಕ ಆಹಾರ’ ನೀಡುವ ಯೋಜನೆ ವಿಸ್ತರಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ಅಭಿವೃದ್ಧಿ ಆಕಾಂಕ್ಷಿ 93 ತಾಲ್ಲೂಕಿನಲ್ಲಿ 1,230 ಕೊಠಡಿಗಳ ನಿರ್ಮಾಣ, ಹಳೆಯ ಮತ್ತು ಅಧಿಕ ಮಳೆಯಿಂದ ಹಾನಿಯಾಗಿರುವ 2,777 ಕೊಠಡಿಗಳ ದುರಸ್ತಿ ಮಾಡಲಾಗುವುದು. ಅಧಿಕ ದಾಖಲಾತಿಯ ಶಾಲಾ, ಕಾಲೇಜುಗಳಲ್ಲಿ ಹೆಚ್ಚುವರಿ ಶೌಚಾಲಯ ನಿರ್ಮಿಸಲಾಗುವುದು. ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ 260 ತರಗತಿ ಕೊಠಡಿಗಳ ನಿರ್ಮಿಸಲಾಗುತ್ತಿದ್ದು ಇದಕ್ಕೆ ₹ 632 ಕೋಟಿ ವೆಚ್ಚವಾಗಲಿದೆ ಎಂದು ಪ್ರಸ್ತಾಪಿಸಲಾಗಿದೆ.




ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಗುಣಮಟ್ಟದ ಶಿಕ್ಷಣ, ವಿದ್ಯಾರ್ಥಿಗಳ ಕಲಿಕೆಯ ಮಟ್ಟ ಹೆಚ್ಚಿಸಿ, ಫಲಿತಾಂಶ ಉತ್ತಮ ಪಡಿಸಲು ₹ 135 ಕೋಟಿ ಅನುದಾನ ಮೀಸಲಿಡಲಾಗಿದೆ. 73 ಕರ್ನಾಟಕ ಪಬ್ಲಿಕ್ ಶಾಲೆಗಳು ಮತ್ತು 50 ಆದರ್ಶ ವಿದ್ಯಾಲಯಗಳಲ್ಲಿ ₹ 15 ಕೋಟಿ ವೆಚ್ಚದಲ್ಲಿ ‘ಸೃಷ್ಟಿ’ ಟಿಂಕರಿಂಗ್ ಪ್ರಯೋಗಾಲಯ ಸ್ಥಾಪಿಸಲಾಗುವುದು.

ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಹೊಂದಿಲ್ಲದ 23 ತಾಲ್ಲೂಕುಗಳಲ್ಲಿ ಹೊಸದಾಗಿ ಶಾಲೆ ನಿರ್ಮಿಸಲು ಮತ್ತು ಕಾರ್ಯ ನಿರ್ವಹಿಸುತ್ತಿರುವ 46 ಶಾಲೆಗಳ ಅಭಿವೃದ್ಧಿಗೆ ₹ 100 ಕೋಟಿ ಅನುದಾನ ನೀಡಲಾಗುವುದು.

24,347 ಶಾಲೆಗಳಲ್ಲಿ ₹ 20 ಕೋಟಿ ಅನುದಾನದಲ್ಲಿ ಪುಸ್ತಕ, ಪತ್ರಿಕೆ, ನಿಯತಕಾಲಿಕೆ ಒದಗಿಸುವ ಮೂಲಕ ಗ್ರಂಥಾಲಯಗಳ ಬಲವರ್ಧನೆ ಹಾಗೂ ರೀಡಿಂಗ್ ಕಾರ್ನರ್ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಪಡೆಯುವ ಉದ್ದೇಶದಿಂದ 8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ಜೆ-ಪಾಲ್ ಲ್ಯಾಬ್ ಸಹಯೋಗದಲ್ಲಿ ಪರಿಹಾರಾತ್ಮಕ ಚಟುವಟಿಕೆ ‘ಅಭ್ಯುದಯ’ ಕಾರ್ಯಕ್ರಮ ಅನುಷ್ಠಾನಕ್ಕೆ ತರಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.

ಅಭಿವೃದ್ಧಿ ಆಕಾಂಕ್ಷಿ ತಾಲ್ಲೂಕುಗಳಲ್ಲಿ ಉನ್ನತ ಶಿಕ್ಷಣವನ್ನು ಬಲಪಡಿಸಲು ಒಟ್ಟು ₹ 125 ಕೋಟಿ ಅನುದಾನ ನೀಡಲಾಗುವುದು. ಈ ಅನುದಾನದಲ್ಲಿ ಕೊಠಡಿಗಳು, ಶೌಚಾಲಯಗಳು ಮತ್ತು ವಿಜ್ಞಾನ ಪ್ರಯೋಗಾಲಯ ನಿರ್ಮಿಸಲಾಗುವುದು. ‘ವಿದ್ಯಾವರ್ಧಿನಿ’ ಯೋಜನೆ ಅಡಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳು ಹಾಗೂ ಪಾಲಿಟೆಕ್ನಿಕ್ಗಳಿಗೆ ಸೌಲಭ್ಯ ಹಾಗೂ ಶೈಕ್ಷಣಿಕ ಉಪಕರಣ ಒದಗಿಸಲಾಗುವುದು. ಎಲ್ಲಾ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜುಗಳು, ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಯೋಗ ತರಬೇತಿ ನೀಡಲಾಗುವುದು ಎಂದು ಪ್ರಸ್ತಾಪಿಸಿದ್ದಾರೆ. ಅಭಿವೃದ್ಧಿ ಆಕಾಂಕ್ಷಿ 25 ತಾಲ್ಲೂಕುಗಳಲ್ಲಿ 28 ಹೊಸ ಸಮುದಾಯ ಆರೋಗ್ಯ ಕೇಂದ್ರ ಸ್ಥಾಪಿಸಲಾಗುವುದು. ಇದಕ್ಕೆ ₹ 345 ಕೋಟಿ ಒದಗಿಸಲಾಗುವುದು ಎಂದು ಬಜೆಟ್‌ನಲ್ಲಿ ತಿಳಿಸಲಾಗಿದೆ.




2018ರಿಂದ ಬಿಜೆಪಿ ನೀಡಿದ್ದ ಭರವಸೆಗಳಲ್ಲಿ ಶೇ 90ರಷ್ಟು ಜಾರಿಯಾಗಿಲ್ಲ. ಅದೇ ರೀತಿ ಅನುಷ್ಠಾನದ ಬದ್ಧತೆ ಇಲ್ಲದ ಘೋಷಣೆಗಳ ಪುಸ್ತಕದಂತೆ ಈ ಬಜೆಟ್ ಕಾಣುತ್ತಿದೆ

ಬಿ.ಕೆ. ಹರಿಪ್ರಸಾದ್
ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ



ಬಡವರು, ದುರ್ಬಲ ವರ್ಗದವರು, ಮಹಿಳೆಯರು ಮತ್ತು ಯುವಜನರ ಶ್ರೇಯೋಭಿವೃದ್ಧಿಗೆ ಹಲವು ಯೋಜನೆಗಳಿವೆ. ಮೂಲಸೌಕರ್ಯಗಳಿಗೆ ಒತ್ತು ನೀಡುವುದನ್ನು ಮುಂದುವರಿಸಿದ್ದು, ಇದರಿಂದ ಕರ್ನಾಟಕ ಹೂಡಿಕೆದಾರರ ನೆಚ್ಚಿನ ತಾಣವಾಗಿದೆ.

ಬಿ.ಎಸ್.ಯಡಿಯೂರಪ್ಪ, ಶಾಸಕ



ನಾಡಿನ ಸರ್ವತೋಮುಖ ಅಭಿವೃದ್ಧಿ ಹಾಗೂ ಎಲ್ಲ ವರ್ಗಗಳ ಶ್ರೇಯೋಭಿವೃದ್ಧಿಯ ಆಶಯದೊಂದಿಗೆ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿ ಅವರಿಗೆ ಅಭಿನಂದನೆ

ನಳಿನ್ ಕುಮಾರ್ ಕಟೀಲ್
ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ



ಬಜೆಟ್ ಕಾಗದದ ಮೇಲೆ ಬರೆದ ಸಕ್ಕರೆ ರೀತಿ ಕಾಣುತ್ತಿದೆ. ಸುಮ್ಮನೆ ನೋಡಬೇಕು, ತಿನ್ನಲು ಅಸಾಧ್ಯ. ಹೋಗುವ ಮುನ್ನ ಒಳ್ಳೆಯ ಬಜೆಟ್ ನೀಡಬಹುದಿತ್ತು


ಸಿ.ಎಂ.ಇಬ್ರಾಹಿಂ
ಅಧ್ಯಕ್ಷ, ಜೆಡಿಎಸ್ ರಾಜ್ಯ ಘಟಕ



ಚುನಾವಣಾ ಗಿಮಿಕ್‌ಗಾಗಿ ಬಂಡಲ್ ಬಜೆಟ್ ಇದಾಗಿದೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿರುವ ಜನರನ್ನು ಭೇಟಿಯಾಗಿದ್ದರೆ ವಾಸ್ತವಕ್ಕೆ ಹತ್ತಿರವಿರುವ ಬಜೆಟ್ ಮಂಡಿಸಬಹುದಿತ್ತು

ಪೃಥ್ವಿ ರೆಡ್ಡಿ, ಅಧ್ಯಕ್ಷ, ಎಎಪಿ ರಾಜ್ಯ ಘಟಕ

ಬಜೆಟ್ ಮಿಥ್ಯೆ, ಸತ್ಯ ಮತ್ತು ಅರ್ಧಸತ್ಯ



ವಿಶ್ಲೇಷಣೆ
ಆಶಾ ಕೃಷ್ಣಸ್ವಾಮಿ

ಚುನಾವಣಾ ಹೊಸ್ತಿಲಿನಲ್ಲಿ ಎಲ್ಲಾ ವರ್ಗದ ಮತದಾರರನ್ನು ಸೆಳೆಯಲು ಆಡಳಿತಾರೂಢ ಸರ್ಕಾರವು ಭರಪೂರ ಭರವಸೆಗಳನ್ನು ನೀಡುವುದು ಹಾಗೂ ಹೊಸ ಹೊಸ ಯೋಜನೆಗಳನ್ನು ಪ್ರಕಟಿಸುವುದು ಸಾಮಾನ್ಯ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೂ ಈ ಹಾದಿಯಲ್ಲೇ ಹೆಜ್ಜೆ ಇಟ್ಟಿದ್ದಾರೆ.

ತಮ್ಮ ಸರ್ಕಾರ ಶೋಷಿತರ ಪರವಾಗಿ ಇದೆ. ಅವರ ಧ್ವನಿಯಾಗಿ ಕಾರ್ಯನಿರ್ವಹಿಸುತ್ತದೆ ಎಂಬ ಆಶಾಭಾವನೆಯನ್ನು ಜನರ ಮನದಲ್ಲಿ ಮೂಡಿಸಲು ಮುಂದಾಗುವುದು ನಿಜವಾದ ರಾಜಕೀಯ ತಂತ್ರಗಾರಿಕೆ. ಈ ಹಿಂದಿನ ಎಲ್ಲಾ ಸರ್ಕಾರಗಳೂ ಇದನ್ನು ಪಾಲಿಸಿಕೊಂಡು ಬಂದಿವೆ. ಬೊಮ್ಮಾಯಿ ಅವರೂ ಈ ಸೂತ್ರಕ್ಕೆ ಕಟ್ಟುಬಿದ್ದಿರುವುದು ಸ್ಪಷ್ಟ.

‘ಕೊಡುಗೈ ದಾನಿ’ಯ ಪಾತ್ರವನ್ನು ಬೊಮ್ಮಾಯಿ ಅವರು ಚೆನ್ನಾಗಿಯೇ ನಿಭಾಯಿಸಿದ್ದಾರೆ. ಮಹಿಳೆಯರು, ರೈತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು, ಯುವಕರು ಹಾಗೂ ದುಡಿಯುವ ವರ್ಗದ ಜನರ ಓಲೈಕೆಗೆ ಮುಂದಾಗಿರುವ ಅವರು ಆ ಮೂಲಕ ಸಾಂಪ್ರದಾಯಿಕ ಮತಗಳ ಕ್ರೋಡೀಕರಣ ಕಾರ್ಯಕ್ಕೆ ಭದ್ರ ಅಡಿಪಾಯ ಹಾಕಿದ್ದಾರೆ. ಇದೆಲ್ಲದರ ಜೊತೆಗೆ ರಾಮನಗರದ ರಾಮದೇವರ ಬೆಟ್ಟದಲ್ಲಿ ಭವ್ಯ ರಾಮ ಮಂದಿರ ನಿರ್ಮಿಸುವ ಅಭಿಲಾಷೆಯನ್ನೂ ಬಜೆಟ್‌ನಲ್ಲಿ ವ್ಯಕ್ತಪಡಿಸಿದ್ದಾರೆ.

ತಾನು ಅಧಿಕಾರಕ್ಕೆ ಬಂದರೆ ಗೃಹ ಲಕ್ಷ್ಮಿ ಯೋಜನೆ ಅಡಿಯಲ್ಲಿ ಪ್ರತಿ ಕುಟುಂಬದ ಮನೆ ಒಡತಿಗೆ ತಿಂಗಳಿಗೆ ₹2 ಸಾವಿರ ಸಹಾಯಧನ ನೀಡುವುದಾಗಿ ಹೇಳಿದ್ದ ಕಾಂಗ್ರೆಸ್, ರಾಜಕೀಯ ವಲಯದಲ್ಲಿ ಸಂಚಲನ ಸೃಷ್ಟಿಸಿತ್ತು. ನಂತರ ವರಸೆ ಬದಲಿಸಿದ್ದ ಆ ಪಕ್ಷ ಈ ಯೋಜನೆ ಬಿಪಿಎಲ್ ಕುಟುಂಬದ ಮಹಿಳೆಯರಿಗಷ್ಟೇ ಅನ್ವಯಿಸುತ್ತದೆ ಎಂದು ಹೇಳಿತ್ತು. ಕಾಂಗ್ರೆಸ್‌ನ ಈ ಯೋಜನೆಗೆ ಪ್ರತಿಯಾಗಿ ಬೊಮ್ಮಾಯಿ ಅವರು ‘ಗೃಹಿಣಿ ಶಕ್ತಿ’ ಯೋಜನೆ ಘೋಷಿಸಿದ್ದಾರೆ. ಜೊತೆಗೆ ‘ಶ್ರಮಶಕ್ತಿ ಯೋಜನೆ’ಯನ್ನೂ ಪ್ರಕಟಿಸಿದ್ದಾರೆ. ಇದರ ಅಡಿಯಲ್ಲಿ ಭೂರಹಿತ ಮಹಿಳಾ ಕೃಷಿ ಕಾರ್ಮಿಕರಿಗೆ ₹500 ಸಹಾಯಧನ ನೀಡುವುದಾಗಿಯೂ ಹೇಳಿದ್ದಾರೆ.

ಒಂದು ಲಕ್ಷ ಮಹಿಳೆಯರಿಗೆ ಉಚಿತವಾಗಿ ಕೌಶಲ ತರಬೇತಿ ನೀಡುವುದು, ಶಾಲಾ, ಕಾಲೇಜುಗಳ ವಿದ್ಯಾರ್ಥಿನಿಯರು ಹಾಗೂ ಸಂಘಟಿತ ವಲಯದಲ್ಲಿ ದುಡಿಯುವ ಮಹಿಳೆಯರಿಗೆ ಉಚಿತ ಬಸ್ ಪಾಸ್ ಒದಗಿಸುವುದು, ಸರ್ಕಾರಿ ಕಾಲೇಜುಗಳಲ್ಲಿ ವಿದ್ಯಾರ್ಥಿನಿಯರಿಗೆ ಉಚಿತ ದಾಖಲಾತಿ, ಬೆಂಗಳೂರಿನಲ್ಲಿ ‘ಅವಳು’ ಹೆಸರಿನಡಿ ಶೌಚಾಲಯ ನಿರ್ಮಾಣ, ಅಂಗನವಾಡಿ ಕಾರ್ಯಕರ್ತೆಯರ ಗೌರವ ಧನ ಹೆಚ್ಚಳ, ಸ್ವ ಸಹಾಯ ಗುಂಪುಗಳಿಗೆ ಬಡ್ಡಿರಹಿತ ಸಾಲದಂತಹ ಯೋಜನೆ ಮೂಲಕ ಸರ್ಕಾರ ಮಹಿಳೆಯರನ್ನು ಮೆಚ್ಚಿಸಲೂ ಮುಂದಾಗಿದೆ.

ಭ್ರಷ್ಟಾಚಾರದ ವಿಚಾರ ಮುಂದಿಟ್ಟುಕೊಂಡು ತನ್ನ ವಿರೋಧಿಗಳ ಮೇಲೆ ಗದಾ ಪ್ರಹಾರ ನಡೆಸುವುದರಲ್ಲೇ ಮಗ್ನವಾಗಿರುವ ಕಾಂಗ್ರೆಸ್ ಪಕ್ಷವು ರೈತರನ್ನು ಮರೆತಂತಿದೆ. ಇದನ್ನು ಅರಿತಿರುವ ಬಿಜೆಪಿಯು ಆ ವರ್ಗದ ಮತಗಳನ್ನು ಸೆಳೆಯುವ ಪ್ರಯತ್ನವನ್ನೂ ಮಾಡಿದೆ. ರೈತರಿಗೆ ನೀಡಲಾಗುವ ಬಡ್ಡಿರಹಿತ ಅಲ್ಪಾವಧಿ ಸಾಲದ ಮಿತಿಯನ್ನು ₹3 ಲಕ್ಷದಿಂದ ₹5 ಲಕ್ಷಕ್ಕೆ ಏರಿಕೆ ಮಾಡಿರುವುದು ಇದಕ್ಕೊಂದು ನಿದರ್ಶನ.

ಸರ್ಕಾರಗಳು ಜನಪ್ರಿಯ ಘೋಷಣೆ ಮೂಲಕ ಜನರ ಭಾವನೆಗಳಿಗೆ ಸ್ಪಂದಿಸುವುದು ಸಾಮಾನ್ಯ. ತಾನು ಅಧಿಕಾರಕ್ಕೆ ಬಂದರೆ ಎಲ್ಲರಿಗೂ 200 ಯೂನಿಟ್ ವಿದ್ಯುತ್ ಉಚಿತವಾಗಿ ನೀಡುವುದಾಗಿ ಕಾಂಗ್ರೆಸ್ ಘೋಷಿಸಿತ್ತು. ಅದನ್ನು ಟೀಕಿಸಿದ್ದ ಬಿಜೆಪಿ, ಬಜೆಟ್‌ನಲ್ಲಿ ಉಚಿತ ವಿದ್ಯುತ್ ನೀಡುವ ಕುರಿತು ಯಾವುದೇ ಘೋಷಣೆ ಮಾಡಿಲ್ಲ. ಆ ಮೂಲಕ ಬೊಮ್ಮಾಯಿ ಸರ್ಕಾರ ಹಳೆಯ ಸಂಪ್ರದಾಯ ಮುರಿದಿದೆ. ಯಾವುದೇ ಯೋಜನೆಗೂ ವ್ಯಕ್ತಿಯ ಹೆಸರು ಇಟ್ಟಿಲ್ಲ. ಇದು ಮೆಚ್ಚುವಂತಹದ್ದು.

‘ಸರ್ವೇ ಜನಾಃ ಸುಖಿನೋ ಭವಂತು’ ಎಂದು ಹೇಳಿರುವ ಬಿಜೆಪಿಯು ಅಲ್ಪಸಂಖ್ಯಾತ ಸಮುದಾಯದವರನ್ನು ಮೆಚ್ಚಿಸುವ ಪ್ರಯತ್ನವನ್ನೂ ಮಾಡಿದೆ. ಮುಸ್ಲಿಂ ಸಮುದಾಯದ ಮತದಾರರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ದಿಸೆಯಲ್ಲಿ ಕೆಲಸ ಮಾಡುವಂತೆ ಆರ್‌ಎಸ್‌ಎಸ್ ಸರ ಸಂಘಚಾಲಕ ಮೋಹನ್ ಭಾಗವತ್ ಹಾಗೂ ಪ್ರಧಾನಿ ಮೋದಿ ಅವರು ರಾಜ್ಯ ಬಿಜೆಪಿ ನಾಯಕರಿಗೆ ಸಲಹೆ ನೀಡಿದ್ದರು. ಹೀಗಾಗಿ ಬೊಮ್ಮಾಯಿ ಅವರು ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ವಿದ್ಯಾರ್ಥಿ ವೇತನ ಯೋಜನೆ ಪ್ರಕಟಿಸಿದ್ದಾರೆ.

ಚುನಾವಣೆ ಸನ್ನಿಹಿತವಾಗುತ್ತಿದೆ. ಇಂತಹ ಸಮಯದಲ್ಲಿ ಕಮಲದ ಚಿಹ್ನೆಗೇ ಮತ ಹಾಕುವಂತೆ ಮುಂದಿನ 100 ದಿನಗಳಲ್ಲಿ ಸಮಾಜದ ಎಲ್ಲಾ ಸ್ತರದ ಮತದಾರರನ್ನು ಓಲೈಸುವುದು ಬಿಜೆಪಿ ಪಾಲಿಗೆ ಅತ್ಯಂತ ತ್ರಾಸದಾಯಕ ಕೆಲಸವಾಗಬಹುದು.

ಉದ್ಯಾನನಗರಿಯ ನಾಗರಿಕ ಸಮಸ್ಯೆಗಳಿಗೆ ಸ್ಪಂದಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡದೆ ಸಾಕಷ್ಟು ಟೀಕೆಗೆ ಗುರಿಯಾಗಿದ್ದ ಬೊಮ್ಮಾಯಿ ಸರ್ಕಾರವು ಬಜೆಟ್‌ನಲ್ಲಿ ಬೆಂಗಳೂರಿನ ಅಭಿವೃದ್ಧಿಯ ಜಪ ಮಾಡಿದೆ. ಬಿಜೆಪಿ ಸರ್ಕಾರದ ಬಹುಪಾಲು ಘೋಷಣೆಗಳು ಜಾರಿಯಾಗುತ್ತವೆಯೇ ಇಲ್ಲವೇ ಎಂಬುದರ ಕುರಿತು ರಾಜ್ಯದ ಜನ ಯೋಚಿಸುವ ಮೊದಲೇ ಚುನಾವಣೆ ಸಮೀಪಿಸುತ್ತದೆ. ಅಲ್ಲಿಯವರೆಗೂ ಬಜೆಟ್‌ನಲ್ಲಿ ನೀಡಲಾಗಿರುವ ಭರವಸೆಗಳು ಭರವಸೆಯಾಗಿಯೇ ಉಳಿಯುತ್ತವೆ.

ಲೇಖಕಿ: ಪತ್ರಕರ್ತೆ

ಅಪರಿಚಿತ ವಸ್ತುಗಳ 'ಮೂಲ' ಗೊತ್ತಾಗಿಲ್ಲ: ಬೈಡನ್

ವಾಷಿಂಗ್ಟನ್ (ಪಿಟಿಐ): ದೇಶದ ವಾಯು ಪ್ರದೇಶಕ್ಕೆ ಅತಿಕ್ರಮ ಪ್ರವೇಶ ಮಾಡಿದ ಕಾರಣಕ್ಕೆ ಯುದ್ಧ ವಿಮಾನಗಳ ಮೂಲಕ ಹೊಡೆದುರುಳಿಸಿದ ಮೂರು ನಿಗೂಢ ವಸ್ತುಗಳಿಗೂ ಮತ್ತು ಚೀನಾದ ಶಂಕಿತ ಬೇಹುಗಾರಿಕೆ ಬಲೂನ್‌ಗೂ ಸಂಬಂಧವಿಲ್ಲ ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಶ್ವೇತಭವನದಲ್ಲಿ ಮಾತನಾಡಿದ ಅವರು, ಮೂರು ನಿಗೂಢ ವಸ್ತುಗಳು ಬಹುತೇಕ ಖಾಸಗಿ ಕಂಪನಿಗಳು, ಸಂಶೋಧನಾ ಸಂಸ್ಥೆಗಳಿಗೆ ಸೇರಿದ್ದಾಗಿರಬಹುದು. ಅಮೆರಿಕ, ಕೆನಡಾ ಸೇನೆಯು ನಿಗೂಢ ವಸ್ತುಗಳ ಅವಶೇಷಗಳ ಸಂಗ್ರಹದಲ್ಲಿ ತೊಡಗಿದೆ ಎಂದರು.

ಕ್ಷಮೆ ಕೇಳಲ್ಲ: ಅಮೆರಿಕವು ಚೀನಾ ಜತೆಗೆ ಹೊಸ ಶೀತಲ ಸಮರ ಎದುರು ನೋಡುತ್ತಿಲ್ಲವೆಂದು ಒತ್ತಿಹೇಳಿರುವ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು, ಇತ್ತೀಚೆಗೆ ದೇಶದ ವಾಯು ಪ್ರದೇಶದಲ್ಲಿ ಕಂಡುಬಂದ ಬೇಹುಗಾರಿಕೆ ಶಂಕಿತ ಚೀನಿ ಬಲೂನು ಅನ್ನು ವಾಯುಪಡೆ ಮೂಲಕ ಹೊಡೆದುರುಳಿಸಿದ ತಮ್ಮ ನಿರ್ಧಾರಕ್ಕೆ ಯಾವುದೇ ಕ್ಷಮೆಯಾಚಿಸುವುದಿಲ್ಲ ಎಂದು ಹೇಳಿದ್ದಾರೆ.

ಇಸ್ತಾಂಬುಲ್‌ನಲ್ಲೂ ಭೂಕಂಪ: ತಜ್ಞರ ಎಚ್ಚರಿಕೆ

ಇಸ್ತಾಂಬುಲ್ (ಎಎಫ್‌ಪಿ): ಟರ್ಕಿಯ ಆಗ್ನೇಯ ಭಾಗದ 11 ಪ್ರಾಂತ್ಯಗಳು ಮತ್ತು ವಾಯವ್ಯ ಸಿರಿಯಾದಲ್ಲಿ ಸಾವಿರಾರು ಜನರನ್ನು ಬಲಿತೆಗೆದುಕೊಂಡು, ಲಕ್ಷಾಂತರ ಬದುಕು ಬೀದಿಪಾಲಾಗಿಸಿದ 7.8 ತೀವ್ರತೆಯ ಪ್ರಬಲ ಭೂಕಂಪ ಟರ್ಕಿಯ ಅತಿ ದೊಡ್ಡ ನಗರ ಇಸ್ತಾಂಬುಲ್‌ನಲ್ಲೂ ಸಂಭವಿಸುವ ಸಾಧ್ಯತೆ ಇದೆ ಎಂದು ತಜ್ಞರು ಎಚ್ಚರಿಸಿದ್ದಾರೆ.

ಇಸ್ತಾಂಬುಲ್‌ನಲ್ಲಿ ಸದ್ಯ 1.60 ಕೋಟಿ ಜನಸಂಖ್ಯೆ ಇದೆ. 2030ರ ವೇಳೆಗೆ ಈ ನಗರದ ಜನಸಂಖ್ಯೆ 2 ಕೋಟಿಗೆ ಏರಿಕೆಯಾಗುವ ಅಂದಾಜು ಇದೆ. ಕಂಪನಕ್ಕೆ ಕಾರಣವಾಗುವಂತಹ ಪದರಗಳ ಸಂರಚನೆಗಳು ಈ ನಗರದ ಭೂಗರ್ಭದಲ್ಲಿದೆ. ಭೂಕಂಪ ವಿಪತ್ತು ಘಟಿಸಿದರೆ, ಅಪಾರ ಸಾವು–ನೋವು, ಭಾರಿ ಆಸ್ತಿ ಹಾನಿಯಾಗುವ ಆತಂಕವನ್ನು ತಜ್ಞರು ಹೊರ ಹಾಕಿದ್ದಾರೆ. ನಗರ, ಪಟ್ಟಣಗಳಲ್ಲಿನ ಕಳಪೆ ಕಟ್ಟಡಗಳಿಂದ ಜನರನ್ನು ಸ್ಥಳಾಂತರಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಸರ್ಕಾರ ತೋರಿದರೆ ಮಾತ್ರ ಭವಿಷ್ಯದಲ್ಲಿ ಮಾರಣಹೋಮ ತಡೆಯಬಹುದು ಎಂದು ನಗರ ತಜ್ಞ ಮುರತ್ ಗುನಿ ಹೇಳಿದ್ದಾರೆ.

ಭೂಕಂಪ: 11ನೇ ದಿನ ನಾಲ್ವರ ರಕ್ಷಣೆ



ಟರ್ಕಿಯ ದಕ್ಷಿಣ ಹತಾಯ್ ಪ್ರಾಂತ್ಯದಲ್ಲಿ ಭೂಕಂಪದಿಂದ ಸಂತ್ರಸ್ತರಾದ ಜನರು ಶುಕ್ರವಾರ ಸಮನ್‌ದಾಗ್ ಪಟ್ಟಣದಲ್ಲಿ ಉಚಿತವಾಗಿ ನೀಡಲಾಗುತ್ತಿದ್ದ ಬ್ರೆಡ್ ಪಡೆಯಲು ಸರದಿಯಲ್ಲಿ ನಿಂತಿದ್ದರು – ಎಎಫ್‌ಪಿ ಚಿತ್ರ

ಅದಾನಾ, ಅಂಟಾಕ್ಯಾ (ಟರ್ಕಿ) (ಎಪಿ/ಎಎಫ್‌ಪಿ): ಭೀಕರ ಭೂಕಂಪದಿಂದ ಭಾರಿ ಹಾನಿಯಾಗಿರುವ ಟರ್ಕಿಯಲ್ಲಿ ದುರಂತ ನಡೆದ 11ನೇ ದಿನ ಅಂಟಾಕ್ಯಾ ನಗರದಲ್ಲಿ ಅವಶೇಷಗಳಡಿ ಸಿಲುಕಿದ್ದ 14 ವರ್ಷದ ಒಬ್ಬ ಬಾಲಕ, ಒಬ್ಬ ಮಹಿಳೆ ಮತ್ತು ಇಬ್ಬರು ಪುರುಷರನ್ನು ಶುಕ್ರವಾರ ರಕ್ಷಿಸಲಾಗಿದೆ.

ಟರ್ಕಿ ಮತ್ತು ಸಿರಿಯಾದಲ್ಲಿ ಫೆ.6ರಂದು 7.8ರಷ್ಟು ತೀವ್ರತೆಯ ಭೂಕಂಪ ಸಂಭವಿಸಿತ್ತು. ದುರಂತ ಸಂಭವಿಸಿದ 260 ಗಂಟೆಗಳ ನಂತರ, ಓಸ್ಮನ್ ಎಂಬ ಬಾಲಕನನ್ನು ರಕ್ಷಿಸಲಾಗಿದೆ ಎಂದು ಆರೋಗ್ಯ ಸಚಿವ ಫಹ್ರೆಟಿನ್ ಕೋಕಾ ಟ್ವಿಟರ್‌ನಲ್ಲಿ ತಿಳಿಸಿದ್ದಾರೆ.

ಹತಾಯ್ ಪ್ರಾಂತ್ಯದ ಅಂಟಾಕ್ಯಾದ ಆಸ್ಪತ್ರೆಗೆ ಬಾಲಕನನ್ನು ಸ್ಟ್ರೆಚರ್ ಮೇಲೆ ಕರೆಯೊಯ್ಯುತ್ತಿರುವ ಚಿತ್ರವನ್ನು ಸಚಿವರು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಗುರುವಾರ ತಡರಾತ್ರಿ ಕುಸಿದ ಕಟ್ಟಡದಿಂದ 17 ಶವಗಳನ್ನು ಹೊರತೆಗೆಯುವಾಗ ರಕ್ಷಣಾ ಸಿಬ್ಬಂದಿಗೆ, ಅದೇ ಕಟ್ಟಡದಲ್ಲಿ ಬಾಲಕ ಜೀವಂತವಿರುವ ಸುಳಿವು ಸಿಕ್ಕಿತ್ತು. ಅವಶೇಷಗಳಡಿ ಕೇಳಿಸುತ್ತಿದ್ದ ಶಬ್ದದ ಜಾಡು ಹಿಡಿದು, ಬಾಲಕನನ್ನು ರಕ್ಷಿಸಲಾಯಿತು. ಇದಾದ ಒಂದು ತಾಸಿನಲ್ಲಿ ಅದೇ ಕಟ್ಟಡದ ಅವಶೇಷಗಳಡಿಯಿಂದ 26 ವರ್ಷದ ಯುವಕ ಮೆಹ್ಮೆಟ್ ಅಲಿ ಸಕಿರೊಗ್ಲು ಮತ್ತು 33 ವರ್ಷದ ಮುಸ್ತಾಫಾ ಅವ್ಸಿ ಎಂಬುವವರನ್ನು ಸುರಕ್ಷಿತವಾಗಿ ಹೊರತರಲಾಯಿತು ಎಂದು 'ದಿ ಡಿಎಚ್‌ಎ' ಸುದ್ದಿ ಸಂಸ್ಥೆ ವರದಿ ಮಾಡಿದೆ.

ಕಹ್ರಾಮನ್ಮರಸ್‌ನಲ್ಲಿ ಕಟ್ಟಡದ ಅವಶೇಷಗಡಿ ಸಿಲುಕಿದ್ದ ಎರಡು ಮಕ್ಕಳ ತಾಯಿ, 29 ವರ್ಷದ ನೆಸ್ಲಿಹಾನ್ ಕಿಲಿಕ್ ಅವರನ್ನು ದುರಂತ ನಡೆದ 258 ಗಂಟೆಗಳ ನಂತರ ಗುರುವಾರ ತಡರಾತ್ರಿ ರಕ್ಷಿಸಲಾಯಿತು. ಫೋರ್ಕ್‌ಲಿಫ್ಟ್ ಆಪರೇಟರ್, ಅವಶೇಷಗಳಿಂದ ಆವರಿಸಿದ್ದ ಹಾಸಿಗೆ ಎತ್ತಿದಾಗ ಮಹಿಳೆಯ ಕೈ ಚಲನೆಯನ್ನು ಗಮನಿಸಿ ರಕ್ಷಿಸಲಾಯಿತು. ಮಗಳು ಬದುಕಿರುವ ನಿರೀಕ್ಷೆಯಲ್ಲಿ ಆಕೆಯ ತಂದೆ ಭಗ್ನ ಕಟ್ಟಡದ ಹೊರಗೆ ಕಾಯುತ್ತಿದ್ದರು. ಮಗಳನ್ನು ಜೀವಂತ ಕಂಡಾಗ ಅವರ ಕಣ್ಣಾಲಿಗಳು ತುಂಬಿಬಂದವು. ಕಾಣೆಯಾಗಿರುವ ಕಿಲಿಕ್ ಅವರ ಪತಿ ಮತ್ತು ಮಕ್ಕಳಿಗೆ ಶೋಧ ನಡೆಯುತ್ತಿದೆ.

ಈ ದುರಂತದಲ್ಲಿ ಟರ್ಕಿ ಮತ್ತು ಸಿರಿಯಾದಲ್ಲಿ 42,000ಕ್ಕೂ ಹೆಚ್ಚು ಜನರು ಬಲಿಯಾಗಿದ್ದಾರೆ. ಅವಶೇಷಗಳಡಿ ಶವಗಳು ಸಿಗುತ್ತಲೇ ಇದ್ದು, ದಿನದಿಂದ ದಿನಕ್ಕೆ ಸಾವಿನ ಸಂಖ್ಯೆ ಏರುತ್ತಿದೆ. ಹತ್ತಾರು ಸಾವಿರ ಜನರು ಗಾಯಗೊಂಡಿದ್ದಾರೆ. ಸೂರು, ಮೂಲಸೌಕರ್ಯಗಳಿಲ್ಲದೆ ಲಕ್ಷಾಂತರ ಜನರು, ರಕ್ತ ಹೆಪ್ಪುಗಟ್ಟಿಸುವ ವಾತಾವರಣದಲ್ಲಿ ಬೀದಿ ಬದಿ ಜೀವಿಸುತ್ತಿದ್ದಾರೆ.

ಭೂಕಂಪವು ಟರ್ಕಿಯ 11 ಪ್ರಾಂತ್ಯಗಳಲ್ಲಿ ಭಾರಿ ಹಾನಿ ಮಾಡಿದೆ. ಅದಾನಾ, ಕಿಲಿಸ್ ಮತ್ತು ಸ್ಯಾನ್ಲಿಯುರ್ಫಾ ಪ್ರಾಂತ್ಯಗಳಲ್ಲಿ ರಕ್ಷಣಾ ಕಾರ್ಯ ಬಹುತೇಕ ಪೂರ್ಣವಾಗಿದೆ ಎಂದು ಟರ್ಕಿ ಅಧಿಕಾರಿಗಳು ಹೇಳಿದ್ದಾರೆ.

ಅವಶೇಷಗಡಿ ಸಿಲುಕಿ ಬದುಕುಳಿದವರಲ್ಲಿ ಬಹುತೇಕರನ್ನು ರಕ್ಷಣಾ ತಂಡಗಳು ಸುರಕ್ಷಿತವಾಗಿ ಹೊರತಂದಿವೆ.

'ರಷ್ಯಾ ತೈಲ ಖರೀದಿ: ಭಾರತದ ಕ್ರಮದಿಂದ ತೊಂದರೆ ಇಲ್ಲ'

ನವದೆಹಲಿ (ಪಿಟಿಐ): 'ಭಾರಿ ಚೌಕಾಶಿ ಮೂಲಕ ರಷ್ಯಾದಿಂದ ಕಡಿಮೆ ಬೆಲೆಯಲ್ಲಿ ಕಚ್ಚಾ ತೈಲ ಖರೀದಿ ಮಾಡುವ ಭಾರತದ ನಿರ್ಧಾರದಿಂದ ಅಮೆರಿಕಕ್ಕೆ ಯಾವುದೇ ತೊಂದರೆ ಇಲ್ಲ' ಎಂದು ಅಧ್ಯಕ್ಷ ಜೊ ಬೈಡನ್ ಆಡಳಿತದ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಿಟಿಐ ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಈ ವಿಷಯ ತಿಳಿಸಿರುವ ಇಂಧನ ಸಂಪನ್ಮೂಲ ಇಲಾಖೆಯ ಸಹಾಯಕ ಕಾರ್ಯದರ್ಶಿ ಜೆಫ್ರಿ ಆರ್.ಪ್ಯಾಟ್, 'ತನ್ನ ಇಂಧನ ಭದ್ರತೆಗೆ ಸಂಬಂಧಿಸಿ ಭಾರತ ತೆಗೆದುಕೊಳ್ಳುತ್ತಿರುವ ನಿರ್ಧಾರಗಳ ಬಗ್ಗೆ ಅಧ್ಯಕ್ಷ ಜೊ ಬೈಡನ್ ಆಡಳಿತಕ್ಕೆ ತೃಪ್ತಿ ಇದೆ' ಎಂದಿದ್ದಾರೆ.

'ತೈಲ ಮಾರಾಟದಿಂದ ರಷ್ಯಾಕ್ಕೆ ಸಿಗುತ್ತಿರುವ ಆದಾಯದಲ್ಲಿ ಇಳಿಕೆಯಾಗಬೇಕು ಎಂಬುದು ಜಿ–7 ಗುಂಪಿನ ರಾಷ್ಟ್ರಗಳ ನೀತಿಯಾಗಿದೆ. ಈಗ, ಕಡಿಮೆ ಬೆಲೆಯಲ್ಲಿಯೇ ರಷ್ಯಾ ತೈಲವನ್ನು ಖರೀದಿ ಮಾಡುತ್ತಿರುವ ಭಾರತದ ನಡೆ ನಮ್ಮ ಈ ನೀತಿಗೆ ಪೂರಕವಾಗಿಯೇ ಇದೆ' ಎಂದು ಪ್ಯಾಟ್ ಹೇಳಿದ್ದಾರೆ.

ರಷ್ಯಾ ತೈಲ ಖರೀದಿಯನ್ನು ಹೆಚ್ಚಿಸುತ್ತಿರುವ ಭಾರತದ ಕ್ರಮದ ಬಗ್ಗೆ ಬೈಡನ್ ಆಡಳಿತವು ಇದೇ ಮೊದಲ ಬಾರಿಗೆ ತನ್ನ ಸ್ಪಷ್ಟ ನಿಲುವು ಹೊರಹಾಕಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಅಮೆರಿಕಕ್ಕೆ ಹೊಸ ಪೀಳಿಗೆ ನಾಯಕತ್ವ ಅಗತ್ಯ: ನಿಕ್ಕಿ ಹ್ಯಾಲೆ


ವಾಷಿಂಗ್ಟನ್ (ಪಿಟಿಐ): ಅಮೆರಿಕಕ್ಕೆ ಈಗ ಹೊಸ ಪೀಳಿಗೆಯ ನಾಯಕತ್ವದ ಅಗತ್ಯವಿದೆ ಎಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣಾ ಪ್ರಚಾರ ಆರಂಭಿಸಿರುವ ರಿಪಬ್ಲಿಕನ್ ಪಕ್ಷದ ನಿಕ್ಕಿ ಹ್ಯಾಲೆ ಪ್ರತಿಪಾದಿಸಿದ್ದಾರೆ.

'ನಮ್ಮಲ್ಲಿ ಹಲವು ರಾಜಕಾರಣಿಗಳಿದ್ದಾರೆ. ಆದರೆ, ಆಡಳಿತಾವಧಿ ಮಿತಿ ನಿಗದಿಪಡಿಸಿಕೊಳ್ಳುವುದು ಅಗತ್ಯವಿದೆ. 75 ವರ್ಷ ಮೀರಿದ ಚುನಾಯಿತ ಸದಸ್ಯರ ಆಡಳಿತ ಸಾಮರ್ಥ್ಯ ಪರೀಕ್ಷೆಯೂ ಆಗಬೇಕಾಗಿದೆ' ಎಂದು ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದರು.

ಆದರೆ, ಶ್ವೇತಭವನ ಈ ಮಾತಿಗೆ ಸಹಮತ ವ್ಯಕ್ತಪಡಿಸಿಲ್ಲ. ನಾವು ಇಂತಹ ಮಾದರಿಯ ವಾಗ್ದಾಳಿ ಹಿಂದೆಯೂ ಕೇಳಿದ್ದೇವೆ ಎಂದು ಶ್ವೇತ ಭವನದ ಮಾಧ್ಯಮ ಕಾರ್ಯದರ್ಶಿ ಕರ್ರೈನ್ ಜೀನ್ ಪಿಯರ್ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಹೇಳಿರುವ ಡೊನಾಲ್ಡ್ ಟ್ರಂಪ್ ಮತ್ತು ಹಾಲಿ ಅಧ್ಯಕ್ಷ ಜೋ ಬೈಡನ್ ಇಬ್ಬರೂ 75 ವರ್ಷ ಮೀರಿದವರಾಗಿದ್ದಾರೆ.

ಅಮೆರಿಕಕ್ಕೆ ಹೊಸ ಪೀಳಿಗೆಯ ನಾಯಕತ್ವ ಈಗಿನ ಅಗತ್ಯವಾಗಿದೆ. ಯಥಾಸ್ಥಿತಿಯನ್ನು ಮೀರಿ ನಡೆಯಬೇಕಾಗಿದೆ. ನಾವು ಭವಿಷ್ಯದ ಚಿಂತನೆ ನಡೆಸಲು ಆರಂಭಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,036
ಇಂದಿನ ಅಂತ್ಯ	17,944
▼	92
ದಿನದ ಕನಿಷ್ಠ	17,884

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1710 (1700)
ಸೋಯಾ (ರಿಫೈನ್ಡ್)	₹1160 (1165)
ಸೂರ್ಯಕಾಂತಿ (ರಿಫೈನ್ಡ್)	₹1160 (1170)
ಪಾಮೋಲಿನ್	₹970 (965)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	₹16000-20000
2ನೇ ದರ್ಜೆ	₹12000-15000

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹135
ಗುಡ್ ಲಾಟ್	₹130

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15400
ಎಸಿ	₹7420
ಆರ್‌ಪಿ	₹10600
ಆರ್‌ಸಿ	₹5100

ಮುಂಬೈ ಧಾರಣೆ

ಶೇಂಗಾ

17–2-2023

ಜಾವಾ 70/80(ಹೊಸ)	12350-12400
ಜಾವಾ 80/90(ಹೊಸ)	11350-11400
ದಪ್ಪ ಮಧ್ಯಪ್ರದೇಶ(ಹೊಸ)	11350-11200
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1710)
ಒಂದು ವಾರದ ಡೆಲಿವರಿ	1715 (1705)
ಸೋಯಾ ಕಚ್ಚಾ	1060 (1070)
ಪಾಮ್ ವಾರದ ಡೆಲಿವರಿ	968 (963)
ಸೂರ್ಯಕಾಂತಿ ಎಣ್ಣೆ ಕಚ್ಚಾ	1050 (1060)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

55,900 (56,150)

ಬೆಳ್ಳಿ ಕೆ.ಜಿ 64,450 (65,350)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಸಾಲ ತಗ್ಗಿಸಬೇಕು, ವರಮಾನ ಹೆಚ್ಚಿಸಬೇಕು



ವಿಶ್ಲೇಷಣೆ

ಸಾರ್ಥಕ್ ಪ್ರಧಾನ್

ಮುಂಬರುವ ಆರ್ಥಿಕ ವರ್ಷದಲ್ಲಿ ರಾಜ್ಯ ಸರ್ಕಾರವು ವಿತ್ತೀಯ ಕೊರತೆಯನ್ನು ರಾಜ್ಯದ ಒಟ್ಟು ಆಂತರಿಕ ಉತ್ಪಾದನೆಯ (ಜಿಎಸ್‌ಡಿಪಿ) ಶೇಕಡ 2.6ಕ್ಕೆ ಹಾಗೂ ಸಾಲಗಳನ್ನು ಶೇ 24.2ಕ್ಕೆ ಮಿತಿಗೊಳಿಸಬೇಕು ಎಂಬ ಗುರಿಯನ್ನು ಹೊಂದಿದೆ. ₹ 402 ಕೋಟಿಯ ಮಿಗತೆ ವರಮಾನ ಹೊಂದುವ ಗುರಿಯನ್ನೂ ಇರಿಸಿಕೊಂಡಿದೆ. ಇವೆಲ್ಲವೂ ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯ್ದೆಯ ಪರಿಧಿಯೊಳಗೇ ಇವೆ. ವಿತ್ತೀಯ ಕೊರತೆಯು 2020–21ರಿಂದ ನಿರಂತರವಾಗಿ ಕಡಿಮೆ ಆಗುತ್ತಿದೆ. ರಾಜ್ಯ ಸರ್ಕಾರವು ವಿತ್ತೀಯ ನಿರ್ವಹಣೆಯನ್ನು, ಕೊರತೆಯನ್ನು ತಗ್ಗಿಸುವುದನ್ನು ಬದ್ಧತೆಯಾಗಿ ಇರಿಸಿಕೊಂಡಿದೆ ಎಂಬುದನ್ನು ಇದು ತೋರಿಸುತ್ತದೆ.

ರಾಜ್ಯದ ವರಮಾನವು ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 6.38ರಷ್ಟು ಹೆಚ್ಚಾಗುವ ನಿರೀಕ್ಷೆ ಇದೆ. ಆದರೆ ಈಗಿನ ಹಣದುಬ್ಬರ ಪ್ರಮಾಣ ಗಮನಿಸಿದರೆ ಈ ಏರಿಕೆಯು ಕಡಿಮೆ. 2022–23ರ ಪರಿಷ್ಕೃತ ಅಂದಾಜಿನ ಅನ್ವಯ ರಾಜ್ಯದ ಸ್ವಂತ ತೆರಿಗೆ ವರಮಾನವು ಬಜೆಟ್ ಅಂದಾಜಿಗಿಂತ ಶೇ 17ರಷ್ಟು ಹೆಚ್ಚಿರಲಿದೆ. ಇದು ಶ್ಲಾಘನೆಗೆ ಅರ್ಹ. ಜಿಎಸ್‌ಟಿ, ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಅಬಕಾರಿ ಸಂಗ್ರಹ ಉತ್ತಮವಾಗಿದ್ದುದು ಇದಕ್ಕೆ ಕಾರಣವಾಗಿರಬಹುದು. ಸ್ವಂತ ತೆರಿಗೆ ವರಮಾನ ಸಂಗ್ರಹವು ಹೆಚ್ಚಾಗಿದ್ದರೂ, ಜಿಎಸ್‌ಡಿಪಿ ಜೊತೆ ಹೋಲಿಸಿದರೆ ಅದು ಕೋವಿಡ್ ಪೂರ್ವದ ಮಟ್ಟಕ್ಕಿಂತ ಕಡಿಮೆ ಇರುವುದು ಗೊತ್ತಾಗುತ್ತದೆ. ಅಂದರೆ ರಾಜ್ಯವು ತೆರಿಗೆ ವರಮಾನ ಸಂಗ್ರಹ ಹೆಚ್ಚಿಸಿಕೊಳ್ಳಲು ಗಮನ ನೀಡಬೇಕು.

ತೆರಿಗೆ ಮಾತ್ರವಲ್ಲದೆ ರಾಜ್ಯಗಳು ತಾವು ನೀಡುವ ಸೇವೆಗಳು ಹಾಗೂ ಮಾರಾಟ ಮಾಡುವ ಉತ್ಪನ್ನಗಳಿಗೆ ಶುಲ್ಕ ವಿಧಿಸಿ ವರಮಾನ ಸಂಗ್ರಹಿಸಬಹುದು. ವಿದ್ಯುತ್ ಶುಲ್ಕ, ಅರಣ್ಯ ಉತ್ಪನ್ನಗಳಿಗೆ ಶುಲ್ಕ ಇತ್ಯಾದಿಗಳನ್ನು ಉದಾಹರಣೆಯಾಗಿ ಇಲ್ಲಿ ಹೇಳಬಹುದು. 2023–24ರಲ್ಲಿ ತೆರಿಗೆ ಹೊರತುಪಡಿಸಿದ ವರಮಾನವು 2021–22ಕ್ಕೆ ಹೋಲಿಸಿದರೆ ಶೇ 6.6ರಷ್ಟು ಕಡಿಮೆ ಆಗುವ ಅಂದಾಜು ಇದೆ. ಇದು ಕಳವಳಕಾರಿ. ಜಿಎಸ್‌ಡಿಪಿ ಜೊತೆ ಹೋಲಿಸಿದರೆ ಇದು 2023–27ರ ನಡುವಿನ ಅವಧಿಯಲ್ಲಿ ಶೇ 0.5ಕ್ಕಿಂತ ಕಡಿಮೆ ಇರುವ ಸಾಧ್ಯತೆ ಇದೆ. ತೆರಿಗೆ ಹೊರತುಪಡಿಸಿದ ವರಮಾನ ತಂದುಕೊಡುವ ಶುಲ್ಕಗಳನ್ನು ಹಲವು ವರ್ಷಗಳಿಂದ ಪರಿಷ್ಕರಿಸದೆ ಇರುವುದು ವರಮಾನ ನಷ್ಟಕ್ಕೆ ಕಾರಣವಾಗಿದೆ. ಸರ್ಕಾರವು ತೆರಿಗೆ ಹೊರತುಪಡಿಸಿದ ವರಮಾನ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಇನ್ನಷ್ಟು ಪ್ರಯತ್ನ ನಡೆಸಬೇಕು.

//ರಾಜಸ್ವ ಸ್ವೀಕೃತಿಯ// ಶೇ 60ರಷ್ಟು ಮೊತ್ತವು ವೇತನ, ಪಿಂಚಣಿ, ಬಡ್ಡಿ ಪಾವತಿ ಮತ್ತು ಆಡಳಿತಾತ್ಮಕ ವೆಚ್ಚಗಳಿಗೆ ವಿನಿಯೋಗವಾಗುತ್ತದೆ. 2023–24ರಲ್ಲಿ ಬಡ್ಡಿ ಪಾವತಿಗಾಗಿ ಶೇ 15.1ರಷ್ಟು ಮೊತ್ತ ವಿನಿಯೋಗವಾಗುತ್ತದೆ. 2019–20ರಲ್ಲಿ ಇದು ಶೇ 10.6ರಷ್ಟು ಮಾತ್ರ ಆಗಿತ್ತು.
ವೇತನಗಳ ಮೇಲಿನ ವೆಚ್ಚವು 2021–22ನೆಯ ಸಾಲಿಗೆ ಹೋಲಿಸಿದರೆ ಶೇ 44ರಷ್ಟು ಹೆಚ್ಚುವ ಅಂದಾಜು ಇದೆ. ಏಳನೆಯ ವೇತನ ಆಯೋಗದ ಶಿಫಾರಸುಗಳನ್ನು ಅನುಷ್ಠಾನಕ್ಕೆ ತಂದಾಗ ವೇತನ ಹಾಗೂ ಪಿಂಚಣಿ ವೆಚ್ಚಗಳು ಹೆಚ್ಚಬಹುದು. ಬಜೆಟ್‌ನ ದೊಡ್ಡ ಪಾಲನ್ನು ಈ ರೀತಿ ಬದ್ಧವೆಚ್ಚಗಳಿಗೆ ಮೀಸಲಿಟ್ಟಾಗ, ಅಭಿವೃದ್ಧಿ ಯೋಜನೆಗಳಿಗೆ ಉಳಿಯುವ ಹಣ ಕಡಿಮೆ ಆಗುತ್ತದೆ.

ರಾಜ್ಯದ ಸಾಲಗಳು 2021–22ರಲ್ಲಿ ಜಿಎಸ್‌ಡಿಪಿಯ ಶೇ 26.71ರಷ್ಟು ಇದ್ದಿದ್ದು, 2022–23ರ ಪರಿಷ್ಕೃತ ಅಂದಾಜಿನಲ್ಲಿ ಶೇ 23.52ಕ್ಕೆ ತಗ್ಗಿವೆ. ಸಾಲಗಳ ಪ್ರಮಾಣವು ಕರ್ನಾಟಕ ವಿತ್ತೀಯ ಹೊಣೆಗಾರಿಕೆ ಕಾಯ್ದೆಯ ಮಿತಿಯೊಳಗೇ (ಶೇ 24.2) ಇರುವ ನಿರೀಕ್ಷೆ ಇದೆ. ಕಾಯ್ದೆ ನಿಗದಿ ಮಾಡಿರುವ ಮಿತಿಯೊಳಗೆ ಇದ್ದರೂ, ಶೇ 24.2 ಎಂಬುದು 2021–22ನೇ ಸಾಲಿಗೆ ಮೊದಲಿನ (2019–20ರಲ್ಲಿ ಶೇ 19.87, 2020–21ರಲ್ಲಿ ಶೇ 22.37) ಮಟ್ಟಕ್ಕಿಂತ ಹೆಚ್ಚಿನದೇ ಆಗಿರುತ್ತದೆ. ಹೆಚ್ಚಿನ ಸಾಲ ಎಂಬುದು ಮುಂದಿನ ತಲೆಮಾರುಗಳ ಮೇಲೆ ಒಂದಿಷ್ಟು ವೆಚ್ಚವನ್ನು ಹೊರಿಸುವುದು. ಇದರಿಂದಾಗಿ ಹಣಕಾಸಿನ ವಿಚಾರಗಳಲ್ಲಿ ಅಸಮತೋಲನ ಸೃಷ್ಟಿಯಾಗಬಹುದು. ಇದರ ಜೊತೆಯಲ್ಲೇ, ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳ ಹಣಕಾಸಿನ ಸ್ಥಿತಿಯು ದುರ್ಬಲವಾಗುತ್ತಿರುವುದು ರಾಜ್ಯದ ಹಣಕಾಸಿನ ಸ್ಥಿತಿಯ ಮೇಲೆಯೂ ಅಪಾಯ ಉಂಟುಮಾಡುತ್ತದೆ. ಏಕೆಂದರೆ, ಎಸ್ಕಾಂಗಳು ಹಾಗೂ ಕೆಪಿಸಿಎಲ್ ಮಾಡಿರುವ ಸಾಲಗಳಿಗೆ ರಾಜ್ಯ ಸರ್ಕಾರವೇ ಖಾತರಿದಾರ ಆಗಿ ನಿಂತಿದೆ. ಈ ಕಂಪನಿಗಳಿಗೆ ತಮ್ಮ ಸಾಲವನ್ನು ಮರುಪಾವತಿ ಮಾಡಲು ಆಗದೆ ಇದ್ದರೆ, ರಾಜ್ಯ ಸರ್ಕಾರದ ಒಟ್ಟು ಸಾಲವು ಹೆಚ್ಚಾದಂತೆಯೇ. ರಾಜ್ಯ ಸರ್ಕಾರವು ತನ್ನ ಒಟ್ಟು ಸಾಲಗಳ ಮೊತ್ತವನ್ನು ತಗ್ಗಿಸಲು ಇನ್ನಷ್ಟು ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕು.

2023–24ನೆಯ ಸಾಲಿನ ಬಜೆಟ್, ಸಾಲ ಹಾಗೂ ವಿತ್ತೀಯ ಕೊರತೆಯನ್ನು ತಗ್ಗಿಸುವ ಆದ್ಯತೆ ಸರ್ಕಾರದ್ದು ಎಂಬುದನ್ನು ಹೇಳಿದೆ. ಸರ್ಕಾರವು ಇಷ್ಟಕ್ಕೇ ಸುಮ್ಮನಾಗಬಾರದು. ತನ್ನ ತೆರಿಗೆ ಹಾಗೂ ತೆರಿಗೆ ಹೊರತುಪಡಿಸಿದ ವರಮಾನ ಹೆಚ್ಚಿಸಿಕೊಳ್ಳಲಿಕ್ಕೆ ಕೂಡ ಅದು ಇನ್ನಷ್ಟು ಕ್ರಮಗಳನ್ನು ಕೈಗೊಳ್ಳಬೇಕು.

ಲೇಖಕರು: ಸಹಾಯಕ ಪ್ರಾಧ್ಯಾಪಕ, ತಕ್ಷಶಿಲಾ ಇನ್ಸ್ಟಿಟ್ಯೂಷನ್, ಬೆಂಗಳೂರು

ಮುಂಬೈ, ದೆಹಲಿ ಟ್ವಿಟರ್ ಕಚೇರಿ ಸ್ಥಗಿತ

ನವದೆಹಲಿ (ಪಿಟಿಐ): ಟ್ವಿಟರ್ ಕಂಪನಿಯು ದೆಹಲಿ ಮತ್ತು ಮುಂಬೈನ ಕಚೇರಿಗಳನ್ನು ಸ್ಥಗಿತಗೊಳಿಸಿದ್ದು, ನೌಕರರಿಗೆ ಮನೆಯಿಂದಲೇ ಕೆಲಸ ಮಾಡುವಂತೆ ಸೂಚಿಸಿದೆ ಎಂದು ಮೂಲಗಳು ತಿಳಿಸಿವೆ.ಹೆಚ್ಚಾಗಿ ಎಂಜಿನಿಯರ್‌ಗಳೇ ಕೆಲಸ ಮಾಡುವ ಬೆಂಗಳೂರಿನ ಕಚೇರಿಯನ್ನು ಉಳಿಸಿಕೊಳ್ಳಲಾಗಿದೆ.ಟ್ವಿಟರ್ ಕಡೆಯಿಂದ ಈ ಕುರಿತು ಪ್ರತಿಕ್ರಿಯೆ ಲಭ್ಯವಾಗಿಲ್ಲ. ಟ್ವಿಟರ್ ಕಂಪನಿಯು ಜಾಗತಿಕವಾಗಿ ವೆಚ್ಚಗಳನ್ನು ಕಡಿಮೆ ಮಾಡಲು ಮುಂದಾಗಿದೆ.

ಮೂರು ದಿನಗಳ ಟಿಟಿಎಫ್ ಮೇಳ ಆರಂಭ

ಬೆಂಗಳೂರು: ಮೂರು ದಿನಗಳ ‘ಪ್ರಯಾಣ ಮತ್ತು ಪ್ರವಾಸೋದ್ಯಮ ಮೇಳ’ಕ್ಕೆ (ಟಿಟಿಎಫ್) ಶುಕ್ರವಾರ ಚಾಲನೆ ದೊರೆತಿದ್ದು, ಇಲ್ಲಿನ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ಮೇಳವನ್ನು ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಉದ್ಘಾಟಿಸಿದರು. ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್, ನಿರ್ದೇಶಕ ರಾಮ್ ಪ್ರಸಾತ್ ಮನೋಹರ್ ಇದ್ದರು.

‘ಕೋವಿಡ್ ಕಾರಣದಿಂದಾಗಿ ಎರಡು ವರ್ಷ ಎದುರಿಸಿದ್ದ ಅಗ್ನಿ ಪರೀಕ್ಷೆಯ ದಿನಗಳು ಮುಗಿದಿದ್ದು, ಮತ್ತೆ ಈ ಕ್ಷೇತ್ರ ಅಭಿವೃದ್ಧಿಯತ್ತ ದಾಪುಗಾಲಿಟ್ಟಿದೆ. ಪ್ರವಾಸೋದ್ಯಮ ಮತ್ತು ಸಂಬಂಧಿತ ಚಟುವಟಿಕೆಗಳು ಮತ್ತೆ ಪುಟಿದು ನಿಂತಿರುವುದು ಸಂತೋಷ ತಂದಿದೆ’ ಎಂದು ಮೇಳದ ಸಂಘಟಕ ಫೇರ್‌ಫೆಸ್ಟ್ ಮೀಡಿಯಾ ಲಿ.ನ ಅಧ್ಯಕ್ಷ ಸಂಜೀವ್ ಅಗರ್ವಾಲ್ ಹೇಳಿದ್ದಾರೆ. ಕೇರಳ, ಮಧ್ಯಪ್ರದೇಶ, ಒಡಿಶಾ ರಾಜ್ಯಗಳು ತಮ್ಮಲ್ಲಿ ಪ್ರವಾಸಿ ತಾಣಗಳ ಕುರಿತು ಇಲ್ಲಿ ಮಾಹಿತಿ ಒದಗಿಸುತ್ತಿವೆ ಎಂದು ಪ್ರಕಟಣೆ ತಿಳಿಸಿದೆ. ವಿದೇಶಗಳ ಖಾಸಗಿ ಕಂಪನಿಗಳು ಇದರಲ್ಲಿ ಭಾಗವಹಿಸಿವೆ.



ಟಿಟಿಎಫ್ ಬೆಂಗಳೂರು ಮೇಳವನ್ನು ಪ್ರವಾಸೋದ್ಯಮ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ಉದ್ಘಾಟಿಸಿದರು. ಇಲಾಖೆಯ ನಿರ್ದೇಶಕ ರಾಮ್ ಪ್ರಸಾದ್ ಮನೋಹರ್ ಹಾಗೂ ಇತರರು ಇದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಹೊಸನಗರ	
ಬಿಳಿಗೋಟು	20899-23199
ಚಾಲಿ	32009-34199
ಕೆಂಪುಗೋಟು	30000-34081
ರಾಶಿ	42609-46139
ಕಾರ್ಕಳ	
ಹೊಸತು	30000-40000
ಹಳತು	40000-54500
ಪುತ್ತೂರು	
ಹೊಸತು	32000-37500
ಶಿವಮೊಗ್ಗ	
ಬೆಟ್ಟೆ	47599-53400
ಗೊರಬಲು	17000-33099
ರಾಶಿ	37666-45659
ಸರಕು	47569-80003
ಸಿದ್ದಾಪುರ	
ಬಿಳಿಗೋಟು	26669-31899
ಚಾಲಿ	35269-38899
ಕೋಕ	25899-31029
ಕೆಂಪುಗೋಟು	28899-33199
ರಾಶಿ	42099-45399
ತಟ್ಟಿಬೆಟ್ಟೆ	36309-44599
ಶಿರಸಿ	
ಬೆಟ್ಟೆ	34899-43889
ಬಿಳಿಗೋಟು	22899-33299
ಚಾಲಿ	28099-40601
ಕೆಂಪುಗೋಟು	22899-33299
ರಾಶಿ	35601-46566
ಯಲ್ಲಾಪುರ	
ಬಿಳಿಗೋಟು	22222-32222
ಹಳೆಚಾಲಿ	36169-41009
ಹೊಸಚಾಲಿ	33699-36019
ಕೋಕ	18899-30899
ಆಪಿ	50779-59369

ಆಯ್ಕೆ ಸಮಿತಿ; ಶಿವಸುಂದರ್ ದಾಸ್ ಹಂಗಾಮಿ ಮುಖ್ಯಸ್ಥ?

ಚೇತನ್ ಶರ್ಮಾ ರಾಜೀನಾಮೆ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರರ ಆಯ್ಕೆ ಪ್ರಕ್ರಿಯೆಯ ಗೋಪ್ಯ ಮಾಹಿತಿಗಳನ್ನು ಟಿವಿ ವಾಹಿನಿಯೊಂದರ ಕುಟುಕು ಕಾರ್ಯಾಚರಣೆಯಲ್ಲಿ ಬಹಿರಂಗಗೊಳಿಸಿದ್ದ ಚೇತನ್ ಶರ್ಮಾ, ರಾಷ್ಟ್ರೀಯ ಆಯ್ಕೆ ಸಮಿತಿಯ ಮುಖ್ಯಸ್ಥರ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಅವರ ಸ್ಥಾನಕ್ಕೆ ಹಂಗಾಮಿಯಾಗಿ ಮಾಜಿ ಆಟಗಾರ ಶಿವಸುಂದರ್ ದಾಸ್ ಅವರನ್ನು ನೇಮಕ ಮಾಡುವ ಸಾಧ್ಯತೆ ಇದೆ.

‘ಚೇತನ್ ರಾಜೀನಾಮೆಪತ್ರವನ್ನು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರಿಗೆ ಸಲ್ಲಿಸಿದ್ದಾರೆ. ಅದು ಸ್ವೀಕೃತವೂ ಆಗಿದೆ. ಸ್ವಯಂ ನಿರ್ಧಾರದಿಂದಲೇ ಅವರು ರಾಜೀನಾಮೆ ಸಲ್ಲಿಸಿದ್ದಾರೆ. ಯಾರೂ ಅವರಿಗೆ ಕೇಳಿರಲಿಲ್ಲ’ ಎಂದು ಬಿಸಿಸಿಐ ಮೂಲಗಳು ಶನಿವಾರ ತಿಳಿಸಿವೆ.



ಚೇತನ್ ಶರ್ಮಾ

ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿ ಫೈನಲ್ ಪಂದ್ಯ ನಡೆಯುತ್ತಿರುವ ಕೋಲ್ಕತ್ತದಲ್ಲಿ ಶರ್ಮಾ ಹಾಗೂ ಉಳಿದ ಸದಸ್ಯರು ಇದ್ದರು. ಇರಾನಿ ಟ್ರೋಫಿ ಟೂರ್ನಿಗಾಗಿ ತಂಡವನ್ನು ಆಯ್ಕೆ ಮಾಡುವ ಸಲುವಾಗಿ ಸಮಿತಿಯು ಅಲ್ಲಿದೆ. ರಾಜೀನಾಮೆ ಸ್ವೀಕೃತವಾದ ಕೂಡಲೇ ಶರ್ಮಾ ಕ್ರೀಡಾಂಗಣ ತೊರೆದರು. ನವದೆಹಲಿಗೆ ಮರಳಿದರು. ವಿಮಾನ ನಿಲ್ದಾಣದಲ್ಲಿ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಲಿಲ್ಲ.

ಝೀ ನ್ಯೂಸ್ ಕುಟುಕು ಕಾರ್ಯಾಚರಣೆಯಲ್ಲಿ ಚೇತನ್ ಹಲವು ವಿವಾದಾತ್ಮಕ ವಿಷಯಗಳ ಕುರಿತು ಮಾತನಾಡಿದ್ದರು.

‘ಭಾರತ ತಂಡದ ಕೋಚ್ ರಾಹುಲ್ ದ್ರಾವಿಡ್, ನಾಯಕರಾದ ರೋಹಿತ್ ಹಾಗೂ ಹಾರ್ದಿಕ್ ಅವರಿಗೆ ಚೇತನ್ ಶರ್ಮಾ ಮೇಲೆ ನಂಬಿಕೆ ಉಳಿದಿರಲಿಲ್ಲ. ಗೌರವವನ್ನೂ ಕಳೆದುಕೊಂಡಿದ್ದರು. ಅಲ್ಲದೇ ತಮ್ಮ ನಾಲಿಗೆಯ ಮೇಲೆ ನಿಯಂತ್ರಣರಿರಲಿಲ್ಲ. ಅದಕ್ಕಾಗಿ ಈ ದಂಡ ತೆತ್ತಿದ್ದಾರೆ’ ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಪೃಥ್ವಿ ಮೇಲೆ ಹಲ್ಲೆ ಪ್ರಕರಣ: ಮಹಿಳೆ ಬಂಧನ

ಮುಂಬೈ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಪೃಥ್ವಿ ಶಾ ಅವರ ಕಾರಿನ ಮೇಲೆ ದಾಳಿ ನಡೆಸಿದ ಪ್ರಕರಣದಲ್ಲಿ ಆರೋಪಿಯಾಗಿರುವ ಸಪ್ನಾ ಗಿಲ್ ಎಂಬ ಮಹಿಳೆ ಹಾಗೂ ಇತರ ಇಬ್ಬರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಸಾಂತಾಕ್ರೂಜ್‌ನಲ್ಲಿರುವ ಹೋಟೆಲ್‌ವೊಂದರ ಸಮೀಪ ಈ ಘಟನೆ ನಡೆದಿತ್ತು. ವ್ಯಕ್ತಿಯೊಬ್ಬ ತನ್ನೊಂದಿಗೆ ಪೃಥ್ವಿ ಸೆಲ್ಫಿ ತೆಗೆಸಿಕೊಳ್ಳಲು ನಿರಾಕರಿಸಿದ್ದರಿಂದ ಕುಪಿತಗೊಂಡ ಕೆಲವರು ದುಷ್ಕೃತ್ಯ ಎಸಗಿದ್ದರು.

ಆರೋಪಿ ಮಹಿಳೆ ಯನ್ನು ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹಾಜರುಪಡಿಸಲಾಗಿದ್ದು, ಫೆ.20ರವರೆಗೆ ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಗಿದೆ.

ಸೆಮಿಫೈನಲ್‌ಗೆ ಭಾರತ

ದುಬೈ (ಪಿಟಿಐ): ಹಿನ್ನಡೆಯಿಂದ ಪುಟಿದೆದ್ದ ಭಾರತ ತಂಡವು ಏಷ್ಯಾ ಮಿಕ್ಸೆಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಸೆಮಿಫೈನಲ್ ತಲುಪಿದೆ. ಇದರೊಂದಿಗೆ ಪದಕ ಖಚಿತಪಡಿಸಿದೆ.

ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ 3–2ರಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿತು.

ಕ್ರಿಕೆಟ್: ಬ್ಲಂಡೆಲ್ ಶತಕ

ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಎಫ್‌ಪಿ): ಟಾಮ್ ಬ್ಲಂಡೆಲ್ (138) ಅವರ ಶತಕದ ನೆರವಿನಿಂದ ನ್ಯೂಜಿಲೆಂಡ್ ತಂಡ, ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಇಂಗ್ಲೆಂಡ್‌ಗೆ ತಕ್ಕ ಉತ್ತರ ನೀಡಿದೆ.

ಇಂಗ್ಲೆಂಡ್‌ನ ಮೊದಲ ಇನಿಂಗ್ಸ್ ಮೊತ್ತ 325 ರನ್‌ಗಳಿಗೆ ಉತ್ತರವಾಗಿ ಆತಿಥೇಯ ತಂಡ 306 ರನ್ ಗಳಿಸಿತು. ಎರಡನೇ ದಿನವಾದ ಶುಕ್ರವಾರದ ಆಟದ ಅಂತ್ಯಕ್ಕೆ ಇಂಗ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗಳಿಗೆ 79 ರನ್ ಗಳಿಸಿದೆ.

ಆಂಗ್ಲರ ತಂಡವು ಒಟ್ಟು 98 ರನ್‌ಗಳಿಂದ ಮುನ್ನಡೆ ಸಾಧಿಸಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 9 ವಿಕೆಟ್‌ಗೆ 325 ಡಿಕ್ಲೇರ್ಡ್. ನ್ಯೂಜಿಲೆಂಡ್ 82.5 ಓವರ್‌ಗಳಲ್ಲಿ 306 (ಡೆವೊನ್ ಕಾನ್ವೆ 77, ನೀಲ್ ವಾಗ್ನರ್ 27, ಟಾಮ್ ಬ್ಲಂಡೆಲ್ 138, ಒಲಿ ರಾಬಿನ್ಸನ್ 54ಕ್ಕೆ 4, ಜೇಮ್ಸ್ ಆ್ಯಂಡರ್ಸನ್ 36ಕ್ಕೆ 3)
ಎರಡನೇ ಇನಿಂಗ್ಸ್: ಇಂಗ್ಲೆಂಡ್ 16 ಓವರ್‌ಗಳಲ್ಲಿ 2 ವಿಕೆಟ್‌ಗೆ 79 (ಜಾಕ್ ಕ್ರಾಲಿ 28, ಬೆನ್ ಡಕೆಟ್ 25, ಒಲಿ ಪೋಪ್ ಬ್ಯಾಟಿಂಗ್ 14, ಸ್ಟುವರ್ಟ್ ಬ್ರಾಡ್ ಬ್ಯಾಟಿಂಗ್ 6)

ನೆಟ್‌ಬಾಲ್: ಬೆಂಗಳೂರು ವಿವಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಪುರುಷರ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಬೆಂಗಳೂರು ವಿವಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಹುಬ್ಬಳ್ಳಿ ಹಾಗೂ ಬೆಂಗಳೂರು ಸೌಂದರ್ಯ ಶಿಕ್ಷಣ ಸಂಸ್ಥೆಯ ಆಶ್ರಯದಲ್ಲಿ ನಾಗಸಂದ್ರ ಸೌಂದರ್ಯ ಕಾನೂನು ಮಹಾವಿದ್ಯಾಲಯದ ಅಂಗಣದಲ್ಲಿ ನಡೆದ ಟೂರ್ನಿಯ ಕೊನೆಯ ಲೀಗ್ ಪಂದ್ಯಗಳಲ್ಲಿ ಬೆಂಗಳೂರು ವಿವಿ ಕ್ರಮವಾಗಿ 35–28ರಿಂದ ಮೈಸೂರು ವಿವಿ ವಿರುದ್ಧ ಮತ್ತು 11–6ರಿಂದ ಕ್ಯಾಲಿಕಟ್ ವಿವಿ ವಿರುದ್ಧ ಗೆದ್ದಿತು.

ಕ್ಯಾಲಿಕಟ್ ವಿವಿ ರನ್ನರ್ಸ್ ಅಪ್ ಮತ್ತು ಮೈಸೂರು ವಿವಿ ಮೂರನೇ ಸ್ಥಾನ ಗಳಿಸಿದವು.

‘ಹೊಸ ಮಾದರಿಯಲ್ಲಿ ಜಿಪಿಬಿಎಲ್’

ಬೆಂಗಳೂರು: ಎರಡನೇ ಆವೃತ್ತಿಯ ಗ್ರ್ಯಾನ್‌ಪ್ರಿ ಬ್ಯಾಡ್ಮಿಂಟನ್ ಲೀಗ್‌ಅನ್ನು (ಜಿಪಿಬಿಎಲ್) ಹೊಸ ಮಾದ ರಿಯಲ್ಲಿ ಆಯೋಜಿಸಲಾಗುವುದು ಎಂದು ಲೀಗ್ ಆಯುಕ್ತ ಪ್ರಶಾಂತ್ ರೆಡ್ಡಿ ಹೇಳಿದ್ದಾರೆ.

‘ಮೊದಲ ಆವೃತ್ತಿಯಲ್ಲಿ ಕರ್ನಾಟಕದ ಆಟಗಾರರಿಗೆ ಮಾತ್ರ ಅವಕಾಶ ನೀಡಲಾಗಿತ್ತು. ಈ ಬಾರಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಆಟಗಾರರು ಕಣಕ್ಕಿಳಿಯಲಿದ್ದಾರೆ. ತಂಡಗಳ ಸಂಖ್ಯೆಯನ್ನು 8ರಿಂದ 10ಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ’ ಎಂದು ಪ್ರಕಟಣೆಯಲ್ಲಿ ಪ್ರಶಾಂತ್ ತಿಳಿಸಿದ್ದಾರೆ.

ಆಗಸ್ಟ್ ಮೊದಲ ಮತ್ತು ಎರಡನೇ ವಾರ ಈ ಬಾರಿಯ ಲೀಗ್ ನಡೆಯಲಿದ್ದು, ಆಗಸ್ಟ್ 21ರಿಂದ 27ರವರೆಗೆ ಡೆನ್ಮಾರ್ಕ್‌ನಲ್ಲಿ ನಡೆಯಲಿರುವ ವಿಶ್ವ ಚಾಂಪಿಯನ್‌ಷಿಪ್‌ಗೆ ಅಭ್ಯಾಸ ಟೂರ್ನಿಯಾಗಿಯೂ ಪರಿಗಣಿಸಲಾಗುತ್ತದೆ.

ಟಿ20 ವಿಶ್ವಕಪ್: ಭಾರತಕ್ಕೆ ಹ್ಯಾಟ್ರಿಕ್ ಜಯದ ನಿರೀಕ್ಷೆ

ಗೆಬೆಹಾ, ದಕ್ಷಿಣ ಆಫ್ರಿಕಾ (ಪಿಟಿಐ): ಮೊದಲ ಎರಡು ಪಂದ್ಯಗಳನ್ನು ಗೆದ್ದು ಆತ್ಮವಿಶ್ವಾಸ ಹೆಚ್ಚಿಸಿಕೊಂಡಿರುವ ಭಾರತ ತಂಡ, ಮಹಿಳಾ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಶನಿವಾರ ಇಂಗ್ಲೆಂಡ್‌ನ ಸವಾಲು ಎದುರಿಸಲಿದೆ.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನದಲ್ಲಿರುವ ಇಂಗ್ಲೆಂಡ್ ವಿರುದ್ಧ ಗೆದ್ದರೆ, ಹರ್ಮನ್‌ಪ್ರೀತ್ ಕೌರ್ ಬಳಗಕ್ಕೆ ನಾಕೌಟ್‌ನಲ್ಲಿ ಸ್ಥಾನ ಖಚಿತವಾಗಲಿದೆ. ಆರಂಭದ ಎರಡು ಪಂದ್ಯಗಳಲ್ಲಿ ಪಾಕಿಸ್ತಾನ ಮತ್ತು ವೆಸ್ಟ್ ಇಂಡೀಸ್ ತಂಡಗಳನ್ನು ಮಣಿಸಿದ್ದ ಭಾರತ, ಹ್ಯಾಟ್ರಿಕ್ ಗೆಲುವಿನ ನಿರೀಕ್ಷೆಯಲ್ಲಿದೆ.

ಇಂಗ್ಲೆಂಡ್ ಕೂಡಾ ಆಡಿದ ಎರಡೂ ಪಂದ್ಯಗಳಲ್ಲಿ ಗೆದ್ದಿದ್ದು, ಉತ್ತಮ ಲಯದಲ್ಲಿದೆ. ಆದ್ದರಿಂದ ಶನಿವಾರದ ಪಂದ್ಯದಲ್ಲಿ ಜಿದ್ದಾಜಿದ್ದಿನ ಪೈಪೋಟಿ ನಡೆಯುವ ಸಾಧ್ಯತೆಯಿದೆ.

ಭಾರತ ತಂಡವು ಯವ ಆಟಗಾರ್ತಿ ರಿಚಾ ಘೋಷ್ ಅವರ ಉತ್ತಮ ಬ್ಯಾಟಿಂಗ್‌ನಿಂದಲೂ ಎರಡೂ ಪಂದ್ಯಗಳಲ್ಲಿ ಗೆಲುವು ಒಲಿಸಿಕೊಂಡಿತ್ತು. ಇಂಗ್ಲೆಂಡ್ ವಿರುದ್ಧ ಅಗ್ರಕ್ರಮಾಂಕದ ಇತರ ಬ್ಯಾಟರ್‌ಗಳೂ ಮಿಂಚುವುದು ಅಗತ್ಯ. ಶಫಾಲಿ ವರ್ಮಾ, ಹರ್ಮನ್‌ಪ್ರೀತ್ ಕೌರ್ ಮತ್ತು ಸ್ಮೃತಿ ಮಂದಾನ ಅವರು ಇಂಗ್ಲೆಂಡ್‌ನ ಸ್ಪಿನ್ನರ್‌ಗಳಾದ ಚಾರ್ಲಿ ಡೀನ್, ಸೋಫಿ ಎಕ್ಲೆಸ್ಟೋನ್ ಮತ್ತು ಸಾರಾ ಗ್ಲೆನ್ ಅವರ ದಾಳಿಯನ್ನು ಎದುರಿಸುವಲ್ಲಿ ಯಶಸ್ವಿಯಾದರೆ ಭಾರತಕ್ಕೆ ಗೆಲುವು ಕಷ್ಟವಾಗದು.

ಭಾರತದ ಬೌಲರ್‌ಗಳು ವೆಸ್ಟ್ ಇಂಡೀಸ್ ಎದುರು ಶಿಸ್ತಿನ ಪ್ರದರ್ಶನ ನೀಡಿದ್ದರು. ಇಂಗ್ಲೆಂಡ್ ವಿರುದ್ಧ ಇನ್ನಷ್ಟು ಪರಿಣಾಮಕಾರಿಯಾಗಿ ಬೌಲಿಂಗ್ ಮಾಡಬೇಕಿದೆ.

ಲಾರೆನ್ ಬೆಲ್, ಅಲೈಸ್ ಕ್ಯಾಪ್ಸಿ ಅವರನ್ನೊಳಗೊಂಡ ಎದುರಾಳಿ ಬ್ಯಾಟಿಂಗ್ ವಿಭಾಗದ ಮೇಲೆ ಕಡಿವಾಣ ಹಾಕುವ ಸವಾಲು ರೇಣುಕಾ ಸಿಂಗ್, ದೀಪ್ತಿ ಶರ್ಮಾ ಮತ್ತು ಪೂಜಾ ವಸ್ತ್ರಕರ್ ಅವರ ಮುಂದಿದೆ.

ಪಂದ್ಯ ಆರಂಭ: ಸಂಜೆ 6.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಬಾರ್ಡರ್– ಗಾವಸ್ಕರ್ ಕ್ರಿಕೆಟ್ ಟೆಸ್ಟ್: ಶಮಿ, ಅಶ್ವಿನ್, ಜಡೇಜ ದಾಳಿಗೆ ಕುಸಿದ ಆಸ್ಟ್ರೇಲಿಯಾ

ಭಾರತದ ಬೌಲರ್‌ಗಳ ಪಾರಮ್ಯ

ಪ್ರಜಾವಾಣಿ ವಾರ್ತೆ



ಭಾರತದ ಬೌಲರ್ ಮೊಹಮ್ಮದ್ ಶಮಿ –ಎಎಫ್‌ಪಿ ಚಿತ್ರ

ನವದೆಹಲಿ: ಪಂದ್ಯದ ಮೊದಲ ದಿನದೇ ಸ್ಪಿನ್ ಬೌಲರ್‌ಗಳಿಗೆ ನೆರವು ನೀಡುತ್ತಿರುವ ಪಿಚ್‌ನಲ್ಲಿ ಮಧ್ಯಮವೇಗಿ ಮೊಹಮ್ಮದ್ ಶಮಿ ಮಿಂಚಿದರು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ಶುಕ್ರವಾರ ಆರಂಭವಾದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಕ್ರಿಕೆಟ್ ಸರಣಿಯ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು ಮೊದಲ ಇನಿಂಗ್ಸ್‌ನಲ್ಲಿ 263 ರನ್‌ಗಳ ಸಾಧಾರಣ ಮೊತ್ತ ಗಳಿಸಿ ಆಲೌಟ್ ಆಯಿತು. ಆರಂಭಿಕ ಬ್ಯಾಟರ್ ಉಸ್ಮಾನ್ ಖ್ವಾಜಾ (81; 125ಎ, 4X12, 6X1) ಹಾಗೂ ಪೀಟರ್ ಹ್ಯಾಂಡ್ಸ್‌ಕಂಬ್ (ಔಟಾಗದೆ 72, 142ಎ, 4X9) ಅವರಿಬ್ಬರೂ ಅರ್ಧಶತಕ ಗಳಿಸಿದ್ದರಿಂದ ತಂಡವು ಅಲ್ಪಮೊತ್ತಕ್ಕೆ ಕುಸಿಯುವುದು ತಪ್ಪಿತು. ಇದಕ್ಕುತ್ತರವಾಗಿ ಇನಿಂಗ್ಸ್ ಆರಂಭಿಸಿದ ಭಾರತ, ದಿನದಾಟದ ಮುಕ್ತಾಯಕ್ಕೆ 9 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 21 ರನ್ ಗಳಿಸಿತು. ನಾಯಕ ರೋಹಿತ್ ಶರ್ಮಾ (13) ಹಾಗೂ ಕೆ.ಎಲ್. ರಾಹುಲ್ (4) ಕ್ರೀಸ್‌ನಲ್ಲಿದ್ದಾರೆ.

ಸ್ವಿಂಗ್ ಮತ್ತು ಸ್ಲೋ ಎಸೆತಗಳನ್ನು ನಿಖರವಾಗಿ ಪ್ರಯೋಗಿಸಿದ ಶಮಿ (60ಕ್ಕೆ4) ಬ್ಯಾಟರ್‌ಗಳನ್ನು ವಿಚಲಿತಗೊಳಿಸಿದರು. ಶಮಿಗೆ ಅವರೊಂದಿಗೆ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಹಾಗೂ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ತಲಾ ಮೂರು ವಿಕೆಟ್ ಗಳಿಸಿ ಮಿಂಚಿದರು.

ಟಾಸ್ ಗೆದ್ದ ಆಸ್ಟ್ರೇಲಿಯಾ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಉಸ್ಮಾನ್ ಹಾಗೂ ಡೇವಿಡ್ ವಾರ್ನರ್ (15) ಮೊದಲ ವಿಕೆಟ್‌ಗೆ 50 ರನ್ ಗಳಿಸಿ ಉತ್ತಮ ಆರಂಭ ನೀಡಿದರು. ಆದರೆ 16ನೇ ಓವರ್‌ನಲ್ಲಿ ವಾರ್ನರ್ ವಿಕೆಟ್ ಗಳಿಸಿದ ಶಮಿ ಜೊತೆಯಾಟವನ್ನು ಮುರಿದರು. 22ನೇ ಓವರ್‌ನಲ್ಲಿ ಅಶ್ವಿನ್ ಮೋಡಿಗೆ ಮಾರ್ನಸ್ ಲಾಬುಷೇನ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಸ್ಮಿತ್ ಖಾತೆಯನ್ನೂ ತೆರೆಯದೇ ಔಟಾದರು.

ರಾಹುಲ್ ಸಾಹಸ: ಬ್ಯಾಟಿಂಗ್‌ನಲ್ಲಿ ಲಯ ಕಂಡುಕೊಳ್ಳಲು ಹರಸಾಹಸ ಪಡುತ್ತಿರುವ ರಾಹುಲ್ ಈ ಇನಿಂಗ್ಸ್‌ನಲ್ಲಿ ಎರಡು ಕಠಿಣ ಕ್ಯಾಚ್‌ಗಳನ್ನು ಪಡೆದರು. ತಾಳ್ಮೆಯಿಂದ ಆಡುತ್ತಿದ್ದ ಉಸ್ಮಾನ್ ತಂಡದ ಮೊತ್ತವನ್ನು ನೂರರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು. ಆದರೆ ಟ್ರಾವಿಸ್ ಹೆಡ್ (12 ರನ್) ರಟ್ಟೆ ಅರಳಿಸಲು ಶಮಿ ಅವಕಾಶ ಕೊಡಲಿಲ್ಲ. ಹೆಡ್ ಬ್ಯಾಟ್ ತಗುಲಿ ಎತ್ತರಕ್ಕೆ ಹಾರಿದ ಚೆಂಡನ್ನು ಎರಡನೇ ಸ್ಲಿಪ್‌ನಲ್ಲಿದ್ದ ರಾಹುಲ್ ನೆಗೆದು ಹಿಡಿತಕ್ಕೆ ಪಡೆದರು.

ಊಟದ ವಿರಾಮದ ನಂತರವೂ ಉಸ್ಮಾನ್ ಆಟ ಕಳೆಗಟ್ಟಿತು. ಆದರೆ ಜಡೇಜ ಹಾಕಿದ 46ನೇ ಓವರ್‌ನಲ್ಲಿ ಉಸ್ಮಾನ್ ರಿವರ್ಸ್ ಸ್ವೀಪ್ ಮಾಡಿದ ಚೆಂಡನ್ನು ಪಾಯಿಂಟ್ ಫೀಲ್ಡರ್ ರಾಹುಲ್ ಡೈವ್ ಮಾಡಿ ಒಂದೇ ಕೈಯಲ್ಲಿ ಹಿಡಿತಕ್ಕೆ ಪಡೆದರು. ಟಿ.ವಿ. ಕಾಮೆಂಟ್ರಿಯಲ್ಲಿ ರವಿಶಾಸ್ತ್ರಿ ಮೆಚ್ಚುಗೆ ಮಳೆ ಸುರಿಸಿದರು. ಅಲೆಕ್ಸ್ ಕ್ಯಾರಿ ವಿಕೆಟ್ ಕೂಡ ಅಶ್ವಿನ್ ಪಾಲಾಯಿತು. ಆದರೆ ವಿಕೆಟ್‌ಕೀಪರ್–ಬ್ಯಾಟರ್ ಪೀಟರ್ ಹ್ಯಾಂಡ್ಸ್‌ಕಂಬ್ ಆತಿಥೇಯ ಬೌಲರ್‌ಗಳಿಗೆ ತಡೆಯೊಡ್ಡಿದರು. ಅವರು ನಾಯಕ ಪ್ಯಾಟ್ ಅವರೊಂದಿಗೆ 7ನೇ ವಿಕೆಟ್ ಜೊತೆಯಾಟದಲ್ಲಿ 59 ರನ್ ಸೇರಿಸಿದರು. ಇದರಿಂದಾಗಿ ತಂಡವು ಇನ್ನೂರರ ಗಡಿ ದಾಟಿತು. ಕಮಿನ್ಸ್ ವಿಕೆಟ್ ಉರುಳಿಸಿದ ಜಡೇಜ ಜೊತೆಯಾಟ ಮುರಿದರು. ಪೀಟರ್ ಸಾಧ್ಯವಾದಷ್ಟು ರನ್ ಸೇರಿಸುವ ಪ್ರಯತ್ನಿಸಿದರು. ಇನ್ನೊಂದು ಕಡೆಯಿಂದ ವಿಕೆಟ್‌ಗಳು ಪತನವಾದವು.

ಸಂಕ್ಷಿಪ್ತ ಸ್ಕೋರು: (ಮೊದಲ ಇನಿಂಗ್ಸ್) ಆಸ್ಟ್ರೇಲಿಯಾ: 78.4 ಓವರ್‌ಗಳಲ್ಲಿ 263 (ಉಸ್ಮಾನ್ ಖ್ವಾಜಾ 81, ಪೀಟರ್ ಹ್ಯಾಂಡ್ಸ್‌ಕಂಬ್ ಔಟಾಗದೆ 72, ಪ್ಯಾಟ್ ಕಮಿನ್ಸ್ 33, ಮೊಹಮ್ಮದ್ ಶಮಿ 60ಕ್ಕೆ4, ಅಶ್ವಿನ್ 57ಕ್ಕೆ3, ರವೀಂದ್ರ ಜಡೇಜ 68ಕ್ಕೆ3) ಭಾರತ: 9 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೆ 21 (ರೋಹಿತ್ ಬ್ಯಾಟಿಂಗ್ 13, ರಾಹುಲ್ ಬ್ಯಾಟಿಂಗ್ 4)

ದಾಖಲೆಗಳು

100: ಆರ್. ಅಶ್ವಿನ್ ಆಸ್ಟ್ರೇಲಿಯಾ ಎದುರು ಟೆಸ್ಟ್‌ನಲ್ಲಿ ವಿಕೆಟ್‌ಗಳ 'ಶತಕ' ಪೂರೈಸಿದರು. ಅನಿಲ್ ಕುಂಬ್ಳೆ (111) ನಂತರ ಸಾಧನೆ ಮಾಡಿದ ಭಾರತೀಯನಾದರು.

700: ಅಶ್ವಿನ್ ಪ್ರಥಮ ದರ್ಜೆಯಲ್ಲಿ ಗಳಿಸಿದ ವಿಕೆಟ್‌ಗಳು

250: ರವೀಂದ್ರ ಜಡೇಜ ಟೆಸ್ಟ್ ಕ್ರಿಕೆಟ್‌ನಲ್ಲಿ ಗಳಿಸಿದ ವಿಕೆಟ್‌ಗಳು. ಈ ಸಾಧನೆ ಮಾಡಿದ ಭಾರತದ ಎಂಟನೇ ಬೌಲರ್.

100: ಚೇತೇಶ್ವರ್ ಪೂಜಾರ ಆಡುತ್ತಿರುವ ಟೆಸ್ಟ್. ಈ ಸಾಧನೆ ಮಾಡಿದ ಭಾರತದ 13ನೇ ಆಟಗಾರ

ಐಪಿಎಲ್–2023 ವೇಳಾಪಟ್ಟಿ

ದಿನಾಂಕ	ಸಮಯ	ಪಂದ್ಯ	ಸ್ಥಳ
ಮಾ.31	ರಾತ್ರಿ7.30	ಜಿಟಿ–ಸಿಎಸ್‌ಕೆ	ಅಹಮದಾಬಾದ್
ಏ.1	ಮಧ್ಯಾಹ್ನ3.30	ಪಿಕೆ–ಕೆಕೆಆರ್	ಮೊಹಾಲಿ
ಏ.1	ರಾತ್ರಿ7.30	ಎಲ್‌ಎಸ್‌ಜಿ–ಡಿಸಿ	ಲಖನೌ
ಏ.2	ಮಧ್ಯಾಹ್ನ3.30	ಎಸ್‌ಆರ್‌ಎಚ್–ಆರ್‌ಆರ್	ಹೈದರಾಬಾದ್
ಏ.2	ರಾತ್ರಿ7.30	ಆರ್‌ಸಿಬಿ–ಎಂಐ	ಬೆಂಗಳೂರು
ಏ.3	ರಾತ್ರಿ7.30	ಸಿಎಸ್‌ಕೆ–ಎಲ್‌ಎಸ್‌ಜಿ	ಚೆನ್ನೈ
ಏ.4	ರಾತ್ರಿ7.30	ಡಿಸಿ–ಜಿಟಿ	ದೆಹಲಿ
ಏ.5	ರಾತ್ರಿ7.30	ಆರ್‌ಆರ್–ಪಿಬಿಕೆಎಸ್	ಗುವಾಹಟಿ
ಏ.6	ರಾತ್ರಿ7.30	ಕೆಕೆಆರ್–ಆರ್‌ಸಿಬಿ	ಕೋಲ್ಕತ್ತ
ಏ.7	ರಾತ್ರಿ7.30	ಎಲ್‌ಎಸ್‌ಜಿ–ಎಸ್‌ಆರ್‌ಎಚ್	ಲಖನೌ
ಏ.8	ಮಧ್ಯಾಹ್ನ3.30	ಆರ್‌ಆರ್–ಡಿಸಿ	ಗುವಾಹಟಿ
ಏ.8	ರಾತ್ರಿ7.30	ಎಂಐ–ಸಿಎಸ್‌ಕೆ	ಮುಂಬೈ
ಏ.9	ಮಧ್ಯಾಹ್ನ3.30	ಜಿಟಿ–ಕೆಕೆಆರ್	ಅಹಮದಾಬಾದ್
ಏ.9	ರಾತ್ರಿ7.30	ಎಸ್‌ಆರ್‌ಎಚ್–ಪಿಬಿಕೆಎಸ್	ಹೈದರಾಬಾದ್
ಏ.10	ರಾತ್ರಿ7.30	ಆರ್‌ಸಿಬಿ–ಎಲ್‌ಎಸ್‌ಜಿ	ಬೆಂಗಳೂರು
ಏ.11	ರಾತ್ರಿ7.30	ಡಿಸಿ–ಎಂಐ	ದೆಹಲಿ
ಏ.12	ರಾತ್ರಿ7.30	ಸಿಎಸ್‌ಕೆ–ಆರ್‌ಆರ್	ಚೆನ್ನೈ
ಏ.13	ರಾತ್ರಿ7.30	ಪಿಬಿಕೆಎಸ್–ಜಿಟಿ	ಮೊಹಾಲಿ
ಏ.14	ರಾತ್ರಿ7.30	ಕೆಕೆಆರ್–ಎಸ್‌ಆರ್‌ಎಚ್	ಕೋಲ್ಕತ್ತ
ಏ.15	ಮಧ್ಯಾಹ್ನ3.30	ಆರ್‌ಸಿಬಿ–ಡಿಸಿ	ಬೆಂಗಳೂರು
ಏ.15	ರಾತ್ರಿ7.30	ಎಲ್‌ಎಸ್‌ಜಿ–ಪಿಬಿಕೆಎಸ್	ಲಖನೌ
ಏ.16	ಮಧ್ಯಾಹ್ನ3.30	ಎಂಐ–ಕೆಕೆಆರ್	ಮುಂಬೈ
ಏ.16	ರಾತ್ರಿ7.30	ಜಿಟಿ–ಆರ್‌ಆರ್	ಅಹಮದಾಬಾದ್
ಏ.17	ರಾತ್ರಿ7.30	ಆರ್‌ಸಿಬಿ–ಸಿಎಸ್‌ಕೆ	ಬೆಂಗಳೂರು
ಏ.18	ರಾತ್ರಿ7.30	ಎಸ್‌ಆರ್‌ಎಚ್–ಎಂಐ	ಹೈದರಾಬಾದ್
ಏ.19	ರಾತ್ರಿ7.30	ಆರ್‌ಆರ್–ಎಲ್‌ಎಸ್‌ಜಿ	ಜೈಪುರ
ಏ.20	ಮಧ್ಯಾಹ್ನ3.30	ಪಿಬಿಕೆಎಸ್–ಆರ್‌ಸಿಬಿ	ಮೊಹಾಲಿ
ಏ.20	ರಾತ್ರಿ7.30	ಡಿಸಿ–ಕೆಕೆಆರ್	ದೆಹಲಿ
ಏ.21	ರಾತ್ರಿ7.30	ಸಿಎಸ್‌ಕೆ–ಎಸ್‌ಆರ್‌ಎಚ್	ಚೆನ್ನೈ
ಏ.22	ಮಧ್ಯಾಹ್ನ3.30	ಎಲ್‌ಎಸ್‌ಜಿ–ಜಿಟಿ	ಲಖನೌ
ಏ.22	ರಾತ್ರಿ7.30	ಎಂಐ–ಪಿಬಿಕೆಎಸ್	ಮುಂಬೈ
ಏ.23	ಮಧ್ಯಾಹ್ನ3.30	ಆರ್‌ಸಿಬಿ–ಆರ್‌ಆರ್	ಬೆಂಗಳೂರು
ಏ.23	ರಾತ್ರಿ7.30	ಕೆಕೆಆರ್–ಸಿಎಸ್‌ಕೆ	ಕೋಲ್ಕತ್ತ
ಏ.24	ರಾತ್ರಿ7.30	ಎಸ್‌ಆರ್‌ಎಚ್–ಡಿಸಿ	ಹೈದರಾಬಾದ್
ಏ.25	ರಾತ್ರಿ7.30	ಜಿಟಿ–ಎಂಐ	ಅಹಮದಾಬಾದ್
ಏ.26	ರಾತ್ರಿ7.30	ಆರ್‌ಸಿಬಿ–ಕೆಕೆಆರ್	ಬೆಂಗಳೂರು
ಏ.27	ರಾತ್ರಿ7.30	ಆರ್‌ಆರ್–ಸಿಎಸ್‌ಕೆ	ಜೈಪುರ
ಏ.28	ರಾತ್ರಿ7.30	ಪಿಬಿಕೆಎಸ್–ಎಲ್‌ಎಸ್‌ಜಿ	ಮೊಹಾಲಿ
ಏ.29	ಮಧ್ಯಾಹ್ನ3.30	ಕೆಕೆಆರ್–ಜಿಟಿ	ಕೋಲ್ಕತ್ತ
ಏ.29	ರಾತ್ರಿ7.30	ಡಿಸಿ–ಎಸ್‌ಆರ್‌ಎಚ್	ದೆಹಲಿ
ಏ.30	ಮಧ್ಯಾಹ್ನ3.30	ಸಿಎಸ್‌ಕೆ–ಪಿಬಿಕೆಎಸ್	ಚೆನ್ನೈ
ಏ.30	ರಾತ್ರಿ7.30	ಎಂಐ–ಆರ್‌ಆರ್	ಮುಂಬೈ
ಮೇ1	ರಾತ್ರಿ7.30	ಎಲ್‌ಎಸ್‌ಜಿ–ಆರ್‌ಸಿಬಿ	ಲಖನೌ
ಮೇ2	ರಾತ್ರಿ7.30	ಜಿಟಿ–ಡಿಸಿ	ಅಹಮದಾಬಾದ್
ಮೇ3	ರಾತ್ರಿ7.30	ಪಿಬಿಕೆಎಸ್–ಎಂಐ	ಮೊಹಾಲಿ
ಮೇ4	ಮಧ್ಯಾಹ್ನ3.30	ಎಲ್‌ಎಸ್‌ಜಿ–ಸಿಎಸ್‌ಕೆ	ಲಖನೌ
ಮೇ4	ರಾತ್ರಿ7.30	ಎಸ್‌ಆರ್‌ಎಚ್–ಕೆಕೆಆರ್	ಹೈದರಾಬಾದ್
ಮೇ5	ರಾತ್ರಿ7.30	ಆರ್‌ಆರ್–ಜಿಟಿ	ಜೈಪುರ
ಮೇ6	ಮಧ್ಯಾಹ್ನ3.30	ಸಿಎಸ್‌ಕೆ–ಎಂಐ	ಚೆನ್ನೈ
ಮೇ6	ರಾತ್ರಿ7.30	ಡಿಸಿ–ಆರ್‌ಸಿಬಿ	ದೆಹಲಿ
ಮೇ7	ಮಧ್ಯಾಹ್ನ3.30	ಜಿಟಿ–ಎಲ್‌ಎಸ್‌ಜಿ	ಅಹಮದಾಬಾದ್
ಮೇ7	ರಾತ್ರಿ7.30	ಆರ್‌ಆರ್–ಎಸ್‌ಆರ್‌ಎಚ್	ಜೈಪುರ
ಮೇ8	ರಾತ್ರಿ7.30	ಕೆಕೆಆರ್–ಪಿಬಿಕೆಎಸ್	ಕೋಲ್ಕತ್ತ
ಮೇ9	ರಾತ್ರಿ7.30	ಎಂಐ–ಆರ್‌ಸಿಬಿ	ಮುಂಬೈ
ಮೇ10	ರಾತ್ರಿ7.30	ಸಿಎಸ್‌ಕೆ–ಡಿಸಿ	ಚೆನ್ನೈ
ಮೇ11	ರಾತ್ರಿ7.30	ಕೆಕೆಆರ್–ಆರ್‌ಆರ್	ಕೋಲ್ಕತ್ತ
ಮೇ12	ರಾತ್ರಿ7.30	ಎಂಐ–ಜಿಟಿ	ಮುಂಬೈ
ಮೇ13	ಮಧ್ಯಾಹ್ನ3.30	ಎಸ್‌ಆರ್‌ಎಚ್–ಎಲ್‌ಎಸ್‌ಜಿ	ಹೈದರಾಬಾದ್
ಮೇ13	ರಾತ್ರಿ7.30	ಡಿಸಿ–ಪಿಬಿಕೆಎಸ್	ದೆಹಲಿ
ಮೇ14	ಮಧ್ಯಾಹ್ನ3.30	ಆರ್‌ಆರ್–ಆರ್‌ಸಿಬಿ	ಜೈಪುರ
ಮೇ14	ರಾತ್ರಿ7.30	ಸಿಎಸ್‌ಕೆ–ಕೆಕೆಆರ್	ಚೆನ್ನೈ
ಮೇ15	ರಾತ್ರಿ7.30	ಜಿಟಿ–ಎಸ್‌ಆರ್‌ಎಚ್	ಅಹಮದಾಬಾದ್
ಮೇ16	ರಾತ್ರಿ7.30	ಎಲ್‌ಎಸ್‌ಜಿ–ಎಂಐ	ಲಖನೌ
ಮೇ17	ರಾತ್ರಿ7.30	ಪಿಬಿಕೆಎಸ್–ಡಿಸಿ	ಧರ್ಮಶಾಲಾ
ಮೇ18	ರಾತ್ರಿ7.30	ಎಸ್‌ಆರ್‌ಎಚ್–ಆರ್‌ಸಿಬಿ	ಹೈದರಾಬಾದ್
ಮೇ19	ರಾತ್ರಿ7.30	ಪಿಬಿಕೆಎಸ್–ಆರ್‌ಆರ್	ಧರ್ಮಶಾಲಾ
ಮೇ20	ಮಧ್ಯಾಹ್ನ3.30	ಡಿಸಿ–ಸಿಎಸ್‌ಕೆ	ದೆಹಲಿ
ಮೇ20	ರಾತ್ರಿ7.30	ಕೆಕೆಆರ್–ಎಲ್‌ಎಸ್‌ಜಿ	ಕೋಲ್ಕತ್ತ
ಮೇ21	ಮಧ್ಯಾಹ್ನ3.30	ಎಂಐ–ಎಸ್‌ಆರ್‌ಎಚ್	ಮುಂಬೈ
ಮೇ21	ರಾತ್ರಿ7.30	ಆರ್‌ಸಿಬಿ–ಜಿಟಿ	ಬೆಂಗಳೂರು

● ಜಿಟಿ: ಗುಜರಾತ್ ಟೈಟನ್ಸ್ ● ಪಿಬಿಕೆಎಸ್: ಪಂಜಾಬ್ ಕಿಂಗ್ಸ್ ● ಎಲ್‌ಎಸ್‌ಜಿ: ಲಖನೌ ಸೂಪರ್ ಜೈಂಟ್ಸ್ ● ಆರ್‌ಸಿಬಿ: ರಾಯಲ್ ಚಾಲೆಂಜರ್ಸ್ ಬೆಂಗಳೂರು ● ಸಿಎಸ್‌ಕೆ: ಚೆನ್ನೈ ಸೂಪರ್ ಕಿಂಗ್ಸ್ ● ಕೆಕೆಆರ್: ಕೋಲ್ಕತ್ತ ನೈಟ್ ರೈಡರ್ಸ್ ● ಆರ್‌ಆರ್: ರಾಜಸ್ಥಾನ ರಾಯಲ್ಸ್ ● ಡಿಸಿ: ಡೆಲ್ಲಿ ಕ್ಯಾಪಿಟಲ್ಸ್ ● ಎಂಐ: ಮುಂಬೈ ಇಂಡಿಯನ್ಸ್ ● ಎಸ್‌ಆರ್‌ಎಚ್: ಸನ್‌ರೈಸರ್ಸ್ ಹೈದರಾಬಾದ್

ಮೇ 28ರಂದು ಫೈನಲ್; ಲೀಗ್ ಹಂತದಲ್ಲಿ 70 ಪಂದ್ಯ

ಮಾರ್ಚ್ 31ರಿಂದ ಐಪಿಎಲ್ ಹಬ್ಬ

ನವದೆಹಲಿ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್‌ನ (ಐಪಿಎಲ್) 16ನೇ ಆವೃತ್ತಿಯ ಟೂರ್ನಿಗೆ ಮಾರ್ಚ್ 31 ರಂದು ಚಾಲನೆ ಲಭಿಸಲಿದೆ.

ಚುಟುಕು ಕ್ರಿಕೆಟ್ 'ಹಬ್ಬ'ದ ವೇಳಾಪಟ್ಟಿಯನ್ನು ಬಿಸಿಸಿಐ ಶುಕ್ರವಾರ ಪ್ರಕಟಿಸಿದೆ. ಅಹಮದಾಬಾದ್‌ನಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ತಂಡ ನಾಲ್ಕು ಬಾರಿಯ ಚಾಂಪಿಯನ್ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿದೆ.

ರೌಂಡ್ ರಾಬಿನ್ ಲೀಗ್‌ನಲ್ಲಿ 52 ದಿನಗಳಲ್ಲಿ ಒಟ್ಟು 70 ಪಂದ್ಯಗಳು ನಡೆಯಲಿವೆ. 12 ತಾಣಗಳು ಪಂದ್ಯಗಳಿಗೆ ಆತಿಥ್ಯ ವಹಿಸಲಿವೆ. 2019ರ ಬಳಿಕ ಇದೇ ಮೊದಲ ಬಾರಿ 'ಹೋಂ ಮತ್ತು ಅವೇ' ಮಾದರಿಯಲ್ಲಿ ಪಂದ್ಯಗಳನ್ನು ಆಯೋಜಿಸಲಾಗಿದೆ.

ಕೋವಿಡ್ ಕಾರಣ 2020ರ ಋತುವಿನ ಎಲ್ಲ ಪಂದ್ಯಗಳು ಮತ್ತು 2021ರ ಋತುವಿನ ಎರಡನೇ ಹಂತದ ಪಂದ್ಯಗಳು ಯುಎಇನಲ್ಲಿ ಆಯೋಜನೆಯಾಗಿದ್ದವು. ಕಳೆದ ವರ್ಷದ ಟೂರ್ನಿಯ ಪಂದ್ಯಗಳು ಮುಂಬೈ, ಪುಣೆ, ಕೋಲ್ಕತ್ತ ಮತ್ತು ಅಹಮದಾಬಾದ್‌ನಲ್ಲಿ ನಡೆದಿದ್ದವು.

'16ನೇ ಆವೃತ್ತಿಯ ಟೂರ್ನಿಯಲ್ಲಿ ಹೋಂ (ತವರು) ಮತ್ತು ಅವೇ (ತವರಿನಿಂದ ದೂರ) ಮಾದರಿಯಲ್ಲಿ ಪಂದ್ಯಗಳು ನಡೆಯಲಿವೆ. ಎಲ್ಲ ತಂಡಗಳೂ ತಲಾ 7 'ಹೋಂ' ಮತ್ತು 'ಅವೇ' ಪಂದ್ಯಗಳನ್ನು ಆಡಲಿವೆ' ಎಂದು ಬಿಸಿಸಿಐ ಪ್ರಕಟಣೆ ತಿಳಿಸಿದೆ.

ಕೊನೆಯ ಲೀಗ್ ಪಂದ್ಯ ಮೇ 21 ರಂದು ಬೆಂಗಳೂರಿನಲ್ಲಿ ನಡೆಯಲಿದ್ದು, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟನ್ಸ್ ಪೈಪೋಟಿ ನಡೆಸಲಿವೆ.

ಫೈನಲ್ ಪಂದ್ಯ ಮೇ 28 ರಂದು ನಡೆಯಲಿದೆ. 'ಪ್ಲೇ ಆಫ್' ಪಂದ್ಯಗಳ ದಿನಾಂಕ ಮತ್ತು ತಾಣ ಹಾಗೂ ಫೈನಲ್ ಪಂದ್ಯದ ತಾಣವನ್ನು ಮಂಡಳಿಯು ಮುಂದಿನ ದಿನಗಳಲ್ಲಿ ಅಂತಿಮಗೊಳಿಸಲಿದೆ. ರಾಜಸ್ಥಾನ ರಾಯಲ್ಸ್ ತಂಡ ತನ್ನ ಮೊದಲ ಎರಡು ಹೋಂ ಪಂದ್ಯಗಳನ್ನು ಗುವಾಹಟಿಯಲ್ಲಿ ಹಾಗೂ ಇನ್ನುಳಿದ ಐದು ಪಂದ್ಯಗಳನ್ನು ಜೈಪುರದಲ್ಲಿ ಆಡಲಿದೆ. ಪಂಜಾಬ್ ಕಿಂಗ್ಸ್ ತಂಡ ಮೊದಲ ಐದು ಹೋಂ ಪಂದ್ಯಗಳನ್ನು ಮೊಹಾಲಿಯಲ್ಲಿ ಹಾಗೂ ಕೊನೆಯ ಎರಡು ಪಂದ್ಯಗಳನ್ನು ಧರ್ಮಶಾಲಾದಲ್ಲಿ ಆಡಲಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ತನ್ನ ಮೊದಲ ಪಂದ್ಯವನ್ನು ಏ.2 ರಂದು ಬೆಂಗಳೂರಿನಲ್ಲಿ ಆಡಲಿದ್ದು, ಮುಂಬೈ ಇಂಡಿಯನ್ಸ್ ವಿರುದ್ಧ ಸೆಣಸಲಿದೆ.

ಪ್ರಸಿದ್ಧಕೃಷ್ಣ ಅಲಭ್ಯ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಧ್ಯಮವೇಗಿ ಪ್ರಸಿದ್ಧ ಕೃಷ್ಣ ಅವರು ಈ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಆಡಲು ಫಿಟ್ ಆಗಿಲ್ಲ.

ಹೋದ ವರ್ಷದ ಆಗಸ್ಟ್‌ನಿಂದಲೇ ಬೆನ್ನುನೋವಿನಿಂದ ಬಳಲುತ್ತಿರುವ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರಿಗೆ ಶಸ್ತ್ರಚಿಕಿತ್ಸೆ ಮಾಡುವ ಸಾಧ್ಯತೆ ಇದೆ. ಆದ್ದರಿಂದ ಅವರು ಐಪಿಎಲ್‌ನಲ್ಲಿ ಆಡುವುದಿಲ್ಲ ಎಂದು ಮೂಲಗಳು ತಿಳಿಸಿವೆ.

ಅವರು ರಾಜಸ್ಥಾನ ರಾಯಲ್ಸ್ ತಂಡದಲ್ಲಿದ್ದಾರೆ. ಬೆಂಗಳೂರಿನ 26 ವರ್ಷದ ಪ್ರಸಿದ್ಧ ಈಚೆಗೆ ರಣಜಿ ಟ್ರೋಫಿ ಟೂರ್ನಿಯಲ್ಲಿಯೂ ಆಡಿರಲಿಲ್ಲ.

ರಣಜಿ ಫೈನಲ್: ಸೌರಾಷ್ಟ್ರ ತಂಡಕ್ಕೆ ಇನಿಂಗ್ಸ್ ಮುನ್ನಡೆ

ಬಂಗಾಳವನ್ನು ಕಾಡಿದ ಅರ್ಪಿತ್



ಅರ್ಪಿತ್ ವಾಸವಡ ಬ್ಯಾಟಿಂಗ್ –ಪಿಟಿಐ ಚಿತ್ರ

ಕೋಲ್ಕತ್ತ (ಪಿಟಿಐ): ಮೂರು ವರ್ಷಗಳ ಹಿಂದೆ ರಣಜಿ ಟ್ರೋಫಿ ಜಯಿಸುವ ಬಂಗಾಳ ತಂಡದ ಕನಸಿಗೆ ಅಡ್ಡಿಯಾಗಿದ್ದ ಸೌರಾಷ್ಟ್ರದ ಅರ್ಪಿತ್ ವಾಸವಡ, ಮತ್ತೊಮ್ಮೆ ಕಾಡಿದ್ದಾರೆ.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಫೈನಲ್‌ನಲ್ಲಿ ಅರ್ಪಿತ್ ಅಜೇಯ ಅರ್ಧಶತಕ (81) ಗಳಿಸಿ, ಸೌರಾಷ್ಟ್ರ ತಂಡಕ್ಕೆ ಮೊದಲ ಇನಿಂಗ್ಸ್‌ನಲ್ಲಿ ಮುನ್ನಡೆ ತಂದುಕೊಟ್ಟರು.

2020 ರಲ್ಲಿ ರಾಜ್‌ಕೋಟ್‌ನಲ್ಲಿ ನಡೆದಿದ್ದ ಫೈನಲ್‌ನಲ್ಲಿ ಅರ್ಪಿತ್ 106 ರನ್ ಗಳಿಸಿ ತಂಡಕ್ಕೆ ಇನಿಂಗ್ಸ್ ಮುನ್ನಡೆ ತಂದುಕೊಟ್ಟಿದ್ದರು. ಅಂದು ಇನಿಂಗ್ಸ್ ಮುನ್ನಡೆ ಆಧಾರದಲ್ಲಿ ಸೌರಾಷ್ಟ್ರ ಚಾಂಪಿಯನ್ ಆಗಿತ್ತು. ಈ ಬಾರಿಯೂ ಅವರು ಶತಕದತ್ತ ಹೆಜ್ಜೆಯಿಟ್ಟಿದ್ದಾರೆ.

ಎರಡನೇ ದಿನವಾದ ಶುಕ್ರವಾರದ ಆಟದ ಅಂತ್ಯಕ್ಕೆ ಸೌರಾಷ್ಟ್ರ 87 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 317 ರನ್ ಗಳಿಸಿದ್ದು, 143 ರನ್‌ಗಳ ಮುನ್ನಡೆ ಸಾಧಿಸಿದೆ. ಶೆಲ್ಡನ್ ಜಾಕ್ಸನ್ (59) ಮತ್ತು ಚಿರಾಗ್ ಜಾನಿ (ಬ್ಯಾಟಿಂಗ್ 57) ಅವರೂ ತಂಡದ ನೆರವಿಗೆ ನಿಂತರು. ಅರ್ಪಿತ್ ಮತ್ತು ಚಿರಾಗ್ ಜೋಡಿ ಮುರಿಯದ ಆರನೇ ವಿಕೆಟ್‌ಗೆ 113 ರನ್ ಸೇರಿಸಿದೆ.

ಸೆಮಿಫೈನಲ್‌ನಲ್ಲಿ ಕರ್ನಾಟಕದ ವಿರುದ್ಧ ದ್ವಿಶತಕ ಗಳಿಸಿದ್ದ ಅರ್ಪಿತ್, ಅಮೋಘ ಫಾರ್ಮ್‌ಅನ್ನು ಇಲ್ಲೂ ಮುಂದುವರಿಸಿದರು. 155 ಎಸೆತಗಳನ್ನು ಎದುರಿಸಿರುವ ಅವರು 11 ಬೌಂಡರಿ ಹೊಡೆದಿದ್ದಾರೆ. ಚಿರಾಗ್ 10 ಬೌಂಡರಿ ಹೊಡೆದರು. ದಿನದಾಟದ ಕೊನೆಯ ಅವಧಿಯಲ್ಲಿ ಇವರಿಬ್ಬರು ವೇಗವಾಗಿ ರನ್ ಕಲೆಹಾಕಿದರು.

ಸೌರಾಷ್ಟ್ರ ತಂಡ 2 ವಿಕೆಟ್‌ಗಳಿಗೆ 81 ರನ್‌ಗಳಿಂದ ಇನಿಂಗ್ಸ್ ಮುಂದುವರಿಸಿತ್ತು. ಹರ್ವಿಕ್ ಮತ್ತು 'ರಾತ್ರಿ ಕಾವಲುಗಾರ' ಚೇತನ್ ಸಕಾರಿಯಾ (8) ಬೆಳಿಗ್ಗೆ ಬೇಗನೇ ವಿಕೆಟ್ ಬಿಟ್ಟುಕೊಡಲಿಲ್ಲ. ಶೆಲ್ಡನ್ ಜಾಕ್ಸನ್ ಮತ್ತು ಅರ್ಪಿತ್ ಐದನೇ ವಿಕೆಟ್‌ಗೆ 95 ರನ್ ಸೇರಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಬಂಗಾಳ 54.1 ಓವರ್‌ಗಳಲ್ಲಿ 174. ಸೌರಾಷ್ಟ್ರ 87 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 317 (ಹರ್ವಿಕ್ ದೇಸಾಯಿ 50, ಶೆಲ್ಡನ್ ಜಾಕ್ಸನ್ 59, ಅರ್ಪಿತ್ ವಾಸವಡ ಬ್ಯಾಟಿಂಗ್ 81, ಚಿರಾಗ್ ಜಾನಿ ಬ್ಯಾಟಿಂಗ್ 57, ಮುಕೇಶ್ ಕುಮಾರ್ 83ಕ್ಕೆ 2, ಇಶಾನ್ ಪೊರೆಲ್ 72ಕ್ಕೆ 2)

ಚೆನ್ನೈ ಓಪನ್ ಟೆನಿಸ್: ಸೆಮಿಗೆ ನಗಾಲ್

ಚೆನ್ನೈ (ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಸುಮಿತ್ ನಗಾಲ್ ಅವರು ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿದರು.

ಶುಕ್ರವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಭಾರತದ ಆಟಗಾರ 6-1, 6-4 ರಲ್ಲಿ ಬ್ರಿಟನ್‌ನ ಜೇ ಕ್ಲಾರ್ಕ್ ಅವರನ್ನು ಮಣಿಸಿದರು. ಈ ಪಂದ್ಯ ಒಂದು ಗಂಟೆ 22 ನಿಮಿಷ ನಡೆಯಿತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 506ನೇ ಸ್ಥಾನದಲ್ಲಿರುವ ನಗಾಲ್, ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕದ ನಿಕೊಲಸ್ ಮೊರೆನೊ ಅವರ ಸವಾಲು ಎದುರಿಸುವರು. ಮೊರೆನೊ ಮತ್ತೊಂದು ಎಂಟರಘಟ್ಟದ ಪಂದ್ಯದಲ್ಲಿ 6-3, 6-4 ರಲ್ಲಿ ಜಪಾನ್‌ನ ಯಸುತುಕ ಉಚಿಯಾಮ ವಿರುದ್ಧ ಗೆದ್ದರು.

ಡಬಲ್ಸ್ ವಿಭಾಗದಲ್ಲಿ ಸೆಬಾಸ್ಟಿಯನ್ ಆಫ್ನೆರ್– ನಿನೊ ಸೆರ್ಡರುಸಿಚ್ ಜೋಡಿ 4-6, 7-6, 10-4 ರಲ್ಲಿ ಭಾರತದ ಎನ್.ಶ್ರೀರಾಮ್ ಬಾಲಾಜಿ– ಜೀವನ್ ನೆಡುಂಚೆಳಿಯನ್ ಜೋಡಿಗೆ ಆಘಾತ ನೀಡಿ ಫೈನಲ್ ಪ್ರವೇಶಿಸಿತು.

ಕರ್ನಾಟಕ–ಮಹಾರಾಷ್ಟ್ರ ಪಂದ್ಯ ಡ್ರಾ

ಬೆಂಗಳೂರು: ಕರ್ನಾಟಕ ತಂಡವು ಸಂತೋಷ್ ಟ್ರೋಫಿ ಫುಟ್‌ಬಾಲ್ ಟೂರ್ನಿಯ ಫೈನಲ್ ಗ್ರೂಪ್‌ನ ಪಂದ್ಯದಲ್ಲಿ ಶುಕ್ರವಾರ ಮಹಾರಾಷ್ಟ್ರ ತಂಡದೊಂದಿಗೆ 3–3ರಿಂದ ಡ್ರಾ ಸಾಧಿಸಿತು.

ಒಡಿಶಾದಲ್ಲಿ ನಡೆದ ಪಂದ್ಯದಲ್ಲಿ ಮ್ಯಾಥ್ಯೂಸ್ (15ನೇ ನಿಮಿಷ) ಗಳಿಸಿದ ಗೋಲಿನ ನೆರವಿನಿಂದ ಮಹಾರಾಷ್ಟ್ರ ಮುನ್ನಡೆ ಸಾಧಿಸಿತ್ತು. ರಾಬಿನ್ ಯಾದವ್ 50ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿ ಕರ್ನಾಟಕ ತಂಡ ಸಮಬಲ ಸಾಧಿಸುವಂತೆ ಮಾಡಿದರು. ಇದಾದ ಐದು ನಿಮಿಷಗಳಲ್ಲಿ ಅನ್ಸಾರಿ ಗಳಿಸಿದ ಗೋಲು ಮಹಾರಾಷ್ಟ್ರಕ್ಕೆ ಮತ್ತೆ ಮುನ್ನಡೆ ತಂದುಕೊಟ್ಟಿತು. 60ನೇ ನಿಮಿಷದಲ್ಲಿ ಮತ್ತೊಂದು ಬಾರಿ ಅವರು ಚೆಂಡನ್ನು ಗುರಿ ಸೇರಿಸಿದರು. ಅಂಕಿತ್ ಪಿ. (62ನೇ ನಿಮಿಷ) ಮತ್ತು ಫ್ರಾಂಕ್ಲಿನ್ ಷಹಜಾನ್ (90 + 2ನೇ ನಿ.) ಕರ್ನಾಟಕ ತಂಡ ಡ್ರಾ ಸಾಧಿಸಲು ನೆರವಾದರು.